ಶನಿವಾರ, ಆಗಸ್ಟ್ 26, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ ಮುಂಬೈನಲ್ಲಿ ‘ಡ್ರೀಮ್ ಗರ್ಲ್ 2’ ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ನಟಿ ಅನನ್ಯಾ ಪಾಂಡೆ ಮತ್ತು ನಟ ಆಯುಷ್ಮಾನ್ ಖುರಾನ

ಹುದ್ದೆ ದುರ್ಬಲ ಎಂಬ ಕಾರಣಕ್ಕೆ ಬಡ್ತಿಗೆ ಹಿಂದೇಟು • ಮೂರು ವರ್ಷದಿಂದ ಖಾಲಿ ಉಳಿದ ಸ್ಥಾನಗಳು

ಅಬಕಾರಿ ಅಧೀಕ್ಷಕ ಹುದ್ದೆಗೆ ನಿರಾಸಕ್ತಿ

• ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ವಿಶೇಷ

ಬೆಂಗಳೂರು: 'ದುರ್ಬಲ' ಹುದ್ದೆ ಎಂಬ ಕಾರಣಕ್ಕಾಗಿ ಅಬಕಾರಿ ಇಲಾಖೆಯ ಅಧೀಕ್ಷಕ (ಎಸ್‌ಪಿ) ಸ್ಥಾನಕ್ಕೆ ನೀಡಿದ್ದ ಬಡ್ತಿಯನ್ನೇ ಉಪ ಅಧೀಕ್ಷಕರು (ಡಿವೈಎಸ್‌ಪಿ) ನಿರಾಕರಿಸುತ್ತಾ ಬಂದಿದ್ದು, ಹೆಚ್ಚಿನ ಜಿಲ್ಲೆಗಳಲ್ಲಿ ಅಧೀಕ್ಷಕರ ಸ್ಥಾನ ಖಾಲಿ ಉಳಿದಿವೆ.

ಡಿವೈಎಸ್‌ಪಿಗಳು ಕಳೆದ ಮೂರು ವರ್ಷಗಳಿಂದ ವಿವಿಧ ಕಾರಣ ನೀಡಿ ಬಡ್ತಿ ನಿರಾಕರಿಸುತ್ತಿದ್ದಾರೆ. ಅಬಕಾರಿ ಇಲಾಖೆ ಮತ್ತೊಮ್ಮೆ ಬಡ್ತಿ ಪ್ರಕ್ರಿಯೆ ಆರಂಭಿಸಿ ಅಧಿಸೂಚನೆ ಹೊರಡಿಸಿದೆ. ಇಲಾಖಾ ವಿಚಾರಣೆ, ಶಿಸ್ತುಕ್ರಮ ಬಾಕಿ ಇರುವವರನ್ನು ಹೊರತುಪಡಿಸಿ, ಸರ್ಕಾರದ ಆದೇಶದಂತೆ ಬಡ್ತಿ ನಿರಾಕರಿಸುವವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವ ಎಚ್ಚರಿಕೆ ನೀಡಿದೆ.

ಇಲಾಖೆ ನೀಡಿದ್ದ ಬಡ್ತಿಯನ್ನು ಕೆಲ ವರ್ಷಗಳಿಂದ ಡಿವೈಎಸ್‌ಪಿಗಳು ನಿರಾಕರಿಸುತ್ತಾ ಬಂದಿರುವುದರಿಂದ 35 ಎಸ್‌ಪಿ ಸ್ಥಾನಗಳು ಖಾಲಿ ಉಳಿದಿದ್ದವು. ಅವುಗಳ ಜತೆಗೆ ಸ್ಥಳೀಯ ವೃಂದದ ಐದು ಸ್ಥಾನಗಳು ಸೇರಿ 39 ಹುದ್ದೆಗಳ ಭರ್ತಿಗಾಗಿ ರಾಜ್ಯಮಟ್ಟದ ಜ್ಯೇಷ್ಠತಾ ಪಟ್ಟಿಯನ್ನು ಬಿಡುಗಡೆ ಮಾಡಿರುವ ಇಲಾಖೆಯ ಆಯುಕ್ತರು, 2020ರ ನಂತರ ಬಡ್ತಿ ನಿರಾಕರಿಸಿದವರ ಪಟ್ಟಿಯನ್ನು ಪ್ರತ್ಯೇಕವಾಗಿ 'ಪರ್ಫಾಮೆನ್ಸ್ ರಿಪೋರ್ಟಿಂಗ್ ಸಿಸ್ಟಂ'ನಲ್ಲಿ ಅಳವಡಿಸಲು ಸೂಚಿಸಿದ್ದಾರೆ.

ಡಿವೈಎಸ್‌ಪಿ ಮರ್ಜಿಯಲ್ಲಿ ಅಧೀಕ್ಷಕರು!: ಪ್ರತಿ ಅಬಕಾರಿ ಜಿಲ್ಲೆಯಲ್ಲೂ 'ಎ' ಗ್ರೂಪ್‌ನ ತಲಾ ಒಂದು ಉಪ ಆಯುಕ್ತ, ಅಧೀಕ್ಷಕರ ಹುದ್ದೆಗಳಿವೆ. ಉಪ ಆಯುಕ್ತರಿಗೆ ಇಲಾಖೆಯ ವಾಹನ, ಸಿಬ್ಬಂದಿ ಮೇಲೆ ಉಸ್ತುವಾರಿ, ಅಬಕಾರಿ ಪ್ರಕರಣಗಳ ಕಾರ್ಯಾಚರಣೆ, ತನಿಖೆಯ ಅಧಿಕಾರ ನೀಡಲಾಗಿದೆ. ಇದೇ ಅಧಿಕಾರವನ್ನು ಇಲಾಖೆಯ ಉಪ ಅಧೀಕ್ಷಕರು ತಮ್ಮ ಉಪ ವಲಯದ ವ್ಯಾಪ್ತಿಯಲ್ಲಿ ಹೊಂದಿದ್ದಾರೆ. ಆದರೆ, ಅಧೀಕ್ಷಕರಿಗೆ ಪ್ರಕರಣಗಳ ಸ್ವಯಂ ಕಾರ್ಯಾಚರಣೆ, ತನಿಖೆ ಕೈಗೊಳ್ಳುವ, ಅಧೀನ ಅಧಿಕಾರಿಗಳ ಮೇಲೆ ಹಿಡಿತ ಹೊಂದುವ ಯಾವ ಅಧಿಕಾರವೂ ಇಲ್ಲ. ವಿವಿಧ ಠಾಣೆಗಳಲ್ಲಿ ದಾಖಲಾಗುವ ಅಪರಾಧ ಪ್ರಕರಣಗಳನ್ನು ಪರಿಶೀಲಿಸಲು ಲಾಗಿನ್ ಆಗುವ ಅವಕಾಶವೂ ಅವರಿಗಿಲ್ಲ.

ಇಲಾಖೆಯ ವಾಹನ, ಚಾಲಕರ ಸೌಲಭ್ಯವೂ ಇಲ್ಲ. ಎಲ್ಲಿಗಾದರೂ ಹೋಗಬೇಕೆಂದರೆ ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿರುವ ಡಿವೈಎಸ್‌ಪಿಗಳಿಗೆ ಮನವಿ ಮಾಡಿಕೊಂಡು ಖಾಲಿ ಇದ್ದ ಸಮಯದಲ್ಲಿ ಅವರ ವಾಹನ ಪಡೆಯಬೇಕಿದೆ. ಅಧೀಕ್ಷಕರ ಸ್ಥಾನಕ್ಕೆ ಸರ್ಕಾರ ನಿರ್ದಿಷ್ಟ ಕಾರ್ಯಸೂಚಿಯನ್ನೂ ನಿಗದಿ ಮಾಡಿಲ್ಲ. ಇದರಿಂದ ಇಲಾಖೆಯ ಇತರೆ ಕಾರ್ಯಗಳಿಗೂ ಅವರು ಅಧೀನ ಅಧಿಕಾರಿಗಳನ್ನೇ ಅವಲಂಬಿಸಬೇಕಿದೆ.

> **ಅಬಕಾರಿ ಅಧೀಕ್ಷಕರಿಗೆ ನಿರ್ದಿಷ್ಟ ಕಾರ್ಯಭಾರ ನೀಡುವ ಕುರಿತು ಆಯುಕ್ತರ ಜತೆ ಚರ್ಚಿಸಿ, ತೀರ್ಮಾನ ತೆಗೆದುಕೊಳ್ಳಲಾಗುವುದು**
> **ಆರ್‌.ಬಿ.ತಿಮ್ಮಾಪುರ್** ಅಬಕಾರಿ ಸಚಿವ

> **ಅಬಕಾರಿ ಅಧೀಕ್ಷಕರ ಹುದ್ದೆ ಎಸ್‌ಡಿಎ ಹುದ್ದೆಗಿಂತ ಭಿನ್ನವಾಗಿಲ್ಲ. ಅಧೀಕ್ಷಕರಿಗೆ ನಿರ್ದಿಷ್ಟ ಜವಾಬ್ದಾರಿ ನೀಡಬೇಕು. ಇಲ್ಲವೇ ಹುದ್ದೆಗಳನ್ನೇ ರದ್ದು ಮಾಡಬೇಕು**
> **ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಬಕಾರಿ ಅಧೀಕ್ಷಕ**

ಸ್ವತ್ತುಗಳ ವಿಲೇವಾರಿ ಅಧಿಕಾರಕ್ಕೂ ಕತ್ತರಿ

ಅಧೀಕ್ಷಕರ ಹುದ್ದೆಯನ್ನು ಮೊದಲು 'ಬಿ' ಗ್ರೂಪ್ ಎಂದು ಪರಿಗಣಿಸಲಾಗುತ್ತಿತ್ತು. ಈಚೆಗೆ ಆ ಸ್ಥಾನವನ್ನು 'ಎ' ಗ್ರೂಪ್ ವ್ಯಾಪ್ತಿಗೆ ತರಲಾಗಿದೆ. ಆದರೆ, ಕಡತಗಳ ಪರಿಶೀಲನಾ ಕಾರ್ಯ ಹೊರತುಪಡಿಸಿ ಯಾವ ಅಧಿಕಾರವನ್ನೂ ನೀಡಿಲ್ಲ. ಮೊದಲು ವಿವಿಧ ಪ್ರಕರಣಗಳಲ್ಲಿ ವಶಪಡಿಸಿಕೊಂಡ ಮದ್ಯಗಳು, ವಾಹನ ಮತ್ತಿತರ ಸ್ವತ್ತುಗಳ ವಿಲೇವಾರಿ ಅಧಿಕಾರವಾಗಿ ಅಧೀಕ್ಷಕರು ಕಾರ್ಯನಿರ್ವಹಿಸುತ್ತಿದ್ದರು. 2006ರ ನಂತರ ಆ ಜವಾಬ್ದಾರಿಗೂ ಕತ್ತರಿ ಹಾಕಲಾಗಿದೆ.

ಅಧಿಕಾರ ನಿಗದಿಗೆ ಅಧೀಕ್ಷಕರ ಪತ್ರ

ಅಬಕಾರಿ ಕಾಯ್ದೆ-1965ಕ್ಕೆ ತಿದ್ದುಪಡಿ ತರಬೇಕು. ನಿರ್ದಿಷ್ಟ ಅಧಿಕಾರ ನಿಗದಿ ಮಾಡಬೇಕು. ಇಲಾಖೆಯ ವಾಹನ, ಚಾಲಕರನ್ನು ನೀಡಬೇಕು. ಇಲಾಖೆಯಲ್ಲಿ ದಾಖಲಾಗುವ ಪ್ರಕರಣಗಳ ಇತ್ಯರ್ಥ, ವಶಪಡಿಸಿಕೊಂಡ ಸ್ವತ್ತುಗಳ ವಿಲೇವಾರಿ ಅಧಿಕಾರ ನೀಡಬೇಕು. ಇದರಿಂದ ಜಿಲ್ಲೆಯ ನಿಯಂತ್ರಣಾಧಿಕಾರಿಯಾದ ಉಪ ಆಯುಕ್ತರ ಕಾರ್ಯಭಾರದ ಒತ್ತಡವನ್ನು ಕಡಿಮೆ ಮಾಡಬಹುದು ಎಂದು ಕೆಲ ಅಧೀಕ್ಷಕರು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಸುದ್ದಿ 2 ನಿಮಿಷ

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಭೇಟಿಯಾದ ರೇಣುಕಾಚಾರ್ಯ

ಬೆಂಗಳೂರು: ಹೊನ್ನಾಳಿ ಕ್ಷೇತ್ರದ ಮಾಜಿ ಶಾಸಕ, ಬಿಜೆಪಿ ಮುಖಂಡ ಎಂ.ಪಿ. ರೇಣುಕಾಚಾರ್ಯ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಶುಕ್ರವಾರ ಭೇಟಿಮಾಡಿ, ಮಾತುಕತೆ ನಡೆಸಿದರು.

ರೇಣುಕಾಚಾರ್ಯ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿ, ದಾವಣಗೆರೆ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಪ್ರಯತ್ನಿಸುತ್ತಿದ್ದಾರೆ ಎಂಬ ಸುದ್ದಿ ರಾಜಕೀಯ ವಲಯದಲ್ಲಿ ಚರ್ಚೆಯಲ್ಲಿದೆ. ವಿಧಾನಸಭಾ ಚುನಾವಣೆಯಲ್ಲಿನ ಸೋಲಿನ ಬಳಿಕ ಬಿಜೆಪಿಯ ಕೆಲವು ನಾಯಕರ ವಿರುದ್ಧ ಬಹಿರಂಗವಾಗಿ ಹೇಳಿಕೆಯನ್ನೂ ನೀಡಿದ್ದರು. ಪಕ್ಷದ ಶಿಸ್ತು ಸಮಿತಿಯಿಂದ ಅವರಿಗೆ ನೋಟಿಸ್ ಜಾರಿ ಮಾಡಲಾಗಿತ್ತು.

ಸಿದ್ದರಾಮಯ್ಯ ಅವರನ್ನು ಶುಕ್ರವಾರ ಮಧ್ಯಾಹ್ನ ಭೇಟಿಯಾದ ರೇಣುಕಾಚಾರ್ಯ, 20 ನಿಮಿಷ ಚರ್ಚೆ ನಡೆಸಿದರು. ನಂತರ ಶಿವಕುಮಾರ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಉಭಯ ನಾಯಕರ ಭೇಟಿ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿರುವುದರ ಹಿಂದೆ ರಾಜಕೀಯ ಉದ್ದೇಶವಿಲ್ಲ. ಬರಪೀಡಿತ ಪ್ರದೇಶಗಳ ಪಟ್ಟಿಯಲ್ಲಿ ಹೊನ್ನಾಳಿ ಕ್ಷೇತ್ರವನ್ನೂ ಸೇರಿಸುವಂತೆ ಒತ್ತಾಯಿಸಿದ್ದೇನೆ. ಕಾಂಗ್ರೆಸ್ ಸೇರುವಂತೆ ಅವರಿಬ್ಬರೂ ನನ್ನನ್ನು ಆಹ್ವಾನಿಸಿಲ್ಲ. ನಾನು ಕೂಡ ಆ ಬಗ್ಗೆ ಯಾವುದೇ ಮಾತನಾಡಿಲ್ಲ. ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ನಾನು ಬಿಜೆಪಿ ಟಿಕೆಟ್‌ಗೆ ಪ್ರಬಲ ಆಕಾಂಕ್ಷಿ' ಎಂದರು.

ಅನಧಿಕೃತ ಕಟ್ಟಡಗಳಿಗೆ ತೆರಿಗೆ: ಖಂಡ್ರೆ ನೇತೃತ್ವದಲ್ಲಿ ಸಂಪುಟ ಉಪ ಸಮಿತಿ

ಬೆಂಗಳೂರು: ರಾಜ್ಯದ ಇತರ ಎಲ್ಲ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಸಗಿ ಜಮೀನಿನಲ್ಲಿರುವ ಖಾಲಿ ನಿವೇಶನ ಮತ್ತು ಅನಧಿಕೃತ ಕಟ್ಟಡಗಳಿಗೂ ಬಿಬಿಎಂಪಿ ಮಾದರಿಯಲ್ಲಿ ಆಸ್ತಿ ತೆರಿಗೆ ವಿಧಿಸುವ ಪ್ರಸ್ತಾವದ ಕುರಿತು ಪರಿಶೀಲನೆ ನಡೆಸಲು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅಧ್ಯಕ್ಷತೆಯಲ್ಲಿ ಸಂಪುಟ ಉಪ ಸಮಿತಿ ರಚಿಸಲಾಗಿದೆ.

ಕಾನೂನು ಸಚಿವ ಎಚ್‌.ಕೆ. ಪಾಟೀಲ, ಕಂದಾಯ ಸಚಿವ ಕೃಷ್ಣ ಬೈರೇಗೌಡ, ಪೌರಾಡಳಿತ ಸಚಿವ ರಹೀಂ ಖಾನ್ ಮತ್ತು ನಗರಾಭಿವೃದ್ಧಿ ಸಚಿವ ಬಿ.ಎಸ್. ಸುರೇಶ್ (ಬೈರತಿ) ಅವರನ್ನು ಉಪ ಸಮಿತಿಯ ಸದಸ್ಯರನ್ನಾಗಿ ನೇಮಿಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಸರ್ಕಾರಿ ಜಮೀನು ಅಥವಾ ಸ್ಥಳೀಯ ಸಂಸ್ಥೆಯ ಒಡೆತನದ ಜಮೀನುಗಳನ್ನು ಹೊರತುಪಡಿಸಿದ ಆಸ್ತಿಗಳಲ್ಲಿರುವ ಖಾಸಗಿ ಖಾಲಿ ನಿವೇಶನ, ಉಪ ನಿಯಮಗಳನ್ನು (ಬೈ-ಲಾ) ಉಲ್ಲಂಘಿಸಿ ನಿರ್ಮಿಸಿದ ಅನಧಿಕೃತ ಕಟ್ಟಡ, ಕಂದಾಯ ಬಡಾವಣೆಗಳಲ್ಲಿರುವ ನಿವೇಶನಗಳಿಗೂ ಆಸ್ತಿ ತೆರಿಗೆ ವಿಧಿಸಲು ಬಿಬಿಎಂಪಿ ಕಾಯ್ದೆ-2020ರ ಸೆಕ್ಷನ್ 6ರಲ್ಲಿ ಅವಕಾಶವಿದೆ. ಪಾಲಿಕೆ ವ್ಯಾಪ್ತಿಯ ಅನಧಿಕೃತ ಕಟ್ಟಡಗಳ ಪಟ್ಟಿಯೊಂದನ್ನು ಮುಖ್ಯ ಆಯುಕ್ತರು ಪ್ರತ್ಯೇಕವಾಗಿ ನಿರ್ವಹಣೆ ಮಾಡಬೇಕು ಎಂದು ಇದೇ ಕಾಯ್ದೆಯ ಸೆಕ್ಷನ್ 21 ಹೇಳುತ್ತದೆ. ಈ ಎರಡೂ ಸೆಕ್ಷನ್‌ಗಳನ್ನು ರಾಜ್ಯದ ಇತರ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲೂ ಜಾರಿಗೊಳಿಸಲು ಸರ್ಕಾರ ಮುಂದಾಗಿದೆ.

ಈ ಪ್ರಸ್ತಾವವನ್ನು ಪರಿಶೀಲಿಸಿ, ವರದಿ ನೀಡಲು ಸಂಪುಟ ಉಪ ಸಮಿತಿ ರಚಿಸಲು ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿತ್ತು.

'ಅಂಬಾನಿ– ಅದಾನಿ ಜೇಬಿಗೆ ಸ್ವಾತಂತ್ರ್ಯ'

ಮುಖ್ಯಮಂತ್ರಿ ಸಿದ್ದರಾಮಯ್ಯ ವ್ಯಂಗ್ಯ • ಕವಿ ಸಿದ್ದಲಿಂಗಯ್ಯ ಅವರ ಪುತ್ಥಳಿ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಂಬಾನಿ-ಅದಾನಿ ಅವರ ಜೇಬು ತುಂಬಿಸುವವರಿಗೆ ಅಧಿಕಾರವನ್ನು ನೀಡಿ, 'ಯಾರಿಗೆ ಬಂತು ಎಲ್ಲಿಗೆ ಬಂತು 47ರ ಸ್ವಾತಂತ್ರ್ಯ' ಎಂದು ಪ್ರಶ್ನಿಸಿದರೆ ಏನು ಪ್ರಯೋಜನ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವ್ಯಂಗ್ಯವಾಡಿದರು.

ಕರ್ನಾಟಕ ಆದಿಜಾಂಬವರ ಸಾಂಸ್ಕೃತಿಕ ಸಮಿತಿ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಕವಿ ಸಿದ್ದಲಿಂಗಯ್ಯ ಸ್ಮರಣೆ ಕಾರ್ಯಕ್ರಮ ಉದ್ಘಾಟಿಸಿ, ಸಿದ್ದಲಿಂಗಯ್ಯ ಅವರ ಪುತ್ಥಳಿ ಲೋಕಾರ್ಪಣೆ ಮಾಡಿದರು.

ಸಿದ್ದಲಿಂಗಯ್ಯ ಅವರ ಕವಿತೆಯ ಸಾಲುಗಳನ್ನು ಪ್ರಸ್ತಾಪಿಸಿದ ಅವರು, 'ಅಧಿಕಾರ ಹಾಗೂ ಸಂಪತ್ತು ಕೆಲವೇ ಜನರ ಕೈಯಲ್ಲಿ ಕೇಂದ್ರೀಕೃತವಾದರೆ ಸಮಾಜದಲ್ಲಿ ಬದಲಾವಣೆ ಸಾಧ್ಯವಿಲ್ಲ. ಅಂಬಾನಿ-ಅದಾನಿ ಜೇಬಿನಲ್ಲಿ ಹಣ ಇದ್ದರೆ ಬಡ-ಮಧ್ಯಮ ವರ್ಗದವರ ಉದ್ಧಾರ ಆಗುವುದಿಲ್ಲ. ಹೀಗಾಗಿಯೇ ನಮ್ಮ ಸರ್ಕಾರವು ಅನ್ನಭಾಗ್ಯ, ಶಕ್ತಿ, ಗೃಹಲಕ್ಷ್ಮಿ, ಗೃಹಜ್ಯೋತಿ ಕಾರ್ಯಕ್ರಮಗಳನ್ನು ಜಾರಿ ಮಾಡಿ, ಜನರ ಜೇಬಿಗೆ ಹಣ ಹಾಕುವ ಕೆಲಸ ಮಾಡುತ್ತಿದೆ. ಇದರಿಂದ ನಮ್ಮ ಆರ್ಥಿಕತೆ ಚೈತನ್ಯ ಪಡೆದುಕೊಳ್ಳುತ್ತಿದೆ' ಎಂದು ಹೇಳಿದರು.

ಸಿದ್ದಲಿಂಗಯ್ಯ ಅವರ ಪುತ್ಥಳಿಗೆ ಸಿದ್ದರಾಮಯ್ಯ ಪುಷ್ಪ ನಮನ ಸಲ್ಲಿಸಿದರು. ಕರ್ನಾಟಕ ಆದಿಜಾಂಬವರ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಎಚ್. ಆಂಜನೇಯ ಮತ್ತು ಸಚಿವ ಎಚ್‌.ಸಿ. ಮಹದೇವಪ್ಪ ಇದ್ದಾರೆ —ಪ್ರಜಾವಾಣಿ ಚಿತ್ರ

> **ಕೋವಿಡ್ ಕಾರಣ ಸಿದ್ದಲಿಂಗಯ್ಯ ಅವರ ಕೊನೆಯ ದರ್ಶನ ಸಾಧ್ಯವಾಗಲಿಲ್ಲ. ಈ ಬಗ್ಗೆ ಅಪರಾಧ ಪ್ರಜ್ಞೆ ನನ್ನನ್ನು ಕಾಡುತ್ತಿದೆ**
> **ಕೆ. ಮರುಳಸಿದ್ದಪ್ಪ,** ಸಾಹಿತಿ

'ಸಿದ್ದಲಿಂಗಯ್ಯ ಅವರ ಆಶಯಗಳನ್ನು ಬದುಕಿನಲ್ಲಿ ಇಟ್ಟುಕೊಂಡವರಿಗೆ ಜೀವ ಬೆದರಿಕೆ ಪತ್ರಗಳು ಬರುತ್ತಿವೆ. ಅಭಿವ್ಯಕ್ತಿ ಸ್ವಾತಂತ್ರ್ಯವೂ ಇರದಂತೆ ಮಾಡುವ ಪ್ರಯತ್ನವನ್ನು ಕೆಲವರು ಮಾಡುತ್ತಿದ್ದಾರೆ. ಅಂತಹ ಶಕ್ತಿಗಳನ್ನು ಪೋಷಣೆ ಮಾಡುವವರು ನಮ್ಮ ಸಮಾಜದಲ್ಲಿ ಇದ್ದಾರೆ. ಸಿದ್ದಲಿಂಗಯ್ಯ ಅವರ ಹೋರಾಟದ ಕವಿತೆಗಳು ಸಮಾಜದ ವಸ್ತುಸ್ಥಿತಿಯನ್ನು ಹೇಳುತ್ತವೆ' ಎಂದರು.

ಸಮಾಜ ಕಲ್ಯಾಣ ಸಚಿವ ಎಚ್. ಸಿ.ಮಹದೇವಪ್ಪ, 'ಅಸ್ಪೃಶ್ಯತೆ ನಿರ್ಮೂಲನೆ ಆಗಬೇಕಿದೆ. ನಮಗೆ ನಾವೇ ಹೊಲೆಯ, ಮಾದಿಗ ಅಂತ ಕಂಡರೆ, ಬೇರೆಯವರೆಗೆ ಈ ರೀತಿ ಕರೆಯಲು ಪ್ರೇರಣೆ ನೀಡಿದಂತಾಗುತ್ತದೆ. ಈ ಪದಗಳು ಅಸಾಂವಿಧಾನಿಕವಾಗಿವೆ. ನಮಗೆ ನಾವೇ ಆ ಪದಗಳಿಂದ ಕರೆದುಕೊಳ್ಳುವ ಸ್ಥಿತಿಯನ್ನು ಸಮಾಜ ನಿರ್ಮಿಸಿದೆ. ಇದು ನಮ್ಮ ಬೌದ್ಧಿಕ ಮಟ್ಟ ಹೇಗೆ ಕುಸಿದು ಹೋಗುತ್ತಿದೆ ಎನ್ನುವುದನ್ನು ತೋರಿಸುತ್ತದೆ. ಆದ್ದರಿಂದ ಪದಗಳ ದುರುಪಯೋಗಕ್ಕೆ ಅವಕಾಶ ನೀಡಬಾರದು. ಸಿದ್ದಲಿಂಗಯ್ಯ ಅವರ ವಿಚಾರಧಾರೆಯನ್ನು ಪ್ರಚಾರ ಮಾಡುವ ಮೂಲಕ ಸಂವಿಧಾನದ ಆಶಯವನ್ನು ಗಟ್ಟಿಗೊಳಿಸಬೇಕು. ಅವರ ಸ್ಮಾರಕ ನಿರ್ಮಾಣಕ್ಕೆ 5 ಎಕರೆ ಜಮೀನು ನೀಡಲು ಕ್ರಮವಹಿಸುತ್ತೇವೆ' ಎಂದು ಹೇಳಿದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಶಿಕ್ಷಣ ತಜ್ಞರಾದ ನಿರಂಜನಾರಾಧ್ಯ, ಪ್ರೊ. ಜಾಫೆಟ್ ಸಾಹಿತಿಗಳಾದ ಕೆ. ಮರುಳಸಿದ್ದಪ್ಪ, ಎಸ್‌.ಜಿ. ಸಿದ್ಧರಾಮಯ್ಯ, ಅಗ್ರಹಾರ ಕೃಷ್ಣಮೂರ್ತಿ, ಶಾಸಕ ಕೆ.ಎಸ್‌.ಬಸವಂತಪ್ಪ, ಸಿದ್ದಲಿಂಗಯ್ಯ ಅವರ ಪುತ್ರಿ ಡಾ.ಮಾನಸ ಸಿದ್ದಲಿಂಗಯ್ಯ ಹಾಗೂ ಲೇಖಕಿ ಇಂದಿರಾ ಕೃಷ್ಣಪ್ಪ ಇದ್ದರು.

'ಸಿದ್ದಲಿಂಗಯ್ಯ ಸ್ಮಾರಕ ನಿರ್ಮಾಣ'

'ಸಿದ್ದಲಿಂಗಯ್ಯ ಅವರು ರಾಷ್ಟ್ರ ಕವಿಯಾಗಬೇಕಿತ್ತು. ಆದರೆ, ಸರ್ಕಾರಗಳು ಆ ನಿಟ್ಟಿನಲ್ಲಿ ಕ್ರಮಕೈಗೊಳ್ಳಲಿಲ್ಲ. ಅವರ ಸಮಾಧಿ ಕಲಾಗ್ರಾಮದಲ್ಲಿ ಇದೆ. ಅಲ್ಲಿ ಸ್ಮಾರಕ ನಿರ್ಮಾಣಕ್ಕೆ ನೀಲ ನಕ್ಷೆ ರೂಪಿಸಲಾಗಿದೆ. ಸರ್ಕಾರವು ಅಲ್ಲಿ ಐದು ಎಕರೆ ಭೂಮಿ ಒದಗಿಸಿ, ಹಣಕಾಸಿನ ನೆರವು ನೀಡಬೇಕು. ಹಿಂದೆ ಸಮಾಜ ಕಲ್ಯಾಣ ಸಚಿವನಾಗಿದ್ದಾಗ ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾಮ್ ಅವರ ಅಧ್ಯಯನ ಪೀಠಗಳನ್ನು ವಿಶ್ವವಿದ್ಯಾಲಯಗಳಲ್ಲಿ ಪ್ರಾರಂಭಿಸಿದ್ದೆ. ಅದೇ ರೀತಿ, ವಿಶ್ವವಿದ್ಯಾಲಯಗಳಲ್ಲಿ ಸಿದ್ದಲಿಂಗಯ್ಯ ಅವರ ಹೆಸರಿನಲ್ಲಿ ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಿ, ₹2 ಕೋಟಿ ಇಡಬೇಕು' ಎಂದು ಸಮಿತಿ ಅಧ್ಯಕ್ಷ ಎಚ್. ಆಂಜನೇಯ ಮನವಿ ಮಾಡಿಕೊಂಡರು.

'ಸಿದ್ದಲಿಂಗಯ್ಯ ತಮ್ಮ ಬರಹಗಳ ಮೂಲಕ ದಲಿತ ಚಳವಳಿಗೆ ವಿದ್ಯುತ್ ಸಂಚಾರ ಮಾಡಿದರು. ಅವರು ಇಂದಿರಾಗಾಂಧಿ ವಿರುದ್ಧ ಬರೆಯುತ್ತಿದ್ದಾಗ ಅವರ ಮೇಲೆ ಸಿಟ್ಟು ಬಂದರೂ, ನಮ್ಮವರೇ ಅಂತ ಸುಮ್ಮನಿರುತ್ತಿದ್ದೆವು. ಅವರ ಬರಹಗಳು ಹೋರಾಟಕ್ಕೆ ಪ್ರೇರಣೆ ನೀಡುತ್ತಿತ್ತು' ಎಂದು ಹೇಳಿದರು.

ಆತ್ಮಹತ್ಯೆ ಯತ್ನ; 3 ಮಕ್ಕಳು ಸಾವು, ತಾಯಿ ಪಾರು

ಪ್ರಜಾವಾಣಿ ವಾರ್ತೆ

ಜಮಖಂಡಿ (ಬಾಗಲಕೋಟೆ ಜಿಲ್ಲೆ): 'ಮತ್ತೊಂದು ಗಂಡು ಮಗು ಜನಿಸಿಲ್ಲ' ಎಂದು ಮನನೊಂದು ಶುಕ್ರವಾರ ತಾಲ್ಲೂಕಿನ ಕುಂಬಾರಗಳ್ಳ ಗ್ರಾಮದಲ್ಲಿ ಮೂವರು ಮಕ್ಕಳ ಸಮೇತ ತಾಯಿ ಬಾವಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ್ದು, ಮಕ್ಕಳು ಸಾವನ್ನಪ್ಪಿವೆ. ತಾಯಿ ಬದುಕಿದ್ದಾರೆ.

'ಕುಂಬಾರಗಳ್ಳ ಗ್ರಾಮದ ನಿವಾಸಿ ಸಂಗೀತಾ ಹನಮಂತ (28) ತಮ್ಮ ಮೂವರು ಮಕ್ಕಳಾದ ಶ್ರೀಶೈಲ (5), ಶ್ರಾವಣಿ (3) ಮತ್ತು 21 ದಿನದ ಸೌಜನ್ಯಾ ಜೊತೆ ಬಾವಿಗೆ ಹಾರಿದ್ದಾರೆ. ಆದರೆ ಕೊನೆಯ ಹಂತದಲ್ಲಿ ಈಜಿ ದಡ ಸೇರಿದ್ದಾರೆ. ಮಕ್ಕಳ ಸಾವಿನ ಕಾರಣಕ್ಕೆ ಆಕೆಯ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪತಿಯ ಮನೆ ಮತ್ತು ತವರು ಮನೆ ಸಮೀಪದಲ್ಲಿವೆ. ತವರು ಮನೆಯಲ್ಲಿ ಹೆರಿಗೆ ಆಗಿದೆ. ಆದರೆ, ಮೂರನೇ ಮಗು ಹೆಣ್ಣಾಗಿದ್ದಕ್ಕೆ ಸಂಗೀತಾ ನೊಂದು ಇಂಥ ಕೃತ್ಯವೆಸಗಿದ್ದಾರೆ ಎಂಬುದು ವಿಚಾರಣೆಯಿಂದ ಗೊತ್ತಾಗಿದೆ' ' ಎಂದು ಜಮಖಂಡಿ ಗ್ರಾಮೀಣ ಠಾಣೆ ಪೊಲೀಸರು ತಿಳಿಸಿದ್ದಾರೆ.

ಮುಳ್ಳಯ್ಯನಗಿರಿ ಏರಲಿರುವ ಸೈನಿಕರು

ಪ್ರಜಾವಾಣಿ ವಾರ್ತೆ

ಕಾರವಾರ: ದೇಶದ ಎಲ್ಲ ರಾಜ್ಯಗಳ ಅತಿ ಎತ್ತರದ ಶಿಖರಗಳ ಮೇಲೆ ತ್ರಿವರ್ಣ ಧ್ವಜ ಹಾರಿಸುವ ಸಂಕಲ್ಪದೊಂದಿಗೆ ರಾಷ್ಟ್ರೀಯ ಪರ್ವತಾರೋಹಣ ಮತ್ತು ಸಾಹಸ ಕ್ರೀಡೆಗಳ ಸಂಸ್ಥೆಯ (ಎನ್‌.ಐ.ಎಂ.ಎ-.ಎಸ್) ಅಧೀನದಲ್ಲಿರುವ ಭಾರತೀಯ ಸೈನ್ಯದ ತಂಡವೊಂದು ಶುಕ್ರವಾರ ರಾಜ್ಯಕ್ಕೆ ಬಂದಿದೆ.

ಕರ್ನಲ್ ರಣವೀರ್ ಸಿಂಗ್ ಜಮ್ವಾಲ್ ನೇತೃತ್ವದ 14 ಜನರ ತಂಡವನ್ನು ತಾಲ್ಲೂಕಿನ ಮಲ್ಲಾಪುರದ ಕೈಗಾ ಅತಿಥಿ ಗೃಹದಲ್ಲಿ ಎನ್‌.ಪಿ.ಸಿ.ಐ.ಎಲ್‌ನ ನೇಚರ್ ಕ್ಲಬ್ ಸದಸ್ಯರು ಬರಮಾಡಿಕೊಂಡರು. ತಂಡವು ಶನಿವಾರ ಚಿಕ್ಕಮಗಳೂರು ಜಿಲ್ಲೆಯ ಮುಳ್ಳಯ್ಯನಗಿರಿ ಬೆಟ್ಟದಲ್ಲಿ ಚಾರಣ ಕೈಗೊಳ್ಳಲಿದ್ದು ಶಿಬಿರದ ತುತ್ತತುದಿಯಲ್ಲಿ ರಾಷ್ಟ್ರಧ್ವಜ ಹಾರಿಸಲಿದೆ. 'ದೇಶದ ಎಲ್ಲ 28 ರಾಜ್ಯಗಳ ಎತ್ತರದ ಶಿಖರಗಳ ಮೇಲೆ ರಾಷ್ಟ್ರಧ್ವಜ ಹಾರಿಸುವ ಗುರಿ ಇದೆ. 17 ರಾಜ್ಯಗಳಲ್ಲಿ ಈಗಾಗಲೇ ಗುರಿ ಸಾಧಿಸಿದ್ದೇವೆ. ಕರ್ನಾಟಕದಲ್ಲಿ ಅತಿ ಎತ್ತರದ ಶಿಖರವಾದ ಮುಳ್ಳಯ್ಯನಗಿರಿಯಲ್ಲಿ ಈ ಸಾಧನೆ ಮಾಡಲಾಗುವುದು. ಅಕ್ಟೋಬರ್ ವೇಳೆಗೆ ಸಿಕ್ಕಿಂನಲ್ಲಿ ಧ್ವಜ ಹಾರಿಸಿ ಗುರಿ ಪೂರ್ಣಗೊಳಿಸುತ್ತೇವೆ' ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	102.54	2,379	5,737
ಹಾರಂಗಿ	2,859	2,858.15	988	1,700
ಕಬಿನಿ	2284.00	2,275.24	1,411	4,325
ಹೇಮಾವತಿ	2,922	2,910.77	994	4,950
ಲಿಂಗನಮಕ್ಕಿ	1,819	1,789.60	1,255	7,026.61
ಸೂಪಾ (ಮೀ)	564	546.21	2,935	5,399
ಮಾಣಿ	595	580.30	181	672
ತುಂಗಭದ್ರಾ	1,633	1,626.38	1,450	10,211
ಮಲಪ್ರಭಾ	2079.5	2,067.20	894	894
ಘಟಪ್ರಭಾ	2175	2,163.50	725	4,703
ಭದ್ರಾ	186	165.8	1,279	3,224
ಆಲಮಟ್ಟಿ (ಮೀ)	519.60	519.57	00	3,049
ನಾರಾಯಣಪುರ (ಮೀ)	492.25	490.03	00	303

* ನೆಲಮಟ್ಟದಿಂದ

ಅಕ್ರಮ ಖಾತೆ: ಕೆಎಎಸ್ ಅಧಿಕಾರಿ ಬಂಧನ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು/ಕಡೂರು: ಸರ್ಕಾರಿ ಜಮೀನನ್ನು ಅಕ್ರಮವಾಗಿ ಕೆಲವರ ಹೆಸರಿಗೆ ಖಾತೆ ಮಾಡಿರುವ ಆರೋಪದಲ್ಲಿ ಕೆಎಎಸ್ ಅಧಿಕಾರಿ ಜೆ.ಉಮೇಶ್ ಅವರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ. ಇದರ ಬೆನ್ನಲ್ಲೇ ಇವರನ್ನು ಸೇವೆಯಿಂದ ಅಮಾನತುಗೊಳಿಸಿ ಸರ್ಕಾರ ಆದೇಶಿಸಿದೆ.

ಸದ್ಯ ಕಾರವಾರದಲ್ಲಿ ಸೀಬರ್ಡ್ ಭೂಸ್ವಾಧೀನಾಧಿಕಾರಿಯಾಗಿದ್ದ ಜೆ.ಉಮೇಶ್, 2019ರಿಂದ 2023ರವರೆಗೆ ಕಡೂರು ತಹಶೀಲ್ದಾರ್ ಆಗಿ ಕೆಲಸ ಮಾಡಿದ್ದರು.

ಈ ಅವಧಿಯಲ್ಲಿ ಕಡೂರು ಪಟ್ಟಣ ಸಮೀಪದ ಉಳಿನಾಗರು ಬಳಿ ಸರ್ವೆ ನಂಬರ್ 43ರಲ್ಲಿ 5 ಎಕರೆ 4 ಗುಂಟೆ ಸರ್ಕಾರಿ ಜಮೀನನ್ನು ಅಕ್ರಮವಾಗಿ ಪೌತಿ ಖಾತೆ ಮೂಲಕ ಕೆಲವು ವ್ಯಕ್ತಿಗಳಿಗೆ ಖಾತೆ ಮಾಡಿಕೊಟ್ಟಿರುವ ಆರೋಪದಲ್ಲಿ ಜೆ.ಉಮೇಶ್, ನಿವೃತ್ತ ಶಿರಸ್ತೇದಾರ ನಂಜುಂಡಯ್ಯ, ಬೀರೂರು ಕಂದಾಯ ನಿರೀಕ್ಷಕರಾಗಿದ್ದ ಕಿರಣ್‌ಕುಮಾರ್ ವಿರುದ್ಧ

ಜೆ.ಉಮೇಶ್

ತರೀಕೆರೆ ಉಪವಿಭಾಗಾಧಿಕಾರಿ ಕೆ.ಜೆ. ಕಾಂತರಾಜು ಅವರು ಕಡೂರು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಎಫ್‌ಐಆರ್ ದಾಖಲಿಸಿಕೊಂಡಿದ್ದ ಪೊಲೀಸರು, ಜೆ.ಉಮೇಶ್ ಅವರನ್ನು ಬೆಂಗಳೂರಿನಲ್ಲಿ ಬಂಧಿಸಿದರು.

ಭೂಕಬಳಿಕೆ ಮಾಡಿಕೊಂಡಿರುವ 20 ಜನರಿಗೆ ನೋಟಿಸ್ ನೀಡಿ ನ್ಯಾಯಾಲಯಕ್ಕೆ ಹಿಂಬರಹ ನೀಡಲು ಸೂಚಿಸಿದ್ದರೂ, ಅದನ್ನು ಮಾಡದೆ ಕರ್ತವ್ಯ ಲೋಪ ಎಸಗಿದ್ದಾರೆ. ಅಲ್ಲದೇ, ಉಳಿನಾಗರು ಗ್ರಾಮದ ಸರ್ಕಾರಿ ಜಮೀನು ಖಾಸಗಿಯವರ ಪಾಲಾಗಿರುವುದರಿಂದ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟಾಗಿದೆ ಎಂದು ಆರೋಪಿಸಲಾಗಿದೆ. ಶಿಸ್ತು ಕ್ರಮ ಕೈಗೊಳ್ಳುವಂತೆ ಕಂದಾಯ ಸಚಿವರು ಮಾಡಿರುವ ಶಿಫಾರಸಿನಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು ಇವರನ್ನು ಅಮಾನತುಪಡಿಸಿ ಆದೇಶ ಹೊರಡಿಸಿದೆ.

ಬೆಂಗಳೂರು- ಮಂಗಳೂರು ನಡುವೆ ವಿಶೇಷ ರೈಲು

ಬೆಂಗಳೂರು: ಪ್ರಯಾಣಿಕರ ದಟ್ಟಣೆ ನಿವಾರಿಸಲು ಬೆಂಗಳೂರು ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಮತ್ತು ಮಂಗಳೂರು ಸೆಂಟ್ರಲ್ ನಿಲ್ದಾಣಗಳ ನಡುವೆ ವಿಶೇಷ ರೈಲು ಸಂಚರಿಸಲಿವೆ.

ಆ.28ರಂದು ಸಂಜೆ 4.35ಕ್ಕೆ ವಿಶೇಷ ರೈಲು (06569) ಬೆಂಗಳೂರಿನಿಂದ ಹೊರಡಲಿದೆ. ಮರು ದಿನ ಬೆಳಿಗ್ಗೆ 9.30ಕ್ಕೆ ಮಂಗಳೂರು ತಲುಪಲಿದೆ. ಈ ರೈಲಿಗೆ ಬಂಗಾರಪೇಟೆ, ಸೇಲಂ, ಈರೋಡ್, ತಿರುಪ್ಪೂರ್, ಕೊಯಮತ್ತೂರು, ಪಾಲಕ್ಕಾಡ್, ಶೋರನೂರು, ತಿರೂರ್, ಕೋಝಿಕ್ಕೋಡ್, ವಡಕರ, ತಲಶ್ಶೇರಿ, ಕಣ್ಣೂರು, ಪಯ್ಯನೂರು, ಕಾಞಂಗಾಡ್ ಮತ್ತು ಕಾಸರಗೋಡುಗಳಲ್ಲಿ ನಿಲುಗಡೆ ಇರಲಿದೆ. ಆ.29ರಂದು ರಾತ್ರಿ 8.5ಕ್ಕೆ ಮಂಗಳೂರು ಸೆಂಟ್ರಲ್‌ನಿಂದ ಈ ರೈಲು (06570) ಹೊರಡಲಿದ್ದು, ಮರು ದಿನ ಬೆಳಿಗ್ಗೆ 11.45ಕ್ಕೆ ಬೆಂಗಳೂರು ತಲುಪಲಿದೆ. ಕಾಸರಗೋಡು, ಕಾಞಂಗಾಡ್, ಪಯ್ಯನೂರು, ಕಣ್ಣೂರು, ತಲಶ್ಶೇರಿ, ವಡಕರ, ಕೋಝಿಕ್ಕೋಡ್, ತಿರೂರ್, ಶೋರನೂರು, ಪಾಲಕ್ಕಾಡ್, ಕೊಯಮತ್ತೂರು, ತಿರುಪ್ಪೂರ್, ಈರೋಡ್, ಸೇಲಂ, ಓಮಲೂರ್, ಧರ್ಮಪುರಿ ಮತ್ತು ಹೊಸೂರುಗಳಲ್ಲಿ ನಿಲುಗಡೆ ಇರಲಿದೆ.

ಮತದಾರರನ್ನು ಸೆಳೆಯಲು ಕಾಂಗ್ರೆಸ್ ಚಿಂತನೆ

ಜೋಶಿಗೆ ವಿನಯ ಪತ್ನಿ ಎದುರಾಳಿ?

• ಶ್ರೀಕಾಂತ ಕಲ್ಲಮ್ಮನವರ

ಹುಬ್ಬಳ್ಳಿ: ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಧಾರವಾಡ ಕ್ಷೇತ್ರದಿಂದ ಶಾಸಕ ವಿನಯ ಕುಲಕರ್ಣಿ ಪತ್ನಿ ಶಿವಲೀಲಾ ಕುಲಕರ್ಣಿ ಅವರನ್ನು ಕಣಕ್ಕಿಳಿಸಲು ಕಾಂಗ್ರೆಸ್ ಚಿಂತನೆ ನಡೆಸಿದೆ.

ಶಿವಲೀಲಾ ಕುಲಕರ್ಣಿ

ಈ ಕ್ಷೇತ್ರದಲ್ಲಿ 1996ರಿಂದ ಬಿಜೆಪಿ ನಿರಂತರವಾಗಿ ಗೆಲ್ಲುತ್ತಿದೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ನಾಲ್ಕು ಅವಧಿಯಿಂದ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ. ಅವರ ಎದುರು ಅಭ್ಯರ್ಥಿಯಾಗಿ ಶಿವಲೀಲಾ ಅವರನ್ನು ಕಣಕ್ಕಿಳಿಸಲು ಪಕ್ಷದ ಮುಖಂಡರು ಚರ್ಚೆ ನಡೆಸಿದ್ದಾರೆ.

ಹಿಂದಿನ ಎರಡು ಲೋಕಸಭಾ ಚುನಾವಣೆಯಲ್ಲಿ ಧಾರವಾಡ ಕ್ಷೇತ್ರದಿಂದ ವಿನಯ ಕುಲಕರ್ಣಿ ಅವರು ಸ್ಪರ್ಧಿಸಿ, ಸೋತಿದ್ದರು. 8 ವಿಧಾನಸಭಾ ಕ್ಷೇತ್ರಗಳು ಒಳಗೊಂಡ ಈ ಲೋಕಸಭಾ ಕ್ಷೇತ್ರದಾದ್ಯಂತ ಓಡಾಡಿ, ವಿನಯ ಕುಲಕರ್ಣಿ ಜನಸಂಪರ್ಕ ಬೆಳೆಸಿಕೊಂಡಿದ್ದಾರೆ.

> **ಲೋಕಸಭೆ ಚುನಾವಣೆ ಬಗ್ಗೆ ನನಗೇನೂ ಗೊತ್ತಿಲ್ಲ. ಈವರೆಗೆ ನನ್ನನ್ನು ಯಾವ ನಾಯಕರೂ ಸಂಪರ್ಕಿಸಿಲ್ಲ**
> **ಶಿವಲೀಲಾ ಕುಲಕರ್ಣಿ**
> ವಿನಯ ಕುಲಕರ್ಣಿ ಪತ್ನಿ

> **ಅಭ್ಯರ್ಥಿಗಳ ಆಯ್ಕೆ ಕುರಿತು ಅಭಿಪ್ರಾಯ ಸಂಗ್ರಹಿಸಲು ಆಗಸ್ಟ್ 28, 29ರಂದು ಪಕ್ಷದ ಮುಖಂಡರ ಸಭೆ ಕರೆಯಲಾಗಿದೆ. ಅಲ್ಲಿ ಚರ್ಚಿಸಿ ತೀರ್ಮಾನಿಸಲಾಗುವುದು**
> **ಅನಿಲಕುಮಾರ ಪಾಟೀಲ,** ಅಧ್ಯಕ್ಷ, ಕಾಂಗ್ರೆಸ್ ಧಾರವಾಡ ಜಿಲ್ಲಾ (ಗ್ರಾಮೀಣ) ಘಟಕ

ಧಾರವಾಡ, ಹುಬ್ಬಳ್ಳಿ-ಧಾರವಾಡ ಪೂರ್ವ, ಹುಬ್ಬಳ್ಳಿ-ಧಾರವಾಡ ಪಶ್ಚಿಮ, ಹುಬ್ಬಳ್ಳಿ- ಧಾರವಾಡ ಕೇಂದ್ರ, ನವಲಗುಂದ, ಕಲಘಟಗಿ, ಕುಂದಗೋಳ ಹಾಗೂ ಹಾವೇರಿ ಜಿಲ್ಲೆಯ ಶಿಗ್ಗಾಂವ ಸೇರಿ 5 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರು ಇದ್ದಾರೆ. ವಿನಯ ಕುಲಕರ್ಣಿ ಧಾರವಾಡ ಗ್ರಾಮೀಣ ಕ್ಷೇತ್ರದ ಶಾಸಕರಾಗಿದ್ದಾರೆ.

ವಿನಯ ಗೆಲುವಿನ ಹಿಂದಿನ ಶಕ್ತಿ: ಜಿಲ್ಲಾ ಪಂಚಾಯಿತಿ ಸದಸ್ಯ ಯೋಗೀಶಗೌಡ ಅವರ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಧಾರವಾಡ ಜಿಲ್ಲೆಯೊಳಗೆ ಪ್ರವೇಶಿಸದಂತೆ ವಿನಯ ಕುಲಕರ್ಣಿ ನ್ಯಾಯಾಲಯದಿಂದ ನಿರ್ಬಂಧಕ್ಕೆ ಒಳಗಾಗಿದ್ದಾರೆ. ಅದರಿಂದ ವಿಧಾನಸಭಾ ಚುನಾವಣೆಯಲ್ಲಿ ಧಾರವಾಡ ಕ್ಷೇತ್ರಕ್ಕೆ ಬರಲು ಸಾಧ್ಯವಾಗಲಿಲ್ಲ. ಒಂದು ದಿನವೂ ಪ್ರಚಾರಕ್ಕೆ ಬರಲು ಆಗಲಿಲ್ಲ. ಆಗ ಅವರ ಪರವಾಗಿ ಪತ್ನಿ ಶಿವಲೀಲಾ ಪ್ರಚಾರ ಕೈಗೊಂಡರು. ಇಡೀ ಕ್ಷೇತ್ರದ ತುಂಬ ಸುತ್ತಾಡಿ, ಮತದಾರರನ್ನು ಭಾವನಾತ್ಮಕವಾಗಿ ಸೆಳೆದರು. 18 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ವಿನಯ ಅವರನ್ನು ಗೆಲ್ಲಿಸಿದರು.

ಶಿವಲೀಲಾ ಅವರು ಪಂಚಮಸಾಲಿ ಲಿಂಗಾಯತ ಸಮುದಾಯಕ್ಕೆ ಸೇರಿದವರು. ಅವರನ್ನು ಕಣಕ್ಕಿಳಿಸಿ ಸಮುದಾಯದವರನ್ನು ಸೆಳೆಯಬಹುದು ಎಂಬ ಆಲೋಚನೆ ಕಾಂಗ್ರೆಸ್ ನಾಯಕರಲ್ಲಿದೆ. 'ಬಿಜೆಪಿ ತಮ್ಮ ಸಮುದಾಯದ ಮುಖಂಡರನ್ನು ಕಡೆಗಣಿಸುತ್ತಿದೆ ಎಂದು ಅಸಮಾಧಾನ ಹೊಂದಿರುವವರ ಮತಗಳನ್ನು ಗಳಿಸಬಹುದು' ಎಂಬ ಲೆಕ್ಕಾಚಾರವೂ ಅವರಲ್ಲಿದೆ.

ನಿಧನ ವಾರ್ತೆ

ಹೋರಾಟಗಾರ ಜಿಗಣಿ ಶಂಕರ್



ಆನೇಕಲ್: ಹೋರಾಟಗಾರ ಜಿಗಣಿ ಶಂಕರ್ (63) ಅವರು ಹೃದಯಾಘಾತದಿಂದ ಗುರುವಾರ ರಾತ್ರಿ ನಿಧನರಾದರು. ಮೃತರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ.

'ಶಂಕರ್ ಅವರು ಕರ್ನಾಟಕ ರಿಪಬ್ಲಿಕ್ ಸೇನೆಯ ರಾಜ್ಯ ಘಟಕದ ಅಧ್ಯಕ್ಷರಾಗಿದ್ದರು. ಬಂಗಾರಪೇಟೆ ಸಮೀಪದ ಕಾಮಸಮುದ್ರದಲ್ಲಿ ಕಾರ್ಯಕ್ರಮ ಮುಗಿಸಿ, ರಾತ್ರಿ ಮನೆಗೆ ವಾಪಸ್ಸಾಗುವ ವೇಳೆ ಹೃದಯಾಘಾತವಾಗಿತ್ತು' ಎಂದು ಕುಟುಂಬದ ಮೂಲಗಳು ಹೇಳಿವೆ.

ದಲಿತ ಸಂಘರ್ಷ ಸಮಿತಿಯ ಸ್ಥಾಪಕರಲ್ಲಿ ಒಬ್ಬರಾಗಿದ್ದ ಶಂಕರ್ ಅವರು ಶೋಷಿತ ಸಮುದಾಯದ ಪರವಾದ ಹಲವು ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದರು.

'ನೆತ್ತಿಗೊಂದು ಸೂರು ಕೃಷಿಗೊಂದು ಭೂಮಿ' ಹೋರಾಟ ರೂಪಿಸಿದ್ದರು. 1993ರಲ್ಲಿ ಹೆಬ್ಬಗೋಡಿ ಕಮ್ಮಸಂದ್ರದ ಬಳಿ ಪ್ರಭಾವಿಗಳ ಭೂಕಬಳಿಕೆ ವಿರುದ್ಧ ನಡೆದ ಹೋರಾಟದ ನೇತೃತ್ವ ವಹಿಸಿದ್ದರು. ಆ ಹೋರಾಟದಲ್ಲಿ ಬಳ್ಳಾರಿ ಜೈಲಿಗೆ ಕಳುಹಿಸಲಾಗಿತ್ತು. ಜೈಲಿನಿಂದ ಬಿಡುಗಡೆಯಾದ ಮೇಲೆ ಮುಖ್ಯಮಂತ್ರಿ ಮನೆಯವರೆಗೂ ಕಾಲ್ನಡಿಗೆ ಜಾಥಾ ನಡೆಸಿ ಸರ್ಕಾರಿ ಜಾಗ ಬಿಡಿಸುವಲ್ಲಿ ಯಶಸ್ವಿಯಾಗಿದ್ದರು ಎಂದು ಅವರ ಸ್ನೇಹಿತರು ಹೇಳಿದರು.

ಪ್ರಜಾ ವಿಮೋಚನಾ ಚಳವಳಿ, ಕರ್ನಾಟಕ ಜನಾಂದೋಲನ ಸಂಘಟನೆಯಲ್ಲೂ ಗುರುತಿಸಿಕೊಂಡಿದ್ದರು. ಪೆರಿಯಾರ್ ಸೇರಿದಂತೆ ಹಲವು ಪ್ರಶಸ್ತಿಗಳು ಸಂದಿವೆ. ತಮ್ಮ 'ಪ್ರಜ್ವಲ್ ಪ್ರಕಾಶನ'ದ ಮೂಲಕ ರಮಾಬಾಯಿ ಅಂಬೇಡ್ಕರ್ ಜೀವನ ಚರಿತ್ರೆ, ಮಾಯಿಗೌಡದ ಮಾತುಗಳು, ಅಂಬೇಡ್ಕರ್ ಚಿಂತನೆ ಒಳಗೊಂಡ ಕೃತಿಗಳನ್ನು ಪ್ರಕಟಿಸಿದ್ದರು.

ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಬಂಡೆನಲ್ಲಸಂದ್ರದಲ್ಲಿ ಶುಕ್ರವಾರ ಮಧ್ಯಾಹ್ನ ನೆರವೇರಿತು.

ದವಸ ಧಾನ್ಯಗಳು, ಹಣ್ಣು ತರಕಾರಿ ಸೇರಿ 85 ಪ್ರಕಾರದ ದೇಸಿ ತಳಿಗಳು ಲಭ್ಯ

ದೇಸಿ ಬೀಜ ಬ್ಯಾಂಕ್ ಕಟ್ಟಿ ಸ್ವಾವಲಂಬಿಯಾದವರು

• ಪ್ರಸನ್ನ ಕುಲಕರ್ಣಿ

ಖಾನಾಪುರ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಬೀಡಿ ಹೋಬಳಿ ವ್ಯಾಪ್ತಿಯ ಗುಂಡೇನಟ್ಟಿ ಗ್ರಾಮದ 71 ರೈತರು ಸಾವಯವ ಬೀಜ ಬ್ಯಾಂಕ್ ಕಟ್ಟಿಕೊಂಡು, ದೇಶದ ವಿವಿಧೆಡೆ ಬೀಜ ಮಾರಾಟ ಮಾಡಿ ಸ್ವಾವಲಂಬಿಗಳಾಗಿದ್ದಾರೆ.

ಗುಂಡೇನಟ್ಟಿಯ ರೈತ ಬಿ.ಬಿ. ಖಿಲಾರಿ ಅವರು ಸುತ್ತಮುತ್ತಲಿನ ರೈತರನ್ನು ಸೇರಿಸಿ 'ಸಿದ್ಧಾರೂಢ ಸಾವಯವ ಕೃಷಿಕರ ಬಳಗ' ಎಂಬ ಸ್ವ-ಸಹಾಯ ಸಂಘ ಕಟ್ಟಿದ್ದಾರೆ. ಎಲ್ಲರೂ ಸೇರಿ 1,200 ಎಕರೆ ಜಮೀನಿನಲ್ಲಿ ವಿವಿಧ ದೇಸಿ ತಳಿಗಳ ಬೀಜಗಳನ್ನು ಬೆಳೆಯುತ್ತಾರೆ. ಇವುಗಳ ಮಾರಾಟಕ್ಕೆ 'ದೇಸಿ ಬೀಜ ಬ್ಯಾಂಕ್' ಸ್ಥಾಪಿಸಿದ್ದಾರೆ. ಈ ಬ್ಯಾಂಕ್ ವಾರ್ಷಿಕ ₹25 ಲಕ್ಷಕ್ಕೂ ಹೆಚ್ಚು ವ್ಯವಹಾರ ಮಾಡುತ್ತಿದೆ. ಬಂದ ಲಾಭಾಂಶ ಎಲ್ಲರೂ ಹಂಚಿಕೊಳ್ಳುತ್ತಾರೆ.

ಸಾವಯವ ಪದ್ಧತಿ ಮೂಲಕ ಜವಾರಿ ಬೀಜಗಳನ್ನು ಬೆಳೆಯುವುದು ಅಷ್ಟೇ ಅಲ್ಲ, ದೇಸಿ ಬೀಜ ತಳಿಗಳ ಸಂರಕ್ಷಣೆ ಹಾಗೂ ಅವುಗಳ ಪ್ರಚಾರ ಮಾಡುವ ಉದ್ದೇಶವನ್ನು ರೈತರು ಹೊಂದಿದ್ದಾರೆ. ಜಮೀನುಗಳಲ್ಲಿ ಕ್ರಿಮಿನಾಶಕ, ಕೀಟನಾಶಕ, ರಸಗೊಬ್ಬರಗಳ ಬಳಕೆಯನ್ನು ಸಂಪೂರ್ಣ ತ್ಯಜಿಸಿದ್ದಾರೆ. ಸಾವಯವ ಪದ್ಧತಿ ಅನುಸರಿಸಿ ಸಾಂಪ್ರದಾಯಿಕ ಕೃಷಿ ಕೈಗೊಂಡಿದ್ದಾರೆ. ಇದನ್ನೇ ಇತರರಿಗೂ ಬೋಧಿಸುತ್ತಾರೆ.

ಖಾನಾಪುರ ತಾಲ್ಲೂಕು ಗುಂಡೇನಟ್ಟಿಯ ಸಿದ್ಧಾರೂಢ ಸಾವಯವ ಕೃಷಿಕರ ಬಳಗದ ದೇಸಿ ಬೀಜ ಬ್ಯಾಂಕ್‌ನಲ್ಲಿ ಬೀಜಕ್ಕಾಗಿ ಬೆಳೆಸಲಾದ ಭತ್ತದ ತಳಿಗಳು

₹12 ಲಕ್ಷ ನೆರವು: ಸಹಕಾರ ಸಂಘದ ಮೂಲಕ ಲಾಭದಾಯಕ ಹೆಜ್ಜೆ ಇಟ್ಟ ರೈತರ ಸಾಧನೆಯನ್ನು ಕೇಂದ್ರ ಸರ್ಕಾರ ಮೆಚ್ಚಿಕೊಂಡಿದೆ. ಕೇಂದ್ರ ಕೃಷಿ ಸಚಿವಾಲಯವು ₹12 ಲಕ್ಷ ನೆರವು ನೀಡಿದೆ. ದೇಸಿ ತಳಿ ಬೀಜಗಳ ಸಂರಕ್ಷಣೆ, ಅಭಿವೃದ್ಧಿ ಹಾಗೂ ಸಾವಯವ ಕೃಷಿಯ ಪ್ರಚಾರಕ್ಕೆ ಈ ನೆರವಿನ ಹಣ ಬಳಸಲಾಗುತ್ತಿದೆ.

ಇಲ್ಲಿನ ರೈತರು ಬೆಳೆಯುವ ಬೀಜಗಳಿಗೆ ದೆಹಲಿ, ಮುಂಬೈ, ಬೆಂಗಳೂರು, ಹೈದರಾಬಾದ್, ಧಾರವಾಡ ಸೇರಿ ವಿವಿಧ ನಗರಗಳಲ್ಲಿ ಬೇಡಿಕೆ ಇದೆ. ಆಂಧ್ರ ಪ್ರದೇಶ, ತೆಲಂಗಾಣ, ತಮಿಳುನಾಡು, ಮಹಾರಾಷ್ಟ್ರ, ಗುಜರಾತ್ ರಾಜ್ಯಗಳಿಂದಲೂ ಬೇಡಿಕೆ ಇದೆ. ಹೀಗಾಗಿ, ಹಂಗಾಮಿಗೆ ತಕ್ಕಂತೆ ರೈತರು ಯಾವುದೇ ಬೀಜ ಅಭಿವೃದ್ಧಿ ಮಾಡಿದರೂ ಅದು ಕೆಲವೇ ದಿನಗಳಲ್ಲಿ ಬಿಕರಿಯಾಗುತ್ತಿದೆ.

ಹೈಬ್ರೀಡ್‌ಗಿಂತಲೂ ದೇಸಿ ಬೀಜಗಳ ದರ ದುಪ್ಪಟ್ಟು ಇದೆ. ಆದರೂ ಬೇಡಿಕೆ ಮಾತ್ರ ತಗ್ಗಿಲ್ಲ. ಹೀಗಾಗಿ, ಈ ಸಹಕಾರ ಸಂಘ ಲಾಭದಲ್ಲಿ ಮುನ್ನಡೆದಿದೆ. ಸಿದ್ಧಾರೂಢ ಬೀಜ ಬ್ಯಾಂಕ್ ದೂರವಾಣಿ ಸಂಖ್ಯೆ: 9972150378.

ಬೀಜ ಬ್ಯಾಂಕಿನಲ್ಲಿ ಏನಿದೆ?

85 ಪ್ರಕಾರದ ದೇಸಿ ಭತ್ತದ ಬೀಜಗಳು ಮತ್ತು 40 ವಿಧದ ತರಕಾರಿ ಬೀಜಗಳ ಸಂಗ್ರಹವಿದೆ. ವಿವಿಧ ಪ್ರಕಾರದ ಬಳ್ಳಿಗಳು, ಹಸಿರು ತರಕಾರಿಗಳು, ದ್ವಿದಳ ಧಾನ್ಯಗಳು ಮತ್ತು ಸಿರಿಧಾನ್ಯಗಳ ಬೀಜಗಳನ್ನು ಸಿದ್ಧಪಡಿಸಲಾಗುತ್ತದೆ.

ಭತ್ತದ ಜವಾರಿ ತಳಿಗಳಾದ ಕರಿಹಕ್ಕಲಸಾಳಿ, ಚಂಪಕಸಾಳಿ, ಬಂಗಾರಕಡ್ಡಿ, ಯಾಲಕ್ಕಿಸಾಳಿ, ಅಂಬೆಮೊಹರ್, ಒಂದಕಡ್ಡಿ, ದೊಡ್ಡ ಬೈರನೆಲ್ಲು, ಕೊತ್ತಂಬರಿ ಸಾಳಿ, ಹೆಗ್ಗೆ, ಮೈಸೂರು ಸಣ್ಣ, ಕಾಲಾ ಜೀರಾ, ರಾಜಮುಡಿ, ಉದ್ದ ಜಯಾ, ಗಿಡ್ಡ ಜಯಾ, ಪದ್ಮರೇಖಾ, ಅಭಿನಾಳ, ಗಂಧಸಾಳಿ, ಪಂಚರತ್ನ, ಮೈಸೂರು ಮಲ್ಲಿಗೆ, ಕರಿ ಗಿಜುವಿಲಿ, ಬಿಳಿದಡಿ, ಬರ್ಮಾ, ಇಂದ್ರಾಣಿ, ದೊಡಗ್ಯಾ, ಬಾಸುಮತಿ, ಮಹಾನವಮಿ ಮತ್ತಿತರ ಅಪರೂಪದ ತಳಿಗಳ ಬೀಜಗಳನ್ನು ಸಂರಕ್ಷಿಸಲಾಗಿದೆ.

ಬೀಡಿ- ಕಿತ್ತೂರು ಮಾರ್ಗಮಧ್ಯದ ಗುಂಡೇನಟ್ಟಿಯ ಕಿಲಾರಿ ಅವರ ಜಮೀನಿನಲ್ಲಿರುವ ಬೀಜ ಬ್ಯಾಂಕಿಗೆ ಬರುವ ರೈತರಿಗೆ ಸಾವಯವ ಕೃಷಿಯ ಮಹತ್ವದ ಬಗ್ಗೆ ಮಾರ್ಗದರ್ಶನ, ಸಲಹೆ ನೀಡಲಾಗುತ್ತದೆ.

> **ಸಿದ್ಧಾರೂಢ ಸಾವಯವ ಕೃಷಿಕರ ಬಳಗ ಮತ್ತು ದೇಸಿ ಬೀಜ ಬ್ಯಾಂಕ್ ಕಾರ್ಯವನ್ನು ಧಾರವಾಡದ ಕೃಷಿ ವಿ.ವಿ, ಕೃಷಿ ಸಚಿವಾಲಯ, ಕೃಷಿ ಇಲಾಖೆ ಮೆಚ್ಚಿವೆ**
> **ಬಿ.ಬಿ ಕಿಲಾರಿ**
> ಸಾವಯವ ಕೃಷಿಕ, ಗುಂಡೇನಟ್ಟಿ

> **ಜವಾರಿ ಮತ್ತು ದೇಸಿ ಬೀಜಗಳನ್ನು ಬೆಳೆಯಲು ಇಚ್ಛಿಸುವವರಿಗೆ ಈ ಬೀಜ ಬ್ಯಾಂಕ್ ಮಾರ್ಗದರ್ಶಿ ಆಗಿದೆ. ರೈತರ ಈ ಪ್ರಯತ್ನಕ್ಕೆ ಇಲಾಖೆ ಸಹಕಾರ ನೀಡಲಿದೆ**
> **ದಾಮೋದರ ಚವಾಣ**
> ಸಹಾಯಕ ಕೃಷಿ ನಿರ್ದೇಶಕ, ಖಾನಾಪುರ

ಶನಿವಾರ, ಆಗಸ್ಟ್ 26, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 237 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ ಸಣ್ಣ ಉದ್ಯಮದ ಚುಂಗು ಹಿಡಿದ ಹೆಣ್ಮಕ್ಕಳ ಯಶೋಗಾಥೆಗಳು

ಲಡಾಖ್ ವಿಷಯದಲ್ಲಿ ಪ್ರಧಾನಿ ಸತ್ಯ ಹೇಳುತ್ತಿಲ್ಲ: ರಾಹುಲ್ 6
'ವಿಶ್ವವಿದ್ಯಾಲಯಕ್ಕೆ ಪ್ರವೇಶವಿಲ್ಲ!' 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
64,886	19,266	₹60,460 (ಬೆಂಗಳೂರು)	₹75,400 (ಬೆಂಗಳೂರು)	82.64

'ಬಾಹ್ಯಾಕಾಶ' ಅನುದಾನಕ್ಕೆ ಕತ್ತರಿ

• ಜಯಸಿಂಹ ಆರ್.

ಬೆಂಗಳೂರು: ಈಚೆಗಷ್ಟೇ ಚಂದ್ರನ ದಕ್ಷಿಣ ಧ್ರುವದಲ್ಲಿ ವಿಕ್ರಮ್ ಲ್ಯಾಂಡರ್ ಅನ್ನು ಯಶಸ್ವಿಯಾಗಿ ಇಳಿಸಿದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಕೇಂದ್ರ ಸರ್ಕಾರದ 'ಬಾಹ್ಯಾಕಾಶ ಇಲಾಖೆ'ಯ ಅಧೀನ ಸಂಸ್ಥೆ. ಬಾಹ್ಯಾಕಾಶ ಸಂಶೋಧನೆಯಲ್ಲಿ ಮಹತ್ವದ ಪಾತ್ರ ವಹಿಸುವ ಈ ಇಲಾಖೆಗೆ ಕೇಂದ್ರ ಸರ್ಕಾರವು ಪ್ರತಿವರ್ಷ ಅನುದಾನವನ್ನು ಕಡಿತ ಮಾಡುತ್ತಲೇ ಇದೆ.

2022–23ನೇ ಸಾಲಿನ ಬಜೆಟ್‌ನಲ್ಲಿ ಕೇಂದ್ರ ಸರ್ಕಾರವು ಈ ಇಲಾಖೆಗೆ ₹13,700 ಕೋಟಿ ಅನುದಾನವನ್ನು ಘೋಷಿಸಿತ್ತು. 2023–24ನೇ ಸಾಲಿನ ಬಜೆಟ್‌ನಲ್ಲೇ ಅನುದಾನವನ್ನು ₹12,543 ಕೋಟಿಗೆ ಕಡಿತ ಮಾಡಲಾಗಿದೆ. ಇದರಿಂದ ಇಲಾಖೆಗೆ ಘೋಷಣೆಯಾದ ಅನುದಾನದಲ್ಲಿ ಶೇ 8.5ರಷ್ಟು ಕಡಿಮೆಯಾದಂತಾಗಿದೆ. ಇನ್ನೊಂದೆಡೆ ಬಜೆಟ್‌ನಲ್ಲಿ ಘೋಷಿಸಿದಷ್ಟೂ ಅನುದಾನವನ್ನು ಕೇಂದ್ರ ಸರ್ಕಾರ ಇಲಾಖೆಗೆ ನೀಡುತ್ತಿಲ್ಲ. ಬದಲಿಗೆ ಅಂತಿಮವಾಗಿ ನೀಡುತ್ತಿರುವ ಅನುದಾನದಲ್ಲಿ ಮತ್ತಷ್ಟು ಕಡಿತ ಮಾಡುತ್ತಿದೆ.

ಘೋಷಿಸಿದಕ್ಕಿಂತ, ಕೊಡುವ ಮೊತ್ತ ಕಡಿಮೆ

2018–19ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ್ದಕ್ಕಿಂತ ಹೆಚ್ಚು ಅನುದಾನವನ್ನು ಪರಿಷ್ಕೃತ ಅಂದಾಜಿನಲ್ಲಿ ನೀಡಲಾಗಿತ್ತು. ಪರಿಷ್ಕೃತ ಅಂದಾಜು ಮತ್ತು ವಾಸ್ತವ ಅನುದಾನದ ನಡುವೆ ಹೆಚ್ಚಿನ ಅಂತರವೇನೂ ಇರಲಿಲ್ಲ. 2019–20ನೇ ಸಾಲಿನಲ್ಲೂ ಅನುದಾನವನ್ನು ಇದೇ ರೀತಿ ಹಂಚಿಕೆ ಮಾಡಲಾಗಿತ್ತು. ಆದರೆ, ನಂತರದ ವರ್ಷಗಳಲ್ಲಿ ಬಜೆಟ್‌ನಲ್ಲಿ ಘೋಷಿಸಿದ್ದಕ್ಕಿಂತ, ಪರಿಷ್ಕೃತ ಅಂದಾಜಿನಲ್ಲಿ ಕಡಿಮೆ ಅನುದಾನವನ್ನು ತೋರಿಸಲಾಗಿತ್ತು. ವಾಸ್ತವದಲ್ಲಿ ನೀಡಿದ ಅನುದಾನದ ಮೊತ್ತ ಇನ್ನಷ್ಟು ಕಡಿಮೆಯಾಗಿತ್ತು



₹1,476 ಕೋಟಿ
2021–22ನೇ ಸಾಲಿನ ಅನುದಾನದಲ್ಲಿ ಆದ ಇಳಿಕೆ; ಬಜೆಟ್‌ನಲ್ಲಿ ₹13,949 ಕೋಟಿ ಅನುದಾನ ಘೋಷಿಸಲಾಗಿತ್ತು. ಆದರೆ, ಆ ವರ್ಷ ವಾಸ್ತವದಲ್ಲಿ ಇಲಾಖೆಗೆ ದೊರೆತದ್ದು ₹12,473 ಕೋಟಿ ಮಾತ್ರ

₹3,170 ಕೋಟಿ
2022–23ನೇ ಸಾಲಿನ ಅನುದಾನದಲ್ಲಿ ಆದ ಇಳಿಕೆ; ಬಜೆಟ್‌ನಲ್ಲಿ ₹13,700 ಕೋಟಿ ಅನುದಾನ ಘೋಷಿಸಲಾಗಿತ್ತು. ಪರಿಷ್ಕೃತ ಅಂದಾಜಿನಲ್ಲಿ ಘೋಷಿಸಿದ್ದ ಅನುದಾನವನ್ನು ₹10,530 ಕೋಟಿಗೆ ಇಳಿಸಲಾಗಿತ್ತು

₹1,157 ಕೋಟಿ
2022–23ರ ಬಜೆಟ್‌ನಲ್ಲಿ ಘೋಷಿಸಿದ್ದ ಅನುದಾನಕ್ಕೆ ಹೋಲಿಸಿದರೆ, 2023–24ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿರುವ ಅನುದಾನದಲ್ಲಿ ಆಗಿರುವ ಇಳಿಕೆ

ಆಧಾರ: ಕೇಂದ್ರ ಸರ್ಕಾರದ ಬಜೆಟ್‌ಗಳು

ಶೇ 0.447ರಿಂದ ಶೇ 0.278ಗೆ ಕುಸಿದ ಇಲಾಖೆಯ ಪಾಲು

ಕೇಂದ್ರ ಸರ್ಕಾರದ ಬಜೆಟ್ ಗಾತ್ರವು ಪ್ರತಿ ವರ್ಷ ಏರಿಕೆಯಾಗುತ್ತಲೇ ಇದೆ. ಆದರೆ, ಅದೇ ಪ್ರಮಾಣದಲ್ಲಿ ಬಾಹ್ಯಾಕಾಶ ಇಲಾಖೆಯ ಅನುದಾನ ಏರಿಕೆಯಾಗುತ್ತಿಲ್ಲ. ಬಜೆಟ್‌ನ ಒಟ್ಟು ಮೊತ್ತಕ್ಕೆ ಹೋಲಿಸಿದರೆ, ಐದು ವರ್ಷಗಳಲ್ಲಿ ಇಲಾಖೆಗೆ ನೀಡಿದ ಅನುದಾನದ ಪ್ರಮಾಣ ಶೇ 0.447ರಿಂದ ಶೇ 0.278ಗೆ ಕುಸಿದಿದೆ



ಪ್ರಜಾವಾಣಿ ಗ್ರಾಫಿಕ್ಸ್: ಕಣಕಾಲಮಠ



ವಿಕ್ರಮ್ ಲ್ಯಾಂಡರ್‌ನಿಂದ ಪ್ರಜ್ಞಾನ್ ರೋವರ್ ಚಂದ್ರನ ನೆಲಕ್ಕೆ ಇಳಿದ ಪ್ರಕ್ರಿಯೆಯ ಚಿತ್ರಗಳನ್ನು ಇಸ್ರೊ ಬಿಡುಗಡೆ ಮಾಡಿದೆ ಚಿತ್ರಗಳು: ಪಿಟಿಐ

ಇಸ್ರೊಗೆ ಇಂದು ಮೋದಿ ಭೇಟಿ

ಚಂದ್ರಯಾನ–3ರ ಲ್ಯಾಂಡರ್ ಚಂದ್ರನ ಅಂಗಳದಲ್ಲಿ ಯಶಸ್ವಿಯಾಗಿ ಇಳಿದು, ರೋವರ್ ಕಾರ್ಯಾರಂಭಿಸಿರುವ ಕಾರಣ ಇಸ್ರೊ ವಿಜ್ಞಾನಿಗಳನ್ನು ಅಭಿನಂದಿಸಲು ಪ್ರಧಾನಿ ನರೇಂದ್ರ ಮೋದಿ ಶನಿವಾರ ಮುಂಜಾನೆ 6ಕ್ಕೆ ಬೆಂಗಳೂರಿಗೆ ಬರಲಿದ್ದಾರೆ. ಗ್ರೀಸ್‌ನಿಂದ ನೇರವಾಗಿ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಬಂದಿಳಿಯಲಿರುವ ಅವರು ಪೀಣ್ಯದಲ್ಲಿರುವ ಇಸ್ರೊ ಕೇಂದ್ರಕ್ಕೆ ತೆರಳುವರು. ಅಲ್ಲಿ ವಿಜ್ಞಾನಿಗಳು ಮತ್ತು ಎಂಜಿನಿಯರ್‌ಗಳ ಜತೆ ಮಾತುಕತೆ ನಡೆಸುವರು. ಬಳಿಕ ಎಚ್‌ಎಎಲ್‌ನಿಂದ 8.30ಕ್ಕೆ ದೆಹಲಿಗೆ ಪ್ರಯಾಣ ಬೆಳೆಸುವರು ಎಂದು ಮೂಲಗಳು ತಿಳಿಸಿವೆ.

ವರದಿ ಸಲ್ಲಿಸಲು ಪ್ರಾಧಿಕಾರಕ್ಕೆ ಸುಪ್ರೀಂ ಕೋರ್ಟ್ ಸೂಚನೆ

ಕಾವೇರಿ: ಆದೇಶಕ್ಕೆ ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರತಿನಿತ್ಯ 24 ಸಾವಿರ ಕ್ಯುಸೆಕ್ ಕಾವೇರಿ ನೀರು ಬಿಡಲು ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಬೇಕೆಂದು ಕೋರಿ ತಮಿಳುನಾಡು ಸರ್ಕಾರ ಸಲ್ಲಿಸಿರುವ ಅರ್ಜಿಯ ಮೇಲೆ ಯಾವುದೇ ಆದೇಶ ನೀಡಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಪಿ.ಎಸ್.ನರಸಿಂಹ ಹಾಗೂ ಪ್ರಶಾಂತ್ ಕುಮಾರ್ ಮಿಶ್ರಾ ಅವರನ್ನು ಒಳಗೊಂಡ ತ್ರಿಸದಸ್ಯ ಪೀಠ, ಕರ್ನಾಟಕ ಸರ್ಕಾರವು ತಮಿಳುನಾಡಿಗೆ ಬಿಡುಗಡೆ ಮಾಡಿರುವ ಕಾವೇರಿ ನೀರಿನ ಪ್ರಮಾಣದ ವರದಿ ಸಲ್ಲಿಸುವಂತೆ ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಸೂಚಿಸಿದೆ. ಪ್ರಕರಣದ ವಿಚಾರಣೆಯನ್ನು ಸೆಪ್ಟೆಂಬರ್ 1ಕ್ಕೆ ಮುಂದೂಡಿದೆ.

ಪ್ರಾಧಿಕಾರದ ಸಭೆ ಸೋಮವಾರ ನಿಗದಿಯಾಗಿದೆ ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಬಾಟಿ ತಿಳಿಸಿದರು. ಆಗ ನ್ಯಾಯಪೀಠ, 'ನಾವು ಈ ವಿಷಯದಲ್ಲಿ ಯಾವುದೇ ಪರಿಣತಿ ಹೊಂದಿಲ್ಲ. ಮುಂದಿನ ಹದಿನೈದು ದಿನಗಳ ಕಾಲ ನೀರು ಹರಿಸುವುದನ್ನು ನಿರ್ಧರಿಸಲು ಸೋಮವಾರ ಪ್ರಾಧಿಕಾರ ಸಭೆ ನಡೆಸಲಿದೆ ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ತಿಳಿಸಿದ್ದಾರೆ' ಎಂದು ಹೇಳಿತು.

ತಮಿಳುನಾಡು ಪರ ಹಿರಿಯ ವಕೀಲ ಮುಕುಲ್ ರೋಹಟಗಿ ಮತ್ತು ಕರ್ನಾಟಕದ ಪರ ಶ್ಯಾಮ್ ದಿವಾನ್ ಅವರ ವಾದವನ್ನು ಆಲಿಸಿದ ಪೀಠವು, 'ನೀರು ಬಿಡಲು ನೀಡಿರುವ ನಿರ್ದೇಶನಗಳನ್ನು ಪಾಲಿಸಲಾಗಿದೆಯೇ ಅಥವಾ ಇಲ್ಲವೇ ಎಂಬುದರ ಕುರಿತು ಪ್ರಾಧಿಕಾರ ವರದಿ ಸಲ್ಲಿಸುವುದು ಸೂಕ್ತ' ಎಂದು ಹೇಳಿತು.

'ಪ್ರಾಧಿಕಾರ ಆದೇಶ ಹೊರಡಿಸಿದರೂ ತಮಿಳುನಾಡಿಗೆ ಬಿಡಬೇಕಾದ ನೀರನ್ನು ಕರ್ನಾಟಕ ಬಿಡುತ್ತಿಲ್ಲ ಎಂಬುದು ತಮಿಳುನಾಡು ಸರ್ಕಾರದ ಆರೋಪ. ಪ್ರಾಧಿಕಾರದ ನಿರ್ದೇಶನದ ಪ್ರಕಾರ ನೀರು ಬಿಡಲಾಗಿದ್ದು, ಆ ನೀರು ತಮಿಳುನಾಡಿಗೆ ತಲುಪಲು ಮೂರು ದಿನಗಳು ಬೇಕಾಗುತ್ತದೆ ಎಂದು ಕರ್ನಾಟಕ ಸರ್ಕಾರ ಹೇಳಿದೆ. ಈ ವಿಷಯದ ಬಗ್ಗೆ ಪ್ರಾಧಿಕಾರ ತೀರ್ಮಾನ ತೆಗೆದುಕೊಳ್ಳಬೇಕಿದೆ' ಎಂದು ಪೀಠ ಅಭಿಪ್ರಾಯಪಟ್ಟಿತು.

7ನೇ ಪುಟ ನೋಡಿ

ಹಿಂಬಾಲಿಸಿ ಲೈಂಗಿಕ ಕಿರುಕುಳ ಆರೋಪ: ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತಿಯ ದಂಡ ಸಂಹಿತೆಯ ಕಲಂ 354 (ಡಿ)ರ ಅನ್ವಯ ಸಂಜ್ಞೇಯ ಅಪರಾಧವೆಂದು ಪರಿಗಣಿಸಿ ವಿಚಾರಣೆಗೆ ಮುಂದಾಗುವ ಮುನ್ನ, ಸೂಕ್ತ ಸಾಕ್ಷ್ಯಾಧಾರಗಳಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಬೇಕು. ಇಲ್ಲವಾದರೆ ಅದು ಕಾನೂನಿನ ದುರ್ಬಳಕೆ ಆಗುತ್ತದೆ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಈ ಸಂಬಂಧ ಬಿಎಚ್‌ಇಎಲ್‌ನ ಇಬ್ಬರು ಉದ್ಯೋಗಿಗಳಾದ ಎಂ.ಸಿ. ನಾಗರಾಜ್ (63) ಹಾಗೂ ಸಿ. ನರಸಿಂಹಮೂರ್ತಿ (59) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ (ಸಿಆರ್‌ಎಲ್‌ಪಿ 350/2023) ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಸಂದೇಶ್ ಜೆ. ಚೌಟ, 'ಅರ್ಜಿದಾರರ ವಿರುದ್ಧದ ಆರೋಪದಲ್ಲಿ ಯಾವುದೇ ಹುರುಳಿಲ್ಲ. ಅಷ್ಟೇ ಅಲ್ಲದೇ, ಹಿಂಬಾಲಿಸಿಕೊಂಡು ಹೋಗಿ ಲೈಂಗಿಕ ಕಿರುಕುಳ ನೀಡುತ್ತಿದ್ದಾರೆ ಎಂಬುದಕ್ಕೆ ಯಾವುದೇ ಸಾಕ್ಷಿ, ಪುರಾವೆಗಳೂ ಇಲ್ಲ. ಇದು ದುರುದ್ದೇಶಪೂರ್ವಕ ದೂರು' ಎಂದು ವಿವರಿಸಿದರು.

7ನೇ ಪುಟ ನೋಡಿ

ಮಣಿಪುರ ಗಲಭೆ ವಿಚಾರಣೆ ಅಸ್ಸಾಂಗೆ

ನವದೆಹಲಿ (ಪಿಟಿಐ): ಮಹಿಳೆಯ ಬೆತ್ತಲೆ ಮೆರವಣಿಗೆ ನಡೆಸಿ ಲೈಂಗಿಕ ಕಿರುಕುಳ ನೀಡಿದ ಪ್ರಕರಣವೂ ಸೇರಿದಂತೆ ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಅಸ್ಸಾಂಗೆ ವರ್ಗಾಯಿಸಿದೆ. ಪ್ರಕರಣಗಳ ತನಿಖೆಯನ್ನು ಸಿಬಿಐಗೆ ಈ ಹಿಂದೆಯೇ ವಹಿಸಲಾಗಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ಪೀಠವು, ಪ್ರಕರಣಗಳ ನಿರ್ವಹಣೆಗೆ ಒಂದು ಅಥವಾ ಅದಕ್ಕಿಂತ ಹೆಚ್ಚು ನ್ಯಾಯಾಲಯಗಳನ್ನು ನಿಯೋಜನೆ ಮಾಡಬೇಕು ಎಂದು ಗುವಾಹಟಿ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅವರಿಗೆ ಸೂಚನೆಯನ್ನೂ ನೀಡಿದೆ.

6ನೇ ಪುಟ ನೋಡಿ

ನೀರಜ್ ಅಮೋಘ ಥ್ರೊ: ಒಲಿಂಪಿಕ್ಸ್‌ಗೂ ಅರ್ಹತೆ

ಬುಡಾಪೆಸ್ಟ್ (ಪಿಟಿಐ): ಮೊದಲ ಯತ್ನದಲ್ಲೆ ಜಾವೆಲಿನ್‌ಅನ್ನು ಅಮೋಘವಾಗಿ 88.77 ಮೀ. ದೂರಕ್ಕೆ ಎಸೆದ ನೀರಜ್ ಜೋಪ್ರಾ ನಿರೀಕ್ಷೆಯಂತೆ ಶುಕ್ರವಾರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ಸ್ ಫೈನಲ್ ತಲುಪಿದರು, ಮಾತ್ರವಲ್ಲ ಮುಂದಿನ ವರ್ಷದ ಪ್ಯಾರಿಸ್ ಒಲಿಂಪಿಕ್ಸ್‌ಗೂ ಅರ್ಹತೆ ಪಡೆದರು.

ಭಾರತದ ಇನ್ನಿಬ್ಬರು– ಕನ್ನಡಿಗ ಡಿ.ಪಿ. ಮನು ಮತ್ತು ಕಿಶೋರ್ ಜೇನಾ ಅವರೂ ಫೈನಲ್‌ಗೆ ರಹದಾರಿ ಪಡೆದರು.

ಜಾವೆಲಿನ್ ಫೈನಲ್ ಭಾನುವಾರ ನಿಗದಿಯಾಗಿದೆ. 11

ಸ್ಮಾರ್ಟ್ ಸಿಟಿ: ರಾಜ್ಯಕ್ಕೆ ಮೂರು ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರದ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯ ನೀಡುವ 2022ನೇ ಸಾಲಿನ 'ಅತ್ಯುತ್ತಮ ರಾಷ್ಟ್ರೀಯ ಸ್ಮಾರ್ಟ್ ಸಿಟಿ ಪ್ರಶಸ್ತಿ'ಗೆ ಇಂದೋರ್ ಆಯ್ಕೆಯಾಗಿದೆ. ಸೂರತ್ ಮತ್ತು ಆಗ್ರಾ ಎರಡನೇ ಮತ್ತು ಮೂರನೇ ಸ್ಥಾನ ಗಳಿಸಿವೆ.

ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ಪುರಸ್ಕೃತ ನಗರಗಳ ಪಟ್ಟಿಯನ್ನು ಸಚಿವಾಲಯ ಶುಕ್ರವಾರ ಬಿಡುಗಡೆ ಮಾಡಿದೆ. ಕರ್ನಾಟಕದ ಮೂರು ನಗರಗಳು ಪ್ರಶಸ್ತಿಗೆ ಪಾತ್ರವಾಗಿವೆ. ನಗರ ಪರಿಸರ ವಿಭಾಗದಲ್ಲಿ ಶಿವಮೊಗ್ಗ ನಗರವು ಪ್ರಶಸ್ತಿಗೆ ಆಯ್ಕೆಯಾಗಿದೆ. ನವೀನ ಕಲ್ಪನೆ ಪ್ರಶಸ್ತಿ ವಿಭಾಗದಲ್ಲಿ ಹುಬ್ಬಳ್ಳಿ-ಧಾರವಾಡ ಪ್ರಶಸ್ತಿ ಪುರಸ್ಕೃತವಾಗಿದೆ. ವಲಯ ಸ್ಮಾರ್ಟ್ ಸಿಟಿ ಪ್ರಶಸ್ತಿ (ದಕ್ಷಿಣ ವಲಯ) ಬೆಳಗಾವಿಗೆ ಲಭಿಸಿದೆ.

ಒಳ ಪುಟಗಳು

ಸಣ್ಣ ನೇಕಾರರಿಗೆ 10 ಎಚ್‌ಪಿವರೆಗೆ ಉಚಿತ ವಿದ್ಯುತ್: ಸಿ.ಎಂ 5B
ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ 'ಎಲಿವೇಟೆಡ್ ವಾಕ್ ವೇ' 5B

ಚಿನಕುರಳಿ

ಪ್ರಕಾಶ್ ಶೆಟ್ಟಿ

ಪ್ರಜಾವಾಣಿ @75

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ

(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ

8147623791

080 45557204

readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ bit.ly/40dPCqy

ಕೆ.ಆರ್‌.ಪುರ ಕ್ಷೇತ್ರದ ಎಎಪಿ ಅಧ್ಯಕ್ಷರಾಗಿ ದಿಲೀಪ್ ನೇಮಕ

ಪ್ರಜಾವಾಣಿ ವಾರ್ತೆ

ದಿಲೀಪ್

ಕೆ.ಆರ್.ಪುರ: ಆಮ್ ಆದ್ಮಿ ಪಕ್ಷದ ಕೆ.ಆರ್.ಪುರ ಕ್ಷೇತ್ರದ ಅಧ್ಯಕ್ಷರಾಗಿ ದಿಲೀಪ್ ನೇಮಕಗೊಂಡಿದ್ದಾರೆ. ಪಕ್ಷದ ನಗರ ಉಸ್ತುವಾರಿ ಮೋಹನ್ ದಾಸರಿ ಹಾಗೂ ನಗರ ಅಧ್ಯಕ್ಷ ಡಾ.ಸತೀಶ್ ಕುಮಾರ್ ಅವರ ಆದೇಶದ ಮೇರೆಗೆ ನೇಮಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

‘ಫ್ರೀಡಂ ಆಯಿಲ್’ ಸಹಯೋಗದಲ್ಲಿ ಕಾರ್ಯಕ್ರಮಗಳು

ಭೂಮಿಕಾ ಕ್ಲಬ್‌ನ 8ನೇ ಆವೃತ್ತಿ ಕಾರ್ಯಕ್ರಮ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ನ ‘ಭೂಮಿಕಾ ಕ್ಲಬ್’ ವೇದಿಕೆಯು ಆ. 27ರಂದು 8ನೇ ಆವೃತ್ತಿಯ ಕಾರ್ಯಕ್ರಮ ಹಮ್ಮಿಕೊಂಡಿದೆ.

‘ಫ್ರೀಡಂ ಆಯಿಲ್’ ಸಹಯೋಗದಲ್ಲಿ ಬಸವೇಶ್ವರನಗರ 2ನೇ ಅಡ್ಡರಸ್ತೆಯ ಕಮಲಾನಗರದ 8ನೇ ಮುಖ್ಯರಸ್ತೆ, 1ನೇ ಸಿ.ಎ. ಸೈಟ್‌ನಲ್ಲಿರುವ ಕೆಇಎ ಪ್ರಭಾತ್ ರಂಗಮಂದಿರದಲ್ಲಿ ಮಧ್ಯಾಹ್ನ 2.30ಕ್ಕೆ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮವನ್ನು ಅರ್ಚನಾ ಜೋಯಿಸ್ ಉದ್ಘಾಟಿಸಲಿದ್ದಾರೆ. ಡಯಟ್ ಮತ್ತು ನ್ಯೂಟ್ರಿಷನ್ ಗೋಷ್ಠಿಯನ್ನು ಐಎಸ್‌ಪಿಎಎನ್ ಎಸ್‌ಆರ್ ಮಾರ್ಗದರ್ಶಕರಾದ ಅಪರ್ಣಾ ನಾಗೇಂದ್ರ ನಡೆಸಿಕೊಡಲಿದ್ದಾರೆ. ಅಕ್ಷತಾ ಪಾಂಡವಪುರ ಅವರಿಂದ ಏಕಾಂಕ ನಾಟಕ, ಭಾಗ್ಯಶ್ರೀ ಗೌಡ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಲಿವೆ.

ಸ್ವಾತಂತ್ರ್ಯದ ಸ್ಫೂರ್ತಿಯನ್ನು ಆಚರಿಸಲು, ಭಾರತೀಯರೆಂಬ ಹೆಮ್ಮೆಯನ್ನು ಬೆಳಗಿಸಲು, ಹೊಸ ವಿಷಯ ತಿಳಿದುಕೊಳ್ಳಲು, ನಟನೆ, ಸಂಗೀತದ ಈ ವಿಶೇಷ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬಹುದು. ಕಾರ್ಯಕ್ರಮದಲ್ಲಿ ಅಚ್ಚರಿ ಉಡುಗೊರೆ ಗೆಲ್ಲುವ ಅವಕಾಶವೂ ಇರಲಿದೆ. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ bit.ly/bhumikaclubaugust ಹೆಸರು ನೋಂದಣಿ ಮಾಡಿಕೊಳ್ಳಬಹುದು.

Freedom Rice Bran Oil Presents ಭೂಮಿಕಾ ಕ್ಲಬ್

SCAN ME

ಇಸ್ರೊಗೆ ಪ್ರಧಾನಿ ಭೇಟಿ: ಮಾರ್ಗ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೀಣ್ಯದಲ್ಲಿರುವ ಇಸ್ರೊ ಟೆಲಿಮೆಟ್ರಿ ಟ್ರ್ಯಾಕಿಂಗ್ ಅಂಡ್ ಕಮಾಂಡ್ ನೆಟ್‌ವರ್ಕ್ (ಐಎಸ್‌ಟಿಆರ್‌ಎಸಿ) ಕೇಂದ್ರಕ್ಕೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಶನಿವಾರ (ಆಗಸ್ಟ್ 26) ಭೇಟಿ ನೀಡಲಿದ್ದು, ಅವರ ಸಂಚಾರಕ್ಕೆ ಅನುಕೂಲ ಕಲ್ಪಿಸುವುದಕ್ಕಾಗಿ ಪ್ರಮುಖ ರಸ್ತೆಗಳಲ್ಲಿ ಮಾರ್ಗ ಬದಲಾವಣೆ ಮಾಡಲಾಗಿದೆ.

‘ಪ್ರಧಾನಿ ಅವರು ವಿಶೇಷ ವಿಮಾನದಲ್ಲಿ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಬೆಳಿಗ್ಗೆ ಬರಲಿದ್ದಾರೆ. ಬೆಳಿಗ್ಗೆ 4:30 ರಿಂದ ಬೆಳಿಗ್ಗೆ 9:30ರ ವರೆಗೆ ಕೆಲ ರಸ್ತೆಗಳಲ್ಲಿ ಸಾರ್ವಜನಿಕರ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಜೊತೆಗೆ, ಪರ್ಯಾಯ ಮಾರ್ಗಗಳಲ್ಲಿ ಸಂಚರಿಸಲು ಅವಕಾಶ ಕಲ್ಪಿಸಲಾಗಿದೆ’ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

‘ಬೆಳಿಗ್ಗೆ 4 ಗಂಟೆಯಿಂದ 11 ಗಂಟೆ ವರೆಗೆ ನಗರದೊಳಗೆ ಭಾರಿ ವಾಹನಗಳ ಸಂಚಾರವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ’ ಎಂದಿದ್ದಾರೆ.

ನರೇಂದ್ರ ಮೋದಿ ವೇಳಾಪಟ್ಟಿ

- ಬೆಳಿಗ್ಗೆ 5.55 ಗಂಟೆಗೆ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಆಗಮನ
- ಬೆಳಿಗ್ಗೆ 6.30ರ ವರೆಗೆ ನಿಲ್ದಾಣದಲ್ಲಿ ವಿಶ್ರಾಂತಿ
- ಬೆಳಿಗ್ಗೆ 7 ಗಂಟೆಗೆ ಇಸ್ರೊ ಕೇಂದ್ರಕ್ಕೆ ಭೇಟಿ
- ಬೆಳಿಗ್ಗೆ 8 ಗಂಟೆಯವರೆಗೆ ಇಸ್ರೊ ಕೇಂದ್ರದಲ್ಲಿ ವಿಜ್ಞಾನಿಗಳ ಸಭೆ
- ಬೆಳಿಗ್ಗೆ 8.35ಕ್ಕೆ ಬೆಂಗಳೂರಿನಿಂದ ದೆಹಲಿಗೆ ಪ್ರಯಾಣ

(ಮಾರ್ಗಮಧ್ಯೆಯೇ ರೋಡ್ ಶೋ ನಡೆಸುವ ಸಾಧ್ಯತೆ ಇದೆ)

ಎಲ್ಲೆಲ್ಲಿ ನಿರ್ಬಂಧ

ಹಳೇ ವಿಮಾನ ನಿಲ್ದಾಣ ರಸ್ತೆ, ಹಳೇ ಮದ್ರಾಸ್ ರಸ್ತೆ, ಎಂ.ಜಿ.ರಸ್ತೆ, ಕಬ್ಬನ್ ರಸ್ತೆ, ರಾಜಭವನ ರಸ್ತೆ, ಬಳ್ಳಾರಿ ರಸ್ತೆ (ಮೇಖ್ರಿ ವೃತ್ತ), ಸಿ.ವಿ. ರಾಮನ್ ರಸ್ತೆ, ಯಶವಂತಪುರ ಮೇಲ್ಸೇತುವೆ, ತುಮಕೂರು ರಸ್ತೆ (ಯಶವಂತಪುರದಿಂದ ನಾಗಸಂದ್ರದವರೆಗೆ), ಮಾಗಡಿ ರಸ್ತೆಯ, ಹೊರವರ್ತುಲ ರಸ್ತೆ (ಗೊರಗುಂಟೆಪಾಳ್ಯ ಜಂಕ್ಷನ್‌ನಿಂದ ಸುಮನಹಳ್ಳಿ), ಗುಬ್ಬಿ ತೋಟದಪ್ಪ ರಸ್ತೆ, ಜಾಲಹಳ್ಳಿ ವೃತ್ತ

JOCKEY FACTORY SECONDS UPTO 50% OFF* *T & C apply

· 10 am to 8 pm · Open All Days · Master / Visa Card Accepted

INNERWEAR • LEISUREWEAR • ACTIVEWEAR • KIDSWEAR • SOCKS

Venues In Bangalore

Infantry Road:	Safina Plaza, No.84/85 - 560 001
Rajajinagar:	Raja Rajeshwari Kalyana Mantapa, 2nd Block, Dr. Rajkumar Road, Near Blue Hyundai Showroom - 560010
Banshankari:	Sri Hari Kalyana Mantap, 30th Main, B.S.K. 3rd Stage, Near K.I.M.S. Hospital - 560085
Jayanagar:	Premchandra Kalyana Mahal, 10th Main Road, T. Mariappa Road, 2nd Block, (Near Ashoka Pillar) - 560011
Malleswaram:	The Canara Union, No.42, 8th Main, Canara Union Road - 560003
Vijayanagar:	Five O Gallery, 17th Cross, M.C. Road, Near Vijay Nagar Bus Stop - 560040
Rajarajeshwari Nagar:	Vasavi Mahal Kalyana Mantapa, Next To Reliance Digital, Ideal Homes I Phase - 560098
Kundalahalli Gate:	S K R Convention Hall, Thubarahalli, Varthur Main Road - 560066
Sheshadripuram:	Sri S.S.K Samaj Hall,(M.G. Tambre Memorial Hostel), South Central Road, Opp. Gandhinagar MLA Office, Opp Mantri Mall Main Gate - 560020
Yelahanka:	Tirumala Samudaya Bhavana, #30/2A/3, Thirumalappa Nagar, Attur Layout - 560064
Koramangala:	Apoorva International, #35A, Raheja Arcade, Opp Star Box - 560095
Basavanagudi:	Amolak Apparels, #104, Bull Temple Road, Near Ramakrishna Ashram - 560019

Org. by: Surya Agency Pvt. Ltd.

ಚರಣ್ ಸೌಹಾರ್ದ ಸಹಕಾರ ಬ್ಯಾಂಕ್‌ನ ಸಭೆ ಇಂದು

ಬೆಂಗಳೂರು: ಚರಣ್ ಸೌಹಾರ್ದ ಸಹಕಾರ ಬ್ಯಾಂಕ್‌ನ 27ನೇ ವಾರ್ಷಿಕ ಸರ್ವ ಸದಸ್ಯರ ಸಭೆ ಆಗಸ್ಟ್ 26ರ ಬೆಳಿಗ್ಗೆ 11ಕ್ಕೆ ನಡೆಯಲಿದೆ.

ಬಸವನಗುಡಿಯ ಶಂಕರಪುರಂನ ಪಂಪಮಹಾಕವಿ ರಸ್ತೆಯ ವಿದ್ಯಾವಿಹಾರ ಸಭಾಂಗಣದಲ್ಲಿ ಅಧ್ಯಕ್ಷ ಬಿ.ವಿ.ದ್ವಾರಕನಾಥ್ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

THE BIG DISCOUNT SALE

SINCE 1960 hakoba®

FABRICS • SUITS • CUT PIECES • SAREES • KURTIS

LADY JAHANGIR KOTARI HALL

14, Queens Road, Circle, Shivaji Nagar, Near Indian Express, Bangalore - 560001.

CLEARANCE SALE UPTO 50% OFF

www.hakoba.in

FRESH ARRIVALS NOW ON DISPLAY

All Cards Accepted · 10 am to 9 pm · 7080904360 · CAR PARKING AVAILABLE

ನೀರು ಪೂರೈಕೆಯಲ್ಲಿ ವ್ಯತ್ಯಯ ಇಂದು

ಬೆಂಗಳೂರು: ಕಾವೇರಿ ನೀರು ಪೂರೈಕೆಯಾಗುವ ಪ್ರದೇಶಗಳಲ್ಲಿ ಇದೇ 26ರಂದು ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಬೆಂಗಳೂರು ಜಲಮಂಡಳಿಯ 4ನೇ ಹಂತ 1ನೇ ಘಟ್ಟದ ವ್ಯಾಪ್ತಿಗೆ ಬರುವ ಜೆ.ಪಿ. ನಗರ 4ನೇ ಹಂತ ಮೆಟ್ರೊ ನಿಲ್ದಾಣದ ಹತ್ತಿರ ಕೊಳವೆ ಮಾರ್ಗ ಜೋಡಣೆ ಕಾಮಗಾರಿ ನಡೆಯುತ್ತಿರುವುದರಿಂದ ಕಾವೇರಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ನೀರು ವ್ಯತ್ಯಯವಾಗುವ ಪ್ರದೇಶಗಳು: ಜೆ.ಪಿ. ನಗರ 3ರಿಂದ 7ನೇ ಘಟ್ಟ, ಅರಕೆರೆ ಮೈಕೋ ಲೇಔಟ್, ವಿಜಯ ಬ್ಯಾಂಕ್ ಕಾಲೊನಿ, ಹುಳಿಮಾವು, ಬಿಳೇಕಹಳ್ಳಿ, ಸಿಂಡಿಕೇಟ್ ಬ್ಯಾಂಕ್ ಕಾಲೊನಿ, ಕೋಣನಕುಂಟೆ, ಚುಂಚಘಟ್ಟ, ಜರಗನಹಳ್ಳಿ, ರಂಕಾ ಕಾಲೊನಿ, ಜಯನಗರ 4ನೇ ಟಿ ಬ್ಲಾಕ್, ತಿಲಕ್ ನಗರ, ಎಸ್.ಆರ್. ಕೃಷ್ಣಪ್ಪ ಗಾರ್ಡನ್, ಬಿ.ಟಿ.ಎಂ. 2ನೇ ಹಂತ, ಮಡಿವಾಳ, ಡಾಲರ್ಸ್ ಕಾಲೊನಿ, ಗುರಪ್ಪನಪಾಳ್ಯ, ತಾವರೆಕೆರೆ, ಬಿಸ್ಮಿಲಾ ನಗರ, ಎಚ್.ಎಸ್.ಆರ್. ಲೇಔಟ್ 1ನೇ ಸೆಕ್ಟರ್‌ನಿಂದ 7ನೇ ಸೆಕ್ಟರ್, ಮಂಗಮ್ಮನಪಾಳ್ಯ, ಎಲೆಕ್ಟ್ರಾನಿಕ್ ಸಿಟಿ, ಕೋರಮಂಗಲ 1ನೇ ಬ್ಲಾಕ್‌ನಿಂದ 4ನೇ ಬ್ಲಾಕ್, ಬೆಳ್ಳಂದೂರು, ಎಸ್.ಟಿ. ಬೆಡ್ಸ್, ಜಕ್ಕಸಂದ್ರ, ವೆಂಕಟಾಪುರ, ಶಾಂತಿನಗರ ಕೋ–ಆಪರೇಟಿವ್ ಸೊಸೈಟಿ ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಚಂದ್ರಯಾನ–3 ಯಶಸ್ವಿ: 101 ಸಸಿ ನೆಟ್ಟು ಸಂಭ್ರಮ

ಚಂದ್ರಯಾನ–3ರ ಯಶಸ್ವಿಯನ್ನು ಚೋಳನಾಯಕನ ಹಳ್ಳಿ ಪಂಚಾಯಿತಿ ವತಿಯಿಂದ 101 ಸಸಿ ನೆಟ್ಟು ಸಂಭ್ರಮಿಸಲಾಯಿತು

ಕೆಂಗೇರಿ: ಚಂದ್ರಯಾನ-3 ಯಶಸ್ವಿಯಾದ ಸಂಭ್ರಮವನ್ನು ಚೋಳನಾಯಕನ ಹಳ್ಳಿ ಗ್ರಾಮ ಪಂಚಾಯಿತಿಯು 101 ಸಸಿ ನೆಟ್ಟು ಆಚರಿಸಿತು.

ಪಂಚಾಯಿತಿ ವ್ಯಾಪ್ತಿಯ ಭದ್ರಾ ಸರ್ಕಾರಿ ಪ್ರೌಢಶಾಲೆಯಲ್ಲಿ ಪಂಚಾಯಿತಿ ಅಧ್ಯಕ್ಷ ಆನಂದಸ್ವಾಮಿ ಗಿಡ ನೆಟ್ಟು ನೀರು ಹಾಯಿಸುವ ಮೂಲಕ ಚಂದ್ರಯಾನದ ಯಶಸ್ವಿಯನ್ನು ಸ್ಮರಣೀಯವನ್ನಾಗಿಸುವ ಕಾರ್ಯಕ್ಕೆ ಚಾಲನೆ ನೀಡಿದರು.

ಇಂತಹ ಅದ್ಭುತ ಕ್ಷಣವನ್ನು ನೆನಪಿನಲ್ಲಿಡಲು ಹಾಗೂ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ ವೃದ್ಧಿಸಲು ಪಂಚಾಯಿತಿಯ ಎಲ್ಲ ಶಾಲೆಗಳಲ್ಲೂ ಸಸಿ ನೆಡಲು ಪಂಚಾಯಿತಿ ವತಿಯಿಂದ ಕ್ರಮ ಕೈಗೊಳ್ಳಲಾಗಿದೆ ಎಂದು ಆನಂದಸ್ವಾಮಿ ತಿಳಿಸಿದರು.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರಾಜಾರಾಮ್ ಚಂದ್ರಯಾನದ ಮಾಹಿತಿ ನೀಡಿದರು. ಶಾಲಾ ವಿದ್ಯಾರ್ಥಿಗಳಿಗೆ ಸಿಹಿ ಹಂಚಲಾಯಿತು. ಮುಖ್ಯ ಶಿಕ್ಷಕಿ ಕೆ.ಎಂ. ಶೋಭಾ, ಸಹ ಶಿಕ್ಷಕ ಚಂದ್ರು ಇದ್ದರು.

ನಗರದಲ್ಲಿ ಇಂದು

ಮಣ್ಣಿನ ಮಕ್ಕಳಿಗೆ ಉದ್ಯೋಗ ಮೇಳ: ಸಾನ್ನಿಧ್ಯ: ಸೌಮ್ಯನಾಥ ಸ್ವಾಮೀಜಿ, ಉದ್ಘಾಟನೆ: ಚಲುವರಾಯಸ್ವಾಮಿ, ಅಧ್ಯಕ್ಷತೆ: ಎಸ್.ವಿ. ಸುರೇಶ್, ಮುಖ್ಯ ಅತಿಥಿ: ಎನ್.ಎಸ್. ನಾಗೇಶ್, ಆಯೋಜನೆ: ಒಕ್ಕಲಿಗ ಯುವ ಬ್ರಿಗೇಡ್, ಎನ್‌ಆರ್‌ಐ ಒಕ್ಕಲಿಗ ಬ್ರಿಗೇಡ್, ಸ್ಥಳ: ಇಂಡಿಯನ್ ಹೈಸ್ಕೂಲ್, ಜ್ಞಾನಭಾರತಿ, ಮರಿಯಪ್ಪನಪಾಳ್ಯ, ಬೆಳಿಗ್ಗೆ 9.30

9ನೇ ದ್ವೈವಾರ್ಷಿಕ ಸಮ್ಮೇಳನ: ಮುಖ್ಯ ಅತಿಥಿಗಳು: ಲಕ್ಷ್ಮೀ ವೆಂಕಟೇಶ್, ಕೆ. ಪಾರ್ಥಸಾರಥಿ ನಾಯ್ಡು, ಗೌರವ ಅತಿಥಿ: ಎಸ್. ರಮೇಶ್, ಅಧ್ಯಕ್ಷತೆ: ಎಚ್.ಎನ್. ಸುರೇಶ್ ಮೂರ್ತಿ, ಆಯೋಜನೆ: ಸೆಂಟ್ರಲ್ ಬ್ಯಾಂಕ್ ಎಂಪ್ಲಾಯ್ಸ್ ಕಾಂಗ್ರೆಸ್, ಸೆಂಟ್ರಲ್ ಬ್ಯಾಂಕ್ ಆಫೀಸರ್ಸ್ ಕಾಂಗ್ರೆಸ್ ರಾಜ್ಯ ಶಾಖೆ, ಸ್ಥಳ: ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಬೆಳಿಗ್ಗೆ 10

‘ಕಾದಂಬರಿ’ ಉತ್ಸವ: ಒಡಿಶಿ ನೃತ್ಯ: ಕರಿಷ್ಮಾ ಅಹುಜಾ, ಚಿಂಗ್ ಹಾನ್ ವೆಂಗ್, ಕಥಕ್: ರೇಖಾ ಸಿನ್ಹಾ, ಮುಖ್ಯ ಅತಿಥಿಗಳು: ವೈ.ಕೆ. ಸಂಧ್ಯಾ ಶರ್ಮಾ, ರುದ್ರ ರೈ, ಸಾಯಿ ವೆಂಕಟೇಶ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10.30

16ನೇ ವಾರ್ಷಿಕೋತ್ಸವ ಹಾಗೂ ಜಯಂತೊ ಬ್ಯಾನರ್ಜಿ ಅವರ ವ್ಯಂಗ್ಯಚಿತ್ರ ಪ್ರದರ್ಶನಕ್ಕೆ ಚಾಲನೆ: ಚಿರಂಜೀವಿ ಸಿಂಘ್, ಗೌರವ ಅತಿಥಿ: ಭರತ್ ಮೆಹ್ತಾ, ಅಧ್ಯಕ್ಷತೆ: ಕೆ. ಅನಂತ ಗೌಡ, ಆಯೋಜನೆ ಹಾಗೂ ಸ್ಥಳ: ಇಂಡಿಯನ್ ಕಾರ್ಟೂನ್ ಗ್ಯಾಲರಿ, ಎಂ.ಜಿ. ರಸ್ತೆ, ಬೆಳಿಗ್ಗೆ 11



ಚಿರಂಜೀವಿ ಸಿಂಘ್

ಪೊಲೀಸ್ ಮಾರ್ಷಲ್‌ಗಳ ತರಬೇತಿ ಕಾರ್ಯಕ್ರಮ: ಮುಖ್ಯ ಅತಿಥಿಗಳು: ರಮಣ್ ಗುಪ್ತ, ಲಕ್ಷ್ಮಿಪ್ರಸಾದ್, ಆಯೋಜನೆ: ಬೆಂಗಳೂರು ನಗರ ಪೊಲೀಸ್, ಆರೋಹಣ ಪ್ರತಿಷ್ಠಾನ, ಸ್ಥಳ: ಅಂಬೇಡ್ಕರ್ ಭವನ, ಯಲಹಂಕ, ಬೆಳಿಗ್ಗೆ 11

‘ಸ್ವತಂತ್ರ ಭಾರತ: ಹಿನ್ನೋಟ–ಮುನ್ನೋಟ’ ವಿಚಾರಗೋಷ್ಠಿ: ‘ಸ್ವಾತಂತ್ರ್ಯ ಹೋರಾಟದ ವಿವಿಧ ಆಯಾಮಗಳು: ಹಂ.ಗು. ರಾಜೇಶ್, ‘ಸಮಕಾಲೀನ ಸಾಮಾಜಿಕ, ಆರ್ಥಿಕ ಸವಾಲುಗಳು’: ಎಸ್. ವೈ. ಗುರುಶಾಂತ್, ಅಧ್ಯಕ್ಷತೆ: ಬಸವರಾಜ ಸಬರದ, ಆಯೋಜನೆ: ಬಂಡಾಯ ಸಾಹಿತ್ಯ ಸಂಘಟನೆ, ಸ್ಥಳ: ಸಚಿವಾಲಯ ಕ್ಲಬ್ ಸಭಾಂಗಣ, ಕಬ್ಬನ್ ಉದ್ಯಾನ, ಸಂಜೆ 4

ಗಂಗಪ್ಪ ತಳವಾರ್ ಅವರ ‘ಧಾವತಿ’ ಕಾದಂಬರಿ ಬಿಡುಗಡೆ: ದು. ಸರಸ್ವತಿ, ಅಧ್ಯಕ್ಷತೆ: ಎನ್. ವೆಂಕಟೇಶ್, ಮುಖ್ಯ ಅತಿಥಿ: ಸುಬ್ಬು ಹೊಲೆಯಾರ್, ಕೃತಿ ಬಗ್ಗೆ: ಪಿ. ಭಾರತಿ ದೇವಿ, ಆಯೋಜನೆ: ತಮಟೆ ಪುಸ್ತಕ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 5

ಇಸ್ರೊ ವಿಜ್ಞಾನಿಗಳಿಗೆ ಸನ್ಮಾನ: ವಿದ್ಯಾಶ್ರೀಶತೀರ್ಥ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ವ್ಯಾಸರಾಜ ಮಠ, ಗಾಂಧಿ ಬಜಾರ್, ಸಂಜೆ 5

ರಾಜಶೇಖರ ನುಲಿ ಅವರ ಸ್ವರ ಸಂಯೋಜಿತ ಗೀತೆಗಳ ಗಾಯನ ಹಾಗೂ ‘ಸುರಾಗ ಸ್ವರ ನಿಧಿ’ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಮಹೇಶ ಜೋಶಿ, ಅಧ್ಯಕ್ಷತೆ: ನಾರಾಯಣಘಟ್ಟ, ಮುಖ್ಯ ಅತಿಥಿಗಳು: ಕಾ.ವೆಂ. ಶ್ರೀನಿವಾಸಮೂರ್ತಿ, ಆನಂದ ಮಾದಲಗೆರೆ, ಪ್ರಶಸ್ತಿ ಪುರಸ್ಕೃತರು: ಎಸ್. ಬಾಲಸುಬ್ರಹ್ಮಣ್ಯಂ, ಆಯೋಜನೆ: ಸುರಾಗ ಸಂಗೀತ ಅಕಾಡಮಿ ಟ್ರಸ್ಟ್, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ನಾಟಕೋತ್ಸವ: ‘ಸಮಕಾಲೀನ ರಂಗಭೂಮಿಯ ಸವಾಲುಗಳು ಮತ್ತು ನಮ್ಮ ಪ್ರತಿಸ್ಪಂದನೆ’ ವಿಷಯದ ಬಗ್ಗೆ ಸಂವಾದ: ವಿಶಾಖ ಎನ್., ಛಾಯಾ ಭಾರ್ಗವಿ, ಪಿ.ಡಿ. ಸತೀಶ್ ಚಂದ್ರ, ಬೇಲೂರು ರಘುನಂದನ್, ಅಭಿಮನ್ಯು ಭೂಪತಿ, ‘ಪ್ರವರ ಪ್ರಶಸ್ತಿ’ ಪುರಸ್ಕಾರ: ಗೌತಮ ಉಪಾಧ್ಯ, ನಾಟಕ ಪ್ರದರ್ಶನ: ‘ಗೊರೂರು’, ಆಯೋಜನೆ: ಪ್ರವರ ಥಿಯೇಟರ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 5.30

ಸಮಾಲೋಚನೆ ಸಭೆ: ಮುಖ್ಯ ಅತಿಥಿ: ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ಬಿ.ವಿ. ಗೋಪಾಲ ರೆಡ್ಡಿ, ಆಯೋಜನೆ ಹಾಗೂ ಸ್ಥಳ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆ ಮಹಾಸಂಸ್ಥೆ (ಎಫ್‌ಕೆಸಿಸಿಐ), ಕೆ.ಜಿ. ರಸ್ತೆ, ಸಂಜೆ 5.30



ಬಿ.ಆರ್. ಲಕ್ಷ್ಮಣರಾವ್

ಕವಿ ಸಂತೋಷ ಚೊಕ್ಕಾಡಿ ಅವರ ಭಾವಗೀತೆಗಳ ಗುಚ್ಛ ‘ಒಲವಿನ ಹಾಡು’ ಬಿಡುಗಡೆ: ಬಿ.ಆರ್. ಲಕ್ಷ್ಮಣರಾವ್, ಮುಖ್ಯ ಅತಿಥಿಗಳು: ಜೋಗಿ, ರಂಜನಿ ಪ್ರಭು, ಆಯೋಜನೆ: ಉಪಾಸನಾ ಟ್ರಸ್ಟ್, ಸ್ಥಳ: ಅಶ್ವಥ್ ಸಭಾಂಗಣ, ಎನ್.ಆರ್. ಕಾಲೊನಿ, ಸಂಜೆ 6

ಸಂಗೀತಗಂಗಾ 30ನೇ ವಾರ್ಷಿಕೋತ್ಸವ: ಉದ್ಘಾಟನೆ: ಪಿ.ಜಿ. ಆರ್. ಸಿಂಧ್ಯಾ, ಅಧ್ಯಕ್ಷತೆ: ಲೀಲಾದೇವಿ ಆರ್. ಪ್ರಸಾದ್, ವಾರ್ಷಿಕ ಪ್ರಶಸ್ತಿ: ಎಂ. ವೆಂಕಟೇಶ್ ಕುಮಾರ್, ಅಭಿನಂದನಾ ನುಡಿ: ಕೆ.ವಿ. ನಾಗರಾಜಮೂರ್ತಿ, ಮುಖ್ಯ ಅತಿಥಿ: ಪುತ್ತೂರು ನರಸಿಂಹ ನಾಯಕ್, ಆಯೋಜನೆ: ಸಂಗೀತಗಂಗಾ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6



ಎಂ. ವೆಂಕಟೇಶ್ ಕುಮಾರ್

ವಚನ ಶ್ರಾವಣ: ವಚನ ವಾಚನ: ಮಯೂರ, ಶೌರ್ಯ, ವಚನ ಗಾಯನ: ದೇವಿಕಾ, ವಚನ ಚಿಂತನ: ಎನ್. ಪಿನಾಕಪಾಣಿ, ಅಧ್ಯಕ್ಷತೆ: ರುದ್ರಪ್ಪ ದೇಸಾಯಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ನೀಲಮ್ಮ ಮತ್ತು ಸಿದ್ಧಲಿಂಗಪ್ಪನವರ ಮನೆಯಂಗಳ, #1800, ಅಪಾರ್ಟ್‌ಮೆಂಟ್ 303, ಭವಾನಿ ಎಲೈಟ್, 5ನೇ ಮುಖ್ಯ ರಸ್ತೆ, ಹಂಪಿನಗರ, ವಿಜಯನಗರ ಎರಡನೇ ಹಂತ, ಸಂಜೆ 6

ಬಿ. ಸುರೇಶ್ ಅವರ ‘ಲೋಕದ ಒಳಹೊರಗೆ’ ನಾಟಕ ಪ್ರದರ್ಶನ: ಆಯೋಜನೆ: ರಂಗಸಂಪದ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಭಾರತ ಸರ್ಕಾರ

ರಕ್ಷಣಾ ಸಚಿವಾಲಯ

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ)

ಸೆಂಟರ್ ಫಾರ್ ಮಿಲಿಟರಿ ಏರ್‌ವರ್ದಿನೆಸ್ & ಸರ್ಟಿಫಿಕೇಶನ್ (ಸೆಮಿಲ್ಯಾಕ್)

ಮಾರತಹಳ್ಳಿ ಕಾಲೋನಿ, ಬೆಂಗಳೂರು – 560 037

ಉಲ್ಲೇಖ/ಜಾಹೀರಾತು: ಸೆಮಿಲ್ಯಾಕ್/5925/ಹೆಚ್‌ಆರ್‌ಡಿ/ಆರ್‌ಎಫ್ 09 ಆಗಸ್ಟ್ 2023

ಬೆಂಗಳೂರಿನ ಸೆಮಿಲ್ಯಾಕ್ ಸಂಸ್ಥೆಯಲ್ಲಿ ಜೂನಿಯರ್ ರಿಸರ್ಚ್ ಫೆಲೋಶಿಪ್ (ಜೆಆರ್‌ಎಫ್) ಆಯ್ಕೆಗಾಗಿ ಜಾಹೀರಾತು

ಸೆಂಟರ್ ಫಾರ್ ಮಿಲಿಟರಿ ಏರ್‌ವರ್ದಿನೆಸ್ & ಸರ್ಟಿಫಿಕೇಶನ್ (ಸೆಮಿಲ್ಯಾಕ್) ಎಂಬ ಸಂಸ್ಥೆಯು, ಡಿಆರ್‌ಡಿಒ ಅಡಿಯಲ್ಲಿನ ಒಂದು ನಿಯಂತ್ರಕ ಅಂಗವಾಗಿದ್ದು, ಮಿಲಿಟರಿ ಹೆಲಿಕಾಪ್ಟರ್, ಮಾನವರಹಿತ ಏರಿಯಲ್ ಸಿಸ್ಟಮ್ಸ್ (ಯುಎಎಸ್), ಏರೋ–ಎಂಜೀನ್ಸ್, ಏರ್ ಲಾಂಚ್ಡ್ ವೆಪನ್ಸ್ ಮತ್ತು ಇನ್ನಿತರೆ ಏರ್‌ಬೋರ್ನ್ ಸ್ಟೋರ್‌ಗಳಿಗೆ ಏರ್‌ವರ್ದಿನೆಸ್ ಸರ್ಟಿಫಿಕೇಟ್ ನೀಡುವ ಜವಾಬ್ದಾರಿ ನಿರ್ವಹಿಸುತ್ತದೆ. ಸದರಿ ಏರ್‌ವರ್ದಿನೆಸ್ ಪ್ರಕ್ರಿಯೆಯನ್ನು, ಭಾರತದಾದ್ಯಂತ ನೆಲೆಗೊಂಡಿರುವ 18 ಪ್ರಾದೇಶಿಕ ಮಿಲಿಟರಿ ಏರ್‌ವರ್ದಿನೆಸ್ ಕೇಂದ್ರ(ಆರ್‌ಸಿಎಂಎ) ಗಳ ಮುಖಾಂತರ ಅನುಷ್ಠಾನಗೊಳಿಸಲಾಗುತ್ತದೆ ಮತ್ತು ಸೆಮಿಲ್ಯಾಕ್ ಸಂಸ್ಥೆಯು ಪ್ರಧಾನ ಕಾರ್ಪೊರೇಟ್ ಕಚೇರಿಯಾಗಿ ಕಾರ್ಯನಿರ್ವಹಿಸುತ್ತದೆ.

2\. ಕೆಳಕಂಡ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:–

ಕ್ರ. ಸಂ.	ಫೆಲೋಶಿಪ್ಸ್ ಮಾದರಿ	ಫೆಲೋಶಿಪ್ಸ್ ಸಂಖ್ಯೆ	ಸಬ್ಜೆಕ್ಟ್ ಡಿಸಿಪ್ಲಿನ್	ಕನಿಷ್ಠ ಶೈಕ್ಷಣಿಕ ವಿದ್ಯಾರ್ಹತೆ
1	ಜೂನಿಯರ್ ರಿಸರ್ಚ್ ಫೆಲೋ	01	ಏರೋನಾಟಿಕಲ್/ ಏರೋಸ್ಪೇಸ್ ಇಂಜಿನಿಯರಿಂಗ್	ಗೇಟ್ ಜೊತೆಗೆ ಸಂಬಂಧಿತ ವಿಷಯ/ಡಿಸಿಪ್ಲಿನ್ ಇರುವ ಪ್ರೊಫೆಷನಲ್ ಕೋರ್ಸ್‌ನಲ್ಲಿ (ಬಿ.ಇ/ಬಿ.ಟೆಕ್) ಪ್ರಥಮ ದರ್ಜೆ ಗ್ರಾಜುಯೇಟ್ ಪದವಿ ಪಡೆದಿರಬೇಕು ಅಥವಾ ಸಂಬಂಧಿತ ವಿಷಯ/ಡಿಸಿಪ್ಲಿನ್ ಇರುವ ಪ್ರೊಫೆಷನಲ್ ಕೋರ್ಸ್‌ನಲ್ಲಿ (ಎಂ.ಇ/ಎಂ.ಟೆಕ್) ಗ್ರಾಜುಯೇಟ್ ಮತ್ತು ಪೋಸ್ಟ್ ಗ್ರಾಜುಯೇಟ್ ಎರಡೂ ಹಂತಗಳಲ್ಲಿ ಪ್ರಥಮ ದರ್ಜೆ ಪೋಸ್ಟ್ ಗ್ರಾಜುಯೇಟ್ ಪದವಿ ಪಡೆದಿರಬೇಕು.

3\. **ಗರಿಷ್ಠ ವಯೋಮಿತಿ:** ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕಕ್ಕೆ 28 ವರ್ಷ ತುಂಬಿರಬೇಕು. ಪ್ರಸ್ತುತ ಚಾಲ್ತಿಯಲ್ಲಿರುವ ಸರ್ಕಾರಿ ನಿಯಮಗಳ ಪ್ರಕಾರ, ಸದರಿ ಗರಿಷ್ಠ ವಯೋಮಿತಿಯಲ್ಲಿ ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ (ಎನ್‌ಸಿಎಲ್) ಪ್ರವರ್ಗದ ಅಭ್ಯರ್ಥಿಗಳಿಗೆ ಸಡಿಲಿಕೆ ಇರುತ್ತದೆ.

4\. **ಸಂಭಾವನೆ:** ಮಾಸಿಕ ರೂ. 31,000/– ಸ್ಟೈಪಂಡ್ ಜೊತೆಗೆ ನಿಯಮಗಳ ಪ್ರಕಾರ ಹೆಚ್‌ಆರ್‌ಎ ಮತ್ತು ವೈದ್ಯಕೀಯ ಸೌಲಭ್ಯಗಳು ಇರುತ್ತವೆ.

5\. **ಅವಧಿ:** ಆರಂಭದಲ್ಲಿ 02 ವರ್ಷಗಳ ಅವಧಿ ನೀಡಲಾಗುತ್ತದೆ ಮತ್ತು ಡಿಆರ್‌ಡಿಒ ರಿಸರ್ಚ್ ಫೆಲೋಸ್ ಸ್ಕೀಮ್‌ನ ನಿಯಮಗಳ ಪ್ರಕಾರ ಗರಿಷ್ಠ 04 ವರ್ಷಗಳ ಅವಧಿಗೆ ವಿಸ್ತರಿಸಬಹುದಾಗಿರುತ್ತದೆ.

6\. ನಿಗದಿತ ಅರ್ಜಿ ನಮೂನೆಯನ್ನು (www.drdo.gov.in --> career ಇಲ್ಲಿ ನಿಗದಿತ ನಮೂನೆ ಲಭ್ಯ) ಭರ್ತಿ ಮಾಡಿ, ಸ್ವಯಂ ದೃಢೀಕೃತ ಶೈಕ್ಷಣಿಕ ವಿದ್ಯಾರ್ಹತೆಗಳ ಮತ್ತು ಅನುಭವ ಪ್ರಮಾಣಪತ್ರಗಳನ್ನು ಲಗತ್ತಿಸಿ “ದಿ ಚೀಫ್ ಎಕ್ಸಿಕ್ಯೂಟಿವ್ (ಏರ್‌ವರ್ದಿನೆಸ್)”:

ಮಿಲಿಟರಿ ಏರ್‌ವರ್ದಿನೆಸ್ & ಸರ್ಟಿಫಿಕೇಶನ್ ಕೇಂದ್ರ (ಸೆಮಿಲ್ಯಾಕ್), ಡಿಆರ್‌ಡಿಒ, ರಕ್ಷಣಾ ಸಚಿವಾಲಯ, ಮಾರತಹಳ್ಳಿ ಕಾಲೋನಿ ಅಂಚೆ, ಬೆಂಗಳೂರು – 560 037

ವಿಳಾಸಕ್ಕೆ, ಈ ಜಾಹೀರಾತು ಎಂಪ್ಲಾಯ್‌ಮೆಂಟ್ ನ್ಯೂಸ್ ಪತ್ರಿಕೆಯಲ್ಲಿ ಪ್ರಕಟಗೊಂಡ ದಿನಾಂಕದಿಂದ ಕಡ್ಡಾಯವಾಗಿ 21 ದಿನಗಳೊಳಗೆ ತಲುಪುವಂತೆ ರವಾನಿಸತಕ್ಕದ್ದು. ಅರ್ಜಿ ನಮೂನೆಯನ್ನು ಒಳಗೊಂಡಿರುವ ಲಕೋಟೆಯ ಎಡಭಾಗದ ಮೇಲೆ, ಕಡ್ಡಾಯವಾಗಿ ದಪ್ಪ ಅಕ್ಷರಗಳಲ್ಲಿ “ಅಪ್ಲಿಕೇಶನ್ ಫಾರ್ ಜೆಆರ್‌ಎಫ್” ಎಂದು ನಮೂದಿಸತಕ್ಕದ್ದು.

7\. ಪ್ರಸ್ತುತ ಸರ್ಕಾರಿ ಸಂಸ್ಥೆಗಳಲ್ಲಿ/ಸಾರ್ವಜನಿಕ ಕ್ಷೇತ್ರಅಧೀನ ಸಂಸ್ಥೆಗಳಲ್ಲಿ/ಸ್ವಾಯುತ್ತ ಅಂಗಗಳಲ್ಲಿ ಉದ್ಯೋಗಿಯಾಗಿರುವ ಅಭ್ಯರ್ಥಿಗಳು, ಸಂದರ್ಶನದ ಸಮಯದಲ್ಲಿ ಎನ್‌ಒಸಿ (ನೊ ಅಬ್ಜೆಕ್ಷನ್ ಸರ್ಟಿಫಿಕೇಟ್) ಹಾಜರುಪಡಿಸಬೇಕು.

8\. ಅಭ್ಯರ್ಥಿಗಳು ಸಂದರ್ಶನದ ಸಮಯದಲ್ಲಿ ಮೂಲ ಪ್ರಮಾಣಪತ್ರಗಳು/ಟೆಸ್ಟಿಮೊನಿಗಳನ್ನು ಹಾಜರುಪಡಿಸಬೇಕು.

9\. ಈ ಫೆಲೋಶಿಪ್ ಲಭಿಸಿದ ಮಾತ್ರಕ್ಕೆ ಡಿಆರ್‌ಡಿಒ ಸಂಸ್ಥೆಯಲ್ಲಿ ಸೇರ್ಪಡೆ ಆಗುವ ಯಾವುದೇ ಹಕ್ಕು ಲಭಿಸುವುದಿಲ್ಲ ಎಂಬುದನ್ನು ದಯವಿಟ್ಟು ಗಮನಿಸಬೇಕು.

10\. ಅಭ್ಯರ್ಥಿಗಳು ತಮ್ಮ ಫೆಲೋಶಿಪ್ ಅವಧಿಯಲ್ಲಿ ಯಾವುದೇ ಯೂನಿವರ್ಸಿಟಿ/ಇನ್‌ಸ್ಟಿಟ್ಯೂಟ್‌ನಲ್ಲಿ ಪಿಹೆಚ್.ಡಿ ಅಧ್ಯಯನಕ್ಕಾಗಿ ನೋಂದಣಿ ಮಾಡಿಕೊಳ್ಳಲು ಅವಕಾಶವಿರುತ್ತದೆ.

11\. ಅಭ್ಯರ್ಥಿಗಳು ತಮ್ಮ ಅರ್ಜಿ ನಮೂನೆಯ ಜೊತೆಗೆ ಯೂನಿವರ್ಸಿಟಿ/ಇನ್‌ಸ್ಟಿಟ್ಯೂಷನ್‌ನ ಶೇಕಡವಾರು ಪರಿವರ್ತನಾ ಸೂತ್ರಕ್ಕೆ ಸಿಜಿಪಿಎ ಪುರಾವೆಯನ್ನು ಲಗತ್ತಿಸಬೇಕು.

12\. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು, ಅರ್ಜಿಯಲ್ಲಿ ತಿಳಿಸಲಾಗಿರುವ ಸಮೀಪ ಮಾರ್ಗದಿಂದ ಅಥವಾ ಪ್ರಯಾಣ ಆರಂಭಿಸಿದ ಸ್ಥಳದಿಂದ, ಇವುಗಳಲ್ಲಿ ಯಾವುದು ಮಿತವ್ಯಯಕಾರಿ ಆಗಿರುತ್ತದೆಯೊ, ಅಂತಹ ಮಾರ್ಗದಲ್ಲಿನ ಹೋಗಿ ಬರುವ ಸಂಚರಿಸುವ ಸ್ಲೀಪರ್ ಕ್ಲಾಸ್ ರೈಲು ಪ್ರಯಾಣ ಶುಲ್ಕವನ್ನು ಹಿಂಪಡೆದುಕೊಳ್ಳಬಹುದು.

ಸಹಿ/– ಮುಖ್ಯಸ್ಥರು – ಹೆಚ್‌ಆರ್‌ಡಿ

CBC 10301/11/0077/2324 ಚೀಫ್ ಎಕ್ಸಿಕ್ಯೂಟಿವ್ (ಏರ್‌ವರ್ದಿನೆಸ್) ಪರವಾಗಿ

E-AUCTION SALE NOTICE

MINERAL ENTERPRISES PRIVATE LIMITED hereby announces the E-Auction No. MSTC/BLR/ MINERAL ENTERPRISES PRIVATE LIMITED /1/BENGALURU / 23-24 / 21690 through MSTC Limited (A Govt. Of India Enterprise) for sale of Iron Ore Fines of 6,53,247 Metric Tonnes (approx.)

Material Location.	Quantity, Date and Time of Auction
ML No.2346, Bedarabommanahalli Village (Bheemasamudra) Chitradurga-577501, Karnataka	6,53,247 MT (approx.) 31.08.2023 between 2 pm to 4 p.m.

The material is auctioned on “AS IS WHERE IS AND NO COMPLAINT BASIS”

For Registration, Participation and any further details Visit https://www.mstcecommerce.com /www.mstcindia.co.in or Contact MSTC Bangalore office: Shri Tejas V. 080-22260054/22266417/22379145 - 9980147110

ಗಂಭೀರ ವಂಚನೆ ತನಿಖಾ ಕಚೇರಿ

ಭಾರತ ಸರ್ಕಾರ

2ನೇ ಮಹಡಿ, ಪಂ. ದೀನದಯಾಳ್ ಅಂತ್ಯೋದಯ ಭವನ, ಬಿ–3 ವಿಂಗ್, ಸಿಜಿಒ ಕಾಂಪ್ಲೆಕ್ಸ್, ಲೋಧಿ ರಸ್ತೆ, ನವದೆಹಲಿ – 110003

SFIO

ನಂ. 2/2/2004–ಅಡ್ಮಿನ್/ಎಸ್‌ಎಫ್‌ಐಒ

ವಕೀಲರ ಎಂಪಾನೆಲ್‌ಮೆಂಟ್‌ಗಾಗಿ ಹೊಸ ಅರ್ಜಿಗಳನ್ನು ಆಹ್ವಾನಿಸುವ ಕುರಿತಾದ ಪ್ರಕಟಣೆ

(ದಿನಾಂಕ 15.07.2022ರ ಹಳೆಯ ಪ್ರಕಟಣೆಯನ್ನು ರದ್ದುಪಡಿಸಲಾಗಿದೆ)

ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಅಡಿಯಲ್ಲಿನ ಗಂಭೀರ ವಂಚನೆ ತನಿಖಾ ಕಚೇರಿ (ಎಸ್‌ಎಫ್‌ಐಒ) ಹೊರಡಿಸಿದ್ದ ಮತ್ತು ದಿನಾಂಕ 15.07.2022 ರಂದು ಪ್ರಮುಖ ರಾಷ್ಟ್ರೀಯ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದ, ವಕೀಲರ ಎಂಪಾನೆಲ್‌ಮೆಂಟ್‌ಗಾಗಿ ಅರ್ಜಿ ಆಹ್ವಾನ ಪ್ರಕಟಣೆಯನ್ನು ರದ್ದುಪಡಿಸಲಾಗಿರುತ್ತದೆ. ಇದೀಗ, ಗಂಭೀರ ವಂಚನೆ ತನಿಖಾ ಕಚೇರಿಯು, ನವದೆಹಲಿಯಲ್ಲಿರುವ ತನ್ನ ಪ್ರಧಾನ ಕಚೇರಿ, ಕೋಲ್ಕತಾ, ಮುಂಬೈ, ಹೈದರಾಬಾದ್, ಚೆನ್ನೈಗಳಲ್ಲಿನ ನಾಲ್ಕು ಪ್ರಾದೇಶಿಕ ಕಚೇರಿಗಳನ್ನು ಮತ್ತು ಬಾರಾಸತ್ (ಪ.ಬಂ), ಬೆಂಗಳೂರು, ಪ್ರಯಾಗರಾಜ್ (ಅಲಹಾಬಾದ್), ಲಕ್ನೋ, ಸುಲ್ತಾನ್‌ಪುರ, ಕಾನ್ಪುರ್, ವಾರಾಣಸಿ, ಪುಣೆ, ಪಾಟ್ನಾ, ಗುವಾಹಟಿ, ಕಮ್ರುಪ್ (ಅಸ್ಸಾಂ), ಅಮರಾವತಿ, ಚಂಡೀಗಢ್, ಭುವನೇಶ್ವರ್, ಕಟಕ್, ಕೊಚ್ಚಿ, ಗುರುಗ್ರಾಮ್, ಜೈಪುರ, ಅಹ್ಮದಾಬಾದ್, ಸೊಲನ್ (ಹಿ.ಪ್ರ), ಇಂದೋರ್ (ಮ.ಪ್ರ), ಗೋವಾದಂತಹ ಸ್ಥಳಗಳಾದ್ಯಂತ ಸ್ಥಿತಗೊಂಡಿರುವ ಮಾನ್ಯ ಸೆಷನ್ಸ್ ನ್ಯಾಯಾಲಯ/ವಿಶೇಷ ನ್ಯಾಯಾಲಯ/ನ್ಯಾಯಾಧಿಕರಣ/ಶಿಸ್ತು ಪ್ರಾಧಿಕಾರಗಳ ಸಮ್ಮುಖದಲ್ಲಿ (ಐಸಿಎ/ ಐಸಿಎಸ್‌ಐ/ ಐಸಿಡಬ್ಲ್ಯುಎಐ/ ಎನ್‌ಎಫ್‌ಆರ್‌ಎ/ ಬಿಸಿಐ/ ಸ್ಟೇಟ್ ಬಾರ್ ಕೌನ್ಸಿಲ್‌ಗಳಂತಹ) ಗಂಭೀರ ವಂಚನೆ ತನಿಖಾ ಕಚೇರಿಯನ್ನು ಪ್ರತಿನಿಧಿಸಲು, ಕಂಪನಿ ಕಾನೂನು/ಕಾರ್ಪೊರೇಟ್ ವಂಚನೆಗಳು/ಫಿಸ್ಕಲ್ ಕಾನೂನು/ ಆರ್ಥಿಕ ಅಪರಾಧ/ಪ್ರಾಸಿಕ್ಯೂಷನ್ ಪ್ರಕರಣಗಳ ಕ್ಷೇತ್ರದಲ್ಲಿ ಅನುಭವ ಹೊಂದಿರುವ ವಕೀಲರಿಂದ ಹೊಸದಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಗಂಭೀರ ವಂಚನೆ ತನಿಖಾ ಕಚೇರಿಯ ವಕೀಲರ ಎಂಪಾನೆಲ್‌ಮೆಂಟ್‌ಗೆ ಸಂಬಂಧಿತ ವಿವರವಾದ ಮಾರ್ಗಸೂಚಿಗಳು ಹಾಗೂ ಆನ್‌ಲೈನ್ ಅರ್ಜಿ ನಮೂನೆ/ಅರ್ಜಿಗಳನ್ನು ಸಲ್ಲಿಸಬೇಕಾದ ಪೋರ್ಟಲ್ ವಿವರಗಳು www.sfio.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ.

ದಿನಾಂಕ 26.08.2023 ರಿಂದ 25.09.2023 ರವರೆಗೆ, ಗಂಭೀರ ವಂಚನೆ ತನಿಖಾ ಕಚೇರಿಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಅರ್ಜಿ ನಮೂನೆಯಲ್ಲಿಯೇ, ಆನ್‌ಲೈನ್ ಪೋರ್ಟಲ್‌ನ ಮೂಲಕ ಮಾತ್ರ ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ. ದಿನಾಂಕ 15.07.2022 ರಂದು ಪ್ರಕಟಗೊಂಡಿದ್ದ ಪ್ರಕಟಣೆಯು ರದ್ದುಗೊಂಡಿರುವ ಕಾರಣದಿಂದಾಗಿ, ಈ ಹಿಂದೆ ಸಲ್ಲಿಸಲಾಗಿದ್ದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

ಗಂಭೀರ ವಂಚನೆ ತನಿಖಾ ಕಚೇರಿಯ ವಕೀಲರ ಎಂಪಾನೆಲ್‌ಮೆಂಟ್‌ಗೆ ಅರ್ಜಿ ಸಲ್ಲಿಸಿದ ಮಾತ್ರಕ್ಕೆ, ಅರ್ಜಿದಾರರು ತಮ್ಮಷ್ಟಕ್ಕೆ ತಾವು ಗಂಭೀರ ವಂಚನೆ ತನಿಖಾ ಕಚೇರಿಯ ಕೌನ್ಸೆಲ್ ಎಂಬ ಹಕ್ಕನ್ನು ಪಡೆದಿದ್ದೇವೆ/ ಹಕ್ಕು ಖಚಿತವಾಗಿದೆ ಎಂದು ಭಾವಿಸತಕ್ಕದ್ದಲ್ಲ. ಆಯ್ಕೆಗೊಂಡ ವಕೀಲರ ಪಟ್ಟಿಯನ್ನು ಗಂಭೀರ ವಂಚನೆ ತನಿಖಾ ಕಚೇರಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುತ್ತದೆ ಮತ್ತು ತನಿಖಾ ಕಚೇರಿಯ ಸಕ್ಷಮ ಪ್ರಾಧಿಕಾರವು ಆಯ್ಕೆಗೊಂಡ ವಕೀಲರಿಗೆ ಪ್ರತ್ಯೇಕವಾಗಿ ಇದನ್ನು ಖಚಿಪಡಿಸುವ ಒಂದು ಪತ್ರವನ್ನು ಕೂಡ ರವಾನಿಸುತ್ತದೆ.

ಸಹಿ/–

CBC 07102/11/0005/2324 ಜಂಟಿ ನಿರ್ದೇಶಕರು (ಆಡಳಿತ)

ಸ್ನೇಹಿತ ಸೇರಿ ಇಬ್ಬರ ಬಂಧನ: ದೂರುದಾರ ಮಹಿಳೆಗೆ ನೋಟಿಸ್

ಪತಿಗೆ ಬುದ್ಧಿ ಕಲಿಸಲು ‘ಕಳ್ಳತನ’!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರ 13ನೇ ಕ್ರಾಸ್‌ನಲ್ಲಿ ನಡೆದಿದ್ದ ಸರ ಕಳ್ಳತನ ಪ್ರಕರಣ ಭೇದಿಸಿರುವ ಪೊಲೀಸರು, ಪತಿಗೆ ಬುದ್ಧಿ ಕಲಿಸಲು ದೂರುದಾರ ಮಹಿಳೆಯೇ ಕಳ್ಳತನ ನಾಟಕವಾಡಿದ್ದ ಸಂಗತಿ ಪತ್ತೆ ಮಾಡಿದ್ದಾರೆ.

‘109 ಗ್ರಾಂ ತೂಕದ ಚಿನ್ನದ ಸರ ಕಳ್ಳತನವಾದ ಬಗ್ಗೆ ಮಹಿಳೆ ದೂರು ನೀಡಿದ್ದರು. ತನಿಖೆ ಕೈಗೊಂಡಾಗ, ಮಹಿಳೆಯೇ ಸುಳ್ಳು ದೂರು ನೀಡಿದ್ದು ಗೊತ್ತಾಗಿದೆ. ಇದೀಗ, ಮಹಿಳೆಗೆ ನೋಟಿಸ್ ನೀಡಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿದ್ದ ಆಕೆಯ ಸ್ನೇಹಿತರಾದ ಧನಂಜಯ್ ಹಾಗೂ ರಾಕೇಶ್‌ನನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪತಿ ಕೆಲಸಕ್ಕೆ ಹೋಗುತ್ತಿರಲಿಲ್ಲ. ಹಾಗಾಗಿ ಮನೆಯಲ್ಲಿ ಆರ್ಥಿಕವಾಗಿ ಕಷ್ಟವಾಗಿತ್ತು. ಮನೆಯಲ್ಲಿರುವ ಚಿನ್ನಾಭರಣ ಹಾಗೂ ಇತರೆ ವಸ್ತುಗಳು ಕಳ್ಳತನವಾದರೆ, ಜೀವನ ಮತ್ತಷ್ಟು ಕಷ್ಟವಾಗುತ್ತದೆ. ಆಗ, ಪತಿ ಕೆಲಸಕ್ಕೆ ಹೋಗಬಹುದೆಂದು ತಿಳಿದು ಮಹಿಳೆ ಕಳ್ಳತನ ನಾಟಕವಾಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಮೂಲಗಳು ತಿಳಿಸಿವೆ.

ಬ್ಯಾಂಕ್‌ನಿಂದ ತಂದಿದ್ದ ಚಿನ್ನಾಭರಣ: ‘ಮಹಿಳೆ ತಮ್ಮ ಚಿನ್ನಾಭರಣವನ್ನು ಬ್ಯಾಂಕ್ ಲಾಕರ್‌ನಲ್ಲಿ ಇರಿಸಿದ್ದರು. ಇತ್ತೀಚೆಗೆ ಬ್ಯಾಂಕ್‌ಗೆ ಹೋಗಿದ್ದ ಅವರು, 109 ಗ್ರಾಂ ತೂಕದ ಚಿನ್ನದ ಸರವನ್ನು ತೆಗೆದುಕೊಂಡು ಬಂದಿದ್ದರು. ಅದೇ ಸರವನ್ನು ದ್ವಿಚಕ್ರ ವಾಹನದ ಡಿಕ್ಕಿಯಲ್ಲಿಟ್ಟುಕೊಂಡು ಸುತ್ತಾಡಿದ್ದರು. ಮಲ್ಲೇಶ್ವರ 13ನೇ ಕ್ರಾಸ್‌ನಲ್ಲಿ ದ್ವಿಚಕ್ರ ವಾಹನ ನಿಲ್ಲಿಸಿ, ಸ್ನೇಹಿತ ಧನಂಜಯ್‌ಗೆ ಕರೆ ಮಾಡಿದ್ದರು.’

‘ರಾಕೇಶ್ ಜೊತೆ ಬೈಕ್‌ನಲ್ಲಿ ಸ್ಥಳಕ್ಕೆ ಬಂದಿದ್ದ ಧನಂಜಯ್, ಮಹಿಳೆ ಬಳಿಯ ಚಿನ್ನರ ಸರ ಪಡೆದುಕೊಂಡು ಸ್ಥಳದಿಂದ ಹೊರಟು ಹೋಗಿದ್ದ. ಕಳ್ಳ... ಕಳ್ಳ... ಎಂದು ಚೀರಾಡಿದ್ದ ಮಹಿಳೆ, ಠಾಣೆಗೆ ಬಂದು ದೂರು ನೀಡಿದ್ದರು’ ಎಂದು ಮೂಲಗಳು ಹೇಳಿವೆ.

ಮಲ್ಲೇಶ್ವರ ಠಾಣೆ ಪೊಲೀಸರು ಜಪ್ತಿ ಮಾಡಿರುವ ದ್ವಿಚಕ್ರ ವಾಹನಗಳು ಹಾಗೂ ಚಿನ್ನಾಭರಣ

ಸಿ.ಸಿ.ಟಿ.ವಿ ಕ್ಯಾಮೆರಾ ಸುಳಿವು

‘ಮಹಿಳೆ ದೂರು ನೀಡುತ್ತಿದ್ದಂತೆ ಸ್ಥಳ ಪರಿಶೀಲನೆ ನಡೆಸಲಾಗಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗಿತ್ತು. ಧನಂಜಯ್ ಹಾಗೂ ರಾಕೇಶ್ ಬಗ್ಗೆ ಸುಳಿವು ಸಿಕ್ಕಿತ್ತು. ಇಬ್ಬರನ್ನೂ ವಶಕ್ಕೆ ಪಡೆದು ವಿಚಾರಿಸಿದಾಗ, ಮಹಿಳೆಯ ಕೃತ್ಯ ಪತ್ತೆಯಾಯಿತು’ ಎಂದು ಮೂಲಗಳು ತಿಳಿಸಿವೆ.

‘ಧನಂಜಯ್ ಹಾಗೂ ರಾಕೇಶ್‌ನನ್ನು ಬಂಧಿಸಲಾಗಿದೆ. ಮಹಿಳೆಯನ್ನು ವಿಚಾರಣೆಗೆ ಒಳಪಡಿಸಿ, ಮುಂದಿನ ಕ್ರಮ ಕೈಗೊಳ್ಳಬೇಕಿದೆ. ಬಂಧಿತರಿಂದ ಎರಡು ದ್ವಿಚಕ್ರ ವಾಹನ ಹಾಗೂ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಮೂಲಗಳು ಹೇಳಿವೆ.

ಇಬ್ಬರ ಬಂಧನ: 20 ಸಿಲಿಂಡರ್ ಜಪ್ತಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಮನೆಗಳ ಹೊರಭಾಗದಲ್ಲಿ ಇರಿಸುತ್ತಿದ್ದ ಗೃಹೋಪಯೋಗಿ ಅಡುಗೆ ಅನಿಲ್ ಸಿಲಿಂಡರ್ ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಗೋವಿಂದ ರಾಜನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಲೋಕೇಶ್ ಹಾಗೂ ಹೇಮಂತ್ ಬಂಧಿತರು. ಇವರಿಂದ ₹ 60 ಸಾವಿರ ಮೌಲ್ಯದ 20 ಸಿಲಿಂಡರ್‌ಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಗೋವಿಂದರಾಜನಗರ, ರಾಜಾಜಿನಗರ, ಬಸವೇಶ್ವರನಗರ, ಕಾಮಾಕ್ಷಿಪಾಳ್ಯ, ಮಾಗಡಿ ರಸ್ತೆ ಠಾಣೆಗಳ ವ್ಯಾಪ್ತಿಯಲ್ಲಿ ಸಿಲಿಂಡರ್‌ಗಳು ಕಳ್ಳತನ ಆಗಿದ್ದವು. ಈ ಬಗ್ಗೆ ನಿವಾಸಿಗಳು ಠಾಣೆಗಳಿಗೆ ದೂರು ನೀಡಿದ್ದರು. ಈ ಬಗ್ಗೆ ತನಿಖೆ ಕೈಗೊಂಡಾಗ, ಆರೋಪಿಗಳು ಸಿಕ್ಕಿಬಿದ್ದರು’ ಎಂದು ತಿಳಿಸಿದರು.

‘ಕಳ್ಳತನ ಆರೋಪದಡಿ ಲೋಕೇಶ್ ಈ ಹಿಂದೆ ಜೈಲು ಸೇರಿದ್ದ. ಜಾಮೀನು ಮೇಲೆ ಹೊರಬಂದಿದ್ದ. ಹಣ ಸಂಪಾದಿಸಲು ಸ್ನೇಹಿತ ಹೇಮಂತ್ ಜೊತೆ ಸೇರಿ ಸಿಲಿಂಡರ್ ಕಳ್ಳತನಕ್ಕೆ ಇಳಿದಿದ್ದ’ ಎಂದು ಹೇಳಿದರು.

ಬೈಕ್‌ನಲ್ಲಿ ಸುತ್ತಾಡಿ ಮನೆ ಗುರುತು: ‘ಹಲವು ಮನೆಗಳ ಹೊರಭಾಗದಲ್ಲಿ ಸಿಲಿಂಡರ್‌ಗಳನ್ನು ಇರಿಸಲಾಗುತ್ತದೆ. ಅಲ್ಲಿಂದಲೇ, ಪೈಪ್ ಮೂಲಕ ಅಡುಗೆ ಮನೆಗೆ ಅನಿಲ ಪೂರೈಕೆಯಾಗುತ್ತದೆ. ಬೈಕ್‌ಗಳಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ಸಿಲಿಂಡರ್ ಇರುತ್ತಿದ್ದ ಮನೆಗಳನ್ನು ಗುರುತಿಸುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಮನೆಗಳ ಬಳಿ ಯಾರೂ ಇಲ್ಲದ ವೇಳೆ ಸಿಲಿಂಡರ್‌ಗಳನ್ನು ಕದ್ದೊಯ್ಯುತ್ತಿದ್ದರು. ಅದೇ ಸಿಲಿಂಡರ್‌ಗಳನ್ನು ಹೋಟೆಲ್ ಹಾಗೂ ಇತರರಿಗ ಮಾರಿ ಹಣ ಪಡೆಯುತ್ತಿದ್ದರು’ ಎಂದು ಹೇಳಿದರು. ‘ಸಿಲಿಂಡರ್ ಕಳ್ಳತನ ಬಗ್ಗೆ ದೂರುಗಳು ಬರುತ್ತಿದ್ದಂತೆ, ಸಿ.ಸಿ. ಟಿ.ವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಯಿತು. ಆರೋಪಿಗಳು ಬೈಕ್‌ನಲ್ಲಿ ಪರಾರಿಯಾಗಿದ್ದ ದೃಶ್ಯ ಸೆರೆಯಾಗಿತ್ತು. ಅದೇ ಸುಳಿವು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ತಿಳಿಸಿದರು.

ಲೋಕೇಶ್

ಹೇಮಂತ್

ಗೋವಿಂದರಾಜನಗರ ಠಾಣೆ ಪೊಲೀಸರು ಆರೋಪಿಗಳಿಂದ ಜಪ್ತಿ ಮಾಡಿರುವ ಸಿಲಿಂಡರ್‌ಗಳು

ಬೆಂಕಿ ಅವಘಡ: ಮತ್ತೊಬ್ಬ ಗಾಯಾಳು ಅಪೊಲೊಗೆ ಸ್ಥಳಾಂತರ

ಬೆಂಗಳೂರು: ಬಿಬಿಎಂಪಿ ಗುಣಮಟ್ಟ ನಿಯಂತ್ರಣ ಪ್ರಯೋಗಾಲಯದಲ್ಲಿ ಸಂಭವಿಸಿದ್ದ ಬೆಂಕಿ ಅವಘಡದಲ್ಲಿ ಗಾಯಗೊಂಡು ಗಂಭೀರ ಸ್ಥಿತಿಯಲ್ಲಿದ್ದ ಮಹಿಳೆಯನ್ನು ಕುಟುಂಬದವರ ಕೋರಿಕೆಯ ಮೇರೆಗೆ ಅಪೊಲೊ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ.

ಅವಘಡದಲ್ಲಿ ಗಾಯಗೊಂಡಿದ್ದ 9 ಮಂದಿ ಪೈಕಿ 6 ಮಂದಿ ಚೇತರಿಸಿಕೊಂಡಿದ್ದು, ಅವರು ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನಾ ವಾರ್ಡ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗಂಭೀರವಾಗಿ ಗಾಯಗೊಂಡಿದ್ದ ಮುಖ್ಯ ಎಂಜಿನಿಯರ್ ಶಿವಕುಮಾರ್ ಅವರನ್ನು 4 ದಿನಗಳ ಹಿಂದೆಯೇ ಅಪೊಲೊ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ‘ವೆಂಟಿಲೇಟರ್ ಅಳವಡಿಸಿ ಚಿಕಿತ್ಸೆ ಮುಂದುವರಿದಿದೆ. ಟ್ರಾಮಾ ಕೇರ್ ಸೆಂಟರ್‌ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕಿರಣ್ ಅವರ ಸ್ಥಿತಿ ಸ್ಥಿರವಾಗಿದೆ’ ಎಂದು ಬೆಂಗಳೂರು ವೈದ್ಯಕೀಯ ಕಾಲೇಜಿನ ಡೀನ್ ಡಾ. ರಮೇಶ್ ಕೃಷ್ಣ ಕೆ. ತಿಳಿಸಿದ್ದಾರೆ.

ವಿದೇಶಕ್ಕೆ ಪರಾರಿಯಾಗಲು ತಯಾರಿ ನಡೆಸಿದ್ದ ಆರೋಪಿಗಳು

ಶ್ರೀಲಂಕಾ ಪ್ರಜೆಗಳಿಗೆ ನೆರವು: ಮತ್ತಿಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದೊಳಗೆ ಅಕ್ರಮವಾಗಿ ನುಸುಳಿ ಬಂದಿದ್ದ ಶ್ರೀಲಂಕಾದ ಮೂವರು ಪ್ರಜೆಗಳಿಗೆ ನೆರವು ನೀಡಿದ ಆರೋಪದಡಿ ಮತ್ತೆ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಚೆನ್ನೈನ ಮನ್ಸೂರ್ ಅಲಿ ಹಾಗೂ ಬೆಂಗಳೂರು ವಿವೇಕನಗರದ ಅನ್ಬಳಗನ್ ಬಂಧಿತರು. ಶ್ರೀಲಂಕಾದ ಪ್ರಜೆಗಳು ವಿದೇಶಕ್ಕೆ ಪರಾರಿಯಾಗಲು ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಇದಕ್ಕೆ ಮನ್ಸೂರ್ ಹಾಗೂ ಅನ್ಬಳಗನ್ ಸಹಾಯ ಮಾಡಲು ಒಪ್ಪಿದ್ದರು’ ಎಂದು ಸಿಸಿಬಿ ಮೂಲಗಳು ಹೇಳಿವೆ.

‘5 ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದ ಶ್ರೀಲಂಕಾದ ಪ್ರಜೆಗಳಾದ ಕಾಸನ್ ಕುಮಾರ್ ಸಂಕ, ಇ.ಡಬ್ಲ್ಯು.ಎ ಅಮಿಲ್ ನುವಾನ್ ಹಾಗೂ ರಂಗ ಪ್ರಸಾದ್, ಅಕ್ರಮವಾಗಿ ದೇಶದೊಳಗೆ ನುಸುಳಿದ್ದರು. ಇವರಿಗೆ ಆಶ್ರಯ ನೀಡಿದ್ದ ಪರಮೇಶ್ ಅಲಿಯಾಸ್ ಜಾಕ್‌ನನ್ನು ಈಗಾಗಲೇ ಬಂಧಿಸಲಾಗಿದೆ. ಆರೋಪಿಗಳಿಗೆ ನೆರವು ನೀಡುತ್ತಿದ್ದ ಇನ್ನೊಬ್ಬ ಆರೋಪಿ ಜಲಾಲ್, ಓಮನ್ ದೇಶದಲ್ಲಿದ್ದಾನೆ. ಆತನನ್ನು ಕಸ್ಟಡಿಗೆ ಪಡೆಯಬೇಕಿದೆ’ ಎಂದು ಮೂಲಗಳು ಹೇಳಿವೆ.

ಹಣ ಹೊಂದಿಸಿದ್ದ ಮನ್ಸೂರ್: ‘ಆರೋಪಿ ಜಲಾಲ್, ಶ್ರೀಲಂಕಾದ ಮೂವರು ಪ್ರಜೆಗಳನ್ನು ಸಮುದ್ರ ಮಾರ್ಗವಾಗಿ ಬೆಂಗಳೂರಿಗೆ ಕರೆಸಿದ್ದ. ಜೊತೆಗೆ, ಮೂವರನ್ನು ವಿದೇಶಕ್ಕೆ ಕಳುಹಿಸುವುದಾಗಿ ಹೇಳಿದ್ದ. ಇದಕ್ಕೆ ಹಣ ಹೊಂದಿಸುವ ಜವಾಬ್ದಾರಿಯನ್ನು ಆರೋಪಿ ಮನ್ಸೂರ್‌ಗೆ ವಹಿಸಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಆರೋಪಿ ಮನ್ಸೂರ್, ₹ 50 ಲಕ್ಷ ನಗದು ಹಾಗೂ ₹ 1.50 ಕೋಟಿ ಮೌಲ್ಯದ ಡಿ.ಡಿ ಸಿದ್ಧಪಡಿಸಿಟ್ಟುಕೊಂಡಿದ್ದ. ಕೆಲವೇ ದಿನಗಳಲ್ಲಿ ಅವುಗಳನ್ನು ಶ್ರೀಲಂಕಾ ಪ್ರಜೆಗಳಿಗೆ ನೀಡಬೇಕಿತ್ತು. ಅಷ್ಟರಲ್ಲೇ ಮೂವರು ಸಿಕ್ಕಿಬಿದ್ದರು. ಅವರ ವಿಚಾರಣೆ ನಡೆಸಿದಾಗ, ಮನ್ಸೂರ್ ಹಾಗೂ ಅನ್ಬಳಗನ್ ಹೆಸರು ಹೊರಬಿದ್ದಿದ್ದವು. ಅವರನ್ನು ಬಂಧಿಸಿ, ನಗದು ಹಾಗೂ ಡಿ.ಡಿ ಜಪ್ತಿ ಮಾಡಲಾಗಿದೆ’ ಎಂದು ಮೂಲಗಳು ಹೇಳಿವೆ.

‘ಶ್ರೀಲಂಕಾ ಪ್ರಜೆಗಳು ಸಿಂಹಳ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ. ಹೀಗಾಗಿ, ಅವರಿಂದ ಹೆಚ್ಚಿನ ಮಾಹಿತಿ ಕಲೆಹಾಕಲು ಸಾಧ್ಯವಾಗುತ್ತಿಲ್ಲ. ಭಾಷಾ ತಜ್ಞರ ಸಹಾಯ ಪಡೆದು ವಿಚಾರಣೆ ಮುಂದುವರಿಸಬೇಕಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಶಿಶುಪಾಲನ ಕೇಂದ್ರಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗೆ ವಿರೋಧ

ಬೆಂಗಳೂರು: ಅಂಗನವಾಡಿ ಕೇಂದ್ರಗಳಿಗೆ ಪರ್ಯಾಯವಾಗಿ ಶಿಶುಪಾಲನ ಕೇಂದ್ರಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲು ಮುಂದಾಗಿರುವ ಸರ್ಕಾರದ ನಡೆಯನ್ನು ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್ ಖಂಡಿಸಿದೆ.

‘ರಾಜ್ಯದ 262 ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾಯೋಗಿಕವಾಗಿ ಪ್ರಾರಂಭಿಸುವಂತೆ ಶಾಲಾ ಶಿಕ್ಷಣ ಇಲಾಖೆಯ ಸಮಗ್ರ ಶಿಕ್ಷಣ ಕರ್ನಾಟಕ ಸುತ್ತೋಲೆ ಹೊರಡಿಸಿದೆ. ಹೀಗೆ ಮಾಡುವ ಮೂಲಕ ಅಂಗನವಾಡಿ ವ್ಯವಸ್ಥೆಯನ್ನು ದುರ್ಬಲಗೊಳಿಸುವ ಹುನ್ನಾರ ನಡೆಸುತ್ತಿದೆ’ ಎಂದು ಫೆಡರೇಷನ್ ಅಧ್ಯಕ್ಷ ಬಿ. ಅಮ್ಜದ್ ದೂರಿದರು.

‘ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಡಿಯಲ್ಲಿ ಅಂಗನವಾಡಿ ಕೇಂದ್ರಗಳ ಮೂಲಕ ಶೂನ್ಯದಿಂದ 6 ವರ್ಷದ ವಯೋಮಾನದ ಮಕ್ಕಳು ಮತ್ತು ಗರ್ಭಿಣಿ, ಬಾಣಂತಿಯರಿಗೆ ಪೂರಕ ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ಜತೆಗೆ ಆರೋಗ್ಯ, ಶಾಲಾ ಪೂರ್ವ ಶಿಕ್ಷಣ ಇತ್ಯಾದಿ ಸೇವೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಿಕೊಂಡು ಬರಲಾಗುತ್ತಿದೆ. ಆದರೆ, ಅಂಗನವಾಡಿಗಳನ್ನು ಶಿಶುಪಾಲನ ಕೇಂದ್ರಗಳನ್ನಾಗಿ ಪ್ರಾರಂಭಿಸಲಾಗುತ್ತಿದೆ. ಇದರಿಂದ, ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾಗುವ ಮಕ್ಕಳ ಸಂಖ್ಯೆ ಕುಸಿಯಲಿದೆ’ ಎಂದು ಕಳವಳ ವ್ಯಕ್ತಪಡಿಸಿದರು.

‘ಅಂಗನವಾಡಿ ಕೇಂದ್ರಗಳಲ್ಲಿ ಎಲ್‌ಕೆಜಿ ತರಗತಿಗಳನ್ನು ಪ್ರಾರಂಭಿಸಿ ಆ ಮಕ್ಕಳಿಗೆ ಸಮವಸ್ತ್ರ, ಪಠ್ಯ–ಪುಸ್ತಕಗಳನ್ನು ನೀಡಬೇಕೆಂಬ ಬೇಡಿಕೆ ಇದುವರೆಗೂ ಈಡೇರಿಲ್ಲ. ಆದರೆ, ಸರ್ಕಾರ ಯಾವುದೇ ಚರ್ಚೆ, ಸಮಾಲೋಚನೆ ನಡೆಸದೇ ಶಿಶುಪಾಲನ ಕೇಂದ್ರಗಳನ್ನು ಪ್ರಾರಂಭಿಸುತ್ತಿದೆ. ಇದರಿಂದ, ಅಂಗನವಾಡಿ ಕೇಂದ್ರಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ’ ಎಂದು ಫೆಡರೇಷನ್ ಪ್ರಧಾನ ಕಾರ್ಯದರ್ಶಿ ಎಂ. ಜಯಮ್ಮ ಹೇಳಿದರು.

ವಿದ್ಯುತ್ ವ್ಯತ್ಯಯ 28ಕ್ಕೆ

ಬೆಂಗಳೂರು: ಕೆಪಿಟಿಸಿಎಲ್ ವತಿಯಿಂದ ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ಆ.28ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 3ರ ವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ವಿಶ್ವಪ್ರಿಯ ಲೇಔಟ್, ಬೇಗೂರು ಕೊಪ್ಪ ರಸ್ತೆ, ದೇವರಚಿಕ್ಕನಹಳ್ಳಿ, ಅಕ್ಷಯನಗರ, ದಕ್ಷಿಣದ ಪ್ರೆಸ್ಟೀಜ್ ಸಾಂಗ್, ತೇಜಸ್ವಿನಿ ನಗರ, ಹಿರ್ನಾದಾನಿ ಅಪಾರ್ಟ್‌ಮೆಂಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಕೆಂಪಮ್ಮ ಲೇಔಟ್, ಹುಳಿಮಾವು, ಬೇಗೂರು ಕ್ಲಾಸಿಕ್ ಲೇಔಟ್, ಅಕ್ಷಯನಗರ, ಯಲೇನಹಳ್ಳಿ, ನ್ಯಾನಪ್ಪನ ಹಳ್ಳಿ, ವಿಶ್ವಪ್ರಿಯ ಲೇಔಟ್, ಕಾಳೇನ ಅಗ್ರಹಾರ, ಬೇಗೂರು, ಅರೆಕೆರೆ, ಸಾಮ್ರಾಟ್ ಲೇಔಟ್, ಬಿಟಿಎಸ್ ಲೇಔಟ್, ಬಿಟಿಎಂ 4ನೇ ಹಂತ, ಡಿ.ಎಚ್.ಸಿ.ಹಳ್ಳಿ. , ಅನುಗ್ರಹ ಲೇಔಟ್, ವಿ.ಬಿ. ಲೇಔಟ್, ಕುಟ್ಟಿಯಪ್ಪ ಗಾರ್ಡನ್, ರಾಗವೇಂದ್ರ ಕಾಲೋನಿ, ಎಸ್.ಬಿ.ಐ ಲೇಔಟ್, ರೋಟರಿ ನಗರ, ಜಿ.ಬಿ.ಪಾಳ್ಯ, ಕೂಡ್ಲು, ಕೆಎಸ್‌ಆರ್‌ಪಿ 9ನೇ ಬೆಟಾಲಿಯನ್, ಟ್ರಾಪಿಕಲ್ ಪ್ಯಾರಡೈಸ್, , ವಾಸ್ತು ಲೇಔಟ್, ಮಾರುತಿ, ಬೂತಹಳ್ಳಿ ರಸ್ತೆ, ಮಾರುತಿ, ಬೂದಹಳ್ಳಿ ರಸ್ತೆ, ಸಲಾರ್ಪುರಿ ಸುತ್ತಮುತ್ತಲಿನ ಪ್ರದೇಶಗಳು.

ತುಂಡಾಗಿದ್ದ ಕೈ ಮರುಜೋಡಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುವ ವೇಳೆ ಯಂತ್ರಕ್ಕೆ ಸಿಲುಕಿ ತುಂಡಾಗಿದ್ದ 28 ವರ್ಷದ ಯುವತಿಯ ಕೈಯನ್ನು ಫೋರ್ಟಿಸ್ ಆಸ್ಪತ್ರೆಯ ವೈದ್ಯರು ಯಶಸ್ವಿಯಾಗಿ ಮರುಜೋಡಿಸಿದ್ದಾರೆ.

ಆಯುರ್ವೇದಿಕ್ ಪೌಡರ್ ತಯಾರಿಕೆ ಕಾರ್ಖಾನೆಯಲ್ಲಿ ಕೆಲಸ ಮಾಡುವ ವೇಳೆ ಯುವತಿಯ ಕೈ ಮೊಣಕೈ ಬಳಿ ಕತ್ತರಿಸಲ್ಪಟ್ಟಿತ್ತು. ಕೂಡಲೇ ತುಂಡಾದ ಕೈ ಜತೆಗೆ ಆಕೆಯನ್ನು ಆಸ್ಪತ್ರೆಗೆ ಕರೆತರಲಾಗಿತ್ತು. ಮೂಳೆಚಿಕಿತ್ಸಕ ಡಾ. ಸತ್ಯ ನೇತೃತ್ವದಲ್ಲಿ ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿ, ಕೈ ಜೋಡಿಸಿದ್ದಾರೆ. ಗಾಯ ಸಂಪೂರ್ಣ ವಾಸಿಯಾಗಲು ಕನಿಷ್ಠ 6 ತಿಂಗಳು ಬೇಕಾಗುತ್ತದೆ. ಬಳಿಕ ಜೋಡಣೆಯಾದ ಕೈ ಮೊದಲಿನಂತೆ ಕೆಲಸ ಮಾಡಲಿದೆ ಎಂದು ಆಸ್ಪತ್ರೆ ತಿಳಿಸಿದೆ.

‘ತುಂಡಾದ ಕೈ ನುಜ್ಜುಗುಜ್ಜಾಗಿತ್ತು, ಇದರಿಂದಾಗಿ ಶಸ್ತ್ರಚಿಕಿತ್ಸೆ ಸವಾಲಾಗಿತ್ತು. ಸ್ವಲ್ಪ ಪ್ರಮಾಣದಲ್ಲಿ ಕೈ ಕತ್ತರಿಸಿ, ಅಪಧಮನಿಗಳು, ರಕ್ತನಾಳಗಳು ಮತ್ತು ನರಗಳು ಮರುಸಂಪರ್ಕವಾಗುವಂತೆ ಜೋಡಿಸಲಾಯಿತು. ಸತತ ಆರು ಗಂಟೆಗಳ ಶಸ್ತ್ರಚಿಕಿತ್ಸೆಯ ಬಳಿಕ ಕತ್ತರಿಸಲ್ಪಟ್ಟ ಕೈನನ್ನು ಮರುಜೋಡಣೆ ಮಾಡಲಾಯಿತು’ ಎಂದು ಡಾ. ಸತ್ಯ ತಿಳಿಸಿದ್ದಾರೆ.

‘ತುಂಡಾದ ಅಂಗ ಕೆಲ ಗಂಟೆಗಳವರೆಗೂ ಬದುಕಿರಲಿದೆ. ನಿಗದಿತ ಅವಧಿಯೊಳಗೆ ಅಂಗವನ್ನು ತೇವಾಂಶವಿರುವ ಬಟ್ಟೆಯಲ್ಲಿ ಸುತ್ತಿ, ಜೋಪಾನವಾಗಿ ಆಸ್ಪತ್ರೆಗೆ ತಂದಲ್ಲಿ ಶಸ್ತ್ರಚಿಕಿತ್ಸೆ ಮೂಲಕ ಮರುಜೋಡಣೆ ಮಾಡಬಹುದು. ಕೆಲವರು ತುಂಡಾದ ಅಂಗವನ್ನು ಜೋಪಾನವಾಗಿಡಲು ತಣ್ಣನೆ ನೀರು ಅಥವಾ ಐಸ್ ಕ್ಯೂಬ್ ಡಬ್ಬದಲ್ಲಿ ಇಡುತ್ತಾರೆ. ಇದು ತಪ್ಪು ವಿಧಾನವಾಗಿದ್ದು, ಹೀಗೆ ಮಾಡುವುದರಿಂದ ಅಂಗದಲ್ಲಿನ ಸ್ನಾಯುಗಳು ಬೇಗ ಸಾಯುವ ಅಪಾಯ ಇರುತ್ತದೆ’ ಎಂದು ಶಸ್ತ್ರಚಿಕಿತ್ಸೆ ನಡೆಸಿದ ಡಾ. ವಂಶಿ ಹೇಳಿದ್ದಾರೆ.

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organization.

INSTITUTION SALES INTERNS

Job Description:
- Knowledge in institutional Sales, educational sales, corporate sales is an added advantage.
- Strong written and verbal communication skill in English and Kannada.
- Should be passionate to do field sales.
- Candidate should have 2 Wheeler with DL is must.

Qualification : Any Degree
Location: Bangalore
Experience: Minimum 1 Year experience in Sales / Marketing.
Interested candidates please send your updated Resume/CV within 7 days to the following Email ID.

Assistant Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: careers@deccanherald.co.in

ಸಾಮಾಜಿಕ ಕಾಳಜಿಯ 'ಪ್ಯಾಡ್ ವುಮನ್'

ಸ್ಯಾನಿಟರಿ ಪ್ಯಾಡ್‌ಗಳ ತಯಾರಿಕೆಯಲ್ಲಿ ತೊಡಗಿರುವ ಕೊಪ್ಪಳದ ಭಾರತಿ ಗುಡ್ಲಾನೂರು
ಪ್ರಜಾವಾಣಿ ಚಿತ್ರಗಳು:ಭರತ್ ಕಂದಕೂರ

ಪ್ರಮೋದ

ಬಾಲಿವುಡ್ ಸಿನಿಮಾ 'ಪ್ಯಾಡ್ ಮ್ಯಾನ್' ನೋಡಿ ಪ್ರಭಾವಿತಗೊಂಡ ಕೊಪ್ಪಳದ ಭಾರತಿ ಗುಡ್ಲಾನೂರು ತನ್ನ ಜಿಲ್ಲೆಯಲ್ಲಿನ ಹೆಣ್ಣುಮಕ್ಕಳಿಗೂ ಮುಟ್ಟಿನ ನೈರ್ಮಲ್ಯದ ಬಗ್ಗೆ ಜಾಗೃತಿ ಮೂಡಿಸಲು ಮುಂದಾದರು. ಈ ಬಗ್ಗೆ ತಿಳಿ ಹೇಳಿದಾಗ ಕೇಳಿ ಬಂದ 'ದುಬಾರಿಯಾದ ಪ್ಯಾಡ್ ಖರೀದಿಸುವಷ್ಟು ಆರ್ಥಿಕ ಶಕ್ತಿ ನಮ್ಮಲ್ಲಿಲ್ಲ' ಎಂಬ ಸಾರ್ವತ್ರಿಕ ಅಭಿಪ್ರಾಯವು ಭಾರತಿಯವರ ಮನಸ್ಸಿಗೆ ನಾಟಿತು.

ಇದರ ಬಗ್ಗೆ ಗಂಭೀರವಾಗಿ ಯೋಚಿಸಿ ಅತ್ಯಂತ ಕಡಿಮೆ ಬೆಲೆಯಲ್ಲಿ ಹೆಣ್ಣುಮಕ್ಕಳಿಗೆ ಸ್ಯಾನಿಟರಿ ಪ್ಯಾಡ್ ದೊರೆಯುವಂತೆ ಮಾಡಬೇಕೆಂದು ಪಣತೊಟ್ಟಾಗ ಆರಂಭವಾಗಿದ್ದೇ 'ಸಂಗಿನಿ' ಸಂಸ್ಥೆ. 2018ರ ಅಕ್ಟೋಬರ್ 2ರಂದು ಪರಿಸರಸ್ನೇಹಿ ಪ್ಯಾಡ್‌ಗಳ ತಯಾರಿಕೆ ಕಿರು ಉದ್ಯಮ ಆರಂಭಿಸಿದ ಅವರು ಮೊದಲು ಒಂದು ದಿನಕ್ಕೆ 1500ರಿಂದ 2,000 ಪ್ಯಾಡ್‌ಗಳನ್ನು ತಯಾರಿಸುತ್ತಿದ್ದರು. ದಿನಗಳು ಉರುಳಿದಂತೆ ಬೇಡಿಕೆ ಹೆಚ್ಚಾಯಿತು. ಯಂತ್ರಗಳ ನೆರವಿನೊಂದಿಗೆ ಈಗ ಒಂದು ತಾಸಿಗೆ 1500 ಪ್ಯಾಡ್‌ಗಳನ್ನು ತಯಾರಿಕೆ ಮಾಡುತ್ತಾರೆ. ಆರಂಭದಲ್ಲಿ ಒಂಬತ್ತು ಜನ ಮಹಿಳೆಯರು ಕೆಲಸ ಮಾಡುತ್ತಿದ್ದರು.

ಕೊಪ್ಪಳದಲ್ಲಿ ತಯಾರಾಗುವ ಪ್ಯಾಡ್ ಉತ್ಪನ್ನಗಳಿಗೆ ದೆಹಲಿ, ಮಹಾರಾಷ್ಟ್ರ ಹಾಗೂ ಕೇರಳದಲ್ಲಿ ಮಾರುಕಟ್ಟೆಯಿದೆ. ಒಂದು ತಿಂಗಳಿಗೆ 3ರಿಂದ 4 ಲಕ್ಷ ಪ್ಯಾಡ್‌ಗಳು ಹೊರರಾಜ್ಯದಲ್ಲಿಯೇ ಮಾರಾಟವಾಗುತ್ತಿವೆ. ಆಗ ದಿನಕ್ಕೆ 2000 ಪ್ಯಾಡ್‌ಗಳನ್ನು ತಯಾರಿಸುವುದೇ ಕಷ್ಟವಾಗಿದ್ದ ದಿನಗಳನ್ನೂ ಮೀರಿ ಬಂದಿದ್ದಾರೆ. ಈಗ ನಿತ್ಯ 8,000 ಪ್ಯಾಡ್ ತಯಾರಾಗುತ್ತಿವೆ. ಕೊಪ್ಪಳ ಜಿಲ್ಲೆಯ ಗ್ರಾಮೀಣ ಪ್ರದೇಶಗಳ ಹೆಣ್ಣು ಮಕ್ಕಳಿಗೆ ಪ್ಯಾಡ್ ತಲುಪಿಸಲು ಭಾರತಿ ವ್ಯವಸ್ಥೆ ಮಾಡಿದ್ದಾರೆ.

ತಮ್ಮ ಸಂಸ್ಥೆಯ ಪರಿಸರಸ್ನೇಹಿ ಪ್ಯಾಡ್‌ಗಳ ಮಹತ್ವದ ಬಗ್ಗೆ ಜನರೊಂದಿಗೆ ಮುಕ್ತವಾಗಿ ಮಾಹಿತಿ ಹಂಚಿಕೊಂಡಿದ್ದಾರೆ. ಮುಟ್ಟಿನ ವಿಷಯ ಕೂಡ ಮುಕ್ತವಾಗಿ ಮಾತನಾಡಿ ಎಂದು ಕರೆ ಕೊಡುತ್ತಿದ್ದಾರೆ. ಅವರ ಮುಕ್ತ ಮಾತು ದೊಡ್ಡ ಮಾರುಕಟ್ಟೆಯನ್ನೇ ಸೃಷ್ಟಿಸಿದೆ. ಈ ಪ್ಯಾಡ್‌ಗಳನ್ನು ಬಳಕೆ ಮಾಡಿ ಮಣ್ಣಿನಲ್ಲಿ ಹಾಕಿದರೆ ಒಂದು ವರ್ಷದಲ್ಲಿ ಗೊಬ್ಬರವಾಗಿ ಪರಿವರ್ತಿತವಾಗುತ್ತದೆ. ಇದು ಹೆಚ್ಚು ಸುರಕ್ಷಿತ ಮತ್ತು ಪರಿಸರಸ್ನೇಹಿ ಎನ್ನುವ ಅಂಶವನ್ನೇ ಹೆಣ್ಣುಮಕ್ಕಳ ಮುಂದಿಟ್ಟಿದ್ದಾರೆ.

ಖಾಸಗಿ ಕಂಪನಿಗಳು, ಸಂಘ ಸಂಸ್ಥೆಗಳು ಮತ್ತು ದಾನಿಗಳ ನೆರವು ಪಡೆದು ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರಿಗೆ ಸುಲಭವಾಗಿ ಕಡಿಮೆ ಬೆಲೆಗೆ ಪ್ಯಾಡ್ ಸಿಗುವ ವ್ಯವಸ್ಥೆ ಮಾಡಿದ್ದಾರೆ. 'ಪ್ಯಾಡ್ ಮ್ಯಾನ್' ಪ್ರೇರಣೆಯಿಂದ ಸಾಮಾಜಿಕ ಕಳಕಳಿಯಾಗಿದ್ದ ಮುಟ್ಟಿನ ಜಾಗೃತಿ ಬಳಿಕ ಉದ್ಯಮವಾಗಿದೆ. ಈಗ 'ಪ್ಯಾಡ್ ವುಮೆನ್' ಎನ್ನುವ ಗರಿಯನ್ನೂ ತಂದುಕೊಟ್ಟಿದೆ.

ಕುರಿ ಸಾಕಣೆಯ ಕಿರು ಉದ್ಯಮ

ಕುರಿಗಳ ನಿರ್ವಹಣೆಯಲ್ಲಿ ನಿರತರಾಗಿರುವ ಮಂಗಳಾ ಕಿರಣ್ ನೀಲಗುಂದ

ಕೆ.ಎಂ.ಸತೀಶ್ ಬೆಳ್ಳಕ್ಕಿ

ಗದಗ ತಾಲ್ಲೂಕಿನ ಮುಳಗುಂದದ ಮಂಗಳಾ ಕಿರಣ್ ಒಮ್ಮೆ ತಮ್ಮ ಕುರಿಗಳನ್ನು ಮಾರಾಟ ಮಾಡಲು ಸಮೀಪದ ಮಾರ್ಕೆಟ್‌ಗೆ ಹೋದರು. ಅಲ್ಲಿ, ದಲ್ಲಾಳಿಗಳ ಆಟಕ್ಕೆ ಬೇಸತ್ತು ಕುರಿಗಳನ್ನು ಮಾರದೇ ವಾಪಸ್ ಬಂದರು.

ಮನೆಗೆ ಬಂದವರು ಸುಮ್ಮನೆ ಕೂರಲಿಲ್ಲ. 'ಇಂಥ ಆಟಕ್ಕೆಲ್ಲ ಪರಿಹಾರ ಹುಡುಕಲೇಬೇಕು' ಎಂದು ಸಂಕಲ್ಪ ಮಾಡಿದರು. ಮನೆಯ ಸಮೀಪ ದಲ್ಲೇ ಜನರಿಗೆ ಕಾಣುವಂತೆ ಕುರಿ ಶೆಡ್ ಮಾಡಿಸಿದರು. ಶೆಡ್‌ನಲ್ಲಿರುವ ಕುರಿಗಳನ್ನು ನೋಡಿ, ಗ್ರಾಹಕರೇ ಇವರ ಮನೆ ಬಳಿಗೆ ಬಂದರು. ವ್ಯಾಪಾರ ಚಿಗುರಿತು. ಕುರಿಗಳ ಸಂಖ್ಯೆ ವಿಸ್ತರಣೆಯಾಯಿತು. ಕುರಿ ಸಾಕಣೆ ಕಿರು ಉದ್ಯಮವಾಯಿತು.

ಕುರಿ ಸಾಕಣೆಯ ಹಿಂದೆ..

ಮಂಗಳಾ ಕಿರಣ್ ಕೃಷಿ ಪದವೀಧರೆ. ಬಾಲ್ಯದಿಂದಲೂ ಕೃಷಿಯ ಬಗ್ಗೆ ಆಸಕ್ತಿ. ಮದುವೆಯಾಗಿ ಗಂಡನ ಮನೆಗೆ ಬಂದಾಗ ಅವರ ಮಾವ ಹೈನುಗಾರಿಕೆ ಮಾಡುತ್ತಿದ್ದರು. ಇದು ಆದಾಯದ ಕೆಲಸವಾದರೂ, ಬಿಡುವು ಸಿಗುತ್ತಿರಲಿಲ್ಲ. ಇದನ್ನು ಗಮನಿಸಿದ ಮಂಗಳಾ ಅವರು ಕುರಿ ಸಾಕಣೆ ಆಯ್ದುಕೊಂಡರು. ಹೈನುಗಾರಿಕೆಯಂತೆ ಕುರಿ ಸಾಕಣೆ ಹೆಚ್ಚು ಶ್ರಮ ಬೇಡುವುದಿಲ್ಲ. ನಿರಂತರ ಮುತುವರ್ಜಿ ವಹಿಸಬೇಕಿಲ್ಲ. ಅವುಗಳ ನಿರ್ವಹಣೆಗೆ ಹೆಚ್ಚಿನ ಜನರೂ ಬೇಕಾಗುವುದಿಲ್ಲ. ಈ ಕಾರಣದಿಂದ ಮಂಗಳಾ ಅವರು ಕುರಿ ಸಾಕಣೆಯೇ ಸರಿ ಎಂಬ ನಿರ್ಧಾರಕ್ಕೆ ಬಂದರು. ಆದರೆ, 'ದೊಡ್ಡ ಮನೆತನದ ಸೊಸೆ, ಕುರಿ ಸಾಕೋದು. ಬೇಡಪ್ಪ' ಎಂದಿದ್ದರು ಮಾವ. ಆದರೆ, ಮಂಗಳಾ, ಪತಿ ಕಿರಣ್ ನೀಲಗುಂದ ಅವರ ನೆರವಿನಿಂದ ಮಾವನನ್ನು ಒಪ್ಪಿಸಿ 2012ರಲ್ಲಿ ಕುರಿ ಸಾಕಣೆ ಆರಂಭಿಸಿದರು. ಕೃಷಿ ಪದವಿಯಲ್ಲಿ ಕಲಿತಿದ್ದ ಜ್ಞಾನ, ಕುರಿ ಸಾಕಣೆ ಮತ್ತು ಅದರಲ್ಲಿ ಎದುರಾಗುವ ಸವಾಲುಗಳ ನಿರ್ವಹಣೆಗೆ ನೆರವಾಯಿತು. ಗದಗ ಕೃಷಿ ವಿಜ್ಞಾನ ಕೇಂದ್ರದಲ್ಲಿ ಕುರಿ ಸಾಕಣೆಯ ವಿಶೇಷ ತರಬೇತಿ ಪಡೆದಿದ್ದು ಆಸಕ್ತಿಗೆ ಬಲತುಂಬಿತು. ಆರಂಭದಲ್ಲಿ ತಮ್ಮ ಮನೆಯ ಹಿಂಬದಿಯಲ್ಲಿದ್ದ 4 ಎಕರೆ ಜಾಗದಲ್ಲಿ 25X50 ಜಾಗದಲ್ಲಿ ಪುಟ್ಟ ಶೆಡ್ ಮಾಡಿಕೊಂಡರು. ಸುತ್ತ ತಂತಿ ಬೇಲಿ ಹಾಕಿಸಿದರು. ಎರಡು ಮೂರು ತಿಂಗಳಿನ 30 ಟಗರುಗಳನ್ನು ತಂದು ಸಾಕಣೆ ಆರಂಭಿಸಿದರು. ಟಗರು ಹಾಗೂ ಶೆಡ್ ಎಲ್ಲ ಸೇರಿ ಆಗ ₹3 ಲಕ್ಷ ಖರ್ಚು ಮಾಡಿದ್ದರು.

ಹಸುವಿನ ಮೈತಡವುತ್ತಿರುವ ಮಂಗಳಾ

ಉದ್ಯಮದ ವಿಸ್ತರಣೆ

2017ರವರೆಗೆ ಟಗರುಗಳನ್ನಷ್ಟೇ ಮಾರಾಟ ಮಾಡುತ್ತಿದ್ದರು. ನಂತರ ಉದ್ಯಮ ವಿಸ್ತರಣೆಗೆ ಮುಂದಾದರು. 50 ಕುರಿಗಳನ್ನು ತಂದರು. ಅವುಗಳು ಮರಿ ಹಾಕಿದ್ದನ್ನು ಉಳಿಸಿಕೊಂಡು, ಟಗರುಗಳನ್ನಷ್ಟೇ ಮಾರುತ್ತಾ ಬಂದರು. ಮರಿಗಳ ಸಂಖ್ಯೆ ಹೆಚ್ಚಾದಂತೆ ಅವುಗಳಿಗೆ ಅನುಕೂಲ ಕಲ್ಪಿಸಲು ₹18 ಲಕ್ಷ ವೆಚ್ಚದಲ್ಲಿ ಅಟ್ಟಣಿಗೆ ಶೆಡ್ ಮಾಡಿಸಿದರು. ಪಕ್ಕದಲ್ಲೇ ₹8 ಲಕ್ಷ ವೆಚ್ಚದಲ್ಲಿ ನೆಲದ ಮೇಲೆ ಮತ್ತೊಂದು ಶೆಡ್ ಕಟ್ಟಿಸಿದರು. ಆರ್ಥಿಕವಾಗಿ ಸುಸ್ಥಿರವಾಗಿದ್ದ ಕುಟುಂಬವಾದ ಕಾರಣ, ಬ್ಯಾಂಕ್ ಸಾಲ ಪಡೆಯದೇ, ಸರ್ಕಾರದ ಸಬ್ಸಿಡಿ ಇತ್ಯಾದಿ ಸೌಲಭ್ಯಗಳನ್ನು ಬಳಸಿಕೊಳ್ಳದೇ ಸ್ವಂತ ಹಣದಲ್ಲೇ ಶೆಡ್‌ಗಳನ್ನು ನಿರ್ಮಿಸಿಕೊಂಡರು.

ವಿಡಿಯೊ ನೋಡಲು ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಸ್ವಾವಲಂಬಿ ಬದುಕು

ಪರಿಸರ ಪ್ರೀತಿ

ಕಿರು ಉದ್ಯಮದ ಜೊತೆಗೆ ಪರಿಸರ ಪ್ರೀತಿ ಹೊಂದಿರುವ ಮಂಗಳಾ ಅವರು, ಮನೆಗೆ ಬರುವ ಅತಿಥಿಗಳಿಗೆ, ಪರೀಕ್ಷೆಯಲ್ಲಿ ರ‍್ಯಾಂಕ್ ಬಂದ ವಿದ್ಯಾರ್ಥಿಗಳಿಗೂ ಸಸಿಗಳನ್ನೇ ಉಡುಗೊರೆಯಾಗಿ ನೀಡುತ್ತಾರೆ. ಈವರೆಗೆ ಐದು ಸಾವಿರಕ್ಕೂ ಹೆಚ್ಚು ಗಿಡಗಳನ್ನು ಉಡುಗೊರೆಯಾಗಿ ನೀಡಿದ್ದಾರೆ. ಮಹಿಳೆಯರಿಗೆ ಗಿಡಗಳನ್ನೇ ಉಡಿ ತುಂಬಿದ್ದಾರೆ. ಸ್ಮಶಾನ ಹಾಗೂ ಶಾಲಾ ಕಾಲೇಜು ಆವರಣ, ರಸ್ತೆ ಬದಿಯಲ್ಲಿ ಈವರೆಗೆ ಸಾವಿರಕ್ಕೂ ಹೆಚ್ಚು ಗಿಡಗಳನ್ನು ನೆಟ್ಟಿದ್ದಾರೆ.

ಈಗ ಕುರಿಗಳ ನಿರ್ವಹಣೆಗೆ ಒಬ್ಬರು, ಕುರಿಗಳನ್ನು ಮೇಯಿಸಲು ಇಬ್ಬರು ಕೆಲಸಗಾರರನ್ನು ನೇಮಿಸಿಕೊಂಡಿದ್ದಾರೆ. ಆದರೂ, ಕುರಿಗಳ ಪೋಷಣೆಗೆ ತಾವೂ ನಿಲ್ಲುತ್ತಾರೆ. ಮನೆಗೆಲಸ ಮುಗಿಸಿ, ಮಕ್ಕಳನ್ನು ಶಾಲೆಗೆ ಕಳಿಸಿ, ಕುರಿ ನಿರ್ವಹಣೆಯತ್ತ ಹೊರಡುತ್ತಾರೆ ಮಂಗಳಾ. ಸುಸಜ್ಜಿತ ಶೆಡ್‌ಗೆ ಸಿಸಿಟಿವಿ ಅಳವಡಿಸಿದ್ದಾರೆ. ಶೆಡ್‌ನಲ್ಲಿ ಏನೇನು ಆಗುತ್ತಿದೆ ಎಂಬುದನ್ನು ಈಗ ಅವರು ತಮ್ಮ ಮೊಬೈಲ್‌ನಲ್ಲೇ ವೀಕ್ಷಿಸುತ್ತಾರೆ. ಮಂಗಳಾ ಅವರು ಡೆಕ್ಕನಿ ಮತ್ತು ಎಳಗಾ ತಳಿಯ ಕುರಿಗಳನ್ನು ಸಾಕುತ್ತಿದ್ದಾರೆ. ಇವುಗಳಿಗೆ ರೋಗನಿರೋಧಕ ಶಕ್ತಿ ಹೆಚ್ಚಿದೆ. ಸ್ಥಳೀಯವಾಗಿ ಬೇಡಿಕೆ ಕೂಡ ಹೆಚ್ಚಾಗಿದೆ. ಮಳೆಯಾಶ್ರಿತ ವಾತಾವರಣಕ್ಕೆ ಇವು ಚೆನ್ನಾಗಿ ಹೊಂದಿಕೊಳ್ಳುತ್ತವೆ. ಪೊಗದಸ್ತಾಗಿ ಬೆಳೆಯುತ್ತವೆ ಎಂಬುದು ಮಂಗಳಾ ಅವರ ಅನುಭವದ ಮಾತು.

ಕುರಿಗಳಿಗೆ ಬೇಕಾದ ಆಹಾರವನ್ನು ತಮ್ಮ ಹೊಲದಲ್ಲೇ ಬೆಳೆಯುತ್ತಾರೆ. ಜತೆಗೆ ರಸಮೇವು ತಯಾರಿಸಿ, ವರ್ಷಪೂರ್ತಿ ಕುರಿಗಳಿಗೆ ಕೊಡುತ್ತಾರೆ. ಜತೆಗೆ ಗೋವಿನ ಜೋಳದ ನುಚ್ಚಿನ ಜತೆಗೆ ಶೇಂಗಾ ಹಿಂಡಿಯನ್ನೂ ಮೇವಾಗಿ ನೀಡುತ್ತಾರೆ.

ಪ್ರತಿ ಹಂತದಲ್ಲೂ ಖರ್ಚು ಕಡಿಮೆ ಮಾಡಿಕೊಳ್ಳುವತ್ತ ಗಮನ ಹರಿಸುವ ಮಂಗಳಾ ಅವರ ಕುರಿಸಾಕಣೆಗೆ ಈಗ ದಶಕದ ಸಂಭ್ರಮ. ಸದ್ಯ ಇವರ ಶೆಡ್‌ನಲ್ಲಿ 250 ಕುರಿ,100 ಟಗರುಗಳು ಮತ್ತು 50 ಆಡುಗಳಿವೆ. ಹಸು, ಕೋಳಿಗಳನ್ನೂ ಸಾಕಿದ್ದಾರೆ.

'ಆಡು, ಟಗರುಗಳನ್ನು ಈಗ ಜಮೀನಿನಲ್ಲೇ ಮಾರಾಟ ಮಾಡುತ್ತೇನೆ. ಹಾವೇರಿ, ಕೊಪ್ಪಳ, ಶಿರಸಿ ಮೊದಲಾದ ಕಡೆಗಳಿಂದ ಗ್ರಾಹಕರು ಬರುತ್ತಾರೆ. ತೂಕದ ಲೆಕ್ಕದಲ್ಲಿ (ಲೈವ್ ವೇಯ್ಟ್) ಮಾರಾಟ ಮಾಡುತ್ತಿದ್ದೇನೆ. ಮೇವು, ಸಾಕಣೆ ವೆಚ್ಚ ಹಾಗೂ ಆ ದಿನ ಮಾರುಕಟ್ಟೆ ದರ ನೋಡಿಕೊಂಡು ಬೆಲೆ ನಿಗದಿ ಮಾಡುತ್ತೇನೆ' ಎಂದು ತನ್ನ ವ್ಯಾಪಾರದ ಕ್ರಮವನ್ನು ವಿವರಿಸುತ್ತಾರೆ ಮಂಗಳಾ.

ಸದ್ಯ ಖರ್ಚೆಲ್ಲಾ ಕಳೆದು ವರ್ಷಕ್ಕೆ ಏಳರಿಂದ ಎಂಟು ಲಕ್ಷ ರೂಪಾಯಿ ಆದಾಯ ಪಡೆಯುತ್ತಿದ್ದಾರೆ.

ಗೊಬ್ಬರದಿಂದಲೂ ಆದಾಯ

ಕುರಿ, ಮೇಕೆ ಮಾತ್ರವಲ್ಲ, ಅವುಗಳ ಹಿಕ್ಕೆಯೂ(ಗೊಬ್ಬರ) ಇವರಿಗೆ ಆದಾಯ ತಂದುಕೊಡುತ್ತಿದೆ. ಪ್ರತಿ ತಿಂಗಳು ಐದರಿಂದ ಆರು ಟನ್‌ನಷ್ಟು ಕುರಿ ಗೊಬ್ಬರ ಸಿಗುತ್ತಿದೆ. ಶಿರಸಿ, ಚಿಕ್ಕಮಗಳೂರು ಗ್ರಾಹಕರು ಇವರಲ್ಲಿಗೆ ಬಂದು ಖರೀದಿಸಿಕೊಂಡು ಹೋಗುತ್ತಿದ್ದಾರೆ. ಹಸುಗಳ ಸೆಗಣಿಯಿಂದ ಬೆರಣಿ ತಯಾರಿಸುತ್ತಾರೆ. ಅದನ್ನು ಪೂಜೆ, ಹೋಮಗಳಂತಹ ಕಾರ್ಯಕ್ರಮಗಳನ್ನು ಆಯೋಜಿಸುವವರು ಖರೀದಿ ಮಾಡುತ್ತಾರಂತೆ. ದುಡಿಮೆಯ ಅನಿವಾರ್ಯವಿರದಿದ್ದರೂ, ಕೃಷಿ-ಕುರಿಸಾಕಣೆಯನ್ನು ಆಸಕ್ತಿಯಿಂದ ಮುಂದುವರಿಸುತ್ತಾ, ಯಶಸ್ಸಿನ ಹೆಜ್ಜೆ ಇಟ್ಟಿರುವ ಮಂಗಳಾ ಅವರ ಕಾರ್ಯವನ್ನು ಗೌರವಿಸಿ ಹಲವಾರು ಪ್ರಶಸ್ತಿ, ಪುರಸ್ಕಾರಗಳು ಸಂದಿವೆ.

ಹೆಣ್ಮಕ್ಕಳಿಗೆ ಒಂದಿಲ್ಲೊಂದರಲ್ಲಿ ಆಸಕ್ತಿ, ಕೌಶಲ ಇರುವುದು ಸಹಜ. ಅವು ಹವ್ಯಾಸವಾಗಿಯೂ ಇರಬಹುದು. ಇಂಥ ಆಸಕ್ತಿ, ಕಾಳಜಿಗಳು ಆದಾಯ ತರುವ ಉದ್ಯಮವಾಗಿ ರೂಪುಗೊಂಡರೆ ಇದಕ್ಕಿಂತ ಖುಷಿಯೇನಿದೆ. ಆಗಸ್ಟ್ 30ರ 'ರಾಷ್ಟ್ರೀಯ ಸಣ್ಣ ಉದ್ದಿಮೆ ದಿನ'ದ ನೆಪದಲ್ಲಿ, ಗೊತ್ತಿರುವ ಕೌಶಲ, ಕಡಿಮೆ ಮಾನವ ಸಂಪನ್ಮೂಲವನ್ನೇ ಬಂಡವಾಳವಾಗಿಸಿ ಕಿರು ಉದ್ಯಮ ನಡೆಸುತ್ತಿರುವ ಹಲವು ಹೆಣ್ಣುಮಕ್ಕಳ ಯಶೋಗಾಥೆಗಳು ಇಲ್ಲಿವೆ.

ಮಹಿಳಾ ಉದ್ಯಮಿಗಳಿಗೆ ಸಲಹೆಗಳು

- ಆತ್ಮವಿಶ್ವಾಸ, ಸಕಾರಾತ್ಮಕ ಚಿಂತನೆ ಜೊತೆಗಿರಲಿ
- ಉತ್ಸಾಹವನ್ನು ವ್ಯಾಪಾರವಾಗಿಸಿದರೆ ಅದು ವ್ಯವಹಾರವನ್ನು ಪ್ರೀತಿಸಲು ಸಹಾಯ ಮಾಡುತ್ತದೆ
- ಉದ್ಯಮ ಆರಂಭಕ್ಕೆ ಸಣ್ಣ ಮೊತ್ತದ ಹೂಡಿಕೆ ಇರಲಿ. ದೊಡ್ಡಮೊತ್ತದ ಸಾಲ ಬೇಡ
- ಆರಂಭದಲ್ಲಿ ಸ್ಥಳದ ಬಾಡಿಗೆ ಮತ್ತು ಒಳಾಂಗಣಕ್ಕಾಗಿ ಹೆಚ್ಚು ಖರ್ಚು ಮಾಡಬೇಡಿ. ಆ ಪ್ರಕ್ರಿಯೆ ಹಂತ ಹಂತವಾಗಿರಲಿ
- ನೇರ ಗ್ರಾಹಕರು ಮತ್ತು ಅವರ ಅವಶ್ಯಕತೆಗಳೊಂದಿಗೆ ಮಾರುಕಟ್ಟೆಯನ್ನು ಸಂಪರ್ಕಿಸಿ.
- ಪೈಪೋಟಿಗೆ ಬಿದ್ದು ಉದ್ದರಿಗೆ (ಸಾಲ) ನೀಡಬೇಡಿ. ಕ್ಲೀರ್ ಕ್ಯಾಶ್ & ಕ್ಯಾರಿ ವ್ಯವಹಾರ ಉತ್ತಮ
- ಸಣ್ಣ ಮಾರ್ಜಿನ್ ದೊಡ್ಡ ಔಟ್ರೀಚ್ ಮೇಲೆ ಕೇಂದ್ರೀಕರಿಸಿ
- ಗ್ರಾಹಕರ ಇತರ ನಗರಗಳಿಗೆ ಸಂಪರ್ಕ ಸಾಧಿಸಲು ಉಚಿತ ಸಾಮಾಜಿಕ ಮಾಧ್ಯಮವನ್ನು ನಿಮ್ಮ ಜಾಹೀರಾತು ಚಾನಲ್‌ನಂತೆ ಬಳಸಿ.
- ನಿಷ್ಠಾವಂತರಾಗಿರಿ ಉತ್ತಮ ಸೇವೆಯನ್ನು ಒದಗಿಸಿ
- ಗ್ರಾಹಕರಿಗೆ ಅನನ್ಯ ಉತ್ಪನ್ನಗಳನ್ನು ನೀಡಿ
- ಜಾಹೀರಾತುಗಳಿಗಾಗಿ ದೊಡ್ಡ ಮೊತ್ತ ವ್ಯಯಿಸದಿರಿ

ಕ್ರೋಶಾದಿಂದ ಹೆಣೆದ ಕಸೂತಿ ಉದ್ಯಮ

ಕೃಷ್ಣಿ ಶಿರೂರ

ಉಲ್ಲನ್ ಕಲಾಕೃತಿಗಳೊಂದಿಗೆ ಅಚಲಾ ಸುಧೀರ್

ಚಿಕ್ಕವಳಿದ್ದಾಗ ಅಮ್ಮ ಮಾಡುತ್ತಿದ್ದ ಕರಕುಶಲತೆಗಳನ್ನು ಆಸಕ್ತಿಯಿಂದ ಕಲಿತು, ಅದನ್ನೇ ಹವ್ಯಾಸವಾಗಿಸಿಕೊಂಡವರು ಮಂಗಳೂರಿನ ಅಚಲಾ. ಮದುವೆಯಾದ ಮೇಲೆ ಮೇಲೆ, ಅಡುಗೆ, ಮಗನ ವಿದ್ಯಾಭ್ಯಾಸದ ಜೊತೆಗೆ ಕಸೂತಿ, ಕ್ರೋಶಾ ನಿಟ್ಟಿಂಗ್ ಮಾಡಲು ಆರಂಭಿಸಿದರು. ಮನೆಯ ಸೋಫಾಗಳಿಗೆಲ್ಲ ಅಚಲಾ ಅವರ ಕಸೂತಿಯದೇ ಹೊದಿಕೆ ಆಕರ್ಷಣೆಯಾದವು. ಕ್ರೋಶಾದಿಂದ ಅಲಂಕಾರಿಕ ವಸ್ತುಗಳನ್ನು ಮಾಡಿ ಮನೆಗೆ ಬಂದ ನೆಂಟರಿಗೆ, ಮಕ್ಕಳಿಗೆ ಉಡುಗೊರೆ ನೀಡಿ ಖುಷಿ ಪಡಿಸಿದರು. ಮಗ ಓದು ಮುಗಿಸಿ ಕೆಲಸಕ್ಕೆ ಹೋದ ಮೇಲೆ ಅಮ್ಮನಿಗಾಗಿ ಮೊಬೈಲ್ ತಂದು ಕೊಟ್ಟಿದ್ದು, ಅಚಲಾ ಅವರ ಕರಕುಶಲತೆ ಹೊರಪ್ರಪಂಚಕ್ಕೆ ಪರಿಚಯವಾಗಲು ದಾರಿಯಾಯಿತು. ಫೇಸ್‌ಬುಕ್ ಪೇಜ್ 'ಅಚಲಿಯಾ' ಆರಂಭಿಸಿ ಅಲ್ಲಿ ಆರ್ಡರ್‌ಗಳನ್ನು ಪಡೆದು ಪೂರೈಸಲು ಶುರುವಿಟ್ಟರು. ಯುಎಸ್‌ಎ, ಯುಕೆ. ಜರ್ಮನಿ, ಆಸ್ಟ್ರೇಲಿಯಾಗೂ ಅಚಲಾ ಅವರ ಕ್ರೋಶಾ ಕಲಾಕೃತಿಗಳು ರವಾನೆಯಾಗಿವೆ. 2021ರಲ್ಲಿ ಇನ್ನರ್‌ವೀಲ್ ಏರ್ಪಡಿಸಿದ್ದ ವಸ್ತುಪ್ರದರ್ಶನದಲ್ಲಿ ಪಾಲ್ಗೊಂಡು ಮನ್ನಣೆ ಪಡೆದರು. ಟೈ(TiE) ಏರ್ಪಡಿಸಿದ್ದ ಕೌಶಲ 2022 ಪ್ರದರ್ಶನದಲ್ಲಿ ಒಳ್ಳೆ ವ್ಯಾಪಾರದೊಂದಿಗೆ 'ಬೆಸ್ಟ್ ಪ್ರೆಸೆಂಟೇಷನ್' ಪ್ರಶಸ್ತಿಯನ್ನು ಗಿಟ್ಟಿಸಿಕೊಂಡರು. ಹೆಣ್ಣೆ ಆಗಲಿ; ಗಂಡೇ ಆಗಲಿ. ಯಾವುದಾದರು ಹವ್ಯಾಸವನ್ನು ಬೆಳೆಸಿಕೊಂಡರೆ ಇಳಿವಯಸ್ಸಿನಲ್ಲಿ ಚಿಂತೆ, ಮಾನಸಿಕ ಖಿನ್ನತೆಯನ್ನು ತಪ್ಪಿಸಬಹುದು. ಜೊತೆಗೆ ಗಳಿಕೆಯನ್ನೂ ಹೊಂದಬಹುದು ಎಂಬುದು ಅಚಲಾ ಅವರ ಅನಿಸಿಕೆ.

ಬಣ್ಣ ಹಚ್ಚುವುದೇ ಬಂಡವಾಳವಾದಾಗ..

ಸುಮತಿ ದಾನಿ

ಬರ್ಥ್‌ಡೇ ಪಾರ್ಟಿ ಇರಲಿ. ಕಾಲೇಜು ಕಾರ್ಯಕ್ರಮಗಳಿರಲಿ. ಹ್ಯಾಲೋವೀನ್ ಪಾರ್ಟಿಯಿರಲಿ. ಹಳದಿ-ಮೆಹಂದಿ, ಮದುವೆ ಸಂದರ್ಭವೇ ಇರಲಿ. ಸುಮತಿಯ ಫೇಸ್ ಪೇಂಟಿಂಗ್‌ಗೆ ಭಾರಿ ಬೇಡಿಕೆ. ಫೇಸ್ ಪೇಂಟಿಂಗ್ ಟ್ರೆಂಡಿಂಗ್ ಆಗುತ್ತಿದೆ. ಈ ಟ್ರೆಂಡಿಂಗನ್ನು ಹುಬ್ಬಳ್ಳಿಯ ಸುಮತಿ ದಾನಿ ಸದ್ಬಳಕೆ ಮಾಡಿಕೊಂಡಿದ್ದಾರೆ. ವಿಶೇಷವಾಗಿ ಮಕ್ಕಳು ಸುಮತಿ ಅವರ ಕೈಯಿಂದ ಮುಖ, ಕೈಗಳ ಮೇಲೆ ಚಿತ್ರ ಬಿಡಿಸಿಕೊಂಡು ಖುಷಿಪಡುತ್ತಾರೆ.

ಬಾಲ್ಯದಿಂದಲೂ ಸುಮತಿಗೆ ಬಣ್ಣಗಳು ಅಂದರೆ ಅಚ್ಚುಮೆಚ್ಚು. ಚಿತ್ರಕಲೆಯಲ್ಲಿ ಅತೀವ ಆಸಕ್ತಿ. ಮುಂದೆ ಅದುವೇ ಹವ್ಯಾಸವಾಯಿತು. ಬಣ್ಣಗಳ ಮೇಲಿನ ಆಸಕ್ತಿ ಮುಂದುವರೆದು ರೋಗಿಗಳಿಗೆ ಯಾವುದೇ ಔಷಧಿಯಿಲ್ಲದೆ ಬಣ್ಣಗಳಿಂದ ಗುಣಪಡಿಸಬಲ್ಲ ಬಣ್ಣ ಚಿಕಿತ್ಸೆ (ಕ್ರೊಮೊ ಥೆರಪಿ)ಯಿಂದಲೂ ಆದಾಯ ಕಂಡುಕೊಂಡರು. ಬಾಲ್ಯದ ಆಸಕ್ತಿ ಇಂದು 20ರ ಹರೆಯದಲ್ಲೇ ಸುಮತಿಗೆ ಫೇಸ್ ಪೇಂಟಿಂಗ್ ಮೂಲಕ ಪ್ರಸಿದ್ಧಿ ತಂದುಕೊಟ್ಟಿದೆ. ಪಿಡಿಲೈಟ್ ಕಂಪನಿಯ ಅಡಿಯಲ್ಲಿ ಭಾರತದ ಕಿರಿಯ ಕಲಾ ಶಿಕ್ಷಕ ಎಂಬ ಹೆಮ್ಮೆ ಸುಮತಿಯದ್ದು. 'ಟೈ' (TiE) ಸಂಘಟನೆ ಇವರ ಮುಖವರ್ಣಿಕೆ ಕಲೆಯನ್ನು ಪ್ರೋತ್ಸಾಹಿಸಿ, ಪುಟ್ಟ ಉದ್ಯಮಿಯ ಪಟ್ಟ ಕಟ್ಟಿಕೊಟ್ಟಿದೆ.

ಖಾರಾ ಇಂಗು-ಮೆಣಸು, ಸಿಹಿ ತಂತು

ಮಂಗಲಾ ರಾಗ್ ಹೆಗಡೆ

ಗಂಡ ಆಫೀಸಿಗೆ, ಮಗಳು ಶಾಲೆಗೆ ಹೊರಟ ಮೇಲೆ ಮಂಗಲಾ ರಾಗ್ ಹೆಗಡೆ ಮನೆಯಲ್ಲಿ ಏಕಾಂಗಿ. ಮೂಲ ಶಿರಸಿ ಸಮೀಪ ಸಿದ್ದಾಪುರವಾದರೂ ನೆಲೆ ನಿಂತಿರುವುದು ಬೆಂಗಳೂರಲ್ಲಿ. ಮನೆಯಲ್ಲಿ ಅಡುಗೆ ಮಾಡಿ ಉಳಿದ ಸಮಯದಲ್ಲಿ ಅಮ್ಮ, ಅಜ್ಜಿ ಹಾಗೂ ಸಂಬಂಧಿಯಿಂದ ಕಲಿತ ಸಾಂಪ್ರದಾಯಿಕ ಅಡುಗೆ, ಇಂಗು ಮೆಣಸು ಮಾಡಿ ಸ್ನೇಹಿತರಿಗೂ ಹಂಚಿದರು. ರುಚಿ ಕಂಡವರು ಭೇಷ್ ಎಂದಾಗ ಮಂಗಲಾಗೆ ಇನ್ನಿಲ್ಲದ ಖುಷಿ. ಫೇಸ್‌ಬುಕ್‌ನಲ್ಲಿ ಎಲ್ಲರೂ ಇವರ ಇಂಗು-ಮೆಣಸನ್ನು ಒಪ್ಪಿ, ಆರ್ಡರ್ ನೀಡಲು ಆರಂಭಿಸಿದರು. ಕೆಲವರು ಫೇಸ್‌ಬುಕ್‌ನಲ್ಲಿ ಫೀಡ್‌ಬ್ಯಾಕ್ ಪೋಸ್ಟ್ ಮಾಡಿದಾಗ ಒಂದೇ ದಿನ 15 ಮಂದಿಯಿಂದ ಆರ್ಡರ್ ಬಂದಿತು. ಸ್ನೇಹಿತೆ ಚೈತನ್ಯಾ ಸಲಹೆ ಮೇರೆಗೆ ಇಂಗುಮೆಣಸು ಲೇಬಲ್‌ನೊಂದಿಗೆ ಫೇಸ್‌ಬುಕ್ ಮಾರ್ಕೆಟ್‌ನಲ್ಲಿ ವ್ಯಾಪಾರಕ್ಕೆ ಮಂಗಲಾ ಮುಂದಾದರು. ಗ್ರಾಂ ಲೆಕ್ಕದಲ್ಲಿ ಆರಂಭವಾದ ಇಂಗು ಮೆಣಸು ಉತ್ಪಾದನೆ ಇಂದು 135ಕೆಜಿ ದಾಟಿದೆ. ಸದ್ಯಕ್ಕೆ 565 ಮಂದಿ ಇಂಗು-ಮೆಣಸಿಗೆ ಕಾಯಂ ಗ್ರಾಹಕರಿದ್ದಾರೆ. ಮನೆಯಲ್ಲಿ ಒಬ್ಬಳಿಗೆ ಸಮಯ ಹೋಗದು, ಬೇಜಾರು ಎನ್ನುತ್ತಿದ್ದ ಮಂಗಲಾಗೆ ಇಂದು ಕೈತುಂಬಾ ಕೆಲಸವನ್ನು ಇಂಗು ಮೆಣಸು ಕೊಟ್ಟಿದೆ. ಇಂಗುಮೆಣಸು ತಯಾರಿಸುವುದು ತುಸು ಕಷ್ಟವೇ ಆಗಿದ್ದರೂ ಮನೆಯಿಂದಲೇ ಕೈತುಂಬಾ ಆದಾಯ ತಂದು ಕೊಟ್ಟಿದೆ. ಎಲ್ಲ ಕೆಲಸವೂ ಕಷ್ಟವೇ. ಆದರೆ ಇಷ್ಟಪಟ್ಟು ಮಾಡಿದರೆ ಅದರಲ್ಲೂ ಸಂತಸ ಕಾಣಬಹುದು ಎಂಬುದು ಇವರ ಧ್ಯೇಯವಾಕ್ಯ.

ಋತುಬಂಧದ ನಂತರ ಕರಗಬಹುದು ಫೈಬ್ರಾಯ್ಡ್

ಸ್ಪಂದನ

ಡಾ. ವೀಣಾ ಎಸ್. ಭಟ್

• ನನಗೆ 53 ವರ್ಷ ವಯಸ್ಸು. ಇಬ್ಬರು ಹೆಣ್ಣುಮಕ್ಕಳಿದ್ದಾರೆ. ಒಬ್ಬಳಿಗೆ ಮದುವೆಯಾಗಿದೆ. ನನ್ನ ಸಮಸ್ಯೆ ಏನೆಂದರೆ ಈಗಲೂ 25 ದಿನಗಳಿ ಗೊಮ್ಮೆ ಮುಟ್ಟು ಆಗುತ್ತದೆ. ಮೂರು ದಿನಗಳವರೆಗೆ ರಕ್ತಸ್ರಾವವಾಗುತ್ತದೆ. ವೈದ್ಯರಿಗೆ ತೋರಿಸಿದಾಗ 'ಅಲ್ಟ್ರಾ ಸೋನೋಗ್ರಫಿ ಆಫ್ ಅಬ್ಡಮನ್ ಆ್ಯಂಡ್ ಪೆಲ್ವಿಸ್' ಸ್ಕ್ಯಾನಿಂಗ್ ಮಾಡಿಸಿ ಎಂದರು. ಅದರಂತೆ ಪರೀಕ್ಷೆ ಮಾಡಿಸಿದೆ. ರಿಪೋರ್ಟ್‌ನಲ್ಲಿ Mild bulky uterus with small fibroids as prescribed ಎಂದು ಇದೆ ಹೇಳಿದರು. ನನಗೆ ಮುಟ್ಟು ನಿಲ್ಲುವುದು ಯಾವಾಗ? ಇದಕ್ಕೆ ಪರಿಹಾರ ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ನಿಮಗೆ ಈಗಾಗಲೇ 53 ವರ್ಷವಾಗಿರುವುದರಿಂದ ಇನ್ನು ಒಂದು ವರ್ಷದೊಳಗೆ ಮುಟ್ಟುನಿಲ್ಲುವ ಸಾಧ್ಯತೆ ಇದೆ. ಮಹಿಳೆಯರಲ್ಲಿ ಸರಾಸರಿ ಮುಟ್ಟುನಿಲ್ಲುವ ವಯಸ್ಸು 47 ರಿಂದ 52 ವರ್ಷಗಳು. ನಿಮಗೆ ಮುಟ್ಟಿನಸ್ರಾವದಲ್ಲಿ ಏನೂ ತೊಂದರೆ ಇಲ್ಲವೆಂದು ತಿಳಿಸಿದ್ದೀರಿ. ಆದರೆ ಗರ್ಭಕೋಶದಲ್ಲಿ ಸಣ್ಣ ಸಣ್ಣ ನಾರುಗಡ್ಡೆಗಳು (ಫೈಬ್ರಾಯ್ಡ್) ಇವೆ. ಗರ್ಭಕೋಶ ಕೂಡಾ ಸ್ವಲ್ಪ ದೊಡ್ಡದಾಗಿದೆ. ನೀವು ಈ ಮೊದಲು ಯಾವ ಕಾರಣಕ್ಕೂ ಸ್ಕ್ಯಾನಿಂಗ್ ಮಾಡಿಸಿಲ್ಲ ಅನಿಸುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ ಗರ್ಭಕೋಶಗಳಲ್ಲಿರುವ ನಾರುಗಡ್ಡೆಗಳು, ಮುಟ್ಟುನಿಲ್ಲುವ ಹಂತದಲ್ಲಿ ಸಣ್ಣದಾಗುತ್ತಾ ಬರುತ್ತವೆ ಮತ್ತು ಹಾಗೆಯೇ ಕರಗಿಯೇ ಹೋಗಬಹುದು.

ಫೈಬ್ರಾಯ್ಡ್ ಅಥವಾ ನಾರುಗಡ್ಡೆಗಳು ಹೆಣ್ತನದ ಹಾರ್ಮೋನ್ ಈಸ್ಟ್ರೊಜನ್ ಅನ್ನು ಅವಲಂಬಿಸಿರುತ್ತದೆ. ಮುಟ್ಟುನಿಲ್ಲುವ ಸಂದರ್ಭದಲ್ಲಿ ಈ ಹಾರ್ಮೋನ್‌ಗಳ ಮಟ್ಟ ಕಡಿಮೆಯಾಗುತ್ತಾ ಬಂದ ಹಾಗೇ ನಾರುಗಡ್ಡೆ ಕೂಡಾ ಸಣ್ಣದಾಗುತ್ತಾ ಹೋಗುತ್ತದೆ. ಕೆಲವೊಮ್ಮೆ ಅಧಿಕ ತೂಕವಿದ್ದಾಗ, ಮಧುಮೇಹ ಇದ್ದಾಗ ನಾರುಗಡ್ಡೆಗಳು ದೊಡ್ಡದಾಗುತ್ತಾ ಹೋಗಬಹುದು. ಮುಟ್ಟು ಯಾವಾಗ ನಿಲ್ಲುತ್ತದೆ ಎಂದು ನಿರ್ದಿಷ್ಟ ವಾಗಿ ಹೇಳಲು ಸಾಧ್ಯವಿಲ್ಲವಾದರೂ ನಿಮ್ಮ ಸ್ಕ್ಯಾನಿಂಗ್ ವರದಿಯಲ್ಲಿ ಗರ್ಭಕೋಶ ಸ್ವಲ್ಪ ದಪ್ಪವಾಗಿರುವ ಮಾಹಿತಿ ಇದೆ. ಇದರಿಂದ ನಿಮಗೆ ಮುಟ್ಟು ತಡವಾಗಿ ನಿಲ್ಲಬಹುದು. ನೀವು ತಜ್ಞ ವೈದ್ಯರ ಮೇಲ್ವಿಚಾರಣೆಯಲ್ಲಿದ್ದು, ವರ್ಷಕ್ಕೊಮ್ಮೆ ಸ್ಕ್ಯಾನಿಂಗ್ ಮಾಡಿಸಿಕೊಳ್ಳುತ್ತಿರಿ. ಮತ್ತು ಈಗ ನಾರುಗಡ್ಡೆಗೆ ವಿವಿಧ ರೀತಿಯ ವೈದ್ಯಕೀಯ ಚಿಕಿತ್ಸೆಗಳು ಇವೆ. ವೈದ್ಯರ ಸಲಹೆಯ ಮೇರೆಗೆ ಅವುಗಳನ್ನು ಬಳಸಬಹುದು. ಹಾಗಾಗಿ ತಜ್ಞವೈದ್ಯರ ಸಲಹೆ ಇಲ್ಲದೇ ಯಾವ ನಿರ್ಣಯವನ್ನೂ ತೆಗೆದುಕೊಳ್ಳಬೇಡಿ.

• ನನಗೆ 2018 ಮಗು ಆಯಿತು. ಋತುಚಕ್ರದಲ್ಲಿ ಯಾವುದೇ ರೀತಿಯ ಬದಲಾವಣೆ ಇಲ್ಲ. ಆದರೆ ಅಂಡಾಣು ಬಿಡುಗಡೆ ಸಮಯದಲ್ಲಿ 3 - 4 ಗಾತ್ರದ ಅಂಡಾಣುಗಳು ಬಿಡುಗಡೆಯಾಗುತ್ತಿರುವುದರಿಂದ ಮತ್ತೆ ನನಗೆ ಮಕ್ಕಳಾಗಲಿಲ್ಲ ಬಹಳ ಬೇಸರವಾಗಿದೆ. ನಾವು ಮತ್ತೆ ಮಕ್ಕಳನ್ನು ಪಡೆಯುವುದು ಹೇಗೆ ಎಂಬುದನ್ನು ತಿಳಿಸಿ.

ಅನುಶ್ರೀ, ಧಾರವಾಡ

ಅನುಶ್ರೀ ಅವರೇ, ನಿಮ್ಮ ಮಗುವಿಗೆ ಈಗಾಗಲೇ 5 ವರ್ಷ ಆಗಿದೆ. ಪ್ರತಿ ತಿಂಗಳು ಮಾಸಿಕ ಋತುಚಕ್ರದಲ್ಲಿ ಸುಮಾರಾಗಿ 12 ರಿಂದ 14 ದಿನ ಒಂದೇ ಒಂದು ಕೋಶಿಕೆ ದೊಡ್ಡದಾಗಿ (ಪ್ರಭಲಕೋಶಿಕೆ) ಒಂದೇ ಅಂಡಾಣು ಬಿಡುಗಡೆಯಾಗುತ್ತದೆ. ಹಾಗೆ ಬಿಡುಗಡೆಯಾದ ಅಂಡಾಣು 48 ಗಂಟೆಗಳ ಕಾಲ ಜೀವಂತವಾಗಿದ್ದು ಆ ಸಂದರ್ಭದಲ್ಲಿಯೇ ಗಂಡು ಹೆಣ್ಣಿನ ಲೈಂಗಿಕ ಸಂಪರ್ಕವಾದರೆ ಗರ್ಭನಾಳದಲ್ಲಿ ಭ್ರೂಣಹೊರೆದು ನಂತರ ಗರ್ಭಕೋಶದೊಳಗೆ ಪ್ರವೇಶಿಸಿ ಹಂತ ಹಂತವಾಗಿ ಮಗುವಾಗಿ ಬೆಳವಣಿಗೆ ಹೊಂದುತ್ತಾ ನವಮಾಸದಲ್ಲಿ ಶಿಶು ಜನನವಾಗುತ್ತದೆ.

ನೀವು, ಅಂಡಾಣು ಮೂರು-ನಾಲ್ಕು ಬಿಡುಗಡೆಯಾಗುತ್ತದೆ ಎಂದು ತಿಳಿಸಿದ್ದೀರಿ. ಹಾಗಾಗಲು ಸಾಧ್ಯವಿಲ್ಲ. ಬಹುಶಃ ಮೂರು ನಾಲ್ಕು ಕೋಶಿಕೆಗಳು ಬೆಳವಣಿಗೆ ಶುರುವಾಗಿ ಸರಿಯಾಗಿ ಪಕ್ವವಾಗದೇ ಹಾಗೇಯೇ ಉಳಿದುಕೊಂಡು ಬಿಡುತ್ತವೆ ಎಂದು ವೈದ್ಯರು ತಿಳಿಸಿರಬೇಕು. ಹೀಗೆ ಹತ್ತು ಹಲವು ಕೋಶಿಕೆಗಳು ಸರಿಯಾಗಿ ಬೆಳವಣಿಗೆಯಾಗದೇ ಅಂಡಾಶಯದ ತೊಗಟೆಯಲ್ಲಿ ಜೋಡಿಸಲ್ಪಟ್ಟ ಹಾಗೇಯೇ ಕಾಣಿಸಿಕೊಳ್ಳುವುದಕ್ಕೆ ಪಿ.ಸಿ.ಓ (ಪಾಲಿಸಿಸ್ಟಿಕ್ ಓವರಿ) ಎನ್ನುತ್ತೇವೆ. ಹೀಗಾದಾಗ ಮಕ್ಕಳಾಗಲು ಸಾಧ್ಯವಿಲ್ಲ. ಹೀಗಾಗಲು ಹಲವು ಕಾರಣಗಳಿವೆ. ನಿಮಗೆ ಮಗು ಆದ ಮೇಲೆ ನಿಮ್ಮ ದೇಹದ ತೂಕ ಹೆಚ್ಚಾಗಿದ್ದರೆ ಈ ತರಹದ ತೊಂದರೆ ಉಂಟಾಗಬಹುದು. ಈ ಬಗ್ಗೆ ನೀವು ಪ್ರಶ್ನೆಯಲ್ಲಿ ತಿಳಿಸಿಲ್ಲ.

ಇರಲಿ ನಿಮ್ಮ ತೂಕ ಹೆಚ್ಚಾಗಿದ್ದಲ್ಲಿ ಆಹಾರ ನಿಯಂತ್ರಣದ ಜೊತೆಗೆ, ಹೆಚ್ಚು ಹೆಚ್ಚು ಸೊಪ್ಪು, ತರಕಾರಿಗಳನ್ನು ತಿನ್ನಿ. ನಿತ್ಯ ಕನಿಷ್ಠ 1 ಗಂಟೆ ನಿಯಮಿತವಾಗಿ ಯಾವುದೇ ವ್ಯಾಯಾಮ ಮಾಡಿ. ರಾತ್ರಿ ಕನಿಷ್ಠ ಆರೇಳು ತಾಸು ನಿದ್ರೆ ಮಾಡಿ. ಇವೆಲ್ಲದರಿಂದ ತೂಕ ನಿಯಂತ್ರಣಕ್ಕೆ ಬರುತ್ತದೆ. ನಿಮ್ಮ ತೂಕವನ್ನು ನೀವು ಶೇಕಡ 5 ರಿಂದ 10ರಷ್ಟು ಕಡಿಮೆ ಮಾಡಿಕೊಂಡಲ್ಲಿ ಅಂಡೋತ್ಪತ್ತಿ ಚೆನ್ನಾಗಿ ಆಗುತ್ತದೆ. ನಿಮಗೆ ಇನ್ನೊಂದು ಮಗು ಬೇಗನೆ ಆಗುತ್ತದೆ. ಆರೋಗ್ಯವಂತ ಮಗುವಿಗಾಗಿ ಫೋಲಿಕ್ ಆಸಿಡ್ 5 ಮಿ.ಗ್ರಾಂ. ಮಾತ್ರೆಗಳನ್ನ ನಿಯಮಿತವಾಗಿ ತೆಗೆದುಕೊಳ್ಳುತ್ತಿರಿ. ನಿಮ್ಮ ತಜ್ಞ ವೈದ್ಯರ ಸಲಹೆಯಮೇರೆಗೆ ಅಂಡೋತ್ಪತ್ತಿಯಾಗಲು ಚಿಕಿತ್ಸೆ ತೆಗೆದುಕೊಂಡರೆ ನಿಮಗೆ ಆದಷ್ಟು ಬೇಗ ಮಗು ಆಗುತ್ತದೆ. ಭರವಸೆಯಿಂದಿರಿ.

ಸ್ಪಂದನ...

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

THE BIGGEST DISCOUNT SALE
ON ELECTRONICS & HOME APPLIANCES
GIRIAS
ಗಿರಿಯಾಸ್
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
LOWEST PRICES OF THE YEAR
Upto 75% OFF
BIGGEST OFFERS
BIGGEST DISCOUNTS
3 ದಿನಗಳು ಮಾತ್ರ!
26-28 August, 2023
ಮಹೋನ್ನತ ಪ್ರಾರಂಭೋತ್ಸವ
136ನೇ ಮೆಗಾ ಸ್ಟೋರ್
ಉತ್ತರಹಳ್ಳಿ ಯಲ್ಲಿ
30, ವಡರಪಾಳ್ಯ ಲೇಔಟ್, ಬಿಎಸ್‌ಕೆ 5ನೇ ಹಂತ,
ಪಟಾಲಮ್ಮ ದೇವಸ್ಥಾನ ಎದುರು, ಉತ್ತರಹಳ್ಳಿ ರಸ್ತೆ,
ಬೆಂಗಳೂರು – 560062, ದೂ: 9036289563
ಇಂದು ಬೆಳಗ್ಗೆ 10.40 ಗಂಟೆಗೆ ಮಹೋನ್ನತ ಪ್ರಾರಂಭೋತ್ಸವ
ಯಾವುದೇ ಮೊಬೈಲ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 75% ರಿಯಾಯಿತಿ*
*₹19,990 ಮೌಲ್ಯದ LG TONE FREEನ ಖರೀದಿಯ ಮೇಲೆ
ಯಾವುದೇ ಲ್ಯಾಪ್‌ಟಾಪ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 63% ರಿಯಾಯಿತಿ*
*₹4,499 ಮೌಲ್ಯದ amazon echo ನ ಖರೀದಿಯ ಮೇಲೆ
EXCHANGE BONANZA
UPTO ₹25,000
ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್ಸ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು.
ಎಕ್ಸ್‌ಚೇಂಜ್ ಮೇಲೆ*
EXCLUSIVE ONLY @ GIRIAS
LG
NANOCELL TV NANO77 43 4K SMART TV
EMI: ₹2999
NANOCELL TV NANO77 55 4K SMART TV
EMI: ₹3999
ಯಾವುದೇ ಎಲ್.ಇ.ಡಿ ಟಿವಿ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 67% ರಿಯಾಯಿತಿ*
*₹14,990 ಮೌಲ್ಯದ LG SOUNDBARನ ಖರೀದಿಯ ಮೇಲೆ
ಯಾವುದೇ ಏರ್ ಕಂಡಿಷನರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 62% ರಿಯಾಯಿತಿ*
*₹19,990 ಮೌಲ್ಯದ 32 HD READY LEDನ ಖರೀದಿಯ ಮೇಲೆ
ಯಾವುದೇ ಹೋಮ್ ಥಿಯೇಟರ್/ ಸೌಂಡ್ ಬಾರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 75% ರಿಯಾಯಿತಿ*
*₹11,500 ಮೌಲ್ಯದ ZEBRONICS SMART WATCHನ ಖರೀದಿಯ ಮೇಲೆ
CASHBACK BONANZA
UPTO 20%*
AXIS BANK
ICICI Bank Credit Cards
SBI card
Bank of Baroda Credit Card
Standard Chartered
HDFC BANK
ಯಾವುದೇ ರೆಫ್ರಿಜರೇಟರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 63% ರಿಯಾಯಿತಿ*
*₹25,990 ಮೌಲ್ಯದ KAFF CHIMNEYನ ಖರೀದಿಯ ಮೇಲೆ
ಯಾವುದೇ ವಾಷಿಂಗ್ ಮೆಷಿನ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 52% ರಿಯಾಯಿತಿ*
*₹945 ಮೌಲ್ಯದ KENSTAR DRY IRONನ ಖರೀದಿಯ ಮೇಲೆ
ಯಾವುದೇ ಕಿಚನ್ ಅಪ್ಲೈಯನ್ಸಸ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 70% ರಿಯಾಯಿತಿ*
*₹3,990 ಮೌಲ್ಯದ ZEBRONICS SMART WATCHನ ಖರೀದಿಯ ಮೇಲೆ
ಯಾವುದೇ ಮೈಕ್ರೋವೇವ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 44% ರಿಯಾಯಿತಿ*
*₹1,770 ಮೌಲ್ಯದ V-GUARD ROOM HEATERನ ಖರೀದಿಯ ಮೇಲೆ
FINANCE BONANZA
1 ಇ.ಎಮ್.ಐ ಉಚಿತ*
ಯಾವುದೇ ಡ್ರೈಯರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 74% ರಿಯಾಯಿತಿ*
*₹3,990 ಮೌಲ್ಯದ NIRLEP 4 PCS COOKWARE SETನ ಖರೀದಿಯ ಮೇಲೆ
ಯಾವುದೇ ಡಿಶ್ವಾಶರ್ ಖರೀದಿಸಿ ಮತ್ತು ಪಡೆಯಿರಿ
ಫ್ಲಾಟ್ 43% ರಿಯಾಯಿತಿ*
*₹999 ಮೌಲ್ಯದ BUTTERFLY NON STICK COOKWAREನ ಖರೀದಿಯ ಮೇಲೆ
LG SAMSUNG SONY Panasonic Haier NVY PRIDE OF INDIA IFB Godrej LLOYD Whirlpool BOSCH PHILIPS hp acer DELL Lenovo
ASUS vivo oppo ONEPLUS mi iPhone JBL BLUE STAR HÄFELE Symphony HAVELLS USHA DAIKIN GENERAL Prestige VOLTAS VOLTAS beko
Butterfly Preethi VIJAYALAKSHMI ULTRA EUREKA FORBES pureit Livpure RO KA EXPERT FABER KENSTAR Pigeon BAJAJ Crompton MAHARAJA WHITELINE V-GUARD ZEBRONICS KAFF
STORE LOCATOR
GIRIAS
THE CONSUMER DURABLE PEOPLE
Since 1971
ಉತ್ತರಹಳ್ಳಿ 9036289563
ಹೊಸಕೋಟೆ 90362 89545
ಕುಣಿಗಲ್ 90362 89546
ಮಾದನಾಯಕನಹಳ್ಳಿ 90362 89550
ಗೌರಿಬಿದನೂರು 90354 99244
ಮಾಗಡಿರಸ್ತೆ 90362 89557
ಹೆಸರಘಟ್ಟ ಮುಖ್ಯ ರಸ್ತೆ 90362 89551
ಕೆಆರ್ ಪುರಂ 9019929881
ಅಂದ್ರಹಳ್ಳಿ 95918 35070
ಚಿಕ್ಕಜಾಲ 95918 32080
ಅತ್ತಿಬೆಲೆ 99009 77747
ಹೆಬ್ಬಗೋಡಿ 90350 50023.
ಭಾರ್ತಿಯಾ ಮಾಲ್ 70900 00981
ಮಂತ್ರಿ ಮಾಲ್ 95919 25353
ಕೆಂಗೇರಿ 99009 77712
ಸಹಕಾರನಗರ 90199 29882
ದೊಡ್ಡಬಳ್ಳಾಪುರ 77602 12888
ಎಲೆಕ್ಟ್ರಾನಿಕ್‌ಸಿಟಿ 9591103536
ಕನಕಪುರ ಮುಖ್ಯ ರಸ್ತೆ 90082 20739
ಜಾಲಹಳ್ಳಿ ಕ್ರಾಸ್ 9008220804
ಆರ್.ಟಿ.ನಗರ 91080 65665
ಬನಶಂಕರಿ 9035499199
ಬನ್ನೇರುಘಟ್ಟ ರೋಡ್ 9035422500
ಬಸವನಗುಡಿ 90354 99244
ಗಾಂಧಿನಗರ 9035499311
ಹೊಸೂರು ರಸ್ತೆ 9035499022
ಹೆಚ್‌ಎಸ್‌ಆರ್ ಬಡಾವಣೆ 90354 99177
ಇಂದಿರಾನಗರ 9035499255
ಜಯನಗರ 90354 99077
ಜೆ.ಪಿ.ನಗರ 9606922698
ಕತ್ರಿಗುಪ್ಪೆ 9035499288
ಕೋರಮಂಗಲ 90354 11200
ಮಲ್ಲೇಶ್ವರಂ 41411663
ಮತ್ತಿಕೆರೆ 90352 22377
ಮಾರತ್‌ಹಳ್ಳಿ 90354 99011
ಮೈಸೂರು ರಸ್ತೆ 90354 99188
ನಾಗರಭಾವಿ 90354 99191
ನೆಲಮಂಗಲ 9606922798
ರಾಜಾಜಿನಗರ 9035499144
ಸದಾಶಿವನಗರ 9035499088
ವಿಜಯನಗರ 96069 22795
ಯಲಹಂಕ 9036001315
ರಾಮನಗರ 9606922697
ತುಮಕೂರು 90082 18009
ಹೊಸೂರು 04344 243633
ಕೋಲಾರ 90082 20791
ಚಿಕ್ಕಬಳ್ಳಾಪುರ 9591561669
*Terms & conditions apply. Price Difference invoice (Sony, Samsung,LG) from any authorised Dealer and not applicable on online Purchase. Finance at the sole discretion of the Finance company. Upto 20% Cashback & 1 EMI off on selected brands and models. EMI offer on above products based on 12,18,24 & fixed emi schemes. Exchange offer valid on MRP and Product has to be in good working condition. * GST Extra.
136 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook
HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA
www.roundtableindia.org www.ladiescircleindia.org

ಅವಘಡ ಸಂಭವಿಸಿದಾಗ ಎಚ್ಚರವಾಗುವ ಜನಪ್ರತಿನಿಧಿಗಳು, ಬೆಸ್ಕಾಂ, ಬಿಬಿಎಂಪಿ ಅಧಿಕಾರಿಗಳು

ಕೇಬಲ್ ಕಾಟ: ಜೀವಕ್ಕೆ ಕಂಟಕ!

• ಬಾಲಕೃಷ್ಣ ಪಿ.ಎಚ್.

ರಾಜಾಜಿನಗರದ ವೀರ ಸಾವರ್ಕರ್ ರಸ್ತೆ ಬದಿಯ ವಿದ್ಯುತ್ ಕಂಬದಲ್ಲಿ ಜೋತು ಬಿದ್ದಿರುವ ಕೇಬಲ್‌ಗಳು (ಎಡಚಿತ್ರ) ನಗರದ ಕಬ್ಬನ್ ಪೇಟೆಯಲ್ಲಿ ವಿದ್ಯುತ್‌ಕಂಬಗಳಲ್ಲಿ ಹಾಕಿರುವ ತಂತಿಗಳ ಅವ್ಯವಸ್ಥೆ –ಪ್ರಜಾವಾಣಿ ಚಿತ್ರಗಳು

ಬೆಂಗಳೂರು: ಜೋತು ಬಿದ್ದಿರುವ ವಿವಿಧ ನೆಟ್‌ವರ್ಕ್‌ಗಳ ಕೇಬಲ್‌ಗಳು, ಅವುಗಳಿಂದಾಗಿ ಮುರಿದು ಬೀಳುವ ವಿದ್ಯುತ್ ಕಂಬಗಳು, ತುಂಡಾಗುವ ತಂತಿಗಳು ನಗರದಲ್ಲಿ ನಡೆದಾಡುವುದೇ ಅಪಾಯ ಎನ್ನುವ ಸನ್ನಿವೇಶ ಸೃಷ್ಟಿಸಿವೆ.

ದುರ್ಘಟನೆ ನಡೆದಾಗೊಮ್ಮೆ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಎಚ್ಚೆತ್ತುಕೊಳ್ಳುತ್ತಾರಷ್ಟೆ. ಅದು ಜನರ ಮನಸ್ಸಿನಿಂದ ಮಾಸುತ್ತಿದ್ದಂತೆ ಮತ್ತದೇ ಅಸಡ್ಡೆ. ಇದರಿಂದ, ಅವಘಡಗಳು ಮರುಕಳಿಸುವುದು ನಿಂತಿಲ್ಲ.

ನಗರದ ಎಲ್ಲ ಬಡಾವಣೆ, ರಸ್ತೆ ಬದಿಗಳಲ್ಲಿ ವಿದ್ಯುತ್ ಕಂಬಗಳಿಗೆ, ರಸ್ತೆ ಬದಿ ಮರಗಳಿಗೆ ವಿವಿಧ ನೆಟ್‌ವರ್ಕ್ ಕೇಬಲ್‌ಗಳು ಜೋತು ಬಿದ್ದಿವೆ. ಯಾವ ಹೊತ್ತಿನಲ್ಲಿ ಯಾವ ವಾಹನಕ್ಕೆ ಸಿಲುಕಿ ವಿದ್ಯುತ್ ಕಂಬಗಳು ಮುರಿದು ಬೀಳುತ್ತವೆ ಎಂದು ಹೇಳಲಾರದ ಪರಿಸ್ಥಿತಿ ಇದೆ.

ಎಸ್.ಜಿ. ಪಾಳ್ಯದಲ್ಲಿ ಚಲಿಸುತ್ತಿದ್ದ ಲಾರಿಗೆ ಇಂಥದ್ದೇ ಕೇಬಲ್ ಸಿಲುಕಿದ್ದರಿಂದ ವಿದ್ಯುತ್ ತಂತಿ ತುಂಡಾಗಿ ಬಿದ್ದು ವಿದ್ಯಾರ್ಥಿನಿ ಗಾಯಗೊಂಡಿದ್ದರು. ಹಿಂದೆಯೂ ಈ ರೀತಿಯ ಘಟನೆಗಳಿಗೆ ಕಾರಣವಾದ ಕೇಬಲ್‌ಗಳನ್ನು ತೆರವುಗೊಳಿಸಲು ದಿಟ್ಟ ಕ್ರಮವನ್ನು ಬೆಸ್ಕಾಂ, ಬಿಬಿಎಂಪಿ ಕ್ರಮ-ಕೈಗೊಂಡಿಲ್ಲ.

‘ಬೆಸ್ಕಾಂ ಸಿಬ್ಬಂದಿ ಹಗಲು ಹೊತ್ತಿನಲ್ಲಿ ಈ ಕೇಬಲ್‌ಗಳನ್ನು ಕತ್ತ-ರಿಸುತ್ತಾರೆ. ಕೇಬಲ್ ಆಪರೇಟರ್‌ಗಳು ರಾತ್ರಿ ಬಂದು ಮತ್ತೆ ಅಳವಡಿಸಿ ಹೋಗುತ್ತಾರೆ. ಸಾಧ್ಯವಾದಷ್ಟು ತೆರವು ಮಾಡುತ್ತಿದ್ದೇವೆ’ ಎನ್ನುತ್ತಾರೆ ಬೆಸ್ಕಾಂ ಅಧಿಕಾರಿಯೊಬ್ಬರು.

‘ಕೇಬಲ್ ಹಾಕಲು ಬಿಬಿಎಂಪಿಯಿಂದ ಸಂಸ್ಥೆಗಳು ಅನುಮತಿ ಪಡೆದಿರುತ್ತವೆ. ಆದರೆ, ಬೆಸ್ಕಾಂನ ವಿದ್ಯುತ್ ಕಂಬಗಳನ್ನು ಬಳಲು ಅನುಮತಿ ಇರುವುದಿಲ್ಲ. ಬಿಬಿಎಂಪಿ ಅನುಮತಿಯನ್ನೇ ಮುಂದಿಟ್ಟುಕೊಂಡು ಖಾಸಗಿ ಸಂಸ್ಥೆಗಳು ಕೇಬಲ್ ಅಳವ-ಡಿಸುತ್ತವೆ. ಓವರ್‌ಹೆಡ್ ಕೇಬಲ್‌ಗಳ ಪ್ರಕರಣಗಳನ್ನು ಸಂಬಂಧಪಟ್ಟ ವಾರ್ಡ್ ಎಂಜಿನಿಯರ್‌ಗಳಿಗೆ ರವಾನಿಸುತ್ತೇವೆ. ಕೇಬಲ್‌ಗಳನ್ನು ತೆಗೆದ ನಂತರ ವರದಿಯನ್ನು ಅವರು ನೀಡಬೇಕು. ಈ ಬಗ್ಗೆ ವಿಚಾರಿಸಿ ವರದಿ ತರಿಸಿಕೊಳ್ಳಲಾಗುವುದು’ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

ಕಟ್ಟುನಿಟ್ಟಿನ ಮೇಲ್ವಿಚಾರಣೆ ಮತ್ತು ಕಠಿಣ ಕ್ರಮ ವಹಿಸಿದರೆ ಮಾತ್ರ ಇದನ್ನು ನಿಯಂತ್ರಿಸಲು ಸಾಧ್ಯ. ಜನಜೀವನಕ್ಕೆ ತೊಂದರೆಯಾಗುವಂತೆ ಕೇಬಲ್ ಅಳವಡಿಸಿದವರಿಗೆ ಶಿಕ್ಷೆಯಾದಾಗ ಮಾತ್ರ ಸಿಕ್ಕಸಿಕ್ಕಲ್ಲಿ ಕೇಬಲ್ ಅಳವಡಿಸುವುದು ಕಡಿಮೆಯಾಗಲಿದೆ. ಅದನ್ನು ಬರೀ ಪರಿಶೀಲನೆ, ನೋಟಿಸ್ ಜಾರಿಯಿಂದ ನಿಯಂತ್ರಣ ಕಷ್ಟ ಎಂದು ಮತ್ತೊಬ್ಬ ಅಧಿಕಾರಿ ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದಲ್ಲಿ ಒಎಫ್‌ಸಿ ಸಹಿತ ವಿವಿಧ ಕೇಬಲ್‌ಗಳನ್ನು ಒಟ್ಟು ಎಷ್ಟು ಕಿಲೋಮೀಟರ್ ಅಳವಡಿಸಲಾಗಿದೆ ಎಂಬ ಮಾಹಿತಿ ಬಿಬಿಎಂಪಿಯಲ್ಲಿ ಇಲ್ಲ. ವಿವಿಧ ಕಂಪನಿಗಳಿಂದ ಈ ಬಗ್ಗೆ ಬಿಬಿಎಂಪಿ ಮಾಹಿತಿ ಕೇಳಿದರೆ, ಯಾವುದೇ ಕಂಪನಿಗಳು ಅದಕ್ಕೆ ಪ್ರತಿ-ಕ್ರಿಯಿಸಿಲ್ಲ ಎನ್ನುವ ಉತ್ತರ ಬಿಬಿಎಂಪಿ ಹಿರಿಯ ಅಧಿಕಾರಿಗಳದು.

‘ಬೇಜವಾಬ್ದಾರಿತನವೇ ಕಾರಣ’

ಬೆಸ್ಕಾಂ ಬೇಜವಾಬ್ದಾರಿಯಿಂದಲೇ ದುರ್ಘಟನೆಗಳು ಪದೇ ಪದೇ ಸಂಭವಿಸುತ್ತಿವೆ. ಮರದ ಕೊಂಬೆಗಳು ಒಣಗಿದ್ದರೆ ಅದನ್ನು ನೋಡಿಕೊಂಡು ಹೋಗುತ್ತಾರೆ. ಕಂಬಗಳು ಎಷ್ಟೇ ಹಳೆಯದಾದರೂ ತೆರವುಗೊ-ಳಿಸುತ್ತಿಲ್ಲ. ಕೇಬಲ್‌ಗಳನ್ನು ವಿದ್ಯುತ್ ಕಂಬಗಳಿಗೆ ಅಳವಡಿಸಿರುವ ಬಗ್ಗೆ ದೂರು ನೀಡಿದಾಗ ಇಲ್ಲವೇ ಅವಘಡಗಳು ಉಂಟಾದಗೊಮ್ಮೆ ಸಿಬ್ಬಂದಿ ಬಂದು ಕೇಬಲ್‌ಗಳನ್ನು ಕತ್ತರಿಸಿ ಹೋಗುತ್ತಾರೆ. ಆದರೆ, ಆ ಕೇಬಲ್‌ಗಳನ್ನು ತೆರವುಗೊಳಿಸುವುದಿಲ್ಲ. ಅವು ನೇತಾಡುತ್ತಿರುತ್ತವೆ. ಇನ್ನಾದರೂ ಸರ್ಕಾರ ಮತ್ತು ಬೆಸ್ಕಾಂ ಸೂಕ್ತ ಕ್ರಮ ಕೈಗೊಳ್ಳಬೇಕು.

ಬಿ. ರಾಮೇಗೌಡ, ಅಧ್ಯಕ್ಷ, ಬೆಂಗಳೂರು ಸಾರಥಿ ಸೇನೆ

‘ಮುನ್ನೆಚ್ಚರಿಕೆ ಕ್ರಮಕೈಗೊಳ್ಳಲಿ’



ಘಟನೆ ನಡೆದ ಮೇಲೆ ಫೈಬರ್ ಕೇಬಲ್ ಆಪರೇಟರ್‌ಗಳನ್ನು ದೂರುವ ಬದಲು ಬೆಸ್ಕಾಂ ಆಗಲಿ, ಬಿಬಿಎಂಪಿ ಆಗಲಿ ಮೊದಲೇ ಯಾಕೆ ಕ್ರಮ ಕೈಗೊಳ್ಳುತ್ತಿಲ್ಲ. ವಾರದಲ್ಲಿ ಎರಡು ಕಡೆ ಅವಘಡಗಳು ನಡೆದಿವೆ. ನಗರದ ಎಲ್ಲ ಕಡೆ ಅಪಾಯ ಆಹ್ವಾನಿಸುವ ರೀತಿಯಲ್ಲಿ ಕೇಬಲ್‌ಗಳು ನೇತಾಡುತ್ತಿವೆ. ಆಪ್ಟಿಕಲ್ ಫೈಬರ್ ಕೇಬಲ್‌ಗಳು, ನೆಟ್‌ವರ್ಕ್ ಕೇಬಲ್‌ಗಳನ್ನು ಅಪಾಯಕಾರಿ ರೀತಿ ಅಳವಡಿಸುವುದು ಸರಿಯಲ್ಲ. ಮೊದಲು ಕೇಬಲ್‌ಗಳನ್ನು ವಿದ್ಯುತ್ ಕಂಬಗಳಿಂದ ತೆರವುಗೊಳಿಸಿ.

ವಿ. ಜ್ಞಾನಮೂರ್ತಿ, ಕಾರ್ಯದರ್ಶಿ, ಕರ್ನಾಟಕ ವಿದ್ಯುತ್ ಬಳಕೆದಾರರ ಸಂಘ

8 ತಿಂಗಳಲ್ಲಿ ಬೆಸ್ಕಾಂ ತೆರವುಗೊಳಿಸಿದ ಕೇಬಲ್

87 ಕಿ.ಮೀ ವಿವಿಧ ಡಾಟಾ ಕೇಬಲ್

74 ಕಿ.ಮೀ ಡಿಶ್ ಕೇಬಲ್

146 ಕಿ.ಮೀ ಒಎಫ್‌ಸಿ

ತಡವಾಗಿ ಎಚ್ಚೆತ್ತ ಸರ್ಕಾರ

ದುರ್ಘಟನೆಗಳು ನಡೆದ ಮೇಲೆ ಸರ್ಕಾರ ಎಚ್ಚೆತ್ತುಕೊಂಡಿದೆ. ಇಂಧನ ಸಚಿವ ಕೆ.ಜೆ. ಜಾರ್ಜ್ ಅವರು ಈ ಬಗ್ಗೆ ಅಧಿಕಾರಿಗಳ ಸಭೆ ನಡೆಸಿ, ಅಧಿಕಾರಿಗಳಿಗೆ ಕೆಲವು ಸೂಚನೆಗಳನ್ನು ನೀಡಿದ್ದಾರೆ.

ವಿದ್ಯುತ್ ಕಂಬಗಳಿಗೆ ಅನಧಿಕೃತವಾಗಿ ಅಳವಡಿಸಿರುವ ಎಲ್ಲ ಕೇಬಲ್‌ಗಳನ್ನು ತೆರವು-ಗೊಳಿಸಬೇಕು, ವಿದ್ಯುತ್ ಕಂಬ, ತಂತಿ ಎಲ್ಲಿ ಅಪಾಯಕ್ಕೆ ಕಾರ-ಣವಾಗಬಹುದು ಎಂಬುದನ್ನು ಪರಿಶೀಲಿಸಿ ವರದಿ ನೀಡಬೇಕು. ಅವುಗಳನ್ನು ಬದಲಿಸಬೇಕು ಎಂದು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಸಹಿತ ವಿವಿಧ ಅಧಿಕಾರಿಗಳಿಗೆ ಸಚಿವರು ಸೂಚನೆ ನೀಡಿದ್ದಾರೆ.

ಕೇಬಲ್ ತೆರವಿಗೆ ನೋಟಿಸ್

‘ವಿದ್ಯುತ್ ಕಂಬಗಳಿಗೆ ಅನಧಿಕೃತವಾಗಿ ಒಎಫ್‌ಸಿ, ನೆಟ್‌ವರ್ಕ್ ಕೇಬಲ್‌ಗಳನ್ನು ಅಳವಡಿಸಿದವರು ಕೂಡಲೇ ತೆರವುಗೊಳಿಸಬೇಕು ಎಂದು ನೋಟಿಸ್ ನೀಡಿದ್ದೇವೆ. ವಾರದ ಒಳಗೆ ತೆರವುಗೊಳಿಸದೇ ಇದ್ದರೆ ನಾವೇ ತೆರ-ವುಗೊಳಿಸುತ್ತೇವೆ. ಅಪಾಯಕಾರಿ ಸ್ಥಿತಿಯಲ್ಲಿರುವ ವಿದ್ಯುತ್ ಕಂಬಗಳು, ತಂತಿಗಳನ್ನು ಬದಲಾಯಿಸುವ ಕೆಲಸವನ್ನು ಈಗಾಗಲೇ ಮಾಡುತ್ತಿದ್ದೇವೆ. ಇದು ಮುಂದುವರಿಯಲಿದೆ’ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ದಾಖಲೆ ಸಲ್ಲಿಕೆ: ಎಕ್ಸ್ ಕಾರ್ಪ್‌ಗೆ ಕೊನೆಯ ಅವಕಾಶ

ಬೆಂಗಳೂರು: ಕೆಲವು ವೈಯಕ್ತಿಕ ಖಾತೆಗಳನ್ನು ನಿರ್ಬಂಧಿಸುವಂತೆ ಕೇಂದ್ರ ಮಾಹಿತಿ ತಂತ್ರಜ್ಞಾನ ಇಲಾಖೆ ಹೊರಡಿಸಿದ್ದ ಆದೇಶವನ್ನು ಜಾರಿ ಮಾಡುವ ನಿಟ್ಟಿನಲ್ಲಿ ಕೈಗೊಳ್ಳಲಾದ ದಾಖಲೆಗಳನ್ನು ಸಲ್ಲಿಸಲು ಅರ್ಜಿದಾರ ‘ಎಕ್ಸ್ ಕಾರ್ಪ್’ ಸಂಸ್ಥೆಗೆ (ಟ್ವಿಟ್ಟರ್) ಹೈಕೋರ್ಟ್ ಕೊನೆಯ ಅವಕಾಶ ನೀಡಿದೆ.

ಕೆಲವು ವೈಯಕ್ತಿಕ ಖಾತೆಗಳನ್ನು ನಿರ್ಬಂಧಿಸಿ ಕೇಂದ್ರ ಸರ್ಕಾರ ಹೊರಡಿಸಿದ್ದ ಆದೇಶಗಳನ್ನು ಪ್ರಶ್ನಿಸಿ ಟ್ವಿಟರ್ ಸಲ್ಲಿಸಿದ್ದ ರಿಟ್ ಅರ್ಜಿ ವಜಾಗೊಳಿಸಿದ್ದ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಲಾದ ಮೇಲ್ಮನವಿ-ಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

‘ಇದು ಕೊನೆಯ ಮತ್ತು ಅಂತಿಮ ಅವಕಾಶ’ ಎಂದು ಅರ್ಜಿದಾರರನ್ನು ಎಚ್ಚರಿಸಿದ ನ್ಯಾಯಪೀಠ, ₹ 50 ಲಕ್ಷ ಮೊತ್ತದ ದಂಡ ಪಾವತಿಗೆ ಈ ಹಿಂದೆ ನೀಡಿದ್ದ ತಡೆ ಆದೇಶವನ್ನು ವಿಸ್ತರಿಸಿ ವಿಚಾರಣೆಯನ್ನು ಸೆ.15ಕ್ಕೆ ಮುಂದೂಡಿತು.

ಮಹಾ ಕುಬೇರ ಯಾಗ ಸೆ.11ರಿಂದ

ಬೆಂಗಳೂರು: ಲೋಕ ಕಲ್ಯಾಣಾರ್ಥವಾಗಿ ಅಖಿಲ ಭಾರತ ಮಹಾ ಕುಬೇರ ಸಂಪೂರ್ಣ ಯಾಗವನ್ನು ಶಿವಶ್ರೀ ಮೀಡಿಯಾ ಪ್ರೈ.ಲಿ. ಅಖಿಲ ಭಾರತ ಮಹಾ ಕುಬೇರ ಸಂಪೂರ್ಣ ಯಾಗ ಸಮಿತಿ ಮತ್ತು ತಸ್ಮೈ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ಬೆಂಗಳೂರು ಅರಮನೆ ಮೈದಾನದ ತ್ರಿಪುರ ವಾಸಿನಿ ಅಂಗಳದಲ್ಲಿ ಸೆ.11ರಿಂದ 21ರವರೆಗೆ ನಡೆಯಲಿದೆ.

‘ವಿಶ್ವದ ಆರ್ಥಿಕ ಅಭಿವೃದ್ಧಿ, ಸಾರ್ವಜನಿಕರ ಆರೋಗ್ಯ ಸಮೃದ್ಧಿ, ದೇಶದ ಅರ್ಥವ್ಯವಸ್ಥೆಯ ಏಳಿಗೆಗಾಗಿ ಈ ಕುಬೇರ ಯಾಗ ಹಮ್ಮಿಕೊಳ್ಳಲಾಗಿದೆ’ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾರ್ಗದರ್ಶಕ ಆನಂದ ಗುರೂಜಿ ತಿಳಿಸಿದರು.

ಮಹಾಕುಂಡ ಸಮೇತ 108 ಹೋಮ ಕುಂಡಗಳು, 501 ಆಗಮಿಕರು ಮತ್ತು 501 ಕೇರಳ ತಂತ್ರಿಗಳ ಸಾರಥ್ಯದಲ್ಲಿ ಋಗ್ವೇದ, ಯಜುರ್ವೇದ, ಸಾಮವೇದಗಳ ಮಂತ್ರ ಘೋಷಗಳೊಂದಿಗೆ 11 ದಿನ ನಡೆಯಲಿದೆ. ಯಾಗದಲ್ಲಿ ಮಠಾಧೀಶರು, ಧಾರ್ಮಿಕ ಮುಖಂಡರು, ಹಿಮಾಲಯದ 250 ನಾಗಸಾಧುಗಳು ಭಾಗವಹಿಸಲಿದ್ದಾರೆ. ನಿತ್ಯ 50 ಸಾವಿರ ಭಕ್ತರಿಗೆ ಅನ್ನದಾಸೋಹ ನಡೆಯಲಿದೆ’ ಎಂದು ತಿಳಿಸಿದರು.

‘ಪ್ಲಾಟಿನಂ ಸೇವೆ, ಗೋಲ್ಡನ್, ಡೈಮಂಡ್, ಸಿಲ್ವರ್, ಬ್ರಾಂಜ್, ರಾಶಿ ಸಂಕಲ್ಪ ಸೇವೆ ಮಾಡಲು ಭಕ್ತರಿಗೆ ಅವಕಾಶ ಕಲ್ಪಿಸಲಾಗಿದೆ. ವಿವಿಧ ರಾಜ್ಯಗಳಿಂದ ದಾರ್ಶನಿಕರು, ಸ್ವಾಮೀಜಿಗಳು, ಧಾರ್ಮಿಕ ಮುಖಂಡರು, ರಾಜಕೀಯ ಮುಖಂಡರು, ಉದ್ಯಮಿಗಳು ಯಾಗದಲ್ಲಿ ಭಾಗವಹಿಸಬಹುದು’ ಎಂದು ಹೇಳಿದರು. ಭಕ್ತರು ಈಗಾಗಲೇ ಹೆಸರು ನೋಂದಾಯಿಸಿಕೊಳ್ಳುತ್ತಿದ್ದಾರೆ. ಮಾಹಿತಿಗೆ: 94803 90450, 89515 46098 ಸಂಪರ್ಕಿಸಬಹುದು.

ನವಿಲುತೀರ್ಥ ಜಲಾಶಯದ ಹಿನ್ನೀರಿನಲ್ಲಿ ಪ್ರಿಯದರ್ಶಿನಿ ಪಾಟೀಲ ಶವ ಪತ್ತೆ ಪ್ರಕರಣ

‘ಆಸ್ಟ್ರೇಲಿಯಾ ಸರ್ಕಾರದ ನಡೆಯಿಂದ ಪುತ್ರಿ ಹತಾಶೆ’

ಧಾರವಾಡ: ಬೆಳಗಾವಿ ಜಿಲ್ಲೆಯ ಸವದತ್ತಿ ಸಮೀಪ ನವಿಲುತೀರ್ಥ ಜಲಾಶಯದ ಹಿನ್ನೀರಿನಲ್ಲಿ ಶವವಾಗಿ ಪತ್ತೆಯಾಗಿದ್ದ ಅನಿವಾಸಿ ಭಾರತೀಯ (ಧಾರವಾಡ ಮೂಲ) ಮಹಿಳೆ ಪ್ರಿಯದರ್ಶಿನಿ ಪಾಟೀಲ (44) ಸಾಯುವ ಮುನ್ನ ಹುಬ್ಬಳ್ಳಿಯಿಂದ ‘ಡೆತ್‌ನೋಟ್’ ಮತ್ತು ಬ್ಯಾಗನ್ನು ಕುಟುಂಬದವರಿಗೆ ಪಾರ್ಸಲ್ ಕಳಿಸಿದ್ದಾರೆ.

ಪ್ರಿಯದರ್ಶಿನಿ ಪಾಟೀಲ

‘ಪ್ರಿಯದರ್ಶಿನಿ ಹುಬ್ಬಳ್ಳಿ ಕೆಎಸ್‌ಆರ್‌ಟಿಸಿ ನಿಲ್ದಾಣದಿಂದ ಪಾರ್ಸಲ್ ಕಳುಹಿಸಿದ್ದ ಬ್ಯಾಗ್‌ನಲ್ಲಿ ಡೆತ್ ನೋಟ್ ಇತ್ತು. ಸಾವಿಗೆ ಆಸ್ಟ್ರೇಲಿಯಾ ಸರ್ಕಾರ ಕಾರಣ ಎಂದು ಬರೆದಿದ್ದಾಳೆ. ಬ್ಯಾಗ್‌ನಲ್ಲಿದ್ದ ಪತ್ರ, ಟಿಕೆಟ್‌ಗಳನ್ನು ಪೊಲೀಸರಿಗೆ ಒಪ್ಪಿಸಿದ್ದೇವೆ’ ಎಂದು ಪ್ರಿಯದರ್ಶಿನಿ ತಂದೆ ಎಸ್.ಎಸ್.ದೇಸಾಯಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಪ್ರಿಯದರ್ಶಿನಿಗೆ ಇಬ್ಬರು ಮಕ್ಕಳು, ಪುತ್ರ ಅಮರ್ತ್ಯ 11ನೇ ತರಗತಿ ಹಾಗೂ ಪುತ್ರಿ ಅಪರಾಜಿತಾ 7ನೇ ತರಗತಿ. ಇಬ್ಬರನ್ನೂ ಧಾರವಾಡದಲ್ಲಿ ಶಾಲೆಗೆ ಸೇರಿಸಲು ಪ್ರಯತ್ನ ನಡೆದಿತ್ತು. ಆಗಸ್ಟ್ 31ರೊಳಗೆ ಸೇರಿಸಬೇಕಿತ್ತು. ಆಸ್ಟ್ರೇಲಿಯಾ ಸರ್ಕಾರ ಇದಕ್ಕೆ ಒಪ್ಪಿಗೆ ನೀಡಲಿಲ್ಲ. ಇದರಿಂದ ಮನಸ್ಸಿಗೆ ಬಹಳ ನೋವಾಗಿದೆ ಎಂದು ಮಗಳು ತಿಳಿಸಿದ್ದಾಳೆ’ ಎಂದರು.

ಏನಿದು ಪ್ರಕರಣ: ಧಾರವಾಡದ ಪ್ರಿಯದರ್ಶಿನಿ ಮತ್ತು ಅವರ ಪತಿ ಸಾಫ್ಟ್‌ವೇರ್ ಎಂಜಿನಿಯರ್ ಲಿಂಗರಾಜ ಪಾಟೀಲ ಆಸ್ಟ್ರೇಲಿಯಾದಲ್ಲಿ ನೆಲೆಸಿದ್ದರು.

ಆಗಸ್ಟ್ 18ರಂದು ಪ್ರಿಯದರ್ಶಿನಿ ಆಸ್ಟ್ರೇಲಿಯಾದಿಂದ ಊರಿಗೆ ಹೊರಟು ಬೆಂಗಳೂರಿಗೆ ಆ.19ರಂದು ತಲುಪಿದ್ದರು. ಅಂದು ಬಸ್ ಮೂಲಕ ಬೆಂಗಳೂರಿನಿಂದ ಹುಬ್ಬಳ್ಳಿಗೆ ಸಂಜೆ ಬಂದಿಳಿದಿದ್ದರು. ಹುಬ್ಬಳ್ಳಿ ನಿಲ್ದಾಣದಿಂದ ಬ್ಯಾಗ್ ಅನ್ನು ಕುಟುಂಬದವರಿಗೆ ಕೊರಿಯರ್ ಮಾಡಿ ಗೋಕಾಕ್‌ಗೆ ತೆರಳಿದ್ದರು. ಆ. 20ರಂದು ನವಿಲುತೀರ್ಥ ಜಲಾಶಯದಲ್ಲಿ ಅವರ ದೇಹ ಪತ್ತೆಯಾಯಿತು.

‘ಮೋದಿ ಚೀನಾ ಅಧ್ಯಕ್ಷರ ಹಿಂದೆ ಓಡುವುದೇಕೆ?’

ಹೈದರಾಬಾದ್: ಪ್ರಧಾನಿ ನರೇಂದ್ರ ಮೋದಿ ಅವರು ಮಾತುಕತೆಗಾಗಿ ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ಹಿಂದೆ ಯಾಕೆ ಓಡುತ್ತಿದ್ದಾರೆ ಎಂದು ಹೈದರಾಬಾದ್ ಸಂಸದ, ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಓವೈಸಿ ಪ್ರಶ್ನಿಸಿದ್ದಾರೆ.

ಭಾರತದ ಭೂಮಿಯನ್ನು ಚೀನಾ ಕಬಳಿಸಿದೆ. ಈ ಬಗ್ಗೆ ಚರ್ಚಿಸಲು ವಿಶೇಷ ಅಧಿವೇಶನ ಕರೆಯಬೇಕು ಎಂದು ಅವರು ಒತ್ತಾಯಿಸಿದ್ದಾರೆ.

‘ಮೋದಿ ಹಾಗೂ ಷಿ ಜಿನ್‌ಪಿಂಗ್ ನಡುವಿನ ಮಾತುಕತೆ ಬಗ್ಗೆ ವಿದೇಶಾಂಗ ಇಲಾಖೆ ಪ್ರಕಟಣೆ ಬಿಡುಗಡೆ ಮಾಡಬೇಕಿತ್ತು. ಮೋದಿಯವರು ಮಾತುಕತೆ ಬಯಸಿದ್ದರು ಎಂದು ಚೀನಾ ವಿದೇಶಾಂಗ ಇಲಾಖೆ ಹೇಳಿದೆ. ಬಳಿಕ ನಮ್ಮ ವಿದೇಶಾಂಗ ಕಾರ್ಯದರ್ಶಿ ಬೇರೆಯದೇ ಹೇಳಿಕೆ ನೀಡಿದರು’ ಎಂದು ಓವೈಸಿ ಸುದ್ದಿಗಾರರಿಗೆ ತಿಳಿಸಿದರು.

‘ಪ್ರಧಾನಿಯವರು ಮಾತುಕತೆಗಾಗಿ ಚೀನಾ ಅಧ್ಯಕ್ಷರ ಹಿಂದೆ ಏಕೆ ಓಡುತ್ತಾರೆ? ಲಡಾಖ್ ಗಡಿಯಲ್ಲಿ ಏನಾಗಿದೆ ಎನ್ನುವುದರ ಬಗ್ಗೆ ಪ್ರಧಾನಿಯವರು ದೇಶಕ್ಕೆ ಏಕೆ ಮಾಹಿತಿ ನೀಡುತ್ತಿಲ್ಲ’ ಎಂದು ಓವೈಸಿ ಅವರು ಪ್ರಶ್ನಿಸಿದರು.

ಮನೆಯಂಗಳದಲ್ಲಿ ರಂಗೋಲಿಯ ಚಿತ್ತಾರ • ಸುಖ, ಶಾಂತಿ, ಸಮೃದ್ಧಿಗೆ ಪ್ರಾರ್ಥನೆ

ವರಮಹಾಲಕ್ಷ್ಮೀ ಹಬ್ಬದ ಸಂಭ್ರಮ

ಪ್ರಜಾವಾಣಿ ವಾರ್ತೆ

ನಗರದ ಮಹಾಲಕ್ಷ್ಮಿ ಲೇಔಟ್‌ನಲ್ಲಿರುವ ಪ್ರಸನ್ನ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ವರಮಹಾಲಕ್ಷ್ಮೀ ಹಬ್ಬದ ಪ್ರಯುಕ್ತ ಲಕ್ಷ್ಮಿ ದೇವಿಗೆ ವಿಶೇಷ ಪೂಜೆ ಸಲ್ಲಿಸಲು ಬಂದಿದ್ದ ಭಕ್ತರು (ಎಡಚಿತ್ರ) ಲಕ್ಷ್ಮೀದೇವಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು –ಪ್ರಜಾವಾಣಿ ಚಿತ್ರಗಳು

ಬೆಂಗಳೂರು: ರಾಜಧಾನಿಯಲ್ಲಿ ಶುಕ್ರವಾರ ವರಮಹಾಲಕ್ಷ್ಮೀ ಹಬ್ಬವನ್ನು ಭಕ್ತಿಭಾವ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ಮನೆ ಹಾಗೂ ದೇಗುಲಗಳಲ್ಲಿ ಹಬ್ಬದ ಸಡಗರ ಇಮ್ಮ-ಡಿಗೊಂಡಿತ್ತು.

ಲಕ್ಷ್ಮೀದೇವಿ ಆರಾಧಿಸಿದ ಭಕ್ತರು, ಸಮೃದ್ಧಿ, ಸುಖ–ಶಾಂತಿ ಹಾಗೂ ಆರೋಗ್ಯ ಕರುಣಿಸುವಂತೆ ಪ್ರಾರ್ಥಿಸಿದರು.

ಲಕ್ಷ್ಮೀದೇವಿಯ ಮೂರ್ತಿಗೆ ವಿಶೇಷ ಅಲಂಕಾರ ಮಾಡಿ ಪೂಜಿಸಲಾಯಿತು. ಬಗೆಬಗೆಯ ಪುಷ್ಪಗಳು ಹಾಗೂ ಬಣ್ಣದ ವಿದ್ಯುತ್ ದೀಪಗಳ ಅಲಂಕಾರದ ನಡುವೆ ದೇವಿ ಕಂಗೊಳಿಸಿದಳು. ಹೂವು, ಹಣ್ಣುಗಳಿಂದ ಸಂಪತ್ತಿನ ಅಧಿದೇವತೆ-ಯನ್ನು ಆರಾಧಿಸಿದ್ದು ವಿಶೇಷವಾಗಿತ್ತು.

ಲಕ್ಷ್ಮಿ ಕಳಶ ಪ್ರತಿಷ್ಠಾಪಿಸಿ, ಸೀರೆ ಹಾಗೂ ಹೂವುಗಳಿಂದ ವಿಶೇಷ ಅಲಂಕಾರ ಮಾಡಲಾಗಿತ್ತು. ಮನೆಯ ಅಂಗಳದಲ್ಲೂ ರಂಗೋಲಿಯ ಚಿತ್ತಾರ ಮೂಡಿತ್ತು.

ಮನೆಗೆ ಬಂದ ಮಹಿಳೆಯರಿಗೆ ಅರಿಶಿನ ಕುಂಕುಮ, ಹೂವು ನೀಡಲಾಯಿತು. ಶೇಷಾದ್ರಿಪುರ ಮತ್ತು ಮಹಾಲಕ್ಷ್ಮಿ ಲೇಔಟ್‌ನ ಲಕ್ಷ್ಮಿ ದೇಗುಲಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು. ದೇವಾಲಯಗಳಲ್ಲಿ ಮಹಿಳಾ ಭಕ್ತರಿಗೆ ಅರಿಶಿನ- ಕುಂಕುಮ ಹಾಗೂ ಹಸಿರು ಬಳೆ ವಿತರಿಸಲಾಯಿತು.

ಮಲ್ಲೇಶ್ವರ, ಮಹಾಲಕ್ಷ್ಮಿಲೇ-ಔಟ್, ಜಾಲಹಳ್ಳಿ, ವಿಜಯನಗರ, ಬಸವನಗುಡಿ, ಬನಶಂಕರಿ, ಅಶೋಕನಗರ ಶ್ರೀರಾಮಪುರ, ಕೆಂಗೇರಿ, ಸುಂಕದಕಟ್ಟೆ, ಜೆ.ಪಿ.ನಗರ, ಎಲೆಕ್ಟ್ರಾನಿಕ್ ಸಿಟಿ, ಯಶವಂತಪುರ, ಸದಾಶಿವನಗರ, ದೀಪಾಂಜಲಿ ನಗರ, ವಿವಿ ಪುರಂ, ಪುಟ್ಟೇನಹಳ್ಳಿ, ಕುಮಾರಸ್ವಾಮಿ ಲೇಔಟ್, ಮಡಿವಾಳ, ಇಂದಿರಾನಗರ, ವಿದ್ಯಾರಣ್ಯಪುರ, ಎಚ್‌ಎಂಟಿ ಲೇಔಟ್, ಸಹಕಾರ ನಗರ, ಹೆಬ್ಬಾಳ, ಯಲಹಂಕ, ಲಗ್ಗೆರೆ, ಸುಬ್ರಹ್ಮಣ್ಯ ನಗರ, ಹೊಸಕೆರೆಹಳ್ಳಿ, ಬ್ಯಾಟರಾಯನಪುರದಲ್ಲಿ ಹಬ್ಬದ ಸಂಭ್ರಮ ಕಂಡುಬಂತು.

ನಗರದ ಬಹುತೇಕ ಶಾಲೆಗಳಿಗೆ ರಜೆ ನೀಡಲಾಗಿತ್ತು. ನಗರದಲ್ಲಿ ಮಧ್ಯಾ-ಹ್ನದವರೆಗೂ ವಾಹನ ದಟ್ಟಣೆ ಸ್ವಲ್ಪ ಕಡಿಮೆಯಿತ್ತು.

ಚಿತ್ರಾವಳಿ

ಕಾವೇರಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಶೈಕ್ಷಣಿಕ ಟ್ರಸ್ಟ್ ವತಿಯಿಂದ ಮಲ್ಲತಹಳ್ಳಿಯಲ್ಲಿ ಕನ್ಯಾಕುಮಾರಿ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಎಚ್.ತುಕಾರಾಂ ಅವರಿಗೆ ಕಾವೇರಿ ಸೇವಾರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕೆ.ಎನ್.ನಾಗೇಶ್, ದೇವರಾಜು, ಮುನಿಆಂಜನಪ್ಪ, ಶಿವಣ್ಣಗೌಡ, ಮರಿಸ್ವಾಮಿ ಇದ್ದರು

ನಗರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ‘ಸಮಾನ ನಾಗರಿಕ ಸಂಹಿತೆ’ ಪುಸ್ತಕವನ್ನು ಲೇಖಕ ಎಂ.ಎಸ್. ಚೈತ್ರ (ಎಡದಿಂದ ಮೂರನೇಯವರು) ಅವರು ಬಿಡುಗಡೆ ಮಾಡಿದರು. (ಎಡದಿಂದ) ಶ್ರೇಯಾಂಕ ರಾನಡೆ, ಪುಸ್ತಕದ ಲೇಖಕ ಎ. ಷಣ್ಮುಖ, ಜೆ.ಎಸ್. ಸದಾನಂದ ಮತ್ತು ರಾಜಾರಾಮ ಹೆಗಡೆ ಇದ್ದಾರೆ –ಪ್ರಜಾವಾಣಿ ಚಿತ್ರ

ನಗರದ ಆರ್.ವಿ. ಇನ್‌ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್‌ನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಹೈಕೋರ್ಟ್ ಮುಖ್ಯನ್ಯಾಯಮೂರ್ತಿ ಪಿ.ಬಿ. ವರಾಳೆ, ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್ ಅಧ್ಯಕ್ಷ ಎಂ.ಪಿ. ಶ್ಯಾಮ್, ಕಾಲೇಜಿನ ಪ್ರಾಂಶುಪಾಲ ಕೆ.ಆರ್. ಆಂಜಿನರೆಡ್ಡಿ ಇದ್ದರು

ಕಾರ್ಯದರ್ಶಿ ಹುದ್ದೆ ವಾಪಸ್ ನೀಡಲು ಆಗ್ರಹ

ಬೆಂಗಳೂರು: ವಿಧಾನಸಭೆ ಕಾರ್ಯದರ್ಶಿ ಹುದ್ದೆಯನ್ನು ಎಸ್. ಮೂರ್ತಿ ಅವರಿಗೆ ವಾಪಸ್ ನೀಡಬೇಕು ಎಂದು ಸಂವಿಧಾನ ಸಂರಕ್ಷಣಾ ಮಹಾ ಒಕ್ಕೂಟ ಒತ್ತಾಯಿಸಿದೆ.

ಹೈಕೋರ್ಟ್‌ನ ಆದೇಶದ ಬಳಿಕವೂ ಅವರಿಗೆ ಕಾರ್ಯದರ್ಶಿ ಹುದ್ದೆ ನೀಡಿಲ್ಲ ಎಂದು ಒಕ್ಕೂಟ ಆರೋಪಿಸಿದೆ.

ಕರ್ತವ್ಯ ಲೋಪದ ಆರೋಪ ಹೊರಿಸಿ ಮೂರ್ತಿ ಅವರನ್ನು ಅಮಾನತು ಮಾಡಲಾಗಿತ್ತು. ಎಸ್. ಮೂರ್ತಿ ಅವರು ಅದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಅವರನ್ನು ಮರು ನೇಮಕ ಮಾಡಿಕೊಳ್ಳುವಂತೆ ಹೈಕೋರ್ಟ್ 2020ರ ಜುಲೈ 2ರಂದು ಆದೇಶ ನೀಡಿತ್ತು. ಆದರೆ, ಈ ಆದೇಶ ಜಾರಿ ಮಾಡುವ ಬದಲು ಆಗಿನ ವಿಧಾನಸಭಾ-ಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಕಾರ್ಯದರ್ಶಿ ಹುದ್ದೆಯಿಂದ 3 ದರ್ಜೆ ಕೆಳಹಂತದ ಅಧೀನ ಕಾರ್ಯದರ್ಶಿ ಹುದ್ದೆಗೆ ಹಿಂಬಡ್ತಿಗೊಳಿಸಿದ್ದಾರೆ. ಈ ಅನ್ಯಾಯ ಸರಿಮಾಡಬೇಕು ಎಂದು ಆಗ್ರಹಿಸಿದೆ.

ಈ ಬಗ್ಗೆ ಒಕ್ಕೂಟದ ಸಂಚಾಲಕರಾದ ಜ್ಞಾನಪ್ರಕಾಶ ಸ್ವಾಮೀಜಿ, ಬಿ. ಗೋಪಾಲ್ ಅವರು ಸ್ಪೀಕರ್ ಯು.ಟಿ. ಖಾದರ್, ಸಭಾಪತಿ ಬಿ.ಎಸ್. ಹೊರಟ್ಟಿ, ಸಿ.ಎಂ, ಎಚ್.ಕೆ. ಪಾಟೀಲರಿಗೆ ಪತ್ರ ಬರೆದಿದ್ದಾರೆ.

‘ಭೂ ಸಮಸ್ಯೆ ಪರಿಹರಿಸಿ’

ಬೆಂಗಳೂರು: ‘ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಅಂಚಿನಲ್ಲಿರುವ ಅಲೆಮಾರಿ ಸಮುದಾಯಗಳ ಅರ್ಹರಿಗೆ ಹಕ್ಕುಪತ್ರ ವಿತರಣೆ ಮಾಡಿರುವಂತೆ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಜೀವಂತವಾಗಿರುವ ಭೂ ಸಮಸ್ಯೆಯನ್ನು ಪರಿಹರಿಸಬೇಕು’ ಎಂದು ಹಕ್ಕಿಪಿಕ್ಕಿ ಮತ್ತು ಇರುಳಿಗ ಆದಿವಾಸಿ ಸಂಘ, ಎಸ್‌ಐಇಡಿಎಸ್ ಸಂಸ್ಥೆ ಒತ್ತಾಯಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಸ್‌ಐಇಡಿಎಸ್‌ನ ಮಧು ಭೂಷಣ, ‘ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಬಳಿ ಇರುವ 114 ಫಲಾನುಭವಿಗಳಿಗೆ ವ್ಯವಸಾಯ ಮಾಡುವುದಕ್ಕೆ ತಲಾ ಎರಡು ಎಕರೆ ಜಮೀನು ಖಾತಾ, ಭೂಮಿಯ ಪಟ್ಟ, ಮೋಜಣಿ, ಪಹಣಿ ಪತ್ರ ನೀಡಲಾಗಿದೆ. ಆದರೆ, ಆ ಭೂಮಿಯನ್ನು ಸಮತಟ್ಟು ಮಾಡುವುದು ಸೇರಿದಂತೆ ಸರ್ಕಾರ ವಿವಿಧ ಸೌಲಭ್ಯಗಳು ಲಭಿಸುವಂತೆ ಕ್ರಮಕೈಗೊಳ್ಳಬೇಕು. ಆದಿವಾಸಿಗಳು ಭೂಮಿಯ ಹಕ್ಕನ್ನು ಪಡೆಯಲು ಕಳೆದ ಆರು ದಶಕಗಳಿಂದ ಹೋರಾಟ ಮಾಡಿದ್ದಾರೆ. ಈ ಭೂಮಿಯನ್ನು ಕೇವಲ ವ್ಯವಸಾಯ ಮಾಡುವುದಕ್ಕೆ ಬಳಸಬೇಕು’ ಎಂದರು.

ಎಸ್‌ಐಇಡಿಎಸ್ ಅಲ್ತಾಫ್ ಅಹ್ಮದ್, ಇಎಸ್‌ಜಿ ಲಿಯೋ ಸಲಧಾನ, ಹಕ್ಕಿಪಿಕ್ಕಿ ಮತ್ತು ಇರುಳಿಗ ಆದಿವಾಸಿ ಸಂಘದ ಅಧ್ಯಕ್ಷ ಕೃಷ್ಣಪ್ಪ, ಉಪಾಧ್ಯಕ್ಷ ಶ್ರೀಕಾಂತ್, ಕಾರ್ಯದರ್ಶಿ ಗುಂಡಮ್ಮ ಇದ್ದರು.

ತಮಿಳುನಾಡಿಗೆ ಕಾವೇರಿ ನೀರು ಹರಿಸಲು ವಿರೋಧ

ನೇಣು ಕುಣಿಕೆ ಹಿಡಿದು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣದ ಮಿನಿ ವಿಧಾನಸೌಧದ ಎದುರು ಭೂಮಿತಾಯಿ ಹೋರಾಟ ಸಮಿತಿ ಸದಸ್ಯರು ಪ್ರತಿಭಟನಾ ಧರಣಿ ನಡೆಸಿದರು

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): ನ್ಯಾಯಾಲಯ ಆದೇಶ ನೀಡದಿದ್ದರೂ ರಾಜ್ಯ ಸರ್ಕಾರ ತಮಿಳುನಾಡಿಗೆ ನೀರು ಹರಿಸಿ ಕೆಆರ್‌ಎಸ್ ಜಲಾಶಯವನ್ನು ಬರಿದು ಮಾಡಿದೆ. ಬೆಳೆ ವಂಚಿತರಾಗಿರುವ ರೈತರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು ಆಗ್ರಹಿಸಿ ಭೂಮಿತಾಯಿ ಹೋರಾಟ ಸಮಿತಿ ಸದಸ್ಯರು ಶುಕ್ರವಾರ ಪಟ್ಟಣದಲ್ಲಿ ನೇಣು ಕುಣಿಕೆ ಹಿಡಿದು ಪ್ರತಿಭಟನೆ ನಡೆಸಿದರು.

ರಾಷ್ಟ್ರೀಯ ಹೆದ್ದಾರಿಯ ಕುವೆಂಪು ವೃತ್ತದಿಂದ ಮಿನಿ ವಿಧಾನಸೌಧದ ವರೆಗೆ ಮುಖ್ಯ ಬೀದಿಯಲ್ಲಿ ಪ್ರತಿಭಟನಾ ಮೆರವಣಿಗೆ ನಡೆಯಿತು. ದಾರಿಯುದ್ದಕ್ಕೂ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವ ಮತ್ತು ಜಿಲ್ಲೆಯ ಶಾಸಕರ ವಿರುದ್ಧ ಘೋಷಣೆ ಕೂಗಿದರು. ಹಗ್ಗವನ್ನು ಕುತ್ತಿಗೆಗೆ ಹಾಕಿಕೊಂಡು ಅಣಕು ಆತ್ಮಹತ್ಯೆ ದೃಶ್ಯ ಪ್ರದರ್ಶಿಸಿದರು.

ತಮಿಳುನಾಡಿಗೆ ನೀರು ಬಿಡುವಂತೆ ನ್ಯಾಯಾಲಯ ಅಥವಾ ನೀರು ನಿರ್ವಹಣಾ ಪ್ರಾಧಿಕಾರ ಆದೇಶ ನೀಡಿಲ್ಲ. ತಮಿಳುನಾಡು ಸರ್ಕಾರ ಅರ್ಜಿ ಸಲ್ಲಿಸಿದ ತಕ್ಷಣ ನೀರು ಹರಿಸಿರುವ ಸರ್ಕಾರ ಇಲ್ಲಿನ ರೈತರಿಗೆ ದ್ರೋಹ ಬಗೆದಿದೆ. ಜನ, ಜಾನುವಾರುಗಳಿಗೆ ಕುಡಿಯಲೂ ನೀರು ಸಿಗುವುದಿಲ್ಲ. ನೀರು ಖಾಲಿಯಾದ ನಂತರ ಪ್ರಧಾನಿ ಭೇಟಿಗೆ ಹೋಗುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿರುವುದು ಹಾಸ್ಯಾಸ್ಪದವಾಗಿದೆ ಎಂದು ರೈತ ನಾಯಕ ಕೆ.ಎಸ್. ನಂಜುಂಡೇಗೌಡ ಅವರು ಟೀಕಿಸಿದರು.

ಯಲಹಂಕ ಕ್ಷೇತ್ರವ್ಯಾಪ್ತಿಯ ಹಾರೋಹಳ್ಳಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಸ್.ಆರ್. ವಿಶ್ವನಾಥ್ ಚಾಲನೆ ನೀಡಿದರು

ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ‘ಗುತ್ತಿಗೆದಾರರಿಗೆ ಸರ್ಕಾರದಿಂದ ಪಾವತಿಯಾಗಬೇಕಾದ ಬಾಕಿ ಹಣ ಬಿಡುಗಡೆಯಾಗದ ಕಾರಣ, ಯಲಹಂಕದ ಮೇಲ್ಸೇತುವೆಗಳು ಮತ್ತು ಎನ್.ಇ.ಎಸ್. ವೃತ್ತದ ಮೂಲಕ ಹಳೆನಗರಕ್ಕೆ ಸಂಪರ್ಕ ಕಲ್ಪಿಸುವ ರೈಲ್ವೆ ಕೆಳಸೇತುವೆ ಸೇರಿ ಹಲವು ಕಾಮಗಾರಿಗಳು ನನೆಗುದಿಗೆ ಬಿದ್ದಿವೆ. ಇದರಿಂದ ಸಾರ್ವಜನಿಕರಿಗೆ ತೊಂದರೆ-ಯಾಗುತ್ತಿದೆ’ ಎಂದು ಶಾಸಕ ಎಸ್.ಆರ್. ವಿಶ್ವನಾಥ್ ಹೇಳಿದರು.

ಯಲಹಂಕ ಕ್ಷೇತ್ರವ್ಯಾಪ್ತಿಯ ನಾಗದಾಸನಹಳ್ಳಿ, ಹಾರೋಹಳ್ಳಿ ಹಾಗೂ ಶಿವಕೋಟೆ ಗ್ರಾಮಗಳಲ್ಲಿ ₹ 6 ಕೋಟಿ ವೆಚ್ಚದಲ್ಲಿ ಚರಂಡಿ ಮತ್ತು ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

‘ಕಾಮಗಾರಿಗಳು ಸರಿಯಾಗಿ ನಡೆಯದ ಕಾರಣ ತನಿಖೆ ನಡೆಸಬೇಕು ಎಂಬ ಕಾರಣ ನೀಡಿ ಪ್ರಗತಿಯಲ್ಲಿದ್ದ ಎಲ್ಲ ಕಾಮಗಾರಿಗಳನ್ನು ಸ್ಥಗಿತಗೊಳಿಸಲಾಗಿದೆ’ ಎಂದರು. ಬಿಜೆಪಿ ಮುಖಂಡರಾದ ದಿಬ್ಬೂರು ಜಯಣ್ಣ, ಎಸ್.ಎನ್. ರಾಜಣ್ಣ, ಎಚ್.ಬಿ. ಹನುಮಯ್ಯ, ಎಂ. ಸತೀಶ್, ಸತೀಶ್ ಕಡತನಮಲೆ, ಎಸ್. ಜಿ. ನರಸಿಂಹಮೂರ್ತಿ, ಟಿ. ಮುನಿರೆಡ್ಡಿ, ಡಿ.ಜಿ. ಅಪ್ಪಯಣ್ಣ, ಅದ್ದೆ ಮಂಜುನಾಥ ರೆಡ್ಡಿ, ನಾಗೇನಹಳ್ಳಿ ಶಿವಕುಮಾರ್, ವಿ.ವಿ. ರಾಮಮೂರ್ತಿ ಇದ್ದರು.

ಕಾಲ್ತುಳಿತ: 12 ಮಂದಿ ಸಾವು

ಅಂಟಾನಾನರಿವೊ (ಎಎಫ್‌ಪಿ): ಮಡಗಾಸ್ಕರ್‌ನ ರಾಜಧಾನಿ ಅಂಟಾನಾನರಿವೊದ ಕ್ರೀಡಾಂಗಣದಲ್ಲಿ ಶುಕ್ರವಾರ ಕಿಕ್ಕಿರಿದು ಸೇರಿದ್ದ ಜನಸಂದಣಿಯಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 12 ಜನರು ಮೃತಪಟ್ಟಿದ್ದಾರೆ ಎಂದು ದೇಶದ ಪ್ರಧಾನಿ ಕ್ರಿಶ್ಚಿಯನ್ ಸೇ ತಿಳಿಸಿದ್ದಾರೆ.

ಘಟನೆಯಲ್ಲಿ ಸುಮಾರು 80 ಮಂದಿ ಗಾಯಗೊಂಡಿದ್ದಾರೆ ಎಂದು ಅಂಟನಾನರಿವೋ ಆಸ್ಪತ್ರೆಯಲ್ಲಿ ಅವರು ಸುದ್ದಿಗಾರರಿಗೆ ತಿಳಿಸಿದರು.

ಇಂಡಿಯನ್ ಓಷನ್ ಐಲ್ಯಾಂಡ್ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲು ಸುಮಾರು 50 ಸಾವಿರ ಪ್ರೇಕ್ಷಕರು ಆಗಮಿಸಿದ್ದ ಬರಿಯಾ ಕ್ರೀಡಾಂಗಣದ ಪ್ರವೇಶದ್ವಾರದಲ್ಲಿ ಕಾಲ್ತುಳಿತ ಸಂಭವಿಸಿದೆ.

ನಿವಾಸಿಗಳಿಂದಲೇ 400 ಕಿಲೋ ವಾಟ್ ಸೌರ ಫಲಕ • ತಿಂಗಳಿಗೆ ₹3.7 ಲಕ್ಷ ಉಳಿತಾಯ • ಸ್ವಾವಲಂಬನೆ ಸಾಧಿಸುವತ್ತ ಹೆಜ್ಜೆ

ವಿದ್ಯುತ್ ವೆಚ್ಚ ತಗ್ಗಿಸಲು 'ಸೌರ' ದಾರಿ

• ಇ.ಎಸ್. ಸುಧೀಂದ್ರ ಪ್ರಸಾದ್

ಬೆಂಗಳೂರು: ಬೃಹತ್ ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುವ ನಿವಾಸಿಗಳೆಲ್ಲರಿಗೂ ಸೇರುವ ಸಾಮಾನ್ಯ ಜಾಗದಲ್ಲಿನ ವಿದ್ಯುತ್ ಬೇಡಿಕೆ ತಗ್ಗಿಸಲು ಬೇಗೂರಿನಲ್ಲಿರುವ ಅಪಾರ್ಟ್‌ಮೆಂಟ್‌ನ ನಿವಾಸಿಗಳ ಸಂಘವು ಸೌರ ವಿದ್ಯುತ್ ಘಟಕ ಅಳವಡಿಸಿ 400 ಕಿಲೋ ವಾಟ್ ವಿದ್ಯುತ್ ಉತ್ಪಾದಿಸುವ ಮೂಲಕ ಇಂಧನ ಸ್ವಾವಲಂಬನೆ ಸಾಧಿಸುವತ್ತ ಹೆಜ್ಜೆ ಇಟ್ಟಿದೆ.

ಬೇಗೂರಿನ ಡಿಎಲ್‌ಎಫ್ ವೆಸ್ಟೆಂಡ್ ಹೈಟ್ಸ್ ಅಪಾರ್ಟ್‌ಮೆಂಟ್‌ನಲ್ಲಿ 19 ಕಟ್ಟಡಗಳಿವೆ. ಇದರಲ್ಲಿ ಒಟ್ಟು 1830 ಮನೆಗಳಿವೆ. ಇಷ್ಟು ದೊಡ್ಡ ಅಪಾರ್ಟ್‌ಮೆಂಟ್‌ನಲ್ಲಿನ ಕಾಮನ್ ಏರಿಯಾದ ಬೆಳಕು, ಪಂಪ್ ಸೆಟ್, ಲಿಫ್ಟ್, ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳಿಗೆ ಅಗತ್ಯವಿರುವ ವಿದ್ಯುತ್‌ಗಾಗಿ 29 ಮೀಟರ್‌ಗಳನ್ನು ಅಳವಡಿಸಲಾಗಿದೆ. ಬರುತ್ತಿದ್ದ ದುಬಾರಿ ಶುಲ್ಕವನ್ನು ಈವರೆಗೂ ನಿವಾಸಿಗಳೇ ಭರಿಸುತ್ತಾ ಬಂದಿದ್ದಾರೆ. ಆದರೆ ಇದಕ್ಕೊಂದು ಇತಿಶ್ರೀ ಹಾಡಲು ಸೌರ ಫಲಕ ಅಳವಡಿಸುವ ಯೋಜನೆಯನ್ನು ಕೈಗೆತ್ತಿಕೊಂಡಿದೆ.

'ಕಳೆದ ಮೂರು ವರ್ಷಗಳಿಂದ ಮೂರು ಹಂತಗಳಲ್ಲಿ ಸೌರ ಫಲಕಗಳನ್ನು ಅಪಾರ್ಟ್‌ಮೆಂಟ್‌ನ ಚಾವಣಿ ಮೇಲೆ ಅಳವಡಿಸಲಾಗಿದೆ. ಮೂರನೇ ಹಂತ ಇದೇ ತಿಂಗಳ 27ರಂದು ಉದ್ಘಾಟನೆಗೆ ಸಿದ್ದಗೊಂಡಿದೆ. ಇದರ ಮೂಲಕ ಒಟ್ಟು 400 ಕಿಲೋ ವಾಟ್ ಸೌರ ವಿದ್ಯುತ್ ಉತ್ಪಾದನೆ ಆದಂತಾಗಲಿದೆ' ಎಂದು ಡಿಎಲ್‌ಎಫ್ ವೆಸ್ಟೆಂಡ್ ಹೈಟ್ಸ್ ನಿವಾಸಿಗಳ ಸಂಘದ ಕಾರ್ಯದರ್ಶಿ ಕಾರ್ತಿಕೇಯ ಖನ್ನಾ ತಿಳಿಸಿದರು.

ಬೆಂಗಳೂರಿನ ಬೇಗೂರಿನಲ್ಲಿರುವ ಡಿಎಲ್‌ಎಫ್ ವೆಸ್ಟೆಂಡ್ ಹೈಟ್ಸ್ ಅಪಾರ್ಟ್‌ಮೆಂಟ್‌ನ ಕಟ್ಟಡಗಳ ಚಾವಣಿಯಲ್ಲಿ ಅಳವಡಿಸಿರುವ ಸೌರ ವಿದ್ಯುತ್ ಫಲಕ

ಮುಖ್ಯಾಂಶಗಳು

- ಮೂರು ಹಂತಗಳಲ್ಲಿ ಸೌರ ಫಲಕಗಳ ಅಳವಡಿಕೆ
- ಹೆಚ್ಚುವರಿ ವಿದ್ಯುತ್ ಬೆಸ್ಕಾಂಗೆ ಮಾರಾಟ

'ಸೂರ್ಯನ ಬೆಳಕಿನಿಂದ ವಿದ್ಯುತ್ ಉತ್ಪಾದಿಸುವ ಫೋಟೊವೋಲ್ಟಾಯಿಕ್ ಸೌರ ಫಲಕಗಳಲ್ಲಿನ ಪ್ರತಿ ಪ್ಯಾನಲ್ 450 ವಾಟ್ ವಿದ್ಯುತ್ ಉತ್ಪಾದಿಸುತ್ತದೆ. ಒಟ್ಟು 400 ಕಿಲೋ ವಾಟ್ ಸಾಮರ್ಥ್ಯದ ಸೌರ ಫಲಕದಿಂದ ವಾರ್ಷಿಕ 5.6 ಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗಲಿದೆ. ತಿಂಗಳಿಗೆ 47 ಸಾವಿರ ಯೂನಿಟ್ ಉತ್ಪಾದನೆ ಆಗುವುದರಿಂದ ತಿಂಗಳಿಗೆ ₹3.7 ಲಕ್ಷದಷ್ಟು ಉಳಿತಾಯವಾಗಲಿದೆ. ಹೆಚ್ಚುವರಿ ವಿದ್ಯುತ್ ಅನ್ನು ಪ್ರತಿ ಯೂನಿಟ್‌ಗೆ ₹3.07ರಂತೆ ಬೆಸ್ಕಾಂಗೆ ಮಾರಾಟ ಮಾಡುವ ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದು ವಿವರಿಸಿದರು.

ವಾರ್ಷಿಕ 5.6 ಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಂತೆ 25 ವರ್ಷದಲ್ಲಿ ಸುಮಾರು ₹10 ಕೋಟಿಯಷ್ಟು ವಿದ್ಯುತ್ ಶುಲ್ಕದ ಮೊತ್ತ ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ಉಳಿದಂತಾಗಲಿದೆ

– ಕಾರ್ತಿಕೇಯ ಖನ್ನಾ
ಕಾರ್ಯದರ್ಶಿ, ಡಿಎಲ್‌ಎಫ್ ವೆಸ್ಟೆಂಡ್ ಹೈಟ್ಸ್ ನಿವಾಸಿಗಳ ಸಂಘ

ಅಪಾರ್ಟ್‌ಮೆಂಟ್‌ಗಳಲ್ಲಿ ಸೌರ ಫಲಕ ಅಳವಡಿಸಿ ಇಂಧನ ಸ್ವಾವಲಂಬಿಯಾಗಲು ಬೆಸ್ಕಾಂ ಸದಾ ಜಾಗೃತಿ ಮೂಡಿಸುತ್ತಿದೆ. ಗ್ರಾಹಕರ ಸಭೆ ಹಾಗೂ ಅದಾಲತ್‌ಗಳಲ್ಲೂ ಈ ಕುರಿತು ಮಾಹಿತಿ ನೀಡಲಾಗುತ್ತಿದೆ.

– ಮಹಾಂತೇಶ ಬೀಳಗಿ
ವ್ಯವಸ್ಥಾಪಕ ನಿರ್ದೇಶಕ, ಬೆಸ್ಕಾಂ

'ವಿದ್ಯುತ್ ಉಳಿತಾಯಕ್ಕಾಗಿ ಅಪಾರ್ಟ್‌ಮೆಂಟ್ ನಿವಾಸಿಗಳು ಕೆಲವೊಂದು ಕ್ರಮಗಳನ್ನು ಕೈಗೊಂಡಿದ್ದೇವೆ. ಅದರಲ್ಲಿ 1100ರಷ್ಟು 45 ವಾಟ್ ಫ್ಲೊರೊಸೆಂಟ್ ಟ್ಯೂಬ್‌ಗಳ ಜಾಗದಲ್ಲಿ 20 ವಾಟ್‌ನ ಎಲ್‌ಇಡಿ ಬಲ್ಬ್ ಅಳವಡಿಸಲಾಗಿದೆ.

ಮೂರು ಸಾವಿರದಷ್ಟು 12 ವಾಟ್ ಸಿಎಫ್‌ಎಲ್ ಜಾಗದಲ್ಲಿ 7ರಿಂದ 9 ಎಲ್‌ಇಡಿ ಬಲ್ಬ್ ಅಳವಡಿಸಲಾಗಿದೆ. ಸೋಡಿಯಂ ವೇಪರ್ಸ್ ಬೀದಿ ದೀಪಗಳ ಜಾಗದಲ್ಲಿ ಎಲ್‌ಇಡಿ ಹಾಕಲಾಗಿದೆ. ಮೆಟ್ಟಿಲುಗಳ ಬಳಿ ಚಲನವಲನ ಆಧರಿಸಿ ಹೊತ್ತಿಕೊಳ್ಳುವ ಎಲ್‌ಇಡಿ ದೀಪಗಳನ್ನು ಅಳವಡಿಸಲಾಗಿದೆ. ಸೌರ ಫಲಕ ಅಳವಡಿಸಿದ ನಂತರ ಬೆಸ್ಕಾಂ ಶುಲ್ಕ ಶೂನ್ಯವಾಗಿದೆ.

ಮೊದಲು ನಿತ್ಯ 4300 ಯೂನಿಟ್‌ನಷ್ಟು ವಿದ್ಯುತ್ ಬಳಕೆಯಾಗುತ್ತಿತ್ತು. ಆದರೆ ಈಗ ಸುಮಾರು ಮೂರು ಸಾವಿರ ಯೂನಿಟ್‌ನಷ್ಟು ವಿದ್ಯುತ್ ಬಳಕೆಯಾಗುತ್ತಿದೆ.

- **ಮೊದಲ ಹಂತ:** 7 ಕಟ್ಟಡಗಳ ಮೇಲೆ 185 ಕಿ.ವಾ. ಸಾಮರ್ಥ್ಯದ ಸೌರ ವಿದ್ಯುತ್ ಫಲಕ ಅಳವಡಿಕೆ
- **ಎರಡನೇ ಹಂತ:** 4 ಕಟ್ಟಡಗಳ ಮೇಲೆ 100 ಕಿ.ವಾ. ಸಾಮರ್ಥ್ಯದ ಸೌರ ವಿದ್ಯುತ್ ಫಲಕ ಅಳವಡಿಕೆ
- **ಮೂರನೇ ಹಂತ:** 4 ಕಟ್ಟಡಗಳ ಮೇಲೆ 115 ಕಿ.ವಾ. ಸಾಮರ್ಥ್ಯದ ಸೌರ ವಿದ್ಯುತ್ ಫಲಕ ಅಳವಡಿಕೆ
- **ಒಟ್ಟು ವಿದ್ಯುತ್ ಉತ್ಪಾದನೆ:** ವಾರ್ಷಿಕ 5.6ಲಕ್ಷ ಯೂನಿಟ್
- **ಮಾಸಿಕ ವಿದ್ಯುತ್ ಉತ್ಪಾದನೆ:** 47000 ಯೂನಿಟ್
- **ಒಟ್ಟು ಮಾಸಿಕ ಉಳಿತಾಯ:** ₹3.7 ಲಕ್ಷ

ಪರಿಸರ ಸಂರಕ್ಷಣೆಗೆ ಕೊಡುಗೆ

ಸೌರ ವಿದ್ಯುತ್ ಉತ್ಪಾದನೆಯಿಂದಾಗಿ ಮುಂದಿನ 25 ವರ್ಷಗಳಲ್ಲಿ...

- **5200** ಟನ್ ಇಂಗಾಲದ ಡೈಆಕ್ಸೈಡ್ ಬಿಡುಗಡೆ ನಿಯಂತ್ರಣ
- **2150** ಟನ್‌ನಷ್ಟು ಕಲ್ಲಿದ್ದಲು ಸುಡುವುದನ್ನು ತಪ್ಪಿಸಲಾಗಿದೆ
- **33** ಸಾವಿರ ಮರಗಳ ರಕ್ಷಣೆ ಮಾಡಿದಂತಾಗಿದೆ
- ಯಾವುದೇ ಹೆಚ್ಚುವರಿ ವಿದ್ಯುತ್ ಉತ್ಪಾದನೆ ಇಲ್ಲದೆ ಗ್ರಾಮೀಣ ಭಾಗದ ಪ್ರತಿ ಮನೆಗೆ ನಿತ್ಯ **3** ಯೂನಿಟ್‌ನಂತೆ **230** ಮನೆಗೆ ವಿದ್ಯುತ್ ನೀಡಬಹುದು.

'ಲೀಚೆಟ್ ಸಂಸ್ಕರಣಾ ಘಟಕ ಶೀಘ್ರ ಶುರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕನಾಗಮಂಗಲ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ವಿನೂತನವಾಗಿ ಸ್ಥಾಪಿಸಲಾಗಿರುವ 'ಲೀಚೆಟ್ ಟ್ರೀಟ್‌ಮೆಂಟ್ ಪ್ಲಾಂಟ್'ಗೆ ಬಿಬಿಎಂಪಿ ದಕ್ಷಿಣ ವಲಯ ಆಯುಕ್ತ ಜಯರಾಮ್ ರಾಯಪುರ ಭೇಟಿ ನೀಡಿ ಪರಿಶೀಲಿಸಿದರು.

ತ್ಯಾಜ್ಯದಿಂದ ಉತ್ಪತ್ತಿಯಾಗುವ ತ್ಯಾಜ್ಯನೀರನ್ನು ವೈಜ್ಞಾನಿಕವಾಗಿ ಸಂಸ್ಕರಿಸಲು ಪರಿಶುದ್ಧ್ ವೆಂಚರ್ಸ್ ಸಂಸ್ಥೆ ಘಟಕ ಸ್ಥಾಪಿಸಿದೆ. ಅದು ಇನ್ನೂ ಕಾರ್ಯಾರಂಭ ಮಾಡಿಲ್ಲ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನಿರಾಕ್ಷೇಪಣಾ ಪತ್ರ ನೀಡಿದ ಬಳಿಕ ಸಂಸ್ಕರಣಾ ಘಟಕ ಪ್ರಾರಂಭಿಸಲಾಗು ವುದು ಎಂದು ಜಯರಾಮ್ ರಾಯಪುರ ಮಾಹಿತಿ ನೀಡಿದರು.

ನಿತ್ಯ 50 ಸಾವಿರ ಲೀಟರ್ ತ್ಯಾಜ್ಯ ನೀರು ಸಂಸ್ಕರಿಸುವ ಸಾಮರ್ಥ್ಯವನ್ನು ಈ ಘಟಕ ಹೊಂದಿದೆ. ಅದರಿಂದ 30 ಸಾವಿರ ಲೀಟರ್ ಶುದ್ಧ ನೀರು ಉತ್ಪತ್ತಿಯಾಗಲಿದೆ. ಲೀಚೆಟ್ ಪ್ಲಾಂಟ್ ಪೂರ್ಣ ಪ್ರಮಾಣದಲ್ಲಿ ಪ್ರಾರಂಭವಾದ ನಂತರ ಸಂಸ್ಕರಿಸಿ ಸಿಗುವ ಶುದ್ಧ ನೀರನ್ನು ರೈತರು ಅಥವಾ ಕಟ್ಟಡ ನಿರ್ಮಾಣ ಮಾಡುವವರಿಗೆ ಉಚಿತವಾಗಿ ನೀಡಲಾಗುವುದು ಎಂದರು.

ಚಿಕ್ಕನಾಗಮಂಗಲ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ವಿನೂತನವಾಗಿ ಸ್ಥಾಪಿಸಲಾಗಿರುವ ಲೀಚೆಟ್ ಟ್ರೀಟ್‌ಮೆಂಟ್ ಪ್ಲಾಂಟ್‌ಗೆ ಬಿಬಿಎಂಪಿ ದಕ್ಷಿಣ ವಲಯ ಆಯುಕ್ತ ಜಯರಾಮ್ ರಾಯಪುರ ಭೇಟಿ ನೀಡಿ ಪರಿಶೀಲಿಸಿದರು.

ಚಿಕ್ಕನಾಗಮಂಗಲ ತ್ಯಾಜ್ಯ ಸಂಸ್ಕರಣಾ ಘಟಕದಲ್ಲಿ ನಿತ್ಯ 300 ಟನ್ ತ್ಯಾಜ್ಯ ಸಂಸ್ಕರಿಸುವ ಸಾಮರ್ಥ್ಯವಿದ್ದು, ಸದ್ಯ ಸರಾಸರಿ 280 ಟನ್ ತ್ಯಾಜ್ಯ ಸಂಸ್ಕರಣೆ ಮಾಡಲಾಗುತ್ತಿದೆ. ಸಂಸ್ಕರಣಾ ಘಟಕದಲ್ಲಿ ದುರಸ್ತಿಯಿರುವ ಯಂತ್ರಗಳನ್ನು ಕೂಡಲೇ ಸರಿಪಡಿಸಬೇಕು. ಎಲ್ಲ ಕಡೆ ಎಲ್‌ಇಡಿ ದೀಪಗಳನ್ನು ಅಳವಡಿಸಿ ದಿನದ 24 ಗಂಟೆಯೂ ತ್ಯಾಜ್ಯ ಸಂಸ್ಕರಣಾ ಘಟಕ ಕಾರ್ಯನಿರ್ವಹಿಸುವಂತೆ ಮಾಡಬೇಕು. ಪಾಲಿಕೆಯ ಮಾದರಿ ತ್ಯಾಜ್ಯ ಸಂಸ್ಕರಣಾ ಘಟಕವನ್ನಾಗಿಸಬೇಕು ಎಂದು ಸೂಚಿಸಿದರು.

ತ್ಯಾಜ್ಯ ಸಂಸ್ಕರಣಾ ಘಟಕದ ಬಗ್ಗೆ ನಾಗರಿಕರು ಹಾಗೂ ಶಾಲಾ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ವಾರದ ಪ್ರತಿ ಗುರುವಾರ, ಶುಕ್ರವಾರ ಹಾಗೂ ಶನಿವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1ರ ವರೆಗೆ ಭೇಟಿ ನೀಡಿ ಮಾಹಿತಿ ಪಡೆಯುವ ವ್ಯವಸ್ಥೆ ಮಾಡುವಂತೆ ಸೂಚನೆ ನೀಡಿದರು.

ವಲಯ ಜಂಟಿ ಆಯುಕ್ತ ಡಾ. ಕೆ. ಜಗದೀಶ್ ನಾಯ್ಕ್, ವಲಯ ಮುಖ್ಯ ಎಂಜಿನಿಯರ್ ರಾಜೇಶ್, ಸಂಸ್ಕರಣಾ ಘಟಕದ ವ್ಯವಸ್ಥಾಪಕಿ ಅರ್ಪಿತಾ ಇದ್ದರು.

ಆರ್.ಆರ್.ನಗರದಲ್ಲಿ ನೇತಾಜಿ ಪ್ರತಿಮೆ ಸ್ಥಾಪನೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜರಾಜೇಶ್ವರಿ ನಗರದಲ್ಲಿ ದೇಶದಲ್ಲೇ ದೊಡ್ಡದಾದ ನೇತಾಜಿ ಅವರ 40 ಅಡಿ ಎತ್ತರದ ಪ್ರತಿಮೆ ಸ್ಥಾಪಿಸಲಾಗುವುದು' ಎಂದು ನೇತಾಜಿ ಸುಭಾಷ್ ಚಂದ್ರಬೋಸ್ ಸಂಶೋಧನಾ ಹಾಗೂ ಬಹುಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಎಂ.ರಾಜ್‌ಕುಮಾರ್ ತಿಳಿಸಿದರು.

ಟ್ರಸ್ಟ್‌ನ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಅವರು ಮಾತನಾಡಿದರು.

'ನಗರದ ಸಮೀಪ ವಿಶ್ವವಿದ್ಯಾಲಯದ ಸ್ಥಾಪನೆಗೆ ನೀಲನಕ್ಷೆ ಸಿದ್ಧಗೊಂಡಿಗದೆ. ಈ ಕ್ಯಾಂಪಸ್‌ನಲ್ಲಿ ಎಲ್.ಕೆ.ಜಿಯಿಂದ ಪಿ.ಜಿ. ತನಕ ಬೋಧನೆಯ ಸುಸಜ್ಜಿತ ಶಿಕ್ಷಣ ಸಂಸ್ಥೆ ಸ್ಥಾಪಿಸಲಾಗುತ್ತಿದೆ. ನೇತಾಜಿ ಅವರ ಕುರಿತಾದ ಜ್ಞಾನಾರ್ಜನೆಯ ಕೇಂದ್ರವಾಗಿ ಬೆಂಗಳೂರು ಹೊರಹೊಮ್ಮಲಿದೆ' ಎಂದು ತಿಳಿಸಿದರು.

'ಸುಭಾಷ್ ಚಂದ್ರ ಬೋಸ್ ಅವರ ತತ್ವ–ಆದರ್ಶಗಳು ಜನರ ನರ ನಾಡಿಗಳಲ್ಲಿ ಹರಿಯಬೇಕೆಂಬ ಸಂಕಲ್ಪದಲ್ಲಿ ಟ್ರಸ್ಟ್ ಕೆಲಸ ಮಾಡುತ್ತಿದೆ' ಎಂದು ಹೇಳಿದರು.

ಪುಸ್ತಕ ಪ್ರಕಟಣೆ, ಗ್ರಂಥಾಲಯ ಸ್ಥಾಪನೆ, ನೇತಾಜಿ ಜೀವನವನ್ನು ಯುವಜನರಿಗೆ ಪರಿಚಯಿಸುವ ಹಲವಾರು ಕಾರ್ಯಕ್ರಮಗಳನ್ನು ನೇತಾಜಿ ಭವನದ ಮೂಲಕ ರೂಪಿಸಲಾಗಿದೆ ಎಂದು ಹೇಳಿದರು.

ಟ್ರಸ್ಟ್‌ನ ಪದಾಧಿಕಾರಿಗಳು: ಜಿ.ಆರ್. ಶಿವಶಂಕರ್ (ಪ್ರಧಾನ ಕಾರ್ಯದರ್ಶಿ), ರಾಜಯೋಗೀಂದ್ರ ವೀರಯ್ಯ ಸ್ವಾಮಿ ಶಾಸ್ತ್ರಿಮಠ ಗುರೂಜಿ (ಸಂಸ್ಥಾಪಕ ಟ್ರಸ್ಟಿ), ಗುರು ಶಾಸ್ತ್ರಿಮಠ ಹಾಗೂ ಸಂಜಯ್ ಡಿ. ಕಲ್ಮಣ್ಕರ್ (ಉಪಾಧ್ಯಕ್ಷರು), ಉಮಾ ಶೇಷಗಿರಿ (ಕಾರ್ಯದರ್ಶಿ), ಅಮರನಾಥ ಕೋಟಿ (ಖಜಾಂಚಿ), ರವೀಂದ್ರ ನಾರಾಯಣ ಜೋಷಿ, ಆರ್.ವಿಶಾಲ್, ಸ್ಮರಣ್ ಶಿವಶಂಕರ್, ರಾಹುಲ್ ಶೇಷಗಿರಿ, ಆದಿತ್ಯ ಸಂಜಯ್ ಕಲ್ಮಣ್ಕರ್ (ಟ್ರಸ್ಟಿಗಳು).

ಪದ್ಮಶಾಲಿ ನೇಕಾರ ಸಮಾಜದ ಸಮ್ಮಿಲನ ನಾಳೆ

ಬೆಂಗಳೂರು: 'ಪದ್ಮಶಾಲಿ ನೇಕಾರ ಸಮಾಜದ ಸಮ್ಮಿಲನ ಕಾರ್ಯಕ್ರಮವು ಇದೇ 27ರಂದು ಜೆ.ಸಿ. ರಸ್ತೆಯಲ್ಲಿರುವ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಲಿದೆ' ಎಂದು ಮಾಜಿ ಸಂಸದ ಕೆ.ಸಿ. ಕೊಂಡಯ್ಯ ಹೇಳಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೆ.ಜಿ. ಲಕ್ಷ್ಮೀನಾರಾಯಣಪ್ಪ ಅವರು ಬರೆದಿರುವ 'ಪದ್ಮಶಾಲಿ ನೇಕಾರ ಇತಿಹಾಸ ಮತ್ತು ಸಂಸ್ಕೃತಿ ದರ್ಶನ' ಸಂಶೋಧನಾ ಗ್ರಂಥ ಬಿಡುಗಡೆ ಮಾಡಲಾಗುದು' ಎಂದರು.

ಕಾರ್ಯಕ್ರಮವನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಉದ್ಘಾಟಿಸಲಿದ್ದು, ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ್, ಸಚಿವರಾದ ಜಿ. ಪರಮೇಶ್ವರ್, ರಾಮಲಿಂಗಾರೆಡ್ಡಿ, ಶಿವರಾಜ ಎಸ್. ತಂಗಡಗಿ, ಸಾಹಿತಿಗಳಾದ ಕುಪ್ಪುಸ್ವಾಮಿ ಚೆಟ್ಟಿಯಾರ್, ಮಲ್ಲೇಪುರಂ ಜಿ. ವೆಂಕಟೇಶ್ ಭಾಗವಹಿಸಲಿದ್ದಾರೆ ಎಂದರು.

'ಲೋಕಸಭೆ ಚುನಾವಣೆ ಫಲಿತಾಂಶ: ರಾಜ್ಯ ಸರ್ಕಾರದ ಮೇಲೆ ಪರಿಣಾಮ'

ಪ್ರಜಾವಾಣಿ ವಾರ್ತೆ


ಬಸವರಾಜ ಬೊಮ್ಮಾಯಿ

ಹುಬ್ಬಳ್ಳಿ: 'ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಹೆಚ್ಚು ಸೀಟು ಸಿಗದಿದ್ದರೆ ಅದರ ಪರಿಣಾಮ ರಾಜ್ಯ ಸರ್ಕಾರದ ಭವಿಷ್ಯದ ಮೇಲೆ ಆಗಲಿದೆ' ಎಂದು ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

'ಈ ವಿಷಯ ಅವರಿಗೂ (ಕಾಂಗ್ರೆಸ್ ಮುಖಂಡರಿಗೆ) ಗೊತ್ತಿದೆ. ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹೆಚ್ಚು ಸೀಟು ಗೆಲ್ಲುವುದಿಲ್ಲ ಎಂದು ಸಮೀಕ್ಷೆಗಳು ಹೇಳುತ್ತಿವೆ. ಹೀಗಾಗಿ ಅವರಲ್ಲಿ ಭಯ ಹುಟ್ಟಿಕೊಂಡಿದ್ದು 'ಆಪರೇಷನ್ ಹಸ್ತ'ಕ್ಕೆ ಮುಂದಾಗಿದ್ದಾರೆ. ಆದರೆ, ಇದ್ಯಾವುದೂ ಯಶಸ್ವಿಯಾಗಲ್ಲ' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ಬರಗಾಲ ಘೋಷಿಸಲು ಒತ್ತಾಯ: 'ರಾಜ್ಯದಲ್ಲಿ ಜೂನ್ ತಿಂಗಳಿನ ಕೊನೆ ವಾರದವರೆಗೆ ಮಳೆಯಾಗಲಿಲ್ಲ. ಬಿತ್ತನೆ ಮಾಡಿದ್ದ ಬೆಳೆ ಸಂಪೂರ್ಣ ನಾಶವಾಗಿದೆ. ಜುಲೈ ಮತ್ತು ಆಗಸ್ಟ್‌ನಲ್ಲೂ ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಆಗಲಿಲ್ಲ. ರಾಜ್ಯ ಸರ್ಕಾರ ಕಾಲಹರಣ ಮಾಡದೆ ಕೂಡಲೇ ಬರಗಾಲ ತಾಲ್ಲೂಕುಗಳನ್ನು ಘೋಷಿಸಬೇಕು' ಎಂದು ಅವರು ಒತ್ತಾಯಿಸಿದರು.

'ಬೆಳೆ ಸಮೀಕ್ಷೆ ಮಾಡಿಸಿ, ಪರಿಹಾರ ಕೊಡಬೇಕು. ಕುಡಿಯುವ ನೀರಿನ ಕೊರತೆ ನೀಗಿಸಬೇಕು. ಕೇಂದ್ರ ಸರ್ಕಾರ ನೈಸರ್ಗಿಕ ವಿಪತ್ತು ಪರಿಹಾರದಡಿ ಒಂದು ಕಂತು ಪರಿಹಾರದ ಹಣ ಬಿಡುಗಡೆ ಮಾಡಿದ್ದು, ಜಿಲ್ಲಾಧಿಕಾರಿ ಖಾತೆಯಲ್ಲಿ ಹಣವಿದೆ. ಇದನ್ನು ರಾಜ್ಯ ಸರ್ಕಾರ ಬಳಸಿಕೊಳ್ಳಬೇಕು' ಎಂದು ಅವರು ಆಗ್ರಹಿಸಿದರು.

'ಜಲಾಶಯಗಳಲ್ಲಿ ನೀರಿನ ಕೊರತೆ ಇದೆ. ನೀರಿನ ನಿರ್ವಹಣೆ ಸಮರ್ಪಕವಾಗಿ ಆಗದಿದ್ದರೆ, ಮುಂದಿನ ದಿನಗಳಲ್ಲಿ ನೀರಿನ ಸಮಸ್ಯೆ ತೀವ್ರವಾಗಿ ಕಾಡಲಿದೆ. ವಿದ್ಯುತ್ ಉತ್ಪಾದನೆಯು ಕುಸಿದಿದೆ. ವಿದ್ಯುತ್ ಕಡಿತ ಮಾಡಲಾಗುತ್ತಿದೆ' ಎಂದರು.

'ಕನ್ನಡ ಶಿಕ್ಷಕರ ನೇಮಕಕ್ಕೆ ಸ್ವಾಗತ'

ಬೆಂಗಳೂರು: ಕಾಸರಗೋಡು ಜಿಲ್ಲೆ ಅಡೂರು ಕನ್ನಡ ಶಾಲೆಗೆ ಕನ್ನಡ ಭಾಷಾ ಶಿಕ್ಷಕರನ್ನು ನೇಮಿಸುವಂತೆ ಕೇರಳ ಹೈಕೋರ್ಟ್ ನಿರ್ದೇಶಿಸಿರುವುದು ಸಂತಸ ತಂದಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಹೇಳಿದರು.

ಈ ಶಾಲೆಯಲ್ಲಿ ಮಲೆಯಾಳ ಭಾಷಾ ಶಿಕ್ಷಕಿ ಕಾರ್ಯನಿರ್ವಹಿಸುತ್ತಿದ್ದಾರೆ. ಕಳೆದ ವರ್ಷ ಉದುಮ ಹಾಗೂ ಹೊಸಕೋಟೆ ಸರ್ಕಾರಿ ಪ್ರೌಢಶಾಲೆಗಳ ಕನ್ನಡ ವಿಭಾಗಗಳಿಗೂ ಮಲೆಯಾಳ ಭಾಷೆಯ ಸಮಾಜ ವಿಜ್ಞಾನ ಶಿಕ್ಷಕರನ್ನು ನೇಮಿಸಲಾಗಿತ್ತು. ಹೋರಾಟಗಾರರು ಕೇರಳ ಹೈಕೋರ್ಟ್ ಮೆಟ್ಟಿಲೇರಿದ್ದರು.

ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ 'ಎಲಿವೇಟೆಡ್ ವಾಕ್ ವೇ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಹೊಸದಾಗಿ 'ಎಲಿವೇಟೆಡ್ ವಾಕ್ ವೇ' ನಿರ್ಮಿಸಲಾಗಿದೆ. ಪ್ರಯಾಣಿಕರ ಬಳಕೆಗೆ ಲಭ್ಯವಾಗಿದೆ.

ನೂತನ ವಾಕ್‌ವೇ ಟರ್ಮಿನಲ್ 1ರಿಂದ ಪಿ–4 ಪಾರ್ಕಿಂಗ್ ಅನ್ನು ಸಂಪರ್ಕಿಸುತ್ತದೆ.

ಟರ್ಮಿನಲ್ 1 ಕಡೆಗೆ ಹಾಗೂ ಪಿ–4 ಪಾರ್ಕಿಂಗ್ ಕಡೆಗೆ ನಡೆದು ಸಾಗುವ ಪಾದಚಾರಿಗಳಿಗೆ ತಡೆರಹಿತ ಅನುಭವ ನೀಡಲು ಅಂದಾಜು 420 ಮೀಟರ್ ನಡಿಗೆ ಮಾರ್ಗ ವಿನ್ಯಾಸಗೊಳಿಸಲಾಗಿದೆ. ಇದು ಆಧುನಿಕ ವಿನ್ಯಾಸ ಒಳಗೊಂಡಿದ್ದು, ಪ್ರಯಾಣಿಕರು ಸುಲಭ ಹಾಗೂ ಆರಾಮದಾಯಕವಾದ ನಡಿಗೆ ಅನುಭವ ಪಡೆಯಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ವಿಮಾನ ನಿಲ್ದಾಣದಲ್ಲಿ ನಿರ್ಮಿಸಿರುವ 'ಎಲಿವೇಟೆಡ್ ವಾಕ್ ವೇ'

ಸುಧಾ ಮೂರ್ತಿ ಅವರಿಂದ ಒಟ್ಟು ₹ 2 ಕೋಟಿ ಬಹುಮಾನ ಪ್ರದಾನ

ವಿವಿಧ ಸಂಸ್ಥೆಗಳಿಗೆ 'ಆರೋಹಣ್' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ಫೋಸಿಸ್ ಫೌಂಡೇಶನ್ ನೀಡುವ 'ಆರೋಹಣ್'ನ ಮೂರನೇ ಆವೃತ್ತಿಯ ಪ್ರಶಸ್ತಿಗೆ ಆಯ್ಕೆಯಾದವರಿಗೆ ಬುಧವಾರ ಇನ್ಫೋಸಿಸ್ ಫೌಂಡೇಶನ್ ಸಂಸ್ಥಾಪಕಿ ಸುಧಾಮೂರ್ತಿ ಅವರು ಪ್ರದಾನ ಮಾಡಿದರು.

ಒಟ್ಟು ₹2 ಕೋಟಿ ಮೊತ್ತದ ಬಹುಮಾನವನ್ನು ವಿವಿಧ ಸಂಸ್ಥೆಗಳು ಮತ್ತು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡ ವ್ಯಕ್ತಿಗಳಿಗೆ ನೀಡಲಾಯಿತು. 2018ರಿಂದ ಈ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ.

ಸಮಾಜದ ಒಳಿತಿಗಾಗಿ ಮತ್ತು ದುರ್ಬಲ ವರ್ಗಗಳಿಗೆ ಪ್ರಯೋಜನವಾಗುವಂತಹ ಪರಿಹಾರಗಳನ್ನು ರೂಪಿಸಿದ ವ್ಯಕ್ತಿಗಳು, ತಂಡ ಮತ್ತು ಸ್ವಯಂ ಸೇವಾ ಸಂಘಗಳಿಗೆ ತಲಾ ₹ 50 ಲಕ್ಷ ನಗದು ಬಹುಮಾನ ನೀಡಲಾಯಿತು.

ಇನ್ಫೋಸಿಸ್ ಫೌಂಡೇಶನ್ ನೀಡುವ ಆರೋಹಣ್‌ನ ಮೂರನೇ ಆವೃತ್ತಿಯ ಪ್ರಶಸ್ತಿಗಳನ್ನು ಇನ್ಫೋಸಿಸ್ ಫೌಂಡೇಶನ್ ಸಂಸ್ಥಾಪಕಿ ಸುಧಾಮೂರ್ತಿ ಅವರು ಪ್ರದಾನ ಮಾಡಿದರು.

₹ 50 ಲಕ್ಷದ ಪ್ರಶಸ್ತಿಗೆ ಆಯ್ಕೆಯಾದವರು: ಗಂಭೀರ ಸ್ವರೂಪದ ಜಾಂಡೀಸ್ ಪರಿಸ್ಥಿತಿಗಳಿಗೆ ಚಿಕಿತ್ಸೆ ನೀಡಲು ಸಹಕಾರಿಯಾಗಿರುವ 'ಎನ್‌ಲೈಟ್ 360' ಎಂಬ ಸಾಧನ ಅಭಿವೃದ್ಧಿಪಡಿಸಿರುವ ಹೈದರಾಬಾದ್‌ನ ವಿ. ಸುಬ್ರಮಣ್ಯಂ ಪ್ರಸಾದ್ ಮುದ್ದಂ ಮತ್ತು ಅಖಿತಾ ಕೊಲ್ಲೊಜು ಆರೋಗ್ಯ ವಿಭಾಗದಲ್ಲಿ ಆಯ್ಕೆಯಾಗಿದ್ದಾರೆ.

'ಸ್ಮಾರ್ಟ್ ವಿಷನ್ ಗ್ಲಾಸಸ್' ಅಭಿವೃದ್ಧಿ ಪಡಿಸಿರುವ ಬೆಂಗಳೂರಿನ ಸೀತಾರಾಂ ಮುತ್ತಂಗಿ ಅವರನ್ನು ಶಿಕ್ಷಣ ವಿಭಾಗದಲ್ಲಿ ಆಯ್ಕೆ ಮಾಡಲಾಗಿದೆ.

ನಗರ ಪ್ರದೇಶಗಳ ಹಿಂದುಳಿದ ಮಹಿಳೆಯರಿಗೆ ನೈರ್ಮಲ್ಯೀಕರಿಸಿದ ಶೌಚಾಲಯಗಳ ವ್ಯವಸ್ಥೆ ಕಲ್ಪಿಸಲು 'ಒಂದು ಮನೆ ಒಂದು ಶೌಚಾಲಯ' ಎಂಬ ಪರಿಕಲ್ಪನೆಯ ಯೋಜನೆ ಜಾರಿಗೆ ತಂದಿರುವ ಪುಣೆಯ ಶೆಟ್ಟರ್ ಅಸೋಸಿಯೇಟ್ಸ್ ಸೇವಾ ಸಂಸ್ಥೆಯನ್ನು ಮಹಿಳಾ ಸಬಲೀಕರಣ ವಿಭಾಗದಲ್ಲಿ ಆಯ್ಕೆ ಮಾಡಲಾಗಿದೆ.

₹ 10 ಲಕ್ಷ ಪ್ರಶಸ್ತಿಗೆ ಆಯ್ಕೆಯಾದವರು: ಉಸಿರಾಟಕ್ಕೆ ಸಂಬಂಧಿತ ರೋಗಗಳನ್ನು ತಪಾಸಣೆ ಮಾಡಲು ಹೈದರಾಬಾದ್‌ನ ನಾರಾಯಣರಾವ್ ಶ್ರೀಪಾದ, ಮನಮೋಹನ್ ಜೈನ್ ಮತ್ತು ವೆಂಕಟ್ ಯೆಚೂರಿ ಅಭಿವೃದ್ಧಿ ಪಡಿಸಿದ 'ಸ್ವಾಸ', ಬೆಂಗಳೂರಿನ ಪ್ರೊ. ಸಾಯಿಶಿವ ಗೋರ್ತಿ, ಅರುಣ್ ಬಾಲಸುಬ್ರಮಣ್ಯನ್, ರಾಜೇಶ್ ಶ್ರೀನಿವಾಸ್ ಮತ್ತು ಯತೀಶ್ ಪ್ರಸಾದ್ ದಾಸರಿ ಅಭಿವೃದ್ಧಿಪಡಿಸಿದ 'ಸಿಕಲ್ ಸರ್ಟ್', ಬೆಂಗಳೂರಿನ ಜಾನ್ ಜಾಯ್ ಮತ್ತು ಸಂಜಯ್ ಕೆ.ಪಿಳ್ಳೈ ಅವರು ಅಭಿವೃದ್ಧಿಪಡಿಸಿರುವ ಸ್ವಯಂಚಾಲಿತ ಪೋರ್ಟೆಬಲ್ ಆಕ್ಸಿಜನ್ ಜನರೇಟರ್ 'ಪೋರ್ಟಿಯಾ', ಮಣಿಪಾಲದ ಮಯೂರು ಯು.ಶೆಟ್ಟಿ ಅಭಿವೃದ್ಧಿ ಪಡಿಸಿದ ಬ್ಯಾಟರಿ ಚಾಲಿತ ರೆಫ್ರಿಜರೇಶನ್ (ಲಸಿಕೆ ಸಾಗಿಸಲು) 'ಎಮ್ವೋಲಿಯೋ', ಮಹಿಳಾ ಕೈಮಗ್ಗ ನೇಕಾರರು ಎದುರಿಸುತ್ತಿರುವ ಮೊಣಕಾಲು ನೋವು ಮತ್ತು ಬೆನ್ನುನೋವಿನ ಸಮಸ್ಯೆಗಳನ್ನು ನಿವಾರಿಸಲು ಹೈದ್ರಾಬಾದ್‌ನ ಶಿವಕುಮಾರ್ ಮೋಧ ಅಭಿವೃದ್ಧಿ ಪಡಿಸಿರುವ ಮೋಧ ಪೆಡಲ್ ಆಪರೇಟಿಂಗ್ ಮಶಿನ್ ಆಯ್ಕೆಯಾಗಿವೆ.

2018ರಿಂದ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಈ ಬಾರಿ ಪ್ರಶಸ್ತಿಗಳಿಗೆ 2,400 ಅರ್ಜಿಗಳು ಬಂದಿದ್ದವು ಎಂದು ಇನ್ಫೋಸಿಸ್ ಫೌಂಡೇಶನ್ ವ್ಯವಸ್ಥಾಪಕ ನಿರ್ದೇಶಕ ಸಲೀಲ್ ಪರೇಖ್ ತಿಳಿಸಿದ್ದಾರೆ.

ಆರೋಹಣ್ ಪ್ರಶಸ್ತಿಗಳು ಮತ್ತು ವಿಜೇತರ ಬಗ್ಗೆ ಮಾಹಿತಿ ತಿಳಿದುಕೊಳ್ಳಲು www.infosys.com/aarohanಗೆ ಭೇಟಿ ನೀಡಬಹುದು.

'ಸಣ್ಣ ನೇಕಾರರಿಗೆ 10 ಎಚ್‌ಪಿ ಉಚಿತ ವಿದ್ಯುತ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಣ್ಣ ನೇಕಾರರಿಗೆ 10 ಎಚ್.ಪಿವರೆಗೆ ಉಚಿತ ವಿದ್ಯುತ್ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಶುಕ್ರವಾರ ನೇಕಾರರ ನಿಯೋಗದ ಜತೆ ಚರ್ಚಿಸಿದ ಬಳಿಕ ಈ ಮಹತ್ವದ ತೀರ್ಮಾನ ಪ್ರಕಟಿಸಿದ್ದಾರೆ.

'ಈ ಹಿಂದೆ ನೇಕಾರರಿಗೆ ನೀಡಿದ್ದ ಭರವಸೆಯನ್ನು ಈಡೇರಿಸಲಾಗಿದೆ. ಇದರಿಂದ ಸಣ್ಣ ನೇಕಾರರಿಗೆ ದೊಡ್ಡ ಅನುಕೂಲವಾಗಲಿದೆ' ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಕೈಮಗ್ಗ ಮತ್ತು ಜವಳಿ ಇಲಾಖೆ ಆಯುಕ್ತ ಗೌರವ್ ಗುಪ್ತಾ, ಆರ್ಥಿಕ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್, ಮುಖ್ಯಮಂತ್ರಿ ಕಾರ್ಯದರ್ಶಿ ಜಯರಾಂ, ಜವಳಿ ಇಲಾಖೆ ಕಾರ್ಯದರ್ಶಿ ಪಿ.ಎಸ್.ಎನ್.ಕುಮಾರ್ ಇದ್ದರು.

ರಸ್ತೆ ಮಧ್ಯೆಯೇ ಲಾರಿ ತಿರುವು

ರಾಮನಗರ: ನಗರ ಹೊರವಲಯ ಬಸವನಪುರ ಬಳಿ ಶುಕ್ರವಾರ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಚಲಿಸುತ್ತಿದ್ದ ನೀರಿನ ಟ್ಯಾಂಕ್‌ನ ಲಾರಿಯೊಂದು ಹಿಮ್ಮುಖವಾಗಿ ತಿರುವು ತೆಗೆದುಕೊಂಡು ಸಂಚರಿಸಿ ಆತಂಕ ಸೃಷ್ಟಿಸಿತು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಸೇರಿದ ಲಾರಿಯು ರಸ್ತೆ ಬದಿಯ ಗಿಡಗಳಿಗೆ ನೀರು ಹಾಯಿಸುತ್ತಿತ್ತು. ಗಿಡಗಳ ಸಾಲು ಮುಗಿದ ಬಳಿಕ ಮುಂದೆ ಸಿಗುವ ಯೂ ಟರ್ನ್‌ನಲ್ಲಿ ತಿರುವು ತೆಗೆದುಕೊಳ್ಳುವ ಬದಲು, ಚಾಲಕ ರಸ್ತೆಯಲ್ಲಿ ತಿರುವು ತೆಗೆದುಕೊಂಡಿದ್ದಾನೆ.

ಇದೇ ವೇಳೆ ವೇಗವಾಗಿ ಬಂದ ಕಾರೊಂದು ಬ್ರೇಕ್ ಹಾಕಿ ಲಾರಿಗೆ ಅತ್ಯಂತ ಸಮೀಪದಲ್ಲಿ ಬಂದು ನಿಂತಿದೆ. ಕೂದಲೆಳೆಯ ಅಂತರದಲ್ಲಿ ಅನಾಹುತ ತಪ್ಪಿದೆ. ಈ ವೇಳೆ ಲಾರಿ ಚಾಲಕ ಹಾಗೂ ಕಾರು ಚಾಲಕರ ಮಧ್ಯೆ ವಾಗ್ವಾದ ನಡೆದಿದೆ. ಲಾರಿ ಚಾಲಕನ ನಿರ್ಲಕ್ಷ್ಯಕ್ಕೆ ವಾಹನ ಸವಾರರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

'ಕಾಂಗ್ರೆಸ್‌ನವರು ಓಡಿ ಬಂದು ಸನ್ಮಾನಿಸುತ್ತಿರುವುದು ವಿಪರ್ಯಾಸ'

ಪೀಣ್ಯ ದಾಸರಹಳ್ಳಿ: 'ಈ ಹಿಂದೆಯೇ ಚಂದ್ರಯಾನ ಯಶಸ್ವಿ ಆಗಬೇಕಿತ್ತು. ಹಿಂದಿನ ಇಸ್ರೊ ಮುಖ್ಯಸ್ಥರಾಗಿದ್ದ ಕೇರಳದ ನಂಬಿ ನಾರಾಯಣ್ ಅವರನ್ನು ಕಾಂಗ್ರೆಸ್‌ನವರು ಜೈಲಿಗೆ ಹಾಕಿಸಿದ್ದರು. ಇಂದು ಕಾಂಗ್ರೆಸ್‌ನವರು ಓಡಿ ಬಂದು ಅಭಿನಂದಿಸುತ್ತಿರುವುದು ವಿಪರ್ಯಾಸ' ಎಂದು ಶಾಸಕ ಆರ್. ಅಶೋಕ್ ಲೇವಡಿ ಮಾಡಿದರು.

ಬಾಗಲಗುಂಟೆಯ ಬಿಜೆಪಿ ಕಚೇರಿಯಲ್ಲಿ ಅವರು ಮಾತನಾಡಿದರು.

ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಮಾತನಾಡಿ, ಮೋದಿ ಅವರ ನೇತೃತ್ವದಲ್ಲಿ ಚಂದ್ರಯಾನ-3 ಯಶಸ್ವಿಯಾಗಿದೆ. ಅವರು ಇನ್ನೂ ಏನೇನು ಮಾಡುತ್ತಾರೆ ಅಂತ ವಿಶ್ವವೇ ಬೆರಗಾಗಿ ನೋಡುತ್ತಿದೆ ಎಂದರು.

ಶಾಸಕ ಎಸ್. ಮುನಿರಾಜು ಮಾತನಾಡಿ, ಪ್ರಧಾನಿ ಅವರು ಶನಿವಾರ ಬೆಳಿಗ್ಗೆ ಇಸ್ರೊ ಕೇಂದ್ರಕ್ಕೆ ಬರುತ್ತಿದ್ದು, ನಾಗರಿಕರು ಜಾಲಹಳ್ಳಿ ಕ್ರಾಸ್ ಬಳಿ ಹಾಗೂ ರಸ್ತೆಯ ಎರಡು ಕಡೆ ಸೇರಿ 'ಭಾರತ್ ಮಾತಾಕಿ ಜೈ, ವಿಜ್ಞಾನಿಗಳಿಗೆ ಜೈ' ಎಂದು ಘೋಷಣೆ ಕೂಗಬೇಕು. ಪಕ್ಷದ ಬಾವುಟ, ಬ್ಯಾನರ್ ಯಾವುದಕ್ಕೂ ಅಲ್ಲಿ ಅವಕಾಶವಿಲ್ಲ' ಎಂದು ಹೇಳಿದರು.

ರೈಲ್ವೆ ವಲಯ ಸಲ್ಲಿಸಿದ ಪ್ರಮಾಣ ಪತ್ರ ಪರಿಗಣಿಸಿದ ಹೈಕೋರ್ಟ್

ಹುಬ್ಬಳ್ಳಿ–ಅಂಕೋಲಾ ರೈಲು ಮಾರ್ಗ: ಪಿಐಎಲ್ ವಿಲೇವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಷ್ಟ್ರೀಯ ವನ್ಯಜೀವಿ ಮಂಡಳಿ ಅಭಿಪ್ರಾಯದಂತೆ ಹುಬ್ಬಳ್ಳಿ-ಅಂಕೋಲಾ ಮಧ್ಯದ ಬ್ರಾಡ್‌ಗೇಜ್ ರೈಲು ಮಾರ್ಗದ ಕುರಿತಾದ ಪರಿಷ್ಕೃತ ಯೋಜನೆಯನ್ನು ಸಲ್ಲಿಸಲಾಗುವುದು' ಎಂಬ ನೈಋತ್ಯ ರೈಲ್ವೆ ವಲಯ ಸಲ್ಲಿಸಿದ ಪ್ರಮಾಣ ಪತ್ರವನ್ನು ಪರಿಗಣಿಸಿರುವ ಹೈಕೋರ್ಟ್; ಯೋಜನೆ ಪ್ರಶ್ನಿಸಿ ಪರಿಸರವಾದಿಗಳು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ವಿಲೇವಾರಿ ಮಾಡಿದೆ.

ಹುಬ್ಬಳ್ಳಿ-ಅಂಕೋಲಾ ಮಧ್ಯದ 164.44 ಕಿ.ಮಿ ಉದ್ದದ ರೈಲು ಮಾರ್ಗ ನಿರ್ಮಾಣಕ್ಕೆ ಕರ್ನಾಟಕ ವನ್ಯಜೀವಿ ಮಂಡಳಿ 2020ರ ಮಾರ್ಚ್ 20ರಂದು ನೀಡಿದ್ದ ಅನುಮತಿಯನ್ನು ಆಕ್ಷೇಪಿಸಿ, 'ಪ್ರಾಜೆಕ್ಟ್ ವೃಕ್ಷ ಫೌಂಡೇಷನ್' ಮತ್ತು ಬೆಳಗಾವಿಯ ಗಿರಿಧರ್ ಕುಲಕರ್ಣಿ ಸಲ್ಲಿಸಿದ್ದ ಪ್ರತ್ಯೇಕ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರೈಲ್ವೆ ಸಚಿವಾಲಯದ ಪರ ವಕೀಲರು, ನೈಋತ್ಯ ರೈಲ್ವೆ ವಲಯದ ಉಪ ಮುಖ್ಯ ಎಂಜಿನಿಯರ್ ಸಿ.ಪಿ.ರೆಡ್ಡಿ ಅವರ ಪ್ರಮಾಣ ಪತ್ರವನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ಪ್ರಮಾಣ ಪತ್ರದಲ್ಲಿ ಏನಿದೆ?: 'ಯೋಜನೆಯನ್ನು 1996-97ರಲ್ಲಿಯೇ ಅನುಮೋದಿಸಲಾಗಿತ್ತು. ಆದರೆ, ಹಲವು ವರ್ಷ ಕಳೆದರೂ ಪೂರ್ಣಗೊಳಿಸಲಾಗಿಲ್ಲ. ಹುಬ್ಬಳ್ಳಿಯಿಂದ 34 ಕಿ.ಮೀ. ದೂರದವರೆಗೆ ಅರಣ್ಯ ಪ್ರದೇಶವಿಲ್ಲದ ಜಾಗದಲ್ಲಿ ₹ 100 ಕೋಟಿ ವೆಚ್ಚದಲ್ಲಿ ಯೋಜನೆಯನ್ನು ಜಾರಿಗೊಳಿಸಲಾಗಿದೆ. ಉಳಿದ ಮಾರ್ಗವು ಅರಣ್ಯದಲ್ಲಿ ಹಾದು ಹೋಗುವುದರಿಂದ ಯೋಜನೆಯ ಅನುಮತಿಗಳಿಗೆ ಕಾಯಲಾಗುತ್ತಿದೆ. ಇದರಿಂದ ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿಯಾಗುತ್ತಿಲ್ಲ ಮತ್ತು ಯೋಜನಾ ವೆಚ್ಚ ಹೆಚ್ಚಾಗುತ್ತಿದೆ' ಎಂದು ಪ್ರಮಾಣ ಪತ್ರದಲ್ಲಿ ವಿವರಿಸಲಾಗಿದೆ.

'ಹೈಕೋರ್ಟ್ ಆದೇಶದಂತೆ ರಾಷ್ಟ್ರೀಯ ವನ್ಯಜೀವಿ ಮಂಡಳಿ ಸಮಿತಿ ರಚನೆ ಮಾಡಿತ್ತು. ಈ ಸಮಿತಿಯು ಸ್ಥಳ ಪರಿಶೀಲನೆ ನಡೆಸಿ ಈಗಾಗಲೇ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದೆ. ಹುಬ್ಬಳ್ಳಿ-ಅಂಕೋಲಾ ರೈಲ್ವೆ ಮಾರ್ಗದ ಕುರಿತು ರೈಲ್ವೆ ಸಚಿವಾಲಯದ ಪರವಾಗಿ ಪ್ರಸ್ತಾವ ಮಂಡಿಸಲಾಗಿದೆ. ಸಮಿತಿಯ ಶಿಫಾರಸುಗಳ ಅನ್ವಯ ಪರಿಷ್ಕೃತ ಯೋಜನಾ ವರದಿ ಸಲ್ಲಿಸುವಂತೆ ರೈಲ್ವೆ ಇಲಾಖೆಗೆ ಸೂಚಿಸಲಾಗಿದೆ' ಎಂದು ವಿವರಿಸಲಾಗಿದೆ.

'ಹುಬ್ಬಳ್ಳಿಯ ನೈಋತ್ಯ ರೈಲ್ವೆ ವಲಯವು, ರಾಷ್ಟ್ರೀಯ ವನ್ಯಜೀವಿ ಮಂಡಳಿಯ ನಿರ್ದೇಶನಗಳನ್ನು ಪಾಲಿಸಬೇಕಿದೆ ಮತ್ತು ಡೆಹ್ರಾಡೂನ್ ಭಾರತೀಯ ವನ್ಯಜೀವಿ ಕೇಂದ್ರದ ಜೊತೆ ಸಮಾಲೋಚನೆ ನಡೆಸಿ ಯೋಜನೆಯ ಮಿಟಿಗೇಷನ್ ಪ್ಲಾನ್ (ಗಂಭೀರತೆ ತಗ್ಗಿಸುವ) ಅನ್ನು ಸಿದ್ಧಪಡಿಸಬೇಕು. ಎನ್‌ಬಿಡಬ್ಲ್ಯೂಎಲ್, ಕೇಂದ್ರ ಪರಿಸರ ಮತ್ತು ಅರಣ್ಯ ಹಾಗೂ ಹವಾಮಾನ ವೈಪರೀತ್ಯ ಸಚಿವಾಲಯದ ನಿರ್ದೇಶನಗಳನ್ನು ಪಾಲಿಸಲಾಗುವುದು ಮತ್ತು ಅಗತ್ಯ ಅನುಮತಿಗಳನ್ನು ಪಡೆದ ನಂತರವೇ ಯೋಜನೆಯನ್ನು ಜಾರಿಗೊಳಿಸಲಾಗುವುದು' ಎಂದರು.

ಸಂಕ್ಷಿಪ್ತ ಸುದ್ದಿ

ಈರುಳ್ಳಿಯತ್ತಲೂ ಗಮನಹರಿಸಿ: 'ಸಾಮ್ನಾ'

ಮುಂಬೈ (ಪಿಟಿಐ): ನರೇಂದ್ರ ಮೋದಿ ಸರ್ಕಾರವು ಸೂರ್ಯನ ಬಳಿಗೂ ನೌಕೆಯನ್ನು ಕಳುಹಿಸಬಹುದು, ಆದರೆ ಮೊದಲು ದೇಶದ ಈರುಳ್ಳಿ ವಿಚಾರದತ್ತ ಚಿತ್ತಹರಿಸಬೇಕು ಎಂದು ಶಿವಸೇನಾ (ಉದ್ಧವ್ ಠಾಕ್ರೆ ಬಣ) ತನ್ನ ಮುಖವಾಣಿ ಸಾಮ್ನಾದ ಸಂಪಾದಕೀಯದಲ್ಲಿ ಟೀಕಿಸಿದೆ.

ಈರುಳ್ಳಿ ರಫ್ತಿನ ಮೇಲೆ ಸುಂಕ ವಿಧಿಸಿರುವ ಕೇಂದ್ರ ಸರ್ಕಾರದ ನಿರ್ಧಾರದ ವಿರುದ್ಧವೂ ಹರಿಹಾಯ್ದಿದೆ. ಈರುಳ್ಳಿ ಸಮಸ್ಯೆಯತ್ತ ಗಮನ ಹರಿಸದಿದ್ದರೆ 2024ರ ಲೋಕಸಭಾ ಚುನಾವಣೆಯಲ್ಲಿ ಆಡಳಿತಾರೂಢ ಪಕ್ಷಕ್ಕೆ ಕಷ್ಟವಾಗಬಹುದು ಎಂದೂ ಹೇಳಿದೆ. ಮಹಾರಾಷ್ಟ್ರದ ನಾಸಿಕ್, ಅಹಮದನಗರ ಮತ್ತು ಪುಣೆ ಜಿಲ್ಲೆಗಳ ಹೆಚ್ಚಿನ ಸಂಖ್ಯೆಯ ರೈತರು ಈರುಳ್ಳಿ ಬೆಳೆಯನ್ನು ಆಶ್ರಯಿಸಿದ್ದಾರೆ.

ಮಾಧ್ಯಮಗಳಿಗೆ ಕೇಂದ್ರ ಎಚ್ಚರಿಕೆ

ನವದೆಹಲಿ (ಪಿಟಿಐ): ಆನ್‌ಲೈನ್ ಬೆಟ್ಟಿಂಗ್ ವೇದಿಕೆಗಳ ಕುರಿತು ಜಾಹೀರಾತು ಪ್ರಕಟಿಸುವ ಅಥವಾ ಪ್ರಸಾರ ಮಾಡುವ ಮಾಧ್ಯಮಗಳಿಗೆ ಕೇಂದ್ರ ಸರ್ಕಾರ ಶುಕ್ರವಾರ ಎಚ್ಚರಿಕೆ ನೀಡಿದೆ.

ವಾರ್ತಾ ಮತ್ತು ಪ್ರಸಾರ ಖಾತೆ ಸಚಿವಾಲಯವು ದಿನಪತ್ರಿಕೆಗಳು, ಸುದ್ದಿ ವಾಹಿನಿಗಳು, ಡಿಜಿಟಲ್ ಮಾಧ್ಯಮಗಳು, ಸಾಮಾಜಿಕ ಜಾಲತಾಣಗಳಿಗೆ ಮಾರ್ಗಸೂಚಿ ಬಿಡುಗಡೆ ಮಾಡಿದೆ. ಬೆಟ್ಟಿಂಗ್, ಜೂಜು ನಡೆಸುವ ವೇದಿಕೆಗಳಿಗೆ ಸಂಬಂಧಿಸಿದ ಜಾಹೀರಾತು ಪ್ರಕಟಿಸುತ್ತಿದ್ದಲ್ಲಿ ಈ ಕೂಡಲೇ ನಿಲ್ಲಿಸುವಂತೆ ಸೂಚಿಸಿದೆ.

ಆದೇಶ ಉಲ್ಲಂಘಿಸಿದಲ್ಲಿ ಕಾನೂನು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದೆ.

ಕೇರಳ: ಜೀಪ್ ಕಮರಿಗೆ ಉರುಳಿ 9 ಮಂದಿ ಸಾವು

ವಯನಾಡ್ (ಪಿಟಿಐ): ಕೇರಳದ ವಯನಾಡ್ ಜಿಲ್ಲೆಯಲ್ಲಿ ಶುಕ್ರವಾರ ಜೀಪ್ ಕಮರಿಗೆ ಉರುಳಿ ಬಿದ್ದು ಒಂಬತ್ತು ಮಂದಿ ದಿನಗೂಲಿ ಮಹಿಳೆಯರು ಮೃತಪಟ್ಟಿದ್ದಾರೆ.

ಚಹಾ ತೋಟದ ಕಾರ್ಮಿಕ ಮಹಿಳೆಯರಿದ್ದ ಜೀಪ್ ಮಕ್ಕಿಮಲೆಯಿಂದ ಮರಳುತ್ತಿದ್ದಾಗ ವಳಾಡ್ -ಮಾನಂದವಾಡಿ ರಸ್ತೆಯಲ್ಲಿ ಸುಮಾರು 25 ಮೀಟರ್ ಆಳದ ಕಮರಿಗೆ ಉರುಳಿದೆ. ಜೀಪ್‌ನಲ್ಲಿ ಚಾಲಕ ಸೇರಿ 14 ಮಂದಿ ಪ್ರಯಾಣಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಇಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ ಎಂದು ಹೇಳಿದ್ದಾರೆ.

ಪ್ರಯಾಣಿಕ ಅಸ್ವಸ್ಥ: ವಿಮಾನ ತುರ್ತು ಭೂಸ್ಪರ್ಶ

ಜೈಪುರ (ಪಿಟಿಐ): ದೆಹಲಿಯಿಂದ ಮಧ್ಯಪ್ರದೇಶದ ಜಬಲ್‌ಪುರಕ್ಕೆ ಶುಕ್ರವಾರ ತೆರಳುತ್ತಿದ್ದ ವಿಮಾನದಲ್ಲಿ ಪ್ರಯಾಣಿಕರೊಬ್ಬರು ಅಸ್ವಸ್ಥರಾದ ಕಾರಣ ವಿಮಾನವನ್ನು ರಾಜಸ್ಥಾನದ ಜೈಪುರದಲ್ಲಿ ತುರ್ತು ಭೂಸ್ಪರ್ಶ ಮಾಡಲಾಗಿದೆ.

ಅಲಯನ್ಸ್ ಏರ್ ಸಂಸ್ಥೆಯ ವಿಮಾನವು ದೆಹಲಿ ವಿಮಾನ ನಿಲ್ದಾಣದಿಂದ ಹೊರಟ ಕೆಲ ಸಮಯದ ಬಳಿಕ 52 ವರ್ಷದ ವ್ಯಕ್ತಿಯೊಬ್ಬರು ರಕ್ತದೊತ್ತಡ ಕಡಿಮೆಯಾದ ಕಾರಣ ಅಸ್ವಸ್ಥರಾದರು. ಈ ಕಾರಣಕ್ಕೆ ವಿಮಾನವನ್ನು ಜೈಪುರ ವಿಮಾನ ನಿಲ್ದಾಣದಲ್ಲಿ ಇಳಿಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಸ್ವಸ್ಥರಾದ ವ್ಯಕ್ತಿಯನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಳಿಕ ವಿಮಾನವು ಜಬಲ್‌ಪುರಕ್ಕೆ ತೆರಳಿದೆ ಎಂದು ವಿವರಿಸಿದ್ದಾರೆ.

ಮಣಿಪುರ ಗಲಭೆ ವಿಚಾರಣೆ ಅಸ್ಸಾಂಗೆ

ಒಂದನೇ ಪುಟದಿಂದ...

ಹಿಂಸಾಚಾರದಲ್ಲಿ ಎರಡೂ ಕಡೆಯವರೂ ನೊಂದಿದ್ದಾರೆ. ಹೀಗಾಗಿ ಕ್ರಿಮಿನಲ್ ನ್ಯಾಯದ 'ನ್ಯಾಯೋಚಿತ ಪ್ರಕ್ರಿಯೆ'ಯನ್ನು ಖಾತರಿಪಡಿಸುವ ಉದ್ದೇಶದಿಂದ ಈ ಕ್ರಮ ಅನುಸರಿಸಿರುವುದಾಗಿ ಕೋರ್ಟ್ ಹೇಳಿದೆ.

ಮಣಿಪುರದ ಹಿಂಸಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ಕೋರ್ಟ್ ಹಲವು ನಿರ್ದೇಶನಗಳನ್ನು ನೀಡಿದೆ. ಸಂತ್ರಸ್ತರಿಗೆ ಮಣಿಪುರದಿಂದಲೇ ವಿಡಿಯೊ ಕಾನ್ಫರೆನ್ಸ್ ಮೂಲಕ ಹೇಳಿಕೆ ದಾಖಲಿಸಲು ಅವಕಾಶ ಮಾಡಿಕೊಡಬೇಕು ಎಂದು ಸೂಚಿಸಿದೆ.

ವಿಚಾರಣೆಗೆ ಗೊತ್ತುಪಡಿಸಿದ ನ್ಯಾಯಾಲಯಗಳಲ್ಲಿ ಆರೋಪಿಗಳ ಹಾಜರುಪಡಿಸುವಿಕೆ, ಬಂಧನ ಮತ್ತು ಬಂಧನದ ಅವಧಿ ವಿಸ್ತರಣೆಗೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ಆನ್‌ಲೈನ್ ಮೂಲಕ ನಡೆಸಲು ಸಿಬಿಐಗೆ ಅವಕಾಶವನ್ನೂ ನೀಡಿದೆ.

ಗುವಾಹಟಿ ನ್ಯಾಯಾಲಯದಲ್ಲಿ ಆನ್‌ಲೈನ್ ಮೂಲಕ ವಿಚಾರಣೆ ನಡೆಸಲು ಅನುಕೂಲವಾಗುವಂತೆ ಸಮರ್ಪಕವಾದ ಇಂಟರ್ನೆಟ್ ಸೇವೆ ಒದಗಿಸುವಂತೆ ಮಣಿಪುರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ಪಂಜಾಬ್ ಮುಖ್ಯಮಂತ್ರಿ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ರಾಜ್ಯಪಾಲ ಬನ್ವಾರಿಲಾಲ್

ರಾಷ್ಟ್ರಪತಿ ಆಡಳಿತ ಜಾರಿಯ ಎಚ್ಚರಿಕೆ



ಬನ್ವಾರಿಲಾಲ್ ಪುರೋಹಿತ್

ಚಂಡೀಗಢ (ಪಿಟಿಐ):ಪಂಜಾಬ್‌ನಲ್ಲಿ ರಾಷ್ಟ್ರಪತಿ ಆಡಳಿತ ಹೇರಲು ಶಿಫಾರಸು ಮಾಡಬೇಕಾಗುತ್ತದೆ ಎಂದು ರಾಜ್ಯಪಾಲ ಬನ್ವಾರಿಲಾಲ್ ಪುರೋಹಿತ್ ಅವರು ಮುಖ್ಯಮಂತ್ರಿ ಭಗವಂತ ಮಾನ್‌ಗೆ ಶುಕ್ರವಾರ ಎಚ್ಚರಿಕೆ ನೀಡಿದ್ದಾರೆ.

36 ಶಾಲೆಗಳ ಪ್ರಾಂಶುಪಾಲರನ್ನು ತರಬೇತಿಗಾಗಿ ವಿದೇಶಕ್ಕೆ ಕಳುಹಿಸಿದ್ದು ಮತ್ತು ಪಂಜಾಬ್‌ನಲ್ಲಿ ವ್ಯಾಪಕವಾಗಿ ಮಾದಕ ವಸ್ತು ಲಭ್ಯವಾಗುತ್ತಿರುವ ಕುರಿತು ಉತ್ತರ ನೀಡುವಂತೆ ಆಗಸ್ಟ್ 1ರಂದು ರಾಜ್ಯಪಾಲರು ಬರೆದಿದ್ದ ಪತ್ರಗಳಿಗೆ ಸಿಎಂ ಮಾನ್ ಈ ವರೆಗೆ ಉತ್ತರಿಸಿಲ್ಲ ಎನ್ನಲಾಗಿದೆ. ಹೀಗಾಗಿ ರಾಜ್ಯಪಾಲ ಪುರೋಹಿತ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ತಮ್ಮ ಪತ್ರಗಳಿಗೆ ಪ್ರತಿಕ್ರಿಯೆ ಸಿಗದ ವಿಚಾರ ಪ್ರಸ್ತಾಪಿಸಿ ಶುಕ್ರವಾರ ಮುಖ್ಯಮಂತ್ರಿಗೆ ಮತ್ತೊಂದು ಪತ್ರ ಬರೆದಿರುವ ರಾಜ್ಯಪಾಲರು, 'ನಾನು ಕೇಳಿದ ಮಾಹಿತಿಯನ್ನು ನೀವು ಉದ್ದೇಶಪೂರ್ಕವಾಗಿಯೇ ನಿರಾಕರಿಸುತ್ತಿದ್ದೀರಿ ಎಂದು ಭಾವಿಸಬಹುದಾಗಿದೆ' ಎಂದು ಹೇಳಿದ್ದಾರೆ.

'ಸಂವಿಧಾನದ ವಿಧಿ 356ರ ಅಡಿಯಲ್ಲಿ ರಾಷ್ಟ್ರಪತಿಗಳಿಗೆ ನಾನು ವರದಿ ನೀಡುವುದಕ್ಕೂ ಮುನ್ನ, ಐಪಿಸಿಯ 124ನೇ ಸೆಕ್ಷನ್ ಅಡಿಯಲ್ಲಿ ಕ್ರಿಮಿನಲ್ ಪ್ರಕ್ರಿಯೆ ಆರಂಭಿಸುವುದಕ್ಕೂ ಮೊದಲು ನಾನು ಕೇಳಿರುವ ಮಾಹಿತಿಯನ್ನು ಒದಗಿಸಿ. ಇಲ್ಲದೇ ಹೋದರೆ, ಸಂವಿಧಾನದ ಅಡಿಯಲ್ಲಿ ಕ್ರಮ ಕೈಗೊಳ್ಳದೇ ನನಗೆ ಯಾವ ಆಯ್ಕೆಯೂ ಉಳಿಯದು' ಎಂದು ರಾಜ್ಯಪಾಲರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ರಾಜ್ಯಪಾಲರ ವರದಿ ಆಧರಿಸಿ ರಾಜ್ಯದಲ್ಲಿ ಸಂವಿಧಾನದ 356ನೇ ವಿಧಿಯ ಅನ್ವಯ ರಾಷ್ಟ್ರಪತಿ ಆಡಳಿತ ಜಾರಿಗೆ ಕೇಂದ್ರ ಸರ್ಕಾರವು ಶಿಫಾರಸು ಮಾಡಬಹುದು. ಇನ್ನು ಐಪಿಸಿಯ ಸೆಕ್ಷನ್ 124, ರಾಷ್ಟ್ರಪತಿ ಅಥವಾ ರಾಜ್ಯಪಾಲರು ತಮ್ಮ ಕಾನೂನುಬದ್ಧ ಅಧಿಕಾರವನ್ನು ಚಲಾಯಿಸದಂತೆ ನಿರ್ಬಂಧಿಸುವುದಕ್ಕೆ ಸಂಬಂಧಿಸಿದ್ದಾಗಿದೆ.

ರಾಜ್ಯಪಾಲರು ಕೇಳಿದ ಮಾಹಿತಿಯನ್ನು ಒದಗಿಸದಿರುವುದು ಸಂವಿಧಾನದ ವಿಧಿ 167(ಬಿ) ಅಡಿಯಲ್ಲಿ ಮುಖ್ಯಮಂತ್ರಿ ಅವರಿಗೆ ದತ್ತವಾಗಿರುವ ಸಾಂವಿಧಾನಿಕ ಕರ್ತವ್ಯದ ಉಲ್ಲಂಘನೆಯಾಗುತ್ತದೆ ಎಂದೂ ಪುರೋಹಿತ್ ಎಚ್ಚರಿಸಿದ್ದಾರೆ.

ಅಜಿತ್ ಪವಾರ್ ನಾಯಕತ್ವ: ಶರದ್ ಪವಾರ್ ಭಿನ್ನ ಹೇಳಿಕೆ

ಪುಣೆ (ಪಿಟಿಐ): 'ರಾಷ್ಟ್ರೀಯವಾದಿ ಸಮಾಜವಾದಿ ಪಕ್ಷವು (ಎನ್‌ಸಿಪಿ) ಇಬ್ಭಾಗವಾಗಿಲ್ಲ. ಅಜಿತ್ ಪವಾರ್ ಪಕ್ಷದ ನಾಯಕ' ಎಂದು ಶುಕ್ರವಾರ ಹೇಳಿಕೆ ನೀಡಿದ್ದ ಪಕ್ಷದ ಮುಖಂಡ ಶರದ್ ಪವಾರ್, ಕೆಲ ಹೊತ್ತಿನಲ್ಲೇ ಭಿನ್ನ ಹೇಳಿಕೆ ನೀಡಿ ಅಚ್ಚರಿ ಮೂಡಿಸಿದರು.

'ಅಜಿತ್ ಪವಾರ್ ಪಕ್ಷದ ನಾಯಕ ಎಂದು ನಾನು ಹೇಳಿಯೇ ಇಲ್ಲ' ಎಂದೂ ತಮ್ಮ ನಿಲುವನ್ನು ಸಮರ್ಥಿಸಿಕೊಂಡರು.

ಬಾರಾಮತಿಯಲ್ಲಿ ಬೆಳಿಗ್ಗೆ ಸುದ್ದಿಗಾರರ ಜೊತೆಗೆ ಮಾತನಾಡಿದ ಶರದ್ ಪವಾರ್, ಕೆಲವು ಮುಖಂಡರು ಭಿನ್ನ ನಿರ್ಧಾರ ಕೈಗೊಂಡು ಪಕ್ಷದಿಂದ ಹೊರನಡೆದಿದ್ದಾರೆ. ಇದನ್ನು ಇಬ್ಭಾಗ ಎಂದು ಹೇಳಲಾಗದು ಎಂದು ಪ್ರತಿಪಾದಿಸಿದರು.

ತಮ್ಮ ಪುತ್ರಿ, ಸಂಸದೆ ಸುಪ್ರಿಯಾ ಸುಳೆ ಅವರು, 'ಪಕ್ಷವು ಇಬ್ಭಾಗವಾಗಿಲ್ಲ. ಅಜಿತ್ ಪವಾರ್ ನಮ್ಮ ನಾಯಕ' ಎಂದು ಹೇಳಿದ್ದಾರೆ ಎಂದು ಗಮನಸೆಳೆದಾಗ, 'ಹೌದು, ಆ ವಿಷಯದಲ್ಲಿ ಯಾವುದೇ ವಿವಾದ ಇಲ್ಲ' ಎಂದು ಪ್ರತಿಕ್ರಿಯಿಸಿದರು.

ಈ ಹೇಳಿಕೆಯು ಕಾರ್ಯಕರ್ತರಲ್ಲಿ ಗೊಂದಲಕ್ಕೆ ಆಸ್ಪದವಾಗಿದೆ ಎಂಬುದು ಅರಿವಾಗುತ್ತಿದ್ದಂತೆ, ಕೆಲ ಹೊತ್ತಿನ ಬಳಿಕ ಸತಾರಾದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ, 'ನಾನು ಹಾಗೆ ಹೇಳಿಲ್ಲ' ಎಂದು ತಮ್ಮ ಮೊದಲಿನ ಹೇಳಿಕೆಯನ್ನು ಅಲ್ಲಗಳೆದರು.

'ಅಜಿತ್ ಪವಾರ್ ಅವರು ಪಕ್ಷದ ನಾಯಕ ಎಂದು ನಾನು ಹೇಳಿಲ್ಲ. ಸುಪ್ರಿಯಾ ಹಾಗೇ ಹೇಳಿರಬಹುದು. ಆಕೆ ಅಜಿತ್‌ನ ತಂಗಿ. ಇದರಲ್ಲಿ ರಾಜಕೀಯ ಹುಡುಕುವ ಅಗತ್ಯವಿಲ್ಲ' ಎಂದು ವಿವರಿಸಿದರು.

ಆದರೆ, ಸುಪ್ರಿಯಾ ಅವರ ಹೇಳಿಕೆಯನ್ನು ನೀವು ಅನುಮೋದಿಸುವಿರಾ ಎಂಬ ಪ್ರಶ್ನೆಗೆ, 'ನಾನಾ? ನೀವುಗಳು ತಪ್ಪಾಗಿ ಭಾವಿಸಿದ್ದೀರಿ. ಪಕ್ಷದಿಂದ ಹೊರನಡೆದವರು ನಾಯಕರಾಗಿ ಇರಲು ಸಾಧ್ಯವೇ ಇಲ್ಲ' ಎಂದು ಪ್ರತಿಕ್ರಿಯಿಸಿದರು.

ಲಡಾಖ್ ವಿಷಯದಲ್ಲಿ ಪ್ರಧಾನಿ ಸತ್ಯ ಹೇಳುತ್ತಿಲ್ಲ: ರಾಹುಲ್

ರಾಹುಲ್ ಗಾಂಧಿ

ಮುಖ್ಯಾಂಶಗಳು
- ಲಡಾಖ್ ಪ್ರವಾಸದಲ್ಲಿರುವ ಕಾಂಗ್ರೆಸ್ ನಾಯಕ
- ಲಡಾಖ್ ಬಗ್ಗೆ ಸಂಸತ್ ಅಧಿವೇಶನದಲ್ಲಿ ಧ್ವನಿ ಎತ್ತುವ ಭರವಸೆ

ಕಾರ್ಗಿಲ್ (ಪಿಟಿಐ): ನಮ್ಮ ಭೂಮಿಯನ್ನು ಚೀನಾ ಅತಿಕ್ರಮಣ ಮಾಡುತ್ತಿದೆ ಎಂಬುದು ಲಡಾಖ್‌ನ ಪ್ರತಿಯೊಬ್ಬರಿಗೂ ಗೊತ್ತು. ಆದರೆ ಪ್ರಧಾನಿ ನರೇಂದ್ರ ಮೋದಿ ಅವರು, 'ಒಂದು ಇಂಚು ಭೂಮಿಯನ್ನೂ ಚೀನಾ ವಶಕ್ಕೆ ಪಡೆದಿಲ್ಲ' ಎನ್ನುವ ಮೂಲಕ ಸುಳ್ಳು ಹೇಳುತ್ತಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದರು.

ಜೊಹಾನಸ್‌ಬರ್ಗ್‌ನಲ್ಲಿ ನಡೆದ ಬ್ರಿಕ್ಸ್ ರಾಷ್ಟ್ರಗಳ ಸಮಾವೇಶದ ಮಧ್ಯೆ ಪ್ರಧಾನಿ ಮೋದಿ ಮತ್ತು ಚೀನಾ ಅಧ್ಯಕ್ಷ ಷಿ–ಜಿನ್‌ಪಿಂಗ್ ಬುಧವಾರ ಭೇಟಿಯಾಗಿ ಮಾತುಕತೆ ನಡೆಸಿದ ಬೆನ್ನಲ್ಲೇ ರಾಹುಲ್ ಈ ಹೇಳಿಕೆ ನೀಡಿದ್ದಾರೆ.

ಲಡಾಖ್ ಪ್ರವಾಸದ ಕೊನೆಯ ದಿನ ಸಾರ್ವಜನಿಕ ಸಭೆ ಉದ್ದೇಶಿಸಿ ಮಾತನಾಡಿದ ಅವರು, 'ಕಳೆದವಾರ ಬೈಕ್‌ನಲ್ಲಿ ಇಡೀ ಲಡಾಖ್ ಸುತ್ತಿಬಂದೆ. ಇದೊಂದು ಕಾರ್ಯತಂತ್ರದ ಪ್ರದೇಶ. ಪಾಂಗಾಂಗ್‌ಗೆ ತೆರಳಿದಾಗ, ಭಾರತದ ಸಾವಿರಾರು ಕಿಲೋಮೀಟರ್ ಪ್ರದೇಶ ವನ್ನು ಚೀನಾ ಅತಿಕ್ರಮಣ ಮಾಡಿದೆ ಎಂಬುದು ಸ್ಪಷ್ಟವಾಯಿತು. ದುರದೃಷ್ಟವಶಾತ್, ಪ್ರಧಾನಿಯವರು 'ಒಂದು ಇಂಚು ಭೂಮಿಯನ್ನೂ ಚೀನಾ ಅತಿಕ್ರಮಣ ಮಾಡಿಲ್ಲ' ಎಂದು ವಿರೋಧ ಪಕ್ಷಗಳ ಸಭೆಯಲ್ಲಿ ತಿಳಿಸಿದ್ದರು. ಈ ವಿಷಯದಲ್ಲಿ ಅವರು ಸತ್ಯ ಹೇಳುತ್ತಿಲ್ಲ' ಎಂದು ಟೀಕಿಸಿದರು.

'ಇಲ್ಲಿನ ಜನರ ರಾಜಕೀಯ ಧ್ವನಿಯನ್ನು ದಮನ ಮಾಡಲಾಗಿದೆ. ಉದ್ಯೋಗದ ಕುರಿತ ಸರ್ಕಾರದ ಎಲ್ಲ ಭರವಸೆಗಳೂ ಸುಳ್ಳಾಗಿವೆ. ಮೊಬೈಲ್ ನೆಟ್‌ವರ್ಕ್ ಮತ್ತು ವಿಮಾನಯಾನ ಸೌಲಭ್ಯದ ಕೊರತೆ ಇದೆ. ಮುಂದಿನ ಸಂಸತ್ ಅಧಿವೇಶನದಲ್ಲಿ ಈ ಎಲ್ಲ ವಿಷಯಗಳು ಕುರಿತು ಧ್ವನಿ ಎತ್ತುತ್ತೇನೆ' ಎಂದು ಹೇಳಿದರು.

'ಲಡಾಖ್‌ನ ಮೂಲೆಮೂಲೆಗೂ ಭೇಟಿ ನೀಡಿದೆ. ಯುವ ಜನತೆ, ತಾಯಂದಿರು, ಸಹೋದರಿಯರು ಮತ್ತು ಬಡವರೊಂದಿಗೆ ಮಾತನಾಡಿದೆ. ಕೆಲವರು ಅವರದೇ ಮನದ ಮಾತು (ಮನ್ ಕೀ ಬಾತ್) ಮಾತನಾಡುತ್ತಾರೆ. ನಾನು ನಿಮ್ಮ 'ಮನದ ಮಾತು' ಕೇಳಲು ಬಯಸುತ್ತೇನೆ' ಎಂದು ಪರೋಕ್ಷವಾಗಿ ಪ್ರಧಾನಿ ಮೋದಿ ಅವರ ರೇಡಿಯೊ ಕಾರ್ಯಕ್ರಮವನ್ನು ಟೀಕಿಸಿದರು.

ಸುದ್ದಿ 2 ನಿಮಿಷ

'ಜಾರಿ ನಿರ್ದೇಶನಾಲಯ, ಐ.ಟಿ ಜೊತೆ ಹೋರಾಟವೇ ಸವಾಲು'

ನವದೆಹಲಿ (ಪಿಟಿಐ): 'ರಾಜ್ಯದಲ್ಲಿ ಬಿಜೆಪಿ ಬದಲಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಆದಾಯ ತೆರಿಗೆ (ಐ.ಟಿ) ಇಲಾಖೆಗಳೊಂದಿಗೆ ಹೋರಾಡುವುದೇ ದೊಡ್ಡ ಸವಾಲು' ಎಂದು ಛತ್ತೀಸಗಢ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರು ಶುಕ್ರವಾರ ಪ್ರತಿಪಾದಿಸಿದರು.

'ಇ.ಡಿ ಮತ್ತು ಐ.ಟಿ ಇಲಾಖೆಗಳು ಬಿಜೆಪಿಯ ಪ್ರಬಲ ಶಾಖೆಗಳಾಗಿವೆ. ರಾಜ್ಯದಲ್ಲಿ ಕೆಲವೇ ದಿನಗಳಲ್ಲಿ ಚುನಾವಣೆ ನಡೆಯಲಿದ್ದು, ಈ ಸಂದರ್ಭದಲ್ಲಿ ಅವು ಹೆದರಿಕೆ ಹುಟ್ಟಿಸಲು ಯತ್ನಿಸುತ್ತಿವೆ. ಆದರೆ ಅವು ತಮ್ಮ ಯತ್ನದಲ್ಲಿ ಯಶ ಕಾಣುವುದಿಲ್ಲ' ಎಂದು ವಾಗ್ದಾಳಿ ನಡೆಸಿದರು.

'ಮುಂಬರುವ ಛತ್ತೀಸಗಢ ವಿಧಾನಸಭಾ ಚುನಾವಣೆಯಲ್ಲಿ ಕೆಲವು ದುರ್ಬಲ ಶಾಸಕರ ಬದಲಾಗಿ ಹೊಸ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಲಾಗುವುದು' ಎಂದು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಅವರು ಮಾಹಿತಿ ನೀಡಿದರು.

'ಛತ್ತೀಸಗಢದ ಕಾಂಗ್ರೆಸ್ ಘಟಕದಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ. ಮುಖ್ಯಮಂತ್ರಿ ಅಭ್ಯರ್ಥಿ ಯಾರೆಂಬುದನ್ನು ಪಕ್ಷದ ಹೈಕಮಾಂಡ್ ತೀರ್ಮಾನ ಮಾಡಲಿದ್ದು, ಎಲ್ಲರೂ ತೀರ್ಮಾನಕ್ಕೆ ಬದ್ಧರಾಗಿರುತ್ತೇವೆ' ಎಂದರು.

ಲಿಂಗತ್ವ ಅಲ್ಪಸಂಖ್ಯಾತರಿಗೆ ಮೀಸಲು: ಪ್ರತಿಕ್ರಿಯೆ ಕೇಳಿದ ಸುಪ್ರೀಂ ಕೋರ್ಟ್

ನವದೆಹಲಿ (ಪಿಟಿಐ): ಉದ್ಯೋಗ ಮತ್ತು ಶಿಕ್ಷಣದಲ್ಲಿ ಲಿಂಗತ್ವ ಅಲ್ಪಸಂಖ್ಯಾತರಿಗೆ ಮೀಸಲಾತಿ ನೀಡಬೇಕೆಂಬ ಅರ್ಜಿಯನ್ನು ಗಮನದಲ್ಲಿಟ್ಟುಕೊಂಡು ಸುಪ್ರೀಂ ಕೋರ್ಟ್ ಶುಕ್ರವಾರ ಕೇಂದ್ರ ಸರ್ಕಾರ, ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ಪ್ರತಿಕ್ರಿಯೆ ಕೇಳಿದೆ.

ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠವು ಕೇರಳದ ಲಿಂಗತ್ವ ಅಲ್ಪಸಂಖ್ಯಾತರೊಬ್ಬರ ಅರ್ಜಿಯ ವಿಚಾರಣೆ ನಡೆಸುತ್ತಿದೆ. ಅರ್ಜಿದಾರರ ಪರ ವಕೀಲರು 'ಲಿಂಗತ್ವ ಅಲ್ಪಸಂಖ್ಯಾತರಿಗೆ ಸರ್ಕಾರಿ ನೌಕರಿ ಮತ್ತು ಉದ್ಯೋಗದಲ್ಲಿ ಮೀಸಲಾತಿ ನೀಡಬೇಕು ಎಂದು ಕೋರಲಾಗಿದೆ'ಎಂದು ಪೀಠಕ್ಕೆ ಮನವಿ ಮಾಡಿದಾಗ, ಪ್ರತಿಕ್ರಿಯಿಸಿದ ಪೀಠವು, 'ನೀವೇಕೆ ಈ ಅರ್ಜಿಯನ್ನು ಹೈಕೋರ್ಟ್‌ಗೆ ಸಲ್ಲಿಸಬಾರದು' ಎಂದು ಪ್ರಶ್ನಿಸಿತು.

'ಅರ್ಜಿಯಲ್ಲಿ ಎಲ್ಲಾ ರಾಜ್ಯಗಳನ್ನು ಕಕ್ಷಿದಾರರನ್ನಾಗಿ ಮಾಡಿರು ವುದರಿಂದ ಸುಪ್ರೀಂ ಕೋರ್ಟ್‌ಗೆ ಮನವಿ ಸಲ್ಲಿಸಿದ್ದೇವೆ' ಎಂದು ವಕೀಲರು ತಿಳಿಸಿದರು. ಬಳಿಕ ನ್ಯಾಯಾಲಯವು ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ, ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಪ್ರತಿಕ್ರಿಯೆ ಕೇಳಿ ನೋಟಿಸ್ ನೀಡಿತು.

ದೆಹಲಿ: ಅರ್ಜಿ ತಿದ್ದುಪಡಿಗೆ ಅನುಮತಿ

ನವದೆಹಲಿ(ಪಿಟಿಐ):ರಾಷ್ಟ್ರ ರಾಜಧಾನಿ ದೆಹಲಿಯ ಆಡಳಿತ ಸೇವೆಗಳ ಮೇಲಿನ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಹೊರಡಿಸಿದ್ದ ಸುಗ್ರೀವಾಜ್ಞೆ ಪ್ರಶ್ನಿಸಿರುವ ಅರ್ಜಿಯಲ್ಲಿ ತಿದ್ದುಪಡಿ ಮಾಡಲು ಸುಪ್ರೀಂ ಕೋರ್ಟ್ ದೆಹಲಿ ಸರ್ಕಾರಕ್ಕೆ ಅವಕಾಶ ಕಲ್ಪಿಸಿದೆ.

ದೆಹಲಿ ಸರ್ಕಾರ ಮೊದಲಿಗೆ ಸುಗ್ರೀವಾಜ್ಞೆಯನ್ನು ಪ್ರಶ್ನೆ ಮಾಡಿತ್ತು. ಸುಗ್ರೀವಾಜ್ಞೆಯನ್ನು ಬದಲಿಸುವ ಮಸೂದೆಗೆ ಸಂಸತ್ತಿನಲ್ಲಿ ಅನುಮೋದನೆ ಸಿಕ್ಕಿದ್ದು, ಸದ್ಯ ಅದು ಕಾಯ್ದೆಯಾಗಿದೆ. ಈ ಬಗ್ಗೆ ದೆಹಲಿ ಸರ್ಕಾರದ ಪರ ವಕೀಲ ಅಭಿಷೇಕ್ ಸಿಂಘ್ವಿ ಅವರು ಮುಖ್ಯನ್ಯಾಯಮೂರ್ತಿ ಡಿ.ವೈ ಚಂದ್ರಚೂಡ್ ಅವರ ನೇತೃತ್ವದ ಪೀಠದ ಗಮನಕ್ಕೆ ತಂದರು. ಇದನ್ನು ಪರಿಗಣಿಸಿದ ಸುಪ್ರೀಂ ಕೋರ್ಟ್, ಅರ್ಜಿಯಲ್ಲಿ ತಿದ್ದುಪಡಿ ಮಾಡಲು ಅವಕಾಶ ಕಲ್ಪಿಸಿತು. ತಿದ್ದುಪಡಿಗೆ ತನ್ನದೇನೂ ಆಕ್ಷೇಪ ಇಲ್ಲ ಎಂದು ಕೇಂದ್ರ ಸರ್ಕಾರವೂ ಹೇಳಿದೆ.

ತಿದ್ದುಪಡಿಯಾಗಿ ಸಲ್ಲಿಕೆಯಾಗುವ ಅರ್ಜಿಗೆ ನಾಲ್ಕು ವಾರಗಳಲ್ಲಿ ಉತ್ತರಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ತಿಳಿಸಿದೆ.

ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣ ಸಂಬಂಧ ಕೇಂದ್ರ ಸರ್ಕಾರ ಮೇ 19ರಂದು ಸುಗ್ರೀವಾಜ್ಞೆ ಹೊರಡಿಸಿತ್ತು. ಇದರ ವಿರುದ್ಧ ದೆಹಲಿ ಸರ್ಕಾರ ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು.

ಸುಗ್ರೀವಾಜ್ಞೆಯನ್ನು ಬದಲಿಸುವ 'ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶ ಸರ್ಕಾರ (ತಿದ್ದುಪಡಿ) ಮಸೂದೆ'ಗೆ ಕೇಂದ್ರ ಸಚಿವ ಸಂಪುಟ ಜುಲೈ 25 ಅನುಮೋದನೆ ನೀಡಿತ್ತು. ಆ.7ರಂದು ಸಂಸತ್ತಿನಲ್ಲಿ ಮಂಡನೆಯಾಗಿದ್ದ ಈ ಮಸೂದೆ ಅನುಮೋದನೆ ಪಡೆದು, ಕಾಯ್ದೆಯಾಗಿದೆ.

ಮೀನುಗಾರರ ಬಂಧನ: ಅರ್ಜಿ ವಿಚಾರಣೆಗೆ 'ಸುಪ್ರೀಂ' ನಕಾರ

ನವದೆಹಲಿ (ಪಿಟಿಐ): ದಾರಿತಪ್ಪಿ ಪಾಕಿಸ್ತಾನದ ಜಲಗಡಿಯನ್ನು ಪ್ರವೇಶಿಸುವ ಭಾರತದ ಮೀನುಗಾರರನ್ನು ಬಂಧಿಸುತ್ತಿರುವ ವಿಚಾರವಾಗಿ ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆಗೆ ನಿರಾಕರಿಸಿರುವ ಸುಪ್ರೀಂ ಕೋರ್ಟ್, 'ರಾಜಕೀಯ ವಿಷಯಗಳನ್ನು ರಾಜಕೀಯವಾಗಿಯೇ ಪರಿಹರಿಸಬೇಕು' ಎಂದು ಶುಕ್ರವಾರ ಹೇಳಿದೆ.

ಮೀನುಗಾರರನ್ನು ಬಿಡುಗಡೆಗೊಳಿಸುವಂತೆ ಪಾಕಿಸ್ತಾನಕ್ಕೆ ನಿರ್ದೇಶನ ನೀಡಲು ನಮಗೆ ಸಾಧ್ಯವೇ ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಸುಧಾಂಶು ಧುಲಿಯಾ ಅವರಿದ್ದ ನ್ಯಾಯಪೀಠ ಪ್ರಶ್ನಿಸಿದೆ.

ಈ ವಿಚಾರವಾಗಿ ಗುಜರಾತ್‌ನ ಇಬ್ಬರು ಹಾಗೂ ಮಹಾರಾಷ್ಟ್ರದ ಒಬ್ಬರು ನ್ಯಾಯಾಲಯಕ್ಕೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಸಲ್ಲಿಸಿದ್ದರು.

ಕೈದಿಗಳ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ 2008ರಲ್ಲಿ ರಚಿಸಲಾದ ಭಾರತ ಮತ್ತು ಪಾಕಿಸ್ತಾನದ ನ್ಯಾಯಾಧೀಶರನ್ನು ಒಳಗೊಂಡ ನ್ಯಾಯಾಂಗ ಸಮಿತಿಯನ್ನು ಪುನಶ್ಚೇತನಗೊಳಿಸಬೇಕು ಎಂದು ಅರ್ಜಿದಾರರ ಪರ ವಕೀಲರು ನ್ಯಾಯಪೀಠವನ್ನು ಕೋರಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು, ಈ ವಿಚಾರಕ್ಕೆ ಸಂಬಂಧಿಸಿ ಸರ್ಕಾರದ ಮೊರೆ ಹೋಗುವಂತೆ ಸಲಹೆ ನೀಡಿದೆ.

ಅರವಿಂದ ಕೇಜ್ರಿವಾಲ್ ಅರ್ಜಿ ವಿಚಾರಣೆಗೆ ನಕಾರ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಶೈಕ್ಷಣಿಕ ಪದವಿಗೆ ಸಂಬಂಧಿಸಿದ ಪ್ರಕರಣದಲ್ಲಿ ಹೈಕೋರ್ಟ್ ಆದೇಶ ಪ್ರಶ್ನಿಸಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಗುಜರಾತ್ ವಿಶ್ವವಿದ್ಯಾಲಯವು ಹೂಡಿರುವ ಪ್ರಕರಣದಲ್ಲಿ ತಮ್ಮ ವಿರುದ್ಧದ ಕ್ರಿಮಿನಲ್ ಮಾನಹಾನಿ ಪ್ರಕರಣದ ವಿಚಾರಣೆಗೆ ತಡೆ ನೀಡಬೇಕು ಎಂದು ಕೋರಿದ್ದ ಕೇಜ್ರಿವಾಲ್ ಅವರ ಅರ್ಜಿಯನ್ನು ಹೈಕೋರ್ಟ್ ಈ ಮೊದಲು ನಿರಾಕರಿಸಿತ್ತು.

ಇದನ್ನು ಪ್ರಶ್ನಿಸಿ ಕೇಜ್ರಿವಾಲ್ ಮೇಲ್ಮನವಿ ಸಲ್ಲಿಸಿದ್ದರು. ಗುಜರಾತ್ ವಿ.ವಿ. ಕುಲಸಚಿವ ಪೀಯೂಶ್ ಪಟೇಲ್ ಅವರು ಕೇಜ್ರಿವಾಲ್ ಮತ್ತು ಎಎಪಿ ಮುಖಂಡ ಸಂಜಯ್ ಸಿಂಗ್ ಅವರ ವಿರುದ್ಧ ಮಾನಹಾನಿ ಪ್ರಕರಣ ದಾಖಲಿಸಿದ್ದರು.

ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ಎಸ್‌ವಿಎನ್ ಭಟ್ಟಿ ಅವರಿದ್ದ ಪೀಠವು, ಗುಜರಾತ್ ಹೈಕೋರ್ಟ್ ಎದುರು ಬಾಕಿ ಇರುವ ಪ್ರಕರಣಕ್ಕೆ ಸಂಬಂಧಿಸಿದ ನೋಟಿಸ್ ಜಾರಿಗೆ ಸೂಚಿಸಲಾಗಿದೆ ಎಂದು ಹೇಳಿತು. ಅಲ್ಲದೆ, ಪ್ರಕರಣದ ವಿಚಾರಣೆಯನ್ನು ಆಗಸ್ಟ್ 29ಕ್ಕೆ ಮುಂದೂಡಿತು.

ತ್ರಿವರ್ಣ ನವದೆಹಲಿಯಲ್ಲಿ ಜಿ20 ಶೃಂಗಸಭೆಗೆ ಪೂರ್ವ ಸಿದ್ಧತೆಗಳಾಗಿದ್ದು, ಭಾರತ್ ಮಂಟಪ ತಿರಂಗದ ವಿದ್ಯುತ್ ದೀಪಾಲಂಕಾರದಿಂದ ಝಗಮಗಿಸುತ್ತಿರುವುದು ಶುಕ್ರವಾರ ರಾತ್ರಿ ಕಂಡುಬಂತು ಪಿಟಿಐ ಚಿತ್ರ

'ಬಿಹಾರದಲ್ಲಿ ಜಾತಿ ಗಣತಿ ಪೂರ್ಣ'

ಪಟ್ನಾ (ಪಿಟಿಐ): ರಾಜ್ಯದಲ್ಲಿ ಜಾತಿ ಗಣತಿ ಪೂರ್ಣಗೊಂಡಿದೆ. ದತ್ತಾಂಶವನ್ನು ಶೀಘ್ರವೇ ಸರ್ಕಾರ ಸಾರ್ವಜನಿಕಗೊಳಿಸಲಿದೆ ಎಂದು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಶುಕ್ರವಾರ ಹೇಳಿದ್ದಾರೆ.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಮಾಜದ ಎಲ್ಲ ವರ್ಗಗಳಿಗೆ ಸರ್ಕಾರದ ಸೌಲಭ್ಯಗಳನ್ನು ಕಲ್ಪಿಸಲು ಜಾತಿ ಆಧರಿತ ಸಮೀಕ್ಷೆ ನಡೆಸಲಾಗಿದೆ ಎಂದು ಒತ್ತಿ ಹೇಳಿದರು.

'ರಾಜ್ಯದಲ್ಲಿ ಜಾತಿವಾರು ಸಮೀಕ್ಷೆಯಿಂದ ಎಲ್ಲರಿಗೂ ಅನುಕೂಲವಾಗಲಿದೆ. ಇದರಿಂದ ಸೌಲಭ್ಯ ವಂಚಿತರು ಸೇರಿ ಸಮಾಜದ ನಾನಾ ವರ್ಗಗಳ ಅಭಿವೃದ್ಧಿಗೆ ಶ್ರಮಿಸಲು ಸರ್ಕಾರಕ್ಕೂ ಸಾಧ್ಯವಾಗಲಿದೆ. ಅಲ್ಲದೆ, ಯಾವ ಕ್ಷೇತ್ರಗಳಲ್ಲಿ ಅಭಿವೃದ್ಧಿಯ ಅಗತ್ಯವಿದೆ ಎಂಬುದನ್ನು ತಿಳಿಯಲು ಇದು ಸಹಕಾರಿ. ಸಮೀಕ್ಷೆಯ ವಿವರವಾದ ಅಂಕಿಅಂಶಗಳು ಬಂದಿವೆ. ಇದನ್ನು ಇತರ ರಾಜ್ಯಗಳೂ ಅನುಸರಿಸುವ ಖಾತ್ರಿ ಇದೆ' ಎಂದು ಅವರು ಹೇಳಿದರು.

ಜಾತಿ ಗಣತಿ ಕುರಿತು ಪ್ರಶ್ನಿಸಿರುವ ಅರ್ಜಿಗಳ ವಿಚಾರಣೆಯಲ್ಲಿ ಪ್ರತಿಕ್ರಿಯೆ ಸಲ್ಲಿಸಲು ಸುಪ್ರೀಂ ಕೋರ್ಟ್ ಅನುಮತಿ ಕೋರಿರುವ ಕೇಂದ್ರ ಸರ್ಕಾರದ ಕ್ರಮದ ಕುರಿತು ಪ್ರತಿಕ್ರಿಯಿಸಿದ ನಿತೀಶ್, 'ಸುಪ್ರೀಂ ಕೋರ್ಟ್ ಎಂದಿಗೂ ಜಾತಿ ಗಣತಿ ತಡೆಹಿಡಿಯಲು ನಿರ್ದೇಶನ ನೀಡಿಲ್ಲ. ಬಿಹಾರ ಜಾತಿ ಸಮೀಕ್ಷೆಯ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಿದ್ದ ಪಿಐಎಲ್‌ಗಳನ್ನು ಪಟ್ನಾ ಹೈಕೋರ್ಟ್ ವಜಾಗೊಳಿಸಿ, ರಾಜ್ಯ ಸರ್ಕಾರದ ಈ ಕ್ರಮವು ಸಂಪೂರ್ಣ ಸಮರ್ಥನೀಯ ಮತ್ತು ಕಾನೂನುಬದ್ಧ ಎಂದಿದೆ. ಇದಾದ ನಂತರ ರಾಜ್ಯ ಸರ್ಕಾರವು ಸಮೀಕ್ಷೆ ಪುನರಾರಂಭಿಸಿ, ಪೂರ್ಣಗೊಳಿಸಿತು' ಎಂದರು.

10 ವರ್ಷಕ್ಕೊಮ್ಮೆ ನಡೆಯುವ ಜನಗಣತಿ ವಿಳಂಬವಾದರೂ ಕೇಂದ್ರ ಸರ್ಕಾರ ಏಕೆ ಇದರಲ್ಲಿ ಮೌನ ವಹಿಸುತ್ತಿದೆ. 2021ರ ವೇಳೆಗೆ ಗಣತಿ ಪೂರ್ಣವಾಗಬೇಕಿತ್ತು. ಈಗಾಗಲೇ ವಿಳಂಬವಾಗಿರುವ ಜನಗಣತಿ ಬಗ್ಗೆ ಬಿಜೆಪಿ ನಾಯಕರು ಏನನ್ನಾದರೂ ಹೇಳಬೇಕಲ್ಲವೇ ಎಂದು ತಿರುಗೇಟು ನೀಡಿದ್ದಾರೆ.

ಶಾಲೆಯಲ್ಲಿ ಬಾಲಕನ ಶವ ಪತ್ತೆ

ಜೈಪುರ (ಪಿಟಿಐ): ರಾಜಸ್ಥಾನದ ಕೋಟ್‌ಪುತಲಿ ಬಹರೋಡ್ ಜಿಲ್ಲೆಯ ಪ್ರಾಗ್‌ಪುರದಲ್ಲಿರುವ ಜವಾಹರ್ ನವೋದಯ ಶಾಲೆಯಲ್ಲಿ 10ನೇ ತರಗತಿ ವಿದ್ಯಾರ್ಥಿ, ದಲಿತ ಬಾಲಕ ತರಗತಿ ಒಳಗೆ ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾನೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಬುಧವಾರ ಘಟನೆ ನಡೆದಿದ್ದು, ಬಾಲಕನ ಕುಟುಂಬಸ್ಥರು ಮೃತದೇಹವನ್ನು ಸ್ವೀಕರಿಸಲು ನಿರಾಕರಿಸುತ್ತಿದ್ದಾರೆ. ಇಬ್ಬರು ಶಿಕ್ಷಕರು ತಮ್ಮ ಮಗನನ್ನು ಕೊಲೆ ಮಾಡಿ, ನಂತರ ಇದೊಂದು ಆತ್ಮಹತ್ಯೆ ಎಂದು ಬಿಂಬಿಸಲು ನೇಣು ಬಿಗಿದಿದ್ದಾರೆ ಎಂದು ಕುಟುಂಬಸ್ಥರು ಆರೋಪಿಸಿದ್ದಾರೆ.

'ಅದಾನಿ'ಯಿಂದ ಗಂಗಾವರಂ ಬಂದರು ಸ್ವಾಧೀನ: 'ಕೈ' ಪ್ರಶ್ನೆ

ನವದೆಹಲಿ (ಪಿಟಿಐ): ಅದಾನಿ ಸಮೂಹವು ಆಂಧ್ರಪ್ರದೇಶದ ಗಂಗಾವರಂ ಬಂದರನ್ನು ಸ್ವಾಧೀನಪಡಿಸಿಕೊಂಡಿರುವ ಬಗ್ಗೆ ಪ್ರಶ್ನಿಸಿರುವ ಕಾಂಗ್ರೆಸ್, 'ಹಲವು ಆಯಕಟ್ಟಿನ ಸ್ಥಳಗಳಲ್ಲಿ ಶೀಘ್ರವಾಗಿ ಆಸ್ತಿ ವಶಪಡಿಸಿಕೊಳ್ಳಬಹುದು ಎಂಬುದನ್ನು ಜಂಟಿ ಸಂಸದೀಯ ಸಮಿತಿಯ ತನಿಖೆಯಿಂದ (ಜೆಪಿಸಿ) ಮಾತ್ರ ಪತ್ತೆಹಚ್ಚಲು ಸಾಧ್ಯ' ಎಂದು ಶುಕ್ರವಾರ ಪುನರುಚ್ಚರಿಸಿದೆ.

ಮಾಧ್ಯಮದ ವರದಿಯನ್ನು ಉಲ್ಲೇಖಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಂ ರಮೇಶ್ ಅವರು, ಗಂಗಾವರಂ ಬಂದರನ್ನು ಅದಾನಿ ಸಮೂಹವು ಸ್ವಾಧೀನಪಡಿಸಿಕೊಂಡಿರುವುದು 'ಮೋದಿ ನಿರ್ಮಿತ ಏಕಸ್ವಾಮ್ಯ' (3ಎಂ) ವನ್ನು ಖಚಿತಪಡಿಸುತ್ತದೆ. ಈ ಬಗ್ಗೆ ಜಂಟಿ ಸಂಸದೀಯ ಸಮಿತಿಯ ತನಿಖೆಯಿಂದ ಮಾತ್ರ ಮಾಹಿತಿ ಹೊರಬರಲು ಸಾಧ್ಯ ಎಂಬುದಾಗಿ 'ಎಕ್ಸ್' (ಟ್ವಿಟರ್) ವೇದಿಕೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ.

'ಯಾವುದೇ ಸಾಲವಿಲ್ಲದ ಗಂಗಾವರಂ ಬಂದರನ್ನು ₹ 6,200 ಕೋಟಿಗೆ ಅದಾನಿ ಸಮೂಹವು ಹೇಗೆ ಖರೀದಿಸಿತು?. ವಾಸ್ತವವಾಗಿ ಬಂದರು ಇದಕ್ಕಿಂತ ದುಪ್ಪಟ್ಟು ಮೌಲ್ಯವನ್ನು ಹೊಂದಿದೆ. ಇದು ನಮ್ಮಲ್ಲಿ ಹಲವು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ' ಎಂದಿದ್ದಾರೆ.

ಸಾರಿಗೆ ಸಂಬಂಧಿತ ಜಾಗಗಳು ಮತ್ತು ಸೇವೆಗಳನ್ನು ಅದಾನಿ ಸಮೂಹವು ನಿರಂತರವಾಗಿ ಹೆಚ್ಚಿನ ರಿಯಾಯ್ತಿ ಮೌಲ್ಯದ ದರದಲ್ಲಿ ಸ್ವಾಧೀನಪಡಿಸಿಕೊಳ್ಳುತ್ತಿರುವ ಬಗ್ಗೆಯೂ ರಮೇಶ್ ಅವರು 'ಎಕ್ಸ್'ನಲ್ಲಿ ಆರೋಪಿಸಿದ್ದಾರೆ.

'ಅದಾನಿ ಸಮೂಹದೊಂದಿಗೆ ವಿಶೇಷ ಸಂಬಂಧದ ಬಗ್ಗೆ ಪ್ರಧಾನಿಗೆ 100ಕ್ಕೂ ಹೆಚ್ಚಿನ ಪ್ರಶ್ನೆ ಕೇಳಿದ್ದೇವೆ. ಈ ಕುರಿತು ಜೆಪಿಸಿ ತನಿಖೆ ನಡೆಸಬೇಕು' ಎಂದೂ ಅವರು ಒತ್ತಾಯಿಸಿದ್ದಾರೆ.

ಅದಾನಿ ಸಮೂಹ ಸಂಸ್ಥೆ ಷೇರುಗಳ ಮೌಲ್ಯವನ್ನು ಕೃತಕವಾಗಿ ಏರಿಳಿತ ಮಾಡಿದೆ ಎಂಬ ಅಮೆರಿಕದ 'ಹಿಂಡನ್‌ಬರ್ಗ್ ರಿಸರ್ಚ್' ಸಂಸ್ಥೆಯು ಆರೋಪ ಮಾಡಿದ ಬಳಿಕ ಕಾಂಗ್ರೆಸ್ ಸೇರಿದಂತೆ ಇತರ ವಿರೋಧಪಕ್ಷಗಳು ಅದಾನಿ ಸಮೂಹ ಕುರಿತು ಜೆಪಿಸಿ ತನಿಖೆಗೆ ಒತ್ತಾಯಿಸುತ್ತಿವೆ.

ಮಾಜಿ ಸಂಸದರ ಪುತ್ರನ ವಿರುದ್ಧ ಅತ್ಯಾಚಾರ ಆರೋಪ

ಮೀರತ್ (ಉತ್ತರಪ್ರದೇಶ) (ಪಿಟಿಐ): ಬಿಎಸ್‌ಪಿ ಮಾಜಿ ಸಂಸದ ಶಾಹಿದ್ ಅಖ್ಲಾಕ್ ಅವರ ಪುತ್ರ ತನ್ನನ್ನು ಮದುವೆ ಆಗುವ ನೆಪದಲ್ಲಿ ಇಲ್ಲಿನ ಹೋಟೆಲ್ ಕೊಠಡಿಯಲ್ಲಿ ಅತ್ಯಾಚಾರ ನಡೆಸಿದ್ದಾನೆ ಎಂದು ಆರೋಪಿಸಿ 24 ವರ್ಷದ ಮಹಿಳೆಯೊಬ್ಬರು ಶುಕ್ರವಾರ ದೂರು ನೀಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

'ಡ್ಯಾನಿಶ್ ಅಖ್ಲಾಕ್ (30) ಮೀರತ್‌ನ ಹೋಟೆಲ್ ಕೋಣೆಯಲ್ಲಿ ಅತ್ಯಾಚಾರ ಮಾಡಿದ್ದಾನೆ ಎಂದು ಆರೋಪಿಸಿ ಸಂತ್ರಸ್ತೆ ಗುರುವಾರ ತಮ್ಮ ಕಚೇರಿಗೆ ಬಂದು ದೂರು ಕೊಟ್ಟಿದ್ದಾರೆ' ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ರೋಹಿತ್ ಸಿಂಗ್ ಸಜ್ವಾನ್ ಹೇಳಿದ್ದಾರೆ.

'ಡ್ಯಾನಿಶ್ ಫೇಸ್‌ಬುಕ್, ಇನ್‌ಸ್ಟಾಗ್ರಾಮ್‌ನಲ್ಲಿ ಕಳುಹಿಸಿರುವ ಸಂದೇಶಗಳನ್ನು ಸಹ ಸಂತ್ರಸ್ತೆ ತೋರಿಸಿದರು. ಪ್ರಕರಣವನ್ನು ಸೈಬರ್ ಸೆಲ್‌ಗೆ ಹಸ್ತಾಂತರಿಸಲಾಗಿದೆ. ಸಂತ್ರಸ್ತೆಯ ಆರೋಪಗಳಲ್ಲಿ ನಿಜಾಂಶವಿದ್ದರೆ ಡ್ಯಾನಿಶ್ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಅವರು ತಿಳಿಸಿದ್ದಾರೆ. 2004ರಿಂದ 2009ರವರೆಗೆ ಮೀರತ್ ಸಂಸದರಾಗಿದ್ದ ಶಾಹಿದ್, ಮಗನ ವಿರುದ್ಧದ ಆರೋಪ ತಳ್ಳಿಹಾಕಿದರು.

'ಸ್ಟೇಟ್ ಆಫ್ ಇಂಡಿಯಾಸ್ ಬರ್ಡ್ಸ್' ವರದಿಯಲ್ಲಿ ಉಲ್ಲೇಖ

30 ವರ್ಷಗಳಲ್ಲಿ ಶೇ 60ರಷ್ಟು ಪಕ್ಷಿ ಪ್ರಬೇಧ ಕುಸಿತ

ನವದೆಹಲಿ(ಪಿಟಿಐ): ಭಾರತದ 338 ಪಕ್ಷಿ ಪ್ರಭೇದಗಳ ಸಂಖ್ಯೆಯಲ್ಲಿ ಈ 30 ವರ್ಷಗಳಲ್ಲಿ ಆಗಿರುವ ಬದಲಾವಣೆಯನ್ನು ಅಧ್ಯಯನ ಮಾಡಲಾಗಿದ್ದು, ಶೇ 60ರಷ್ಟು ಪಕ್ಷಿ ಪ್ರಬೇಧಗಳ ಸಂಖ್ಯೆಯಲ್ಲಿ ಕುಸಿತವಾಗಿರುವುದು ಬಹಿರಂಗವಾಗಿದೆ. ದೇಶದ ಸುಮಾರು 30,000 ಪಕ್ಷಿ ವೀಕ್ಷಕರು ಒದಗಿಸಿರುವ ದತ್ತಾಂಶಗಳನ್ನು ಆಧರಿಸಿ ವರದಿ ಸಿದ್ಧಪಡಿಸಲಾಗಿದೆ.

ಇದರ ಜತೆಗೆ, 359 ಪಕ್ಷಿ ಪ್ರಬೇಧಗಳ ಸಂಖ್ಯೆಯಲ್ಲಿ 7 ವರ್ಷಗಳಲ್ಲಿ ಆಗಿರುವ ಬದಲಾವಣೆಯನ್ನು ಮೌಲ್ಯಮಾಪನ ಮಾಡಲಾಗಿದ್ದು, ಶೇ 40ರಷ್ಟು (142) ಪಕ್ಷಗಳ ಸಂಖ್ಯೆಯಲ್ಲಿ ಕುಸಿತವಾಗಿದೆ ಎಂದು 'ಸ್ಟೇಟ್ ಆಫ್ ಇಂಡಿಯಾಸ್ ಬರ್ಡ್ಸ್' (ಭಾರತದ ಪಕ್ಷಿಗಳ ಸ್ಥಿತಿ) ಎಂಬ ಹೆಸರಿನ ಶೀರ್ಷಿಕೆಯ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಮೂರು ಅಂಶಗಳ ಆಧಾರದ ಮೇಲೆ ಈ ಮೌಲ್ಯಮಾಪನ ಮಾಡಲಾಗಿದೆ. ಈ ಮೂರು ಅಂಶಗಳ ಪೈಕಿ ಎರಡು ಅಂಶಗಳು ಜೀವಿಗಳ ಸಂಖ್ಯೆಯ ಬದಲಾವಣೆಗೆ ಸಂಬಂಧಿಸಿದ್ದಾಗಿವೆ. ದೀರ್ಘಾವಧಿಯ (30 ವರ್ಷಗಳಲ್ಲಿ ಬದಲಾವಣೆ) ಮತ್ತು ವಾರ್ಷಿಕ (ಕಳೆದ ಏಳು ವರ್ಷಗಳಲ್ಲಿ ಬದಲಾವಣೆ), ಭಾರತದಲ್ಲಿನ ಹಂಚಿಕೆಯನ್ನು ಆಧರಿಸಿ ವರದಿ ಸಿದ್ಧಪಡಿಸಲಾಗಿದೆ.

ಗ್ರೇಟರ್ ಫ್ಲೆಮಿಂಗೊ

ಮೌಲ್ಯಮಾಪನ ಮಾಡಲಾದ ಒಟ್ಟು 942 ಪಕ್ಷಿ ಪ್ರಭೇದಗಳ ಪೈಕಿ 338 ಪ್ರಭೇದಗಳನ್ನು ದೀರ್ಘಾವಧಿಯ ಬದಲಾವಣೆಯ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇವುಗಳಲ್ಲಿ 204 ಪ್ರಭೇದಗಳು ಕ್ಷೀಣಿಸಿವೆ. 98 ಸ್ಥಿರವಾಗಿವೆ ಮತ್ತು 36 ಹೆಚ್ಚಾಗಿವೆ ಎಂದು 'ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ (ಬಿಎನ್‌ಎಚ್‌ಎಸ್)', 'ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಡಬ್ಲ್ಯುಐಐ)', 'ಝೂಲಾಜಿಕಲ್ ಸರ್ವೆ ಆಫ್ ಇಂಡಿಯಾ (ಝಡ್‌ಎಸ್‌ಐ)' ಸೇರಿದಂತೆ 13 ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ತಂಡ ಪ್ರಕಟಿಸಿರುವ ವರದಿಯಲ್ಲಿ ಹೇಳಲಾಗಿದೆ.

359 ಪಕ್ಷಿ ಪ್ರಬೇಧಗಳನ್ನು ಏಳು ವರ್ಷಗಳ ಕಡಿಮೆ ಅವಧಿಯ ಅಧ್ಯಯನಕ್ಕೆ ಒಳಪಡಿಸಲಾಗಿದ್ದು, ಈ ಪೈಕಿ 142 ಪಕ್ಷಿಗಳ ಪ್ರಬೇಧಗಳ ಸಂಖ್ಯೆ ಕುಸಿದಿದೆ (64 ಬಗೆಯ ಪಕ್ಷಿಗಳ ಸಂಖ್ಯೆ ಅತಿ ವೇಗವಾಗಿ ಕುಸಿದಿದೆ). 189 ಬಗೆಯ ಪಕ್ಷಗಳ ಸಂಖ್ಯೆ ಸ್ಥಿರವಾಗಿದ್ದು, 28ರಲ್ಲಿ ಹೆಚ್ಚಳವಾಗಿದೆ.

ಮಧುಮಿತಾ ಕೊಲೆ ಅಪರಾಧಿಗಳ ಬಿಡುಗಡೆ

ಲಖನೌ/ ಗೋರಖ್‌ಪುರ (ಪಿಟಿಐ): ಕವಯಿತ್ರಿ ಮಧುಮಿತಾ ಶುಕ್ಲಾ ಹತ್ಯೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಉತ್ತರ ಪ್ರದೇಶದ ಮಾಜಿ ಸಚಿವ ಅಮರಮಣಿ ತ್ರಿಪಾಠಿ ಮತ್ತು ಅವರ ಪತ್ನಿ ಮಧುಮಣಿ ಅವರನ್ನು ಗೋರಖ್‌ಪುರ ಜೈಲಿನಿಂದ ಶುಕ್ರವಾರ ಬಿಡುಗಡೆ ಮಾಡಲಾಗಿದೆ.

'ದಂಪತಿಯ ವಯಸ್ಸು ಮತ್ತು ಸನ್ನಡತೆ ಪರಿಗಣಿಸಿ ಬಿಡುಗಡೆ ಮಾಡಲಾಗುತ್ತಿದೆ. 2018ರ ಕ್ಷಮಾದಾನ ನೀತಿಯ ಪ್ರಕಾರ 16 ವರ್ಷ ಜೈಲು ಶಿಕ್ಷೆ ಪೂರ್ಣಗೊಳಿಸಿರುವವರನ್ನು ಬಿಡುಗಡೆ ಮಾಡಲು ಅವಕಾಶವಿದೆ' ಎಂದು ಬಂದೀಖಾನೆ ಇಲಾಖೆ ಗುರುವಾರ ಹೊರಡಿಸಿರುವ ಬಿಡುಗಡೆ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಅಮರಮಣಿ ತ್ರಿಪಾಠಿ ಅವರು 2001ರಲ್ಲಿ ಉತ್ತರ ಪ್ರದೇಶದ ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿದ್ದರು.

ಮಧುಮಿತಾ ಶುಕ್ಲಾ ಅವರೊಂದಿಗೆ ಸಂಬಂಧ ಹೊಂದಿದ್ದ ಅಮರಮಣಿ ತ್ರಿಪಾಠಿ ಅವರು ಲಖನೌನ ಪೇಪರ್ ಮಿಲ್ ಕಾಲೊನಿಯಲ್ಲಿ 2003ರ ಮೇ 9ರಂದು ಅವರನ್ನು ಗುಂಡಿಟ್ಟು ಕೊಂದಿದ್ದರು. ಸಾಯುವ ಸಂದರ್ಭದಲ್ಲಿ ಮಧುಮಿತಾ ಗರ್ಭಿಣಿಯಾಗಿದ್ದರು.

ತ್ರಿಪಾಠಿ ದಂಪತಿಯನ್ನು ಬಿಡುಗಡೆ ಮಾಡದಂತೆ ಮಧುಮಿತಾ ಶುಕ್ಲಾ ಅವರ ಸಹೋದರಿ ನಿಧಿ ಶುಕ್ಲಾ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದಾರೆ. ಬಿಡುಗಡೆಗೆ ತಡೆ ನೀಡಲು ನ್ಯಾಯಮೂರ್ತಿ ಅನಿರುದ್ಧ್ ಬೋಸ್ ಮತ್ತು ಬೇಲಾ ಎಂ. ತ್ರಿವೇದಿ ಅವರ ಪೀಠ ನಿರಾಕರಿಸಿದೆ. ಆದರೆ, ಉತ್ತರ ಪ್ರದೇಶ ಸರ್ಕಾರ, ತ್ರಿಪಾಠಿ ದಂಪತಿಗೆ ನೋಟಿಸ್ ಜಾರಿಗೊಳಿಸಿದ್ದು, ಎಂಟು ವಾರಗಳಲ್ಲಿ ಉತ್ತರಿಸುವಂತೆ ಸೂಚಿಸಿದೆ.

ತ್ರಿಪಾಠಿ ದಂಪತಿ ಜೈಲಿನಿಂದ ಹೊರಗೆ ಬಂದರೆ, ನನ್ನ ಜೀವಕ್ಕೆ ಅಪಾಯವಿದೆ ಎಂದು ನಿಧಿ ಶುಕ್ಲಾ ಆತಂಕ ವ್ಯಕ್ತಪಡಿಸಿದ್ದಾರೆ.

'ನಾನು ಮೊದಲಿನಿಂದಲೂ ಹೇಳುತ್ತಾ ಬಂದಿದ್ದೆ. ನನ್ನ ಸಹೋದರಿಯ ಹತ್ಯೆ ಪ್ರಕರಣದ ಅಪರಾಧಿಗಳಾದ ತ್ರಿಪಾಠಿ ದಂಪತಿಯು ಒಟ್ಟಾರೆ ಜೈಲು ಅವಧಿಯಲ್ಲಿ ಶೇ 62ರಷ್ಟು ಭಾಗವನ್ನು ಅವರು ಜೈಲಿನಿಂದ ಹೊರಗೆ ಕಳೆದಿದ್ದಾರೆ. ಆರ್‌ಟಿಐನ ಅಡಿಯಲ್ಲಿ ನನಗೆ ಸಿಕ್ಕ ದಾಖಲೆಗಳಿಂದ ಈ ವಿಚಾರ ಗೊತ್ತಾಗಿದೆ. 2012ರಿಂದ 2023ರ ನಡುವಿನ ಅವಧಿಯಲ್ಲಿ ಅವರು ಜೈಲಿನಿಂದ ಹೊರಗಿದ್ದರು' ಎಂದು ನಿಧಿ ಆರೋಪಿಸಿದ್ದಾರೆ.

ಚಂದ್ರಯಾನ–3: ಎಲ್ಲ ಉಪಕರಣಗಳಿಂದಲೂ ಕಾರ್ಯನಿರ್ವಹಣೆ, ವಿಡಿಯೊ ಬಿಡುಗಡೆ

8 ಮೀಟರ್ ಚಲಿಸಿದ 'ಪ್ರಜ್ಞಾನ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಂದ್ರನ ಅಂಗಳದಲ್ಲಿ ಪ್ರಜ್ಞಾನ್ (ರೋವರ್) ಎಂಟು ಮೀಟರ್‌ಗಳಷ್ಟು ದೂರ ಚಲಿಸಿದ್ದು, ಅದರಲ್ಲಿ ಅಳವಡಿಸಿರುವ ಎರಡೂ ಉಪಕರಣಗಳು ಚಾಲೂ ಆಗಿವೆ. ಈ ಮೂಲಕ ನೋಡನ (ಪ್ರೊಪಲ್ಷನ್), ಲ್ಯಾಂಡರ್ ಮತ್ತು ರೋವರ್‌ನಲ್ಲಿರುವ ಎಲ್ಲ ಉಪಕರಣಗಳು ಪೂರ್ಣ ಪ್ರಮಾಣದಲ್ಲಿ ವೈಜ್ಞಾನಿಕ ಮಾಹಿತಿಗಳನ್ನು ಸಂಗ್ರಹಿಸಲು ಸಜ್ಜಾಗಿವೆ.

ಸದ್ಯಕ್ಕೆ ಈ ಉಪಕರಣಗಳು ಪ್ರಾಥಮಿಕ ಹಂತದ ಅಲ್ಪ ಪ್ರಮಾಣದ ಕಾರ್ಯ ಆರಂಭಿಸಿವೆ. ರೋವರ್‌ನ ಉದ್ದೇಶಿತ ಚಲನವಲನ ಪರೀಕ್ಷೆಗೊಳಪಡಿಸಲಾಗಿದೆ ಮತ್ತು ಯಶಸ್ವಿಯಾಗಿ ಚಲಿಸುತ್ತಿದೆ ಎಂದು 'ಇಸ್ರೊ' 'ಎಕ್ಸ್' ಮೂಲಕ ಮಾಹಿತಿ ಹಂಚಿಕೊಂಡಿದೆ.

ರೋವರ್‌ನ ಎಲ್‌ಐಬಿಎಸ್ ಮತ್ತು ಎಪಿಎಕ್ಸ್‌ಎಸ್ ವೈಜ್ಞಾನಿಕ ಉಪಕರಣಗಳಿವೆ. ಇದರಲ್ಲಿ ಒಂದು ಲೇಸರ್ ಉಪಕರಣವಾಗಿದ್ದು, ಮತ್ತೊಂದು ಕ್ಷ- ಕಿರಣ ಸಾಧನ. ಇವೆರಡೂ ಪ್ರತ್ಯೇಕ ವಿಧಾನಗಳ ಮೂಲಕ ಚಂದ್ರನ ಮೇಲಿನ ಧಾತುಗಳ ಸಂಯೋಜನೆ ಕುರಿತು ಅಧ್ಯಯನ ನಡೆಸಲಿವೆ.

ಲ್ಯಾಂಡರ್‌ನಿಂದ ರೋವರ್ ಇಳಿಯುವುದಕ್ಕಾಗಿ ರ‍್ಯಾಂಪ್ ತೆರೆದುಕೊಂಡು ನೆಲವನ್ನು ಸ್ಪರ್ಶಿಸುವುದು ಮತ್ತು ಅದರಿಂದ ನಿಧಾನಕ್ಕೆ ಚಲಿಸಿ ಅಂಗಳ ಮೇಲೆ ಇಳಿಯುವ ವಿಡಿಯೊಗಳನ್ನು ಇಸ್ರೊ 'ಎಕ್ಸ್'ನಲ್ಲಿ ಹಂಚಿಕೊಂಡಿದೆ.

'ರೋವರ್‌ಗೆ ವಿದ್ಯುತ್ ಪೂರೈಕೆಗಾಗಿ ಸೌರಫಲಕಗಳನ್ನು ಅಳವಡಿಸಲಾಗಿದೆ. ಈ ವ್ಯವಸ್ಥೆಯನ್ನು ಬೆಂಗಳೂರಿನಲ್ಲಿರುವ ಯು.ಆರ್.ರಾವ್ ಉಪಗ್ರಹ ಕೇಂದ್ರದಲ್ಲಿ ಅಭಿವೃದ್ಧಿಪಡಿಸಲಾಗಿತ್ತು' ಎಂದು ಇಸ್ರೊ ಹೇಳಿದೆ.

ಕಣ್ಣಿಟ್ಟಿರುವ ಕಕ್ಷೆಗಾಮಿ: ಅಲ್ಲದೇ, ಕಕ್ಷೆಯಲ್ಲಿ ಸುತ್ತುತ್ತಿರುವ ಚಂದ್ರಯಾನ–2 ರ ಕಕ್ಷೆಗಾಮಿ ಹೆಚ್ಚು ಸ್ಪುಟವಾದ ಚಿತ್ರಗಳನ್ನು (ಒಎಚ್‌ಆರ್‌ಸಿ) ಸೆರೆ ಹಿಡಿಯುವ ಕ್ಯಾಮೆರಾದಿಂದ ಚಂದ್ರನ ನೆಲದ ಮೇಲೆ ಲ್ಯಾಂಡರ್ ಇಳಿದು ನಿಂತಿರುವ ದೃಶ್ಯವನ್ನೂ ಸೆರೆ ಹಿಡಿದಿದೆ. ಈ ದೃಶ್ಯವನ್ನೂ ಇಸ್ರೊ ಬಿಡುಗಡೆ ಮಾಡಿದೆ.

ಚಂದ್ರನ ಸುತ್ತ ಸುತ್ತುತ್ತಿರುವ ವಿವಿಧ ದೇಶಗಳ ಆರ್ಬಿಟರ್‌ಗಳ ಕ್ಯಾಮೆರಾಗಳ ಪೈಕಿ ಚಂದ್ರಯಾನ–2 ರ ಕ್ಯಾಮೆರಾ ಉತ್ತಮ ಗುಣಮಟ್ಟದ್ದು, ಅತ್ಯುತ್ತಮವಾಗಿ ಚಿತ್ರಗಳನ್ನು ಸೆರೆ ಹಿಡಿಯಬಲ್ಲುದು. ಇದನ್ನು 2019 ರಲ್ಲಿ ಉಡಾವಣೆ ಮಾಡಲಾಗಿತ್ತು ಎಂದು ಇಸ್ರೊ ಹೇಳಿದೆ.

ಜಲಾವೃತ... ಕಲಬುರಗಿಯಲ್ಲಿ ಶುಕ್ರವಾರ ಸಂಜೆ ಸುರಿದ ಮಳೆಯಿಂದ ಅನ್ನಪೂರ್ಣ ಕ್ರಾಸ್ ಬಳಿ ರಸ್ತೆಯು ಜಲಾವೃತ ಗೊಂಡಿತು –ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

'ಖಾಸಗಿ ಜಾಗದಲ್ಲಿ ಪ್ರಾರ್ಥನೆಗೆ ನಿಷೇಧವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಂತ ವಸತಿ ಪ್ರದೇಶದಲ್ಲಿ ಪ್ರಾರ್ಥನೆ ಸಲ್ಲಿಸಲು ಯಾವುದೇ ಕಾನೂನು ಅಥವಾ ನಿಯಮಗಳಡಿ ನಿಷೇಧ ವಿಧಿಸಲಾಗಿಲ್ಲ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

'ನಗರದ ಎಚ್‌.ಬಿ.ಆರ್. ಲೇಔಟ್‌ನ 5ನೇ ಬ್ಲಾಕ್‌ನಲ್ಲಿರುವ ಮಸ್ಜಿದ್ ಎ-ಅಶ್ರಫಿಕ್ ವಸತಿ ಪ್ರದೇಶವನ್ನು ಪ್ರಾರ್ಥನೆಗೆ ಬಳಸುವ ಮೂಲಕ ಕಟ್ಟಡ ಬೈ-ಲಾ ಮತ್ತು ವಲಯ ಬೈ-ಲಾ ಉಲ್ಲಂಘನೆ ಮಾಡಲಾಗಿದೆ. ಹೀಗಾಗಿ, ಅಕ್ರಮವಾಗಿ ಕಟ್ಟಡದ ಅನುಮತಿ ರದ್ದುಪಡಿಸಲು ಬಿಬಿಎಂಪಿಗೆ ನಿರ್ದೇಶಿಸಬೇಕು' ಎಂದು ಕೋರಿ ಎಚ್‌ಬಿಆರ್ ಲೇ ಔಟ್ ನಿವಾಸಿಗಳಾದ ಸ್ಯಾಮ್ ಪಿ. ಫಿಲಿಪ್ ಸೇರಿದಂತೆ ಎಂಟು ಜನ ಸ್ಥಳೀಯರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ. ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ವಜಾಗೊಳಿಸಿದೆ.

'ಮಸ್ಜಿದ್ ಎ-ಅಶ್ರಫಿಕ್ ತನ್ನ ಹೊಸ ಕಟ್ಟಡದಲ್ಲಿ ಬಡ ಮಕ್ಕಳಿಗೆ ಶಿಕ್ಷಣ ನೀಡಲು ಮದರಸಾ ನಿರ್ಮಿಸುತ್ತಿದೆ. ಅಲ್ಲಿನ ಸಭಾಂಗಣವನ್ನು ಪ್ರಾರ್ಥನೆಗೆ ಬಳಕೆ ಮಾಡಲಾಗುತ್ತಿದೆ. ಪ್ರಾರ್ಥನೆಗೆ ಕೇವಲವ್ಹ ಹೆಚ್ಚಿನ ಸಂಖ್ಯೆಯ ಜನರು ಪಾಲ್ಗೊಳ್ಳುವುದರಿಂದ ಸ್ಥಳೀಯ ನಿವಾಸಿಗಳಿಗೆ ಸಮಸ್ಯೆಯಾಗುತ್ತದೆ ಎಂಬ ಅರ್ಜಿದಾರರ ಆತಂಕದಲ್ಲಿ ಹುರುಳಿಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಪ್ರಾರ್ಥನೆ ಸಲ್ಲಿಸಲು ಬಂದವರು ಯಾವಾಗಲಾದರೂ ಕೆಟ್ಟದಾಗಿ ನಡೆದುಕೊಂಡಿದ್ದಾರೆಯೇ ಎಂಬುದಕ್ಕೆ ಅರ್ಜಿದಾರರು ಇಲ್ಲ ಎಂದೇ ತಿಳಿಸಿದ್ದಾರೆ. ಹೀಗಾಗಿ, ಅರ್ಜಿಯನ್ನು ಪೂರ್ವಗ್ರಹ ಪೀಡಿತ ಭಾವನೆಯಿಂದ ಸಲ್ಲಿಸಲಾಗಿದೆ. ಅರ್ಜಿದಾರರ ವಾದದಲ್ಲಿ ಯಾವುದೇ ಕಾರಣ ಅಥವಾ ತರ್ಕ ಕಾಣುತ್ತಿಲ್ಲ' ಎಂದು ನ್ಯಾಯಪೀಠ ಅರ್ಜಿ ವಿಲೇವಾರಿ ಮಾಡಿದೆ.

ಸಿಆರ್‌ಇ ವಿಚಾರಣಾ ವರದಿ ತ್ವರಿತ ಅಂಗೀಕಾರಕ್ಕೆ ಸಿ.ಎಂ ಸೂಚನೆ

ಬೆಂಗಳೂರು: ಜಾತಿ ಪ್ರಮಾಣ ಪತ್ರಗಳ ಕುರಿತು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ (ಸಿಆರ್‌ಇ) ನೀಡಿದ ವಿಚಾರಣಾ ವರದಿಗಳನ್ನು ಆಯಾ ಜಿಲ್ಲಾಡಳಿತ ತಕ್ಷಣ ಅಂಗೀಕರಿಸಿ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಮುಖ್ಯಮಂತ್ರಿ ಹೇಳಿದರು.

ವಿಧಾನಸೌಧದಲ್ಲಿ ಶುಕ್ರವಾರ ಗೊಂಡ ಸಮುದಾಯ ಜಾತಿ ಪ್ರಮಾಣ ಪತ್ರ ಪಡೆಯುವಲ್ಲಿ ಎದುರಿಸುತ್ತಿರುವ ಸಮಸ್ಯೆಗಳ ಕುರಿತು ಅವರು ಚರ್ಚಿಸಿದರು.

ಕಲಬುರಗಿ, ಬೀದರ್, ಯಾದಗಿರಿ ಜಿಲ್ಲೆಗಳಲ್ಲಿ ಗೊಂಡ ಸಮುದಾಯ, ಕೊಡಗು ಜಿಲ್ಲೆಯಲ್ಲಿ ಕುರುಬರು ಪರಿಶಿಷ್ಟ ಪಂಗಡ ಸೇರಿದ್ದಾರೆ. ಜಾತಿ ಪ್ರಮಾಣಪತ್ರ ನೀಡುವ ಕುರಿತು ಗೊಂದಲಗಳಿದ್ದರೆ ಬಗೆಹರಿಸಿಕೊಳ್ಳಬೇಕು. ಶಾಲಾ ದಾಖಲಾತಿ, ಪೋಷಕರ ಇತಿಹಾಸದ ದಾಖಲೆಗಳನ್ನು ಪರಿಶೀಲಿಸಿ ಪ್ರಮಾಣ ಪತ್ರ ನೀಡಬೇಕು. ಅನಗತ್ಯ ವಿಳಂಬ ಮಾಡಬಾರದು. ಜಾತಿ ಪ್ರಮಾಣಪತ್ರದ ಆಧಾರದ ಮೇಲೆ ವಿದ್ಯಾರ್ಥಿ ವೇತನ ನೀಡಬೇಕು ಎಂದು ಸೂಚಿಸಿದರು.

ಜಾತಿ ಪ್ರಮಾಣಪತ್ರಗಳ ಕುರಿತು ದೂರುಗಳಿದ್ದರೆ ವಿಚಾರಣೆ ನಡೆಸಬೇಕು. ಸ್ವಯಂ ಪ್ರೇರಿತ ದೂರುಗಳನ್ನು ದಾಖಲಿಸಿಕೊಳ್ಳಬಾರದು. ಸಿಆರ್‌ಇ ಘಟಕ ನೀಡಿದ ವರದಿಯನ್ನು ತಕ್ಷಣ ಅಂಗೀಕರಿಸಬೇಕು ಎಂದರು.

ರಾಜಮ್ಮ ಕೆಇಎ ಕಾರ್ಯ ನಿರ್ವಾಹಕ ನಿರ್ದೇಶಕಿ

ಬೆಂಗಳೂರು: ಎಂಟು ಕೆಎಎಸ್ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದೆ. ಕರ್ನಾಟಕ ಗೆಜೆಟಿಯರ್ ಇಲಾಖೆಯಲ್ಲಿ ಮುಖ್ಯ ಸಂಪಾದಕರ ಹುದ್ದೆಯಲ್ಲಿರುವ ರಾಜಮ್ಮ ಚೌಡರೆಡ್ಡಿ ಅವರನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕರನ್ನಾಗಿ ನೇಮಿಸಲಾಗಿದೆ.

ಇತರ ವರ್ಗಾವಣೆಗಳು: ಮಂಜುನಾಥ ಸ್ವಾಮಿ ಜಿ.ಎನ್.– ಜಂಟಿ ನಿರ್ದೇಶಕರು (ಅಭಿವೃದ್ಧಿ), ಪೌರಾಡಳಿತ ನಿರ್ದೇಶನಾಲಯ; ಸೂರಜ್ ಎ.ಆರ್.– ಮುಖ್ಯ ಪ್ರಧಾನ ವ್ಯವಸ್ಥಾಪಕರು, ಎಂಎಸ್ ಐಎಲ್; ಸೌಜನ್ಯಾ ಭರಣಿ– ನಿರ್ದೇಶಕರು (ಪರೀಕ್ಷೆಗಳು), ಪದವಿ ಪೂರ್ವ ಶಿಕ್ಷಣ ಇಲಾಖೆ; ಎಚ್.ಜಿ. ಚಂದ್ರಶೇಖರಯ್ಯ– ಜಂಟಿ ನಿರ್ದೇಶಕರು (ಆಡಳಿತ), ಕೃಷಿ ಇಲಾಖೆ.

ಅಜಯ್ ವಿ.– ಜಂಟಿ ಆಯುಕ್ತರು, ರಾಜರಾಜೇಶ್ವರಿನಗರ ವಲಯ, ಬಿಬಿಎಂಪಿ;ಅದ ಫಾತಿಮಾ– ಪ್ರಧಾನ ವ್ಯವಸ್ಥಾಪಕರು (ಆಡಳಿತ), ಕೆಯುಐಡಿಎಫ್‌ಸಿ ಮತ್ತು ಸಾವಿತ್ರಿ ಬಿ. ಕಡಿ– ಹೆಚ್ಚುವರಿ ಜಿಲ್ಲಾಧಿಕಾರಿ, ಕೊಪ್ಪಳ.

ದ್ವೇಷ ಹರಡಿ, ಅಶಾಂತಿ ಮೂಡಿಸಲು ಯತ್ನ ಆರೋಪ

ಬಿಜೆಪಿ ಮುಖಂಡ ಮಣಿಕಂಠ ಬಂಧನ

ಪ್ರಜಾವಾಣಿ ವಾರ್ತೆ

ಚಿತ್ತಾಪುರ (ಕಲಬುರಗಿ ಜಿಲ್ಲೆ): ಕಳೆದ ವಿಧಾನಸಭೆ ಚುನಾವಣೆಯಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಎದುರು ಚಿತ್ತಾಪುರ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಬಿಜೆಪಿ ಮುಖಂಡ ಮಣಿಕಂಠ ರಾಠೋಡ ಅವರನ್ನು ಮಾಡಬೂಳ ಠಾಣೆ ಪೊಲೀಸರು ಶುಕ್ರವಾರ ಬಂಧಿಸಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದು, ಮಣಿಕಂಠ ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದ್ದಾರೆ.

ಕಲಬುರಗಿಯಲ್ಲಿದ್ದ ಮಣಿಕಂಠಗೆ ಕರೆ ಮಾಡಿದ ಮಾಡಬೂಳ ಪೊಲೀಸರು ಪ್ರಕರಣವೊಂದರಲ್ಲಿ ಸಹಿ ಮಾಡುವುದಿದೆ ಠಾಣೆಗೆ ಬರುವಂತೆ ತಿಳಿಸಿದ್ದಾರೆ.

ಮಣಿಕಂಠ ರಾಠೋಡ

ಮಣಿಕಂಠ ಮಧ್ಯಾಹ್ನ ಠಾಣೆಗೆ ತೆರಳಿದಾಗ ಬಂಧಿಸಿದ್ದಾರೆ.

ಮಣಿಕಂಠ ಬಂಧನದ ಪ್ರಕ್ರಿಯೆ ಮುಗಿಸಿದ ಪೊಲೀಸರು, ನ್ಯಾಯಾಧೀಶರ ಮುಂದೆ ಹಾಜರುಪಡಿಸುವುದಕ್ಕಿಂತ ಮುಂಚೆ ಚಿತ್ತಾಪುರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಆರೋಗ್ಯ ತಪಾಸಣೆ ಮಾಡಿಸಿ ದರು.

ಪ್ರಕರಣದ ವಿವರ: ತಿಂಗಳ ಹಿಂದೆ ಕಲಗುರ್ತಿ ಗ್ರಾಮದ ಯುವಕ ದೇವಾನಂದ ರಾಮಚಂದ್ರ ಕೊರಬಾ ಆತ್ಮಹತ್ಯೆ ಪ್ರಕರಣದ ಕುರಿತು ಆಗಸ್ಟ್ 23ರಂದು ಚಿತ್ತಾಪುರ ಪಟ್ಟಣದಲ್ಲಿ ಪ್ರತಿಭಟನೆ ಹಮ್ಮಿಕೊಂಡಿದ್ದರ ಬಗ್ಗೆ ಮಣಿಕಂಠ ಮಾತನಾಡಿರುವ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದರು.

ಪೊಲೀಸರ ಕುರಿತು ಜನರಿಗೆ ತಪ್ಪು ಮಾಹಿತಿ ಹರಡಿದ್ದಾರೆ ಮತ್ತು ಸಮಾಜದಲ್ಲಿ ದ್ವೇಷ ಹರಡಿ, ಅಶಾಂತಿ ಮೂಡಿಸಲು ಯತ್ನಿಸಿದ್ದಾರೆ ಎಂದು ಮಣಿ ಕಂಠ ವಿರುದ್ಧ ಮಾಡಬೂಳ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

'ಸಚಿವ ಪ್ರಿಯಾಂಕ್ ಖರ್ಗೆ ಆಣತಿಯಂತೆ ಪೊಲೀಸರು ಕೆಲಸ ಮಾಡುತ್ತಿದ್ದಾರೆ' ಎಂದು ಮಣಿಕಂಠ ಅವರು ಗುರುವಾರವಷ್ಟೇ ಕಲಬುರಗಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಪೊಲೀಸರ ವಿರುದ್ಧ ಹರಿಹಾಯ್ದಿದ್ದರು.

ಪ್ರಧಾನಿಗೆ ಗ್ರೀಕ್‌ನ ಪ್ರತಿಷ್ಠಿತ ಪ್ರಶಸ್ತಿ

ಅಥೆನ್ಸ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರಿಗೆ ಗ್ರೀಕ್ ಸರ್ಕಾರ ಶುಕ್ರವಾರ ಪ್ರತಿಷ್ಠಿತ 'ಗ್ರ್ಯಾಂಡ್ ಕ್ರಾಸ್ ಆಫ್ ದ ಆರ್ಡರ್' ಗೌರವ ಪ್ರಶಸ್ತಿಯನ್ನು ನೀಡಿ ಗೌರವಿಸಿತು.

ಗ್ರೀಕ್ ಅಧ್ಯಕ್ಷೆ ಕಟೆರಿನ ಎನ್ ಸಕೆಲ್ಲಾರೊಪೌಲೌ ಅವರು ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಈ ಪ್ರಶಸ್ತಿಗೆ ಪಾತ್ರರಾದ ವಿದೇಶದ ಮೊದಲ ಮುಖ್ಯಸ್ಥ ಎಂಬ ಹಿರಿಮೆಗೂ ಮೋದಿ ಪಾತ್ರರಾದರು.

ಈ ಕುರಿತ ಹೇಳಿಕೆಯಲ್ಲಿ ವಿದೇಶಾಂಗ ಸಚಿವಾಲಯವು, ಪ್ರಶಸ್ತಿ ಪ್ರದಾನ ಸಮಾರಂಭ ಅಥೆನ್ಸ್‌ನಲ್ಲಿ ಅಧ್ಯಕ್ಷರ ನಿವಾಸದಲ್ಲಿ ನಡೆಯಿತು ಎಂದು ತಿಳಿಸಿದೆ.

'ಪ್ರಶಸ್ತಿ ಗ್ರೀಕ್ ಭಾರತದ ಬಗ್ಗೆ ಹೊಂದಿರುವ ಗೌರವದ ದ್ಯೋತಕವಾಗಿದೆ. ಈ ಪ್ರಶಸ್ತಿಯನ್ನು ಭಾರತದಲ್ಲಿನ ಎಲ್ಲ ಮಕ್ಕಳಿಗೆ ಅರ್ಪಿಸುತ್ತೇನೆ ಎಂದು ಪ್ರಧಾನಿ ಮೋದಿ 'ಎಕ್ಸ್' ವೇದಿಕೆಯಲ್ಲಿ ತಿಳಿಸಿದ್ದಾರೆ.

ಹಿಂಬಾಲಿಸಿ ಲೈಂಗಿಕ ಕಿರುಕುಳ ಆರೋಪ: ಪ್ರಕರಣ ರದ್ದು

ಒಂದನೇ ಪುಟದಿಂದ...

'ಫಿರ್ಯಾದುದಾರ ಮಹಿಳೆಯು ತಮ್ಮ ಸಹೋದ್ಯೋಗಿಗಳ ವಿರುದ್ಧ ಪದೇ ಪದೇ ಸುಳ್ಳು ದೂರು ನೀಡಿದ್ದಾರೆ. ದೂರು ನೀಡುವುದು ವಾಡಿಕೆಯನ್ನಾಗಿ ಮಾಡಿಕೊಂಡಿದ್ದಾರೆ' ಎಂದು ಆಕ್ಷೇಪಿಸಿದರು.

'ಈ ಪ್ರಕರಣದಲ್ಲಿ ಪೊಲೀಸರು ಸೂಕ್ತ ಸಾಕ್ಷ್ಯಾಧಾರ ಇಲ್ಲದೇ ಭಾರತೀಯ ದಂಡ ಸಂಹಿತೆ-1860ರ (ಐಪಿಸಿ) ಕಲಂ 354 (ಡಿ) ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ. ಇದನ್ನು ಸಂಜ್ಞೇಯ ಅಪರಾಧವಾಗಿ ವಿಚಾರಣೆಗೆ ಪರಿಗಣಿಸಿರುವುದು ಕಾನೂನಿನ ದುರ್ಬಳಕೆ. ಆದ್ದ ರಿಂದ, ಆರೋಪಿಗಳ ವಿರುದ್ಧದ ಪ್ರಕರಣವನ್ನು ರದ್ದುಗೊಳಿಸಬೇಕು' ಎಂದು ಕೋರಿದರು.

ಇದನ್ನು ಪುರಸ್ಕರಿಸಿದ ನ್ಯಾಯಪೀಠ ಪ್ರಕರಣವನ್ನು ರದ್ದುಪಡಿಸಿದೆ. ಅರ್ಜಿದಾರರ ಪರ ವಕೀಲ ಎಸ್. ಸುನಿಲ್ ಕುಮಾರ್ ವಕಾಲತ್ತು ವಹಿಸಿದ್ದರು.

ಪ್ರಕರಣವೇನು?: ನಾಗಸಂದ್ರ ವ್ಯಾಪ್ತಿಯ ವಿಶ್ವೇಶ್ವರಯ್ಯ ಲೇಔಟ್‌ನ ಎನ್.ಬಿ. ಜಯಶ್ರೀ (56) ಬಿಇಎಲ್‌ನಲ್ಲಿ ಕೆಲಸ ಮಾಡುತ್ತಿದ್ದು, ತಮ್ಮದೇ ಸಂಸ್ಥೆಯ ಉದ್ಯೋಗಿಗಳಾದ ಎಂ.ಸಿ.ನಾಗರಾಜ್ ಹಾಗೂ ಸಿ.ನರಸಿಂಹಮೂರ್ತಿ ವಿರುದ್ಧ ಲೈಂಗಿಕ ಕಿರುಕಳ ಆರೋಪದ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು.

'ಕೆಲಸ ಮುಗಿಸಿಕೊಂಡು ನಾನು ಯಶವಂತಪುರದ ಸರ್ಕಲ್ ಕಡೆಗೆ ನಡೆದುಕೊಂಡು ಹೋಗುತ್ತಿದ್ದೆ. ನನ್ನನ್ನು ಹಿಂಬಾಲಿಸಿಕೊಂಡು ಆರೋಪಿಗಳು ಬಂದಿದ್ದರು. ನಿನಗೆ ಗಂಡ ಇಲ್ಲ, ನಾಳೆ, ನಾಡಿದ್ದು ರಜೆ ಇದ್ದು ನಮ್ಮ ಜೊತೆ ಬಂದು ಸಹಕರಿಸು. ನಾವು ಹೇಳಿದಂತೆ ಕೇಳಿದರೆ ನಿನಗೆ ಯೂನಿಯನ್‌ನಲ್ಲಿ ಮತ್ತೆ ಸದಸ್ಯತ್ವ ಕೊಡಿಸುತ್ತೇವೆ. ಇಲ್ಲದಿದ್ದರೆ ನಿನಗೆ ಕಾರ್ಖಾನೆಯಲ್ಲಿ ಕೆಲಸ ಮಾಡಲು ಬಿಡುವುದಿಲ್ಲ. ನಿನ್ನ ಕತೆ ಮುಗಿಸುತ್ತೇವೆ ಎಂದು ಟಾಟಾ ಇನ್‌ಸ್ಟಿಟ್ಯೂಟ್ ಕಾಂಪೌಂಡ್ ಬಳಿ ಹೇಳಿದ್ದರು' ಎಂದು ದೂರಿನಲ್ಲಿ ವಿವರಿಸಿದ್ದರು.

ಈ ದೂರನ್ನು ದಾಖಲಿಸಿಕೊಂಡಿದ್ದ ಯಶವಂತಪುರ ಠಾಣೆ ಪೊಲೀಸರು ನಗರದ 24ನೇ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಇದನ್ನು ರದ್ದುಪಡಿಸುವಂತೆ ಕೋರಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಮೇಕೆದಾಟು ಯೋಜನೆಯೇ ಪರಿಹಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳ ಮಧ್ಯೆ ಕಾವೇರಿ ನದಿ ನೀರು ಹಂಚಿಕೆಗೆ ಸಂಬಂಧಿಸಿ ಉದ್ಭವಿಸಿರುವ ಸಮಸ್ಯೆಗೆ ಮೇಕೆದಾಟು ಜಲಾಶಯ ನಿರ್ಮಾಣ ಯೋಜನೆಯೊಂದೇ ಪರಿಹಾರ. ಅದನ್ನು ಸುಪ್ರೀಂ ಕೋರ್ಟ್ ಗಮನಕ್ಕೆ ತಂದಿದ್ದೇವೆ' ಎಂದು ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಶಿವಕುಮಾರ್

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಕಳೆದ ವರ್ಷ 400 ಟಿಎಂಸಿ ಅಡಿಗಳಷ್ಟು ನೀರು ವ್ಯರ್ಥವಾಗಿ ಸಮುದ್ರ ಸೇರಿದೆ. ಮೇಕೆದಾಟು ಜಲಾಶಯ ನಿರ್ಮಾಣವಾಗಿದ್ದರೆ ಅದರಲ್ಲಿ ಒಂದಷ್ಟು ಪ್ರಮಾಣದ ನೀರನ್ನು ಸಂಗ್ರಹಿಸಿ ಇಡಬಹುದಿತ್ತು. ಆ ನೀರನ್ನು ಈಗ ಬಳಸಿದ್ದರೆ ಸಮಸ್ಯೆಯೇ ಇರುತ್ತಿರಲಿಲ್ಲ' ಎಂದರು.

ಮೇಕೆದಾಟು ಜಲಾಶಯದಲ್ಲಿ ಸಂಗ್ರಹಿಸಲಾಗುವ ನೀರನ್ನು ಕರ್ನಾಟಕವು ಕುಡಿಯುವ ಉದ್ದೇಶಕ್ಕೆ ಮಾತ್ರ ಬಳಸಬಹುದು. ಆದರೆ, ಸಂಕಷ್ಟದ ಅವಧಿಯಲ್ಲಿ ತಮಿಳುನಾಡಿಗೆ ನೀರು ಹರಿಸಲು ಹೆಚ್ಚು ಅನುಕೂಲ ಆಗುತ್ತದೆ ಎಂದು ಹೇಳಿದರು.

ತಮಿಳುನಾಡು ತನ್ನ ಪಾಲಿನ ನೀರನ್ನು ಯಾವ ಉದ್ದೇಶಕ್ಕಾದರೂ ಬಳಸಬಹುದು. ಅದನ್ನು ಕರ್ನಾಟಕ ಪ್ರಶ್ನಿಸಲಾಗದು. ಈಗ ತಮಿಳುನಾಡಿಗೆ ನೀರು ಹರಿಸುವುದಕ್ಕೆ ರಾಜ್ಯದ ಕೆಲವರ ವಿರೋಧ ಇದೆ. ಆದರೆ, ನ್ಯಾಯಾಲಯದ ಆದೇಶವನ್ನು ಪಾಲಿಸುವುದು ರಾಜ್ಯ ಸರ್ಕಾರದ ಕರ್ತವ್ಯ. ಈ ಕಾರಣದಿಂದ ನೀರು ಹರಿಸಲಾಗಿದೆ ಎಂದರು.

'ಮಂಡ್ಯದಲ್ಲಿ ರಾಜಕೀಯ ಉದ್ದೇಶದಿಂದ ಬಿಜೆಪಿ ಬೆಂಬಲಿತ ಪ್ರತಿಭಟನೆ ನಡೆದಿದೆ. ಯಾವುದೇ ರೈತರು ತಮಿಳುನಾಡಿಗೆ ನೀರು ಹರಿಸುವುದನ್ನು ವಿರೋಧಿಸಿಲ್ಲ. ರಾಜಕೀಯ ಕಾರಣಕ್ಕಾಗಿ ನೀರು ಹರಿಸುವುದನ್ನು ವಿರೋಧಿಸುತ್ತಿದ್ದಾರೆ' ಎಂದರು.

ಕಾವೇರಿ: ಆದೇಶಕ್ಕೆ ನಕಾರ

ಒಂದನೇ ಪುಟದಿಂದ...

ಕರ್ನಾಟಕದ ಜಲಾಶಯಗಳ ಸ್ಥಿತಿಯನ್ನು ನ್ಯಾಯಪೀಠಕ್ಕೆ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿದ ವಕೀಲರು, 'ಕರ್ನಾಟಕದಲ್ಲಿ ಈ ಸಲ ಮುಂಗಾರು ಕೈಕೊಟ್ಟಿದೆ. ಜಲಾಶಯ ಗಳು ಭರ್ತಿಯಾಗಿಲ್ಲ. ನೀರು ಬಿಡಲು ಸೂಚಿಸಿರುವ ಆದೇಶವು ಕರ್ನಾಟಕದ ಹಿತಾಸಕ್ತಿಗೆ ವ್ಯತಿರಿಕ್ತವಾಗಿದೆ' ಎಂದರು.

ಮುಕುಲ್ ರೋಹಟಗಿ, 'ರಾಜ್ಯದಲ್ಲಿ ಬೆಳೆದು ನಿಂತಿರುವ ಬೆಳೆಗಳಿಗೆ ನೀರಿನ ಕೊರತೆ ಉಂಟಾಗಿದೆ. ಈ ದಿಸೆಯಲ್ಲಿ ಮಧ್ಯಂತರ ಆದೇಶ ಹೊರಡಿಸಬೇಕು' ಎಂದು ಮನವಿ ಮಾಡಿದರು.

ನಗರ ಸಭೆ, ರಬಕವಿ – ಬನಹಟ್ಟಿ Off. : 230236 STD : 08353

ಜಿಲ್ಲಾ : ಬಾಗಲಕೋಟ) ಕಾರ್ಯಾಲಯ : ರಾಮಪೂರ (ಕರ್ನಾಟಕ ರಾಜ್ಯ

ಕ್ರ.ಸಂ.:ನಸರಬ/ಎಸ್‌ಎಫ್‌ಸಿಸಾಅಕುನೀಸಪಅ/ಇಟೆಂಪ್ರ/2023–24 ದಿನಾಂಕ: 25–08–2023

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ನಗರಸಭೆ, ರಬಕವಿ–ಬನಹಟ್ಟಿ ಇವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮ 2000 ರನ್ವಯ ತಿದ್ದುಪಡಿ ಅಧಿನಿಯಮ/ನಿಯಮಗಳ ಪ್ರಕಾರ, ಸನ್ 2012–13, 2013–14, 2018–19, 2021–22 ಹಾಗೂ 2022–23 ನೇ ಸಾಲಿನ ಎಸ್‌ಎಫ್‌ಸಿ ಕುಡಿಯುವ ನೀರಿನ ಅಭಾವ ಪರಿಹಾರ ಅನುದಾನದಡಿ ಉಳಿತಾಯವಾದ ಅನುದಾನದಲ್ಲಿ ಸ್ಟ್ಯಾಂಡರ್ಡ್ ಬಿಡ್‌ನಂತೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಕೆಳಕಾಣಿಸಿದ ಇಂಡೆಂಟ್ ನಂಬರ್‌ನ ಪ್ಯಾಕೇಜ್ ಕಾಮಗಾರಿಗೆ ಟೆಂಡರ್ ಪ್ರಕಟಣೆ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನ https://eproc.karnataka.gov.in ನಿಂದ ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಂಡು **ದಿನಾಂಕ: 11–09–2023 ರ ಮಧ್ಯಾಹ್ನ 01:30 ಗಂಟೆ** ಒಳಗಾಗಿ ಆನ್‌ಲೈನ್ ಮುಖಾಂತರ ಟೆಂಡರ್ ಸಲ್ಲಿಸಬಹುದು. ಹಾಗೂ ಟೆಂಡರ್‌ಗಳನ್ನು **ದಿನಾಂಕ 12–09–2023** ರಂದು ತೆರೆಯಲಾಗುವದು. ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅಥವಾ ಈ ಕಛೇರಿಗೆ ಸಂಪರ್ಕಿಸಬಹುದಾಗಿದೆ.

ಅ ನಂ.	ಇಂಡೆಂಟ್ ನಂ.	ಅಂದಾಜು ಮೊತ್ತ	ಇಎಂಡಿ ಮೊತ್ತ	ಕಾಮಗಾರಿ ಅವಧಿ	ಗುತ್ತಿಗೆದಾರರ ದರ್ಜೆ
01	DMA/ 2023-24/ WS/ WORK_INDENT 2659	5,68,000	14,200	90 ದಿನ	3ನೇ ದರ್ಜೆ ಸಿವಿಲ್ ಹಾಗೂ ಮೇಲ್ಪಟ್ಟು

ಸಹಿ/– ಪೌರಾಯುಕ್ತರು
ನಗರಸಭೆ, ರಬಕವಿ–ಬನಹಟ್ಟಿ

ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ
ಕರ್ನಾಟಕ ಸರ್ಕಾರದ ಒಂದು ಉದ್ದಿಮೆ
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಕೃಭಾಜನಿನಿ, ನಾಎದಂಕಾ, ವಿಭಾಗ ರೋಡಲಬಂಡಾ–584127
ತಾ: ಲಿಂಗಸುಗೂರು ಜಿ: ರಾಯಚೂರು

ಸಂ.ಕೃಭಾಜನಿನಿ/ನಾಎದಂಕಾ/ವಿ/ಪಿಬಿ/ಟೆಂಡರ್/2023–24/711 ದಿನಾಂಕ:–25–08–2023

ಕೊಟೇಶನ್ ಪ್ರಕಟಣೆ
(Through KBJNL website only)

ಉಲ್ಲೇಖ:– ಕರ್ನಾಟಕ ಸರ್ಕಾರದ ತಿದ್ದುಪಡಿ ಆದೇಶ ಸಂ:ಕಸಂಪಾ:04:ವಾಪ್ರಜಾ:2017 ದಿ: 19–01–2017

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪರವಾಗಿ ಅಧಿಕೃತ ಡೀಲರಗಳು, ಪೂರೈಕೆದಾರರಿಂದ Consultancy services for survey, investigation, preparation of PFR/DPR and detailed estimates for the work of Extension, Renovation and Modernization of Rampur LIS Main Canal, distributaries, laterals, sub laterals , structures there under including liasoning with various Directorates of CWC for obtaining approval ಎಂಬ ಕಾಮಗಾರಿಗಳಿಗೆ ಸಂಬಂಧಿಸಿದಂತೆ ದರಗಳನ್ನು ಒದಗಿಸಲು ಕೊಟೇಶನನ್ನು www.kbjnl.karnataka.gov.in ಮೂಲಕ ಕರೆಯಲಾಗಿದೆ. ಸದರಿ ಕೊಟೇಶನ್‌ನ್ನು ಅರ್ಹ ಅಧಿಕೃತ ಡೀಲರಗಳು, ಸಮಲೊಚಕರು, ಪೂರೈಕೆದಾರರು ದಿನಾಂಕ 25.08.2023 ರಿಂದ 02.09.2023 ಮಧ್ಯಾಹ್ನ 2.00 ಗಂಟೆಯವರೆಗೆ www.kbjnl.karnataka.gov.in ನಲ್ಲಿ ವೀಕ್ಷಿಸಿ ಐಟಂವಾರು ದರಗಳನ್ನು ಮೋಹರ್ ಬಂದ್ ಲಕೋಟೆಯಲ್ಲಿ ಭರ್ತಿ ಮಾಡಿ ಈ ಕಚೇರಿಗೆ ಸಲ್ಲಿಸಬಹುದಾಗಿದೆ ಹಾಗೂ ಸದರಿ ಕಾಮಗಾರಿಗಳ ದರಪಟ್ಟಿಯನ್ನು ದಿ. 02.09.2023 ಮಧ್ಯಾಹ್ನ 3.00 ಗಂಟೆಗೆ ತೆರೆಯಲಾಗುವುದು. ಆಸಕ್ತ ಅಧಿಕೃತ ಡೀಲರಗಳು, ಪೂರೈಕೆದಾರರಿಂದ ಹೆಚ್ಚಿನ ಮಾಹಿತಿಯನ್ನು ಕೃಭಾಜನಿನಿ ವೆಬ್‌ಸೈಟ್ www.kbjnl.karnataka.gov.in ನಲ್ಲಿ ಹಾಗೂ ಈ ಕೆಳ ಸಹಿ ಮಾಡಿರುವವರ ಕಚೇರಿಯಲ್ಲಿ, ಕಚೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರು,
ಕೃಭಾಜನಿನಿ, ನಾಎದಂಕಾ ವಿಭಾಗ, ರೋಡಲಬಂಡಾ.

DIP/RCR/103/KSMC&A/Job No.99/2023-24

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, (ರಿ)., ಚಿತ್ರದುರ್ಗ .
ಜಿಲ್ಲಾ ಯೋಜನಾ ನಿರ್ವಹಣಾ ಘಟಕ, (ಎನ್.ಹೆಚ್.ಎಂ) ಜಿಲ್ಲಾ ಪ್ರಯೋಗಾಲಯ ಆವರಣ, ಜಿಲ್ಲಾ ಆಸ್ಪತ್ರೆ ಹಿಂಭಾಗ ಚಿತ್ರದುರ್ಗ.

No.DPMU/NHM/CTA/ 67/2023–24 ದಿನಾಂಕ: 24.08.2023

ಪ್ರಕಟಣೆ

ರಾಷ್ಟ್ರೀಯ ಆರೋಗ್ಯ ಅಭಿಯಾನದ ಯೋಜನೆಯಡಿಯಲ್ಲಿ ಗುತ್ತಿಗೆ ಆಧಾರದ ಮೇಲೆ ನಮ್ಮ ಕ್ಲಿನಿಕ್ ವೈದ್ಯರು, ಡೆಂಟಲ್ ಹೈಜನಿಸ್ಟ್, ಬಯೋಮೆಡಿಕಲ್ ಇಂಜಿನಿಯರ್, ಡಿ.ಹೆಚ್.ಕ್ಯೂ.ಎಂ ಹುದ್ದೆಗಳ ನೇಮಕಾತಿ ಮಾಡಲು ಉಲ್ಲೇಖಿತ ಪತ್ರದಲ್ಲಿ ಆದೇಶವಿರುತ್ತದೆ ಹಾಗೂ ಈ ಕೆಳಕಂಡ ಹುದ್ದೆಗಳು ಖಾಲಿ ಇದ್ದು, ಅದ್ದರಿಂದ ಈ ಕೆಳಕಂಡಂತೆ ನೇಮಕಾತಿ ಮಾಡಿಕೊಳ್ಳಲು ಅರ್ಜಿಯನ್ನು ಆಹ್ವಾನಿಸಿದೆ.

ಕ್ರ. ಸಂ	ಹುದ್ದೆಯ ಹೆಸರು	ಹುದ್ದೆ ಸಂಖ್ಯೆ	ವಿದ್ಯಾರ್ಹತೆ	ಮಾಸಿಕ ಸಂಚಿತ ವೇತನ	ಷರಾ
1	ವೈದ್ಯಾಧಿಕಾರಿಗಳು (ನಮ್ಮ ಕ್ಲಿನಿಕ್)	2	ಎಂಬಿಬಿಎಸ್ ಪದವಿ ಮತ್ತು ಕೆಎಂಸಿ ಕೌನ್ಸಿಲ್ ನೋಂದಣಿ ಹೊಂದಿರಬೇಕು.	ರೂ. 43,141/–	
2	ಡೆಂಟಲ್ ಹೈಜನಿಸ್ಟ್	1	(1) 10+2 Science from Recognised board (2) Diploma in Dental Hygenist from government Recognised institue (3) Registration with state Dental counsil with two years experience in dental college/ clinic (Age Limit 40 Years)	ರೂ. 15,000/–	ಜಿಲ್ಲಾ ಆಸ್ಪತ್ರೆ ಚಿತ್ರದುರ್ಗ–1 ಹುದ್ದೆ

ಬಯೋಮೆಡಿಕಲ್ ಇಂಜಿನಿಯರ್‌ಗಳು

Designation	Qualification: Essential	Qualification: Preference will be given:-	Experience: Essential	Experience: Preference will be given:-	No of Posts	Remarks
Engineer -II (Bio Medical)	B.E/ B.Tech in Bio Medical Engineering/ Medical Electronics/ M.Sc in Bio Medical Instrumentation	B.E/ B Tech	Minimum of 2 Years Experience in Hospital Infrastructure/ Oxygen generation plants/Gas pipelince industries	Work experience in NHM	1	Incase 2 year experience in Maintenance of hospital infrastructure/ oxygen generation plants/ Gas pipeline industries is not available it can be relaxed (Age limit: 45 years, Salary Rs. 25000/- per Month Roster GM)

(1) ಹುದ್ದೆಯ ಹೆಸರು:– District Hospital Quality Manager (DHQM), (2) ಹುದ್ದೆ ಸಂಖ್ಯೆ:–01. (3) ವಿದ್ಯಾರ್ಹತೆ:– UG Qualification:- MBBS/BDS/AYUSH/Nursing Life Science/ social science Graduate (Regular Full time form recognized university) PG Qualification:- Masters in Hospital administration/ Health Management (MHA- Regular Full time form recognized university), Additional Courses:- Training & Experience of implementing a recognized quality system like NABH/ISO9001:2008/ Six Sigma/Lean/Kaizen would be preferred Experience:- 1 Year Experience in Public Health or hospital administration previous work experience in the field of health quality would be an added advantage, Age limit:- 45 Years, Mandatory Language Proficiency:- Kannada-To Read, write and Speak, (4) ಮಾಸಿಕ ಸಂಚಿತ ವೇತನ:– ರೂ. 35,000/– 4) ಷರಾ:– ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ–1 ಹುದ್ದೆ, (ರೋಸ್ಟರ್ ಸಾಮಾನ್ಯ). ಸದರಿ ನೇಮಕಾತಿಯನ್ನು ಮೆರಿಟ್ ಮತ್ತು ರೋಸ್ಟರ್ ಆಧಾರದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗುವುದು. ಆಸಕ್ತಿಯುಳ್ಳ ಅಭ್ಯರ್ಥಿಗಳು ಪತ್ರಿಕಾ ಪ್ರಕಟಣೆ ದಿನಾಂಕದಿಂದ ದಿನಾಂಕ: 08.09.2023ರ ಸಂಜೆ 5.30 ರೊಳಗಾಗಿ ಬಯೋಡಾಟಾದಲ್ಲಿ ನಿಗಧಿತ ವಿದ್ಯಾರ್ಹತೆಯ ದೃಢೀಕೃತ ದಾಖಲಾತಿಗಳೊಂದಿಗೆ ಮೇಲ್ಕಂಡ ಕಛೇರಿಗೆ ಅರ್ಜಿಯನ್ನು ಸಲ್ಲಿಸುವುದು (ಸದರಿ ನೇಮಕಾತಿಗಳು ಎನ್‌ಹೆಚ್‌ಎಂ ನಿಯಮವಳಿಯ ಷರತ್ತು ಮತ್ತು ನಿಬಂಧನೆಗೆ ಒಳಪಟ್ಟಿರುತ್ತದೆ) ಇನ್ನೂ ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ನಂ. 9449843104 ಇಲ್ಲಿ ಸಂಪರ್ಕಿಸಬಹುದು.

ಸಹಿ/– ಉಪಾಧ್ಯಕ್ಷರು, ಜಿಲ್ಲಾ ಆರೋಗ್ಯ ಮತ್ತು ಕು.ಕ. ಸೊಸೈಟಿ (ರಿ), ಚಿತ್ರದುರ್ಗ.

DIPR/CTA/KSMCA/171/2023-24

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಕಂಪನಿ ಕಛೇರಿ, ನವನಗರ, ಪಿ. ಬಿ. ರೋಡ, ಹುಬ್ಬಳ್ಳಿ–580 025.
Telephone: 0836-2956611
E-mail ID: itc.hescom@gmail.com
Corporate Identity Number (CIN): U31401KA2002SGC030437

ಕ್ರ.ಸಂ: ಹೆಸ್ಕಾಂ/ಪ್ರ.ವ್ಯ(ಆ&ಮಾ.ಸಂ.ಅ)/ಇಇ(ಮಾ.ಸಂ.ಅ&ಕೈ.ತ.ಕೇಂ)/23–24/5403 ದಿನಾಂಕ: 23–08–2023

ಪ್ರಕಟಣೆ

ವಿಷಯ: 2023–24 ನೇ ಸಾಲಿನಲ್ಲಿ ಐಟಿಐ ಇಲೆಕ್ಟ್ರೀಶಿಯನ್ ವೃತ್ತಿ ತರಬೇತಿಗಾಗಿ 248 ಶಿಶುಕ್ಷುಗಳನ್ನು ಆಯ್ಕೆ ಮಾಡುವ ಕುರಿತು.

2023–24 ನೇ ವರ್ಷದ ಅವಧಿಗಾಗಿ ಐಟಿಐ ಇಲೆಕ್ಟ್ರೀಶಿಯನ್ ವೃತ್ತಿ ತರಬೇತಿಗಾಗಿ 248 ಶಿಶುಕ್ಷುಗಳನ್ನು ಆಯ್ಕೆ ಮಾಡಲು ಅರ್ಜಿಗಳನ್ನು ಕರೆಯಲಾಗಿದ್ದು, ಅರ್ಹ ಅಭ್ಯರ್ಥಿಗಳಿಗೆ ಬೇಕಾಗುವ ಅರ್ಹತೆಗಳ ವಿವರ ಹಾಗೂ ಶಿಶುಕ್ಷುಗಳು ಸಲ್ಲಿಸಬೇಕಾಗುವ ಅರ್ಜಿಯ ನಮೂನೆ ಹಾಗೂ ಸಂಬಂಧಿತ ಲಗತ್ತುಗಳು ಹೆಸ್ಕಾಂನ ವೆಬ್ ಸೈಟ್ www.hescom.karnataka.gov.in ನಲ್ಲಿ ಲಭ್ಯವಿರುತ್ತವೆ. ಭರ್ತಿ ಮಾಡಿದ ಅರ್ಜಿಗಳನ್ನು, ಲಗತ್ತುಗಳೊಂದಿಗೆ ಕಾರ್ಯನಿರ್ವಾಹಕ ಇಂಜಿನಿಯರರು(ವಿ), ಕೈಗಾರಿಕಾ ತರಬೇತಿ ಕೇಂದ್ರ (ಐ.ಟಿ.ಸಿ), ಹೆಸ್ಕಾಂ, ವಿದ್ಯುತ್ ನಗರ, ಕಾರವಾರ ರಸ್ತೆ, ಹುಬ್ಬಳ್ಳಿ–24, ಇವರಿಗೆ ದಿನಾಂಕ 16.09.2023 ರ ಸಂಜೆ 4.00 ಘಂಟೆಯ ಒಳಗೆ ಅಂಚೆ ಮೂಲಕ ಕಳುಹಿಸಬೇಕು. ಮುಂದಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಅಭಿಯಂತರರು (ವಿ), ಕೈಗಾರಿಕಾ ತರಬೇತಿ ಕೇಂದ್ರ ಇವರನ್ನು ಸಂರ್ಕಿಸಿರಿ (0836–2956611).

ಸಹಿ/–
(ಡಾ. ಸಿದ್ದು ಹುಲ್ಲೋಳಿ ಕೆ.ಎ.ಎಸ್)
ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ. ಸಂ.ಅ)
ನಿಗಮ ಕಛೇರಿ, ನವನಗರ, ಹುಬ್ಬಳ್ಳಿ.

ವಾ.ಸಾ.ಇ/ಧಾ/212/2023–24/ದೇಶಪಾಂಡೆಪಬ್ಲಿಸಿಟಿ

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ
ಸಂಖ್ಯೆ:ಕಾಇಂ/ಲೋಇವಿ/ಮಧು:ಸಇಂ/ಟೆಂಡರ್/2023–24 ದಿ: 21.08.2023

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:02/2023–24
(ಕೆಪಿಪಿಪಿ ಪೋರ್ಟಲ್) ಏಕ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW–1 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಶಿರಾ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗಳಿಗೆ ಟೆಂಡರ್‌ನ್ನು KPPP Portal ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137– 283336.
ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ 12.50 ಲಕ್ಷ ಗಳವರೆಗೆ. ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ 31–08–2023 ಸಂಜೆ 4.00 ಗಂಟೆಯವರೆಗೆ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 01–09–2023 ರ ಸಂಜೆ 4.15 ಗಂಟೆಯ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: 29–08–2023 ಸಂಜೆ 4.00 ಗಂಟೆಗೆ ವರೆಗೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.

DIPR/TUM/122/KSMCA/2023-24

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಸರ್ ಸಿದ್ದಪ್ಪ ಕಂಬಳಿ ರಸ್ತೆ ದೂರವಾಣಿ : 2213898, 2213888 website : www.hdmc.gov.in
ಘನತ್ಯಾಜ್ಯ ವಸ್ತು ನಿರ್ವಹಣಾ ವಿಭಾಗ, ಹುಬ್ಬಳ್ಳಿ
ನಂ:ಎಚ್.ಡಿ.ಎಂ.ಸಿ./74/2023–24 ದಿನಾಂಕ : 24–08–2023

ಅಲ್ಪಾವಧಿ ಇ–ಟೆಂಡರ ಅಧಿಸೂಚನೆ
(ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಘನತ್ಯಾಜ್ಯ ವಸ್ತು ನಿರ್ವಹಣೆ ವಿಭಾಗದಿಂದ ಹುಬ್ಬಳ್ಳಿ ವಿಭಾಗದ ಕಾರವಾರ ರಸ್ತೆಯಲ್ಲಿರುವ ಗಾರ್ಬೇಜ ಯಾರ್ಡ್‌ಗೆ ಬಾಡಿಗೆ ಆಧಾರದ ಮೇಲೆ ಹಿಟಾಚಿ (Hydraulic Excavator 200 HP & Above) ವಾಹನ ಪೂರೈಕೆ ಮಾಡಿಕೊಳ್ಳುವ ಬಗ್ಗೆ. ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಇಂಡೆಂಟ್ ನಂ:DMA/2023-24/SE0690 ಟೆಂಡರ್ ಪ್ರಸ್ತಾವನೆಗಳನ್ನು ಆಹ್ವಾನಿಸಿ ಪ್ರಕಟಣೆಯನ್ನು ಈ ಮೂಲಕ ಹೊರಡಿಸಿದೆ ಟೆಂಡರ್ ನಿಯಮಗಳನ್ನು ಒಳಪಟ್ಟಿರುವ ಟೆಂಡರ್ ದಸ್ತಾವೇಜನ್ನು ಅಂತರ್ ಜಾಲದ ಮೂಲಕ ವೆಬ್ ಸೈಟ್ ವಿಳಾಸ http://www.kppp.karnataka.gov.in ರಲ್ಲಿ ಪಡೆಯಬಹುದು. ಸದರಿ ಟೆಂಡರ ದಾಖಲೆಗಳನ್ನು ಇ–ಪ್ರೊಕ್ಯೂರಮೆಂಟ್ ದಿನಾಂಕ : **25–08–2023** ರಿಂದ ಪಡೆಯಬಹುದಾಗಿದೆ. ಯಾವುದೇ ತಿದ್ದುಪಡಿ ಹಾಗೂ ಟೆಂಡರ್ ಮುಂದೂಡಿಕೆ ಪ್ರಕಟಣೆಯನ್ನು ಇ–ಪ್ರೊಕ್ಯೂರಮೆಂಟ್‌ನಲ್ಲೇ ಪ್ರಕಟಿಸಲಾಗುವುದು.
ಟೆಂಡರ ವೇಳಾ ಪಟ್ಟಿ : (1) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ : **01–09–2023** ರಂದು ಸಾ. 4.30 ಘಂಟೆಯವರೆಗೆ (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **04–09–2023** ರಂದು ಮು: 11.00 ಘಂಟೆಯವರೆಗೆ (3) ಆರ್ಥಿಕ ಬಿಡ್ ತೆರೆಯುವ ದಿನಾಂಕ : **06–09–2023** ರಂದು ಮು: 11.00 ಘಂಟೆಯ ಅಥವಾ ಇತರೆ ಅನುಕೂಲಕರ ದಿನಗಳಲ್ಲಿ

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಘವನಿ)
ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ,
ಹುಬ್ಬಳ್ಳಿ

ವಾಸಾಸಂಇ/ಧಾ/ಕೆಎಸ್‌ಎಂಸಿಎ/210/2023–24

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
(KPPP Portal ಮುಖಾಂತರ)
ReF: No: EE/ KNNL/ UTP DVN/RNR/PB-3/WM /2023-24/ 972 Dated: 19-08-2023

ಅಲ್ಪಾವಧಿ ಟೆಂಡರ್ ಪ್ರಕಟಣೆ ಕರೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರು KPPP Portal. ಮುಖಾಂತರ ಅರ್ಹ ಗುತ್ತಿಗೆದಾರರಿಂದ ಲೆಕ್ಕ ಶೀರ್ಷಿಕೆ 2701 ರಡಿ ಮೊತ್ತ ರೂ. 44.60 ಲಕ್ಷದ ಒಂದು ಕಾಮಗಾರಿಯ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
www.. KPPP Portal karnataka.gov.inನಲ್ಲಿ ನೋಡಿಕೊಂಡು ತುಂಬತಕ್ಕದ್ದು. ಟೆಂಡರ್ ಅಕ್ಸೆಸ್ ಮಾಡುವ ದಿ:24–08–2023 ರಿಂದ 01–09–2023 ರ ಸಂಜೆ 5.30ರ ವರೆಗೆ ಇರುವುದು. ಟೆಂಡ್‌ರ ಬಗ್ಗೆ ವಿಚಾರಣೆಗೆ ಕೊನೆಯ ದಿ:01–09–2023 ಸಂಜೆ 5.30ರ ವರೆಗೆ ಇರುತ್ತದೆ.ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿ:28–08–2023ರ ಸಂಜೆ 5.30ರ ವರೆಗೆ ಸಲ್ಲಿಸತಕ್ಕದ್ದು. ದಿ:02–09–2023 ರಂದು ಸಂಜೆ 5.30 ಗಂಟೆಗೆ ಆರ್ಥಿಕ ಬಿಡ್‌ನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೆಬೆನ್ನೂರು ಇವರ ಕಚೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು KPPP Portal ಪೋರ್ಟಲ್‌ನಲ್ಲಿ ಮುಖಾಂತರ ನೋಡಿಕೊಳ್ಳತಕ್ಕದ್ದು ಹಾಗೂ ದೂರವಾಣಿ ಸಂ. (08373) 297332 ಕ್ಕೆ ಸಂಪರ್ಕಿಸುವುದು. ಸದರಿ ಟೆಂಡರ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಿದಲ್ಲಿ KPPP Portal ಪೋರ್ಟಲ್‌ನಲ್ಲಿ/ ದಿನ ಪತ್ರಿಕೆಗಳಲ್ಲಿ ಪ್ರಚುರ ಪಡಿಸಲಾಗುವುದು. ಟೆಂಡರ್ ಅಂಗೀಕರಿಸುವ ಅಧಿಕಾರಿಯು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ರದ್ದು ಪಡಿಸುವ ಅಧಿಕಾರ ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು(ಪ್ರ),
ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು.

370

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ದೀಪದ ಬೆಳಕಿನಲ್ಲಿ ಒಬ್ಬಾತ ಗೀತೆಯನ್ನು ಓದಬಲ್ಲ, ಇನ್ನೊಬ್ಬಾತ ಕಳ್ಳತನ ಮಾಡಬಲ್ಲ. ಇದು ದೀಪದ ತಪ್ಪಲ್ಲ, ಮನುಷ್ಯಗುಣದ ತಪ್ಪು.

– ಸಂತ ಕಬೀರ

ಬರದ ಕರಿನೆರಳು: ತಕ್ಷಣ ಚುರುಕಾಗಲಿ ಆಡಳಿತ ಯಂತ್ರ

ಮುಂಗಾರು ಹಂಗಾಮಿನ ಮೊದಲಾರ್ಧ ಮುಗಿಯುತ್ತಾ ಬಂದರೂ ವಾಡಿಕೆಯಷ್ಟು ಮಳೆ ಬಾರದೇ ಕರ್ನಾಟಕದ 120 ತಾಲ್ಲೂಕುಗಳ ಮೇಲೆ ಬರದ ಕರಿನೆರಳು ಚಾಚಿದೆ. ಇದು ನಾಡಿನ ರೈತ ಸಂಕುಲವನ್ನು ವ್ಯಾಕುಲಕ್ಕೆ ದೂಡಿದೆ. ಮಳೆ ಬೀಳದೇ ಇರುವುದರಿಂದ ಮೊಳಕೆಯೊಡೆದ ಬೀಜಗಳು ಅಲ್ಲೇ ಮುರುಟಿ-ಹೋಗಲಾರಂಭಿಸಿವೆ. ಕೆಲವೆಡೆ ಟ್ಯಾಂಕರ್ ಮೂಲಕ ನೀರು ತರಿಸಿ ಬೆಳೆ ಉಳಿಸಿಕೊಳ್ಳುವ ಯತ್ನವನ್ನು ರೈತರು ಮಾಡುತ್ತಿದ್ದಾರೆ. ಹಿಂದಿನ ಐದು ವರ್ಷಗಳ ಸರಾಸರಿ ಅಂದಾಜಿನಂತೆ 108 ಲಕ್ಷ ಹೆಕ್ಟೇರ್‌ನಷ್ಟು ಜಮೀನು ಕೃಷಿಗೆ ಬಳಕೆಯಾಗುತ್ತಿದೆ. ಹಿಂದಿನ ವರ್ಷ ಮುಂಗಾರು ಹಂಗಾಮಿನಲ್ಲಿ 71.74 ಲಕ್ಷ ಹೆಕ್ಟೇರ್ ಬಿತ್ತನೆಯಾಗಿತ್ತು. ಈ ಸಾಲಿನಲ್ಲಿ 82.35 ಲಕ್ಷ ಹೆಕ್ಟೇರ್ ಬಿತ್ತನೆ ಗುರಿಯಿದ್ದು, ಈವರೆಗೆ 64.84 ಲಕ್ಷ ಹೆಕ್ಟೇರ್ ಬಿತ್ತನೆಯಾಗಿದೆ. ಲೆಕ್ಕಾಚಾರದಲ್ಲಿ ಶೇಕಡ 79ರಷ್ಟು ಬಿತ್ತನೆಯಾಗಿದೆಯಾದರೂ ಬಿತ್ತಿದ ಬೀಜಗಳಷ್ಟೂ ಚಿಗುರೊಡೆದು ಗಿಡವಾಗುವುದಿಲ್ಲ. ಭತ್ತ, ಗೋಧಿ ಬಿಟ್ಟರೆ ಕರ್ನಾಟಕದ ಏಕದಳ ಮತ್ತು ದ್ವಿದಳ ಧಾನ್ಯದ ಬೆಳೆಗಳೆಲ್ಲವೂ ಮಳೆಯನ್ನೇ ನೆಚ್ಚಿಕೊಂಡಿವೆ. ಸಕಾಲದಲ್ಲಿ ಅವಶ್ಯದಷ್ಟು ಮಳೆ ಹೋಗಲಿ, ಹನಿಗಳ ಸಿಂಚನವಾದರೂ ಆಗದಿದ್ದರೆ ಬೀಜಗಳು ಮೊಳಕೆಯೊಡೆಯುವುದಿಲ್ಲ. ಚಿಗುರೊಡೆದ ಬೀಜಗಳು ಬಿಸಿಲ ತಾಪಕ್ಕೆ ಅಲ್ಲೇ ಕಮರುವುದು ಸಾಮಾನ್ಯ. ಮಳೆ ಕೊರತೆಯಾದ ಅನೇಕ ಜಿಲ್ಲೆಗಳಲ್ಲಿ ಈ ರೀತಿಯ ಹಲವು ಪ್ರಕರಣಗಳು ವರದಿಯಾಗಿವೆ.

ಬಂದೆರಗಬಹುದಾದ ಬರ, ಅದು ತಂದೊಡ್ಡಬಹುದಾದ ಆತಂಕ, ಆಹಾರ ಸಮಸ್ಯೆಯನ್ನು ನಿಭಾಯಿಸಲು ಸರ್ಕಾರ ತುರ್ತಾಗಿ ಕ್ರಿಯಾಯೋಜನೆ ರೂಪಿಸಬೇಕಿದೆ

ಮಳೆ ಕೊರತೆಯಾಗಿರುವುದನ್ನು ಗಮನಿಸಿರುವ ಸರ್ಕಾರ ಈಗಾಗಲೇ ಮುನ್ನೆಚ್ಚರಿಕೆ ಕ್ರಮವನ್ನು ತೆಗೆದುಕೊಂಡಿದೆ. ಮಳೆ-ಬೆಳೆ ಪರಿಸ್ಥಿತಿಯನ್ನು ಪರಾಮರ್ಶಿಸಿ ಸರ್ಕಾರಕ್ಕೆ ಶಿಫಾರಸು ಮಾಡಲು ರಚಿಸಲಾದ ಸಚಿವ ಸಂಪುಟ ಉಪಸಮಿತಿ ಈಗಾಗಲೇ ಸಭೆ ಸೇರಿ ಚರ್ಚೆಯನ್ನೂ ನಡೆಸಿದೆ. 'ಮಳೆ ಕೊರತೆ ಎದುರಿಸುತ್ತಿರುವ 120 ತಾಲ್ಲೂಕುಗಳಲ್ಲಿನ ಪ್ರತಿ 10 ಹಳ್ಳಿಗಳಲ್ಲಿ ಐದು ಪ್ರಮುಖ ಬೆಳೆಗಳ ಪರಿಸ್ಥಿತಿ ಬಗ್ಗೆ ಜಂಟಿ ಸಮೀಕ್ಷೆ ನಡೆಸಿ 10 ದಿನಗಳ ಒಳಗೆ ವರದಿ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದ್ದಾರೆ. ಮುಂದೆ ಎದುರಾಗಲಿರುವ ಪರಿಸ್ಥಿತಿಯ ತೀವ್ರತೆಯನ್ನೂ ಇದು ತೋರಿಸುತ್ತದೆ. ಮಳೆ ಕೊರತೆಯಿಂದ ಎದುರಾಗಬಹುದಾದ ಸಂಕಷ್ಟಗಳನ್ನು ಮೊದಲೇ ಅಂದಾಜಿಸಿದರಷ್ಟೇ ಸಾಲದು. ಬಂದೆರಗಬಹುದಾದ ಬರಗಾಲ, ಅದು ತಂದೊಡ್ಡಬಹುದಾದ ಆತಂಕ, ಆಹಾರ ಸಮಸ್ಯೆಯನ್ನು ನಿಭಾಯಿಸುವ ಯೋಜನೆಯನ್ನೂ ಸರ್ಕಾರ ರೂಪಿಸಬೇಕಿರುವುದು ಈಗಿನ ತುರ್ತು. ಬರಪೀಡಿತ ಎಂದು ಘೋಷಿಸಬೇಕಾದರೆ ಸೆಪ್ಟೆಂಬರ್ ಅಂತ್ಯದ-ವರೆಗಿನ ಮಳೆ ಕೊರತೆ, ತೇವಾಂಶದ ಪರಿಸ್ಥಿತಿ, ಬೆಳೆ ಹಾನಿಯ ಸಮೀಕ್ಷೆ ನಡೆಸಿ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಬೇಕು. ಕೇಂದ್ರದ ಮಾರ್ಗಸೂಚಿ ಅನ್ವಯ ಪರಿಹಾರದ ಮೊತ್ತ ಬಿಡುಗಡೆಯಾಗಬೇಕಾದರೆ ಅಲ್ಲಿಯವರೆಗೆ ಕಾಯಲೇಬೇಕು. ಅದಕ್ಕೆ ಮೊದಲೇ ಬರದ ಘೋಷಣೆ ಮಾಡಿದರೆ ರಾಜ್ಯವೇ ಬರ ನಿರ್ವಹಣೆಯ ಬಾಬ್ತನ್ನು ಹೊರಬೇಕು. ಅದಕ್ಕಾಗಿಯೇ, ಕೇಂದ್ರದ ಮಾರ್ಗಸೂಚಿ ಬದಲಾವಣೆ ಮಾಡುವಂತೆ ಒಂದು ದಶಕದಿಂದ ರಾಜ್ಯ ಸರ್ಕಾರವು ಕೇಂದ್ರಕ್ಕೆ ಮೊರೆಯಿಡುತ್ತಲೇ ಇದೆ. ಆದರೆ, ಅದಕ್ಕೆ ಕೇಂದ್ರ ಸರ್ಕಾರ ಸ್ಪಂದಿಸಿಲ್ಲ. ರಾಜ್ಯ ಸರ್ಕಾರವೇ ಜನರ ಕಷ್ಟಕ್ಕೆ ಹೆಗಲಾಗಬೇಕಾದ ಅನಿವಾರ್ಯವಂತೂ ಇದ್ದೇ ಇದೆ.

ಬರಕ್ಕೆ ತುತ್ತಾಗಬಹುದಾದ ಪ್ರದೇಶಗಳ ಮಾಹಿತಿ ಈಗಾಗಲೇ ಸರ್ಕಾರದ ಬಳಿ ಇದೆ. ಆಯಾ ಜಿಲ್ಲಾಡಳಿತವನ್ನು ಚುರುಕುಗೊಳಿಸಿ, ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಪರ್ಯಾಯ ಜಲ ಮೂಲಗಳನ್ನು ಗೊತ್ತುಮಾಡಿಕೊಳ್ಳಬೇಕಿದೆ. ಅಣೆಕಟ್ಟು, ಕೆರೆ, ಕೊಳವೆಬಾವಿ, ಖಾಸಗಿ ಕೊಳವೆಬಾವಿಗಳ ಮೇಲೆ ನಿಗಾ ಇಟ್ಟು, ನೀರಿನ ಮಿತ ಬಳಕೆಗೆ ಜಾಗೃತಿ ಮೂಡಿಸಬೇಕಿದೆ. ವಿವಿಧ ಇಲಾಖೆಗಳ ಸಮನ್ವಯದಡಿ ಸಂಕಷ್ಟ ಪರಿಹಾರ ಸೂತ್ರವೊಂದನ್ನು ಸರ್ಕಾರ ಈಗಲೇ ಸಿದ್ಧಪಡಿಸಬೇಕಿದೆ. ನೀರಿನ ವ್ಯವಸ್ಥೆಗೆ ಜಿಲ್ಲಾ ಪಂಚಾಯಿತಿಗಳಿಗೆ ಬೇಕಾದ ಅನುದಾನವನ್ನು ಇಡುಗಂಟಿನ ರೂಪದಲ್ಲಿ ಬಿಡುಗಡೆ ಮಾಡಿ, ಮುಂಜಾಗ್ರತೆ ವಹಿಸಬೇಕಿದೆ. ಬಿತ್ತಿದ ಬೀಜ ಮೊಳಕೆಯೊಡೆಯದೆ, ಭೂಮಿಗೆ ಚೆಲ್ಲಿದ ಗೊಬ್ಬರವೂ ವ್ಯರ್ಥವಾಗಿ ರೈತರು ಸಂಕಷ್ಟಕ್ಕೆ ಸಿಲುಕುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಬಿತ್ತನೆ ಬೀಜದ ನಷ್ಟದಿಂದ ತೊಂದರೆಗೀಡಾದ ರೈತರು ಮತ್ತೊಮ್ಮೆ ಬಿತ್ತನೆಗೆ ಮುಂದಾದರೆ ರಿಯಾಯಿತಿ ದರದಲ್ಲಿ ಬೀಜ, ಗೊಬ್ಬರ ಒದಗಿಸಲು ಸರ್ಕಾರ ಅಣಿಯಾಗಬೇಕು. ಸಾಲ ಮಾಡಿದ ರೈತರು ಆತಂಕಕ್ಕೆ ಈಡಾಗುವುದನ್ನು ತಪ್ಪಿಸಲು, ಹಿಂದೆ ಕಾಂಗ್ರೆಸ್ ನೇತೃತ್ವದ ಸರ್ಕಾರದ ಅವಧಿಯಲ್ಲಿ ಕೃಷಿ ಸಚಿವರಾಗಿದ್ದ ಕೃಷ್ಣ ಬೈರೇಗೌಡರು, ರೈತರಿಗೆ ಆಪ್ತ ಸಮಾಲೋಚನೆ ಸೌಲಭ್ಯ ಕಲ್ಪಿಸಿ ಧೈರ್ಯ ತುಂಬುವ ಕೆಲಸ ಮಾಡಿದ್ದರು. ಮತ್ತೆ ಅದಕ್ಕೆ ಚಾಲನೆ ನೀಡಬೇಕಾಗಿದೆ. ಬರ ಎದುರಿಸಲು ಸರ್ಕಾರವೇ ಸಜ್ಜುಗೊಳ್ಳಬೇಕಿರುವುದು ಈ ಹೊತ್ತಿನ ಅಗತ್ಯ.

ದಿನದ ಟ್ವೀಟ್

ಹೀಗಿದೆ ಆಯ್ಕೆ ಪ್ರಕ್ರಿಯೆ...!

ಮುಖ್ಯ ಚುನಾವಣಾ ಆಯುಕ್ತರ ಆಯ್ಕೆಗೆ ಸಂಬಂಧಿಸಿದ ಮಸೂದೆ ಈಗ ಸುದ್ದಿಯಲ್ಲಿದೆ. ಭಾರತದ ಮುಖ್ಯ ನ್ಯಾಯಮೂರ್ತಿ ಅವರನ್ನು ಈ ಆಯ್ಕೆ ಪ್ರಕ್ರಿಯೆಯಿಂದ ಹೊರಗಿಟ್ಟಿರುವುದು ಇದಕ್ಕೆ ಕಾರಣ. ಇನ್ನೊಂದು ನಿರ್ಣಾಯಕವಾದ ಅಂಶವೆಂದರೆ, ಚುನಾವಣಾ ಆಯುಕ್ತರ ವೇತನವನ್ನು ಸಂಪುಟ ಕಾರ್ಯದರ್ಶಿಯ ವೇತನದ ಮಟ್ಟಕ್ಕೆ ಇಳಿಸಿರುವುದು. ಹಾಗಾಗಿ, ಇನ್ನುಮುಂದೆ ಯಾವಾಗಲೂ ಸಮಾನಮನಸ್ಕರಿಂದ ನೇಮಕಗೊಂಡವರು, ಸರ್ಕಾರದಿಂದ ನಿಯುಕ್ತರಾದವರಿಂದ ಆಯ್ಕೆಯಾದ ನಿವೃತ್ತ ಐಎಎಸ್ ಅಧಿಕಾರಿ ಮಾತ್ರ ಚುನಾವಣಾ ಆಯುಕ್ತರಾಗಬಹುದು. ಪ್ರಜಾಪ್ರಭುತ್ವಕ್ಕೆ ಜಯವಾಗಲಿ.

ಯಶೋವರ್ಧನ್ ಝಾ ಆಜಾದ್, ಉದ್ಯಮಿ, ನಿವೃತ್ತ ಐಪಿಎಸ್ ಅಧಿಕಾರಿ

ಕಿಡಿನುಡಿ

ಭಾರತೀಯ ಅರಣ್ಯ ಸೇವಾ ಅಧಿಕಾರಿಗಳಿಗೆ ಒಂದು ಸ್ನೇಹಪೂರ್ವಕ ಸಲಹೆ: ಅರಣ್ಯ ಸಂರಕ್ಷಣಾ ಕಾನೂನಿನ ತಿದ್ದುಪಡಿ ಅಥವಾ ಪ್ರತಿದಿನ ನಡೆಯುತ್ತಿರುವ, ಜೀವಿಗಳ ಆವಾಸಸ್ಥಾನದ ಪರಿವರ್ತನೆ ಬಗ್ಗೆ ಮಾತನಾಡುವ ಧೈರ್ಯ ಮತ್ತು ಕರ್ತವ್ಯಪ್ರಜ್ಞೆ ನಿಮಗೆ ಇಲ್ಲದಿದ್ದರೆ, ಸಣ್ಣಪುಟ್ಟ ಕಳ್ಳಬೇಟೆಗಾರರನ್ನು ಹಿಡಿದ ಬಗ್ಗೆ ಬಡಾಯಿ ಕೊಚ್ಚಿಕೊಳ್ಳದೇ ಇರುವುದಕ್ಕೆ ಪ್ರಯತ್ನಿಸಿ.

ರಿಷಿಕಾ ಪಾರ್ದೀಕರ್, ಪರಿಸರ ವರದಿಗಾರ್ತಿ

50 ವರ್ಷಗಳ ಹಿಂದೆ

ಭಾನುವಾರ, 26-8-1973

• ಚರ್ಚೆಯಲ್ಲಿ ಉದ್ರಿಕ್ತ ಸದಸ್ಯರೊಬ್ಬರ ಹಠಾತ್ ನಿಧನ

ಬೆಂಗಳೂರು, ಆ. 25– ಕೈ ಕೈ ಮಿಲಾಯಿಸುವಷ್ಟರವರೆಗಿನ ಘಟನೆಯಲ್ಲಿ ತೀರಾ ಉದ್ರೇಕಗೊಂಡ ಸದಸ್ಯ ಶ್ರೀ ವಿದ್ಯಾಧರ್ ಅವರು ಆನಂತರ ಆಸ್ಪತ್ರೆಯಲ್ಲಿ ನಿಧನರಾದ ದುರಂತದ ಕಾರಣ, ಒಳಗೂ ಹೊರಗೂ ಕೆಲ ಕಾಲ ಇದ್ದ ಕೋಲಾಹಲದ ವಾತಾವರಣದಲ್ಲಿ ನಡೆದ ಮೈಸೂರು ಪ್ರದೇಶ ಚುನಾವಣಾ ಸಮಿತಿ (ಎಂ.ಪಿ.ಸಿ.ಸಿ.) ಸಭೆಯು ಚುನಾವಣೆ ಸಮಿತಿಯ ಆಯ್ಕೆಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದಕ್ಕೆ ಹಾಕಿತು.

ಸಹೋದ್ಯೋಗಿಯೊಬ್ಬರ ಹಠಾತ್ ಅಗಲಿಕೆಯಿಂದ ದುಃಖತಪ್ತವಾಗಿದ್ದ ಸಭೆ ಎರಡು ನಿಮಿಷ ಮೌನ ಆಚರಿಸಿ, ದಿವಂಗತರಿಗೆ ಶ್ರದ್ಧಾಂಜಲಿ ಅರ್ಪಿಸಿತು.

• 'ಸದಸ್ಯರಿಗೆ ಹಣ ಹಂಚಿಕೆ' ಆಪಾದನೆ ಬ್ರೀಫ್‌ಕೇಸ್ ಪ್ರದರ್ಶನ

ಬೆಂಗಳೂರು, ಆ. 25– ಎಂ.ಪಿ.ಸಿ.ಸಿ ಖಜಾಂಚಿ ಅವರ ಕಾರಿನಲ್ಲಿ ಕರೆನ್ಸಿ ನೋಟುಗಳಿದ್ದ ಬ್ರೀಫ್‌ಕೇಸೊಂದನ್ನು ಎತ್ತಿಕೊಂಡು ಓಡಿ ಬಂದು, ಆಗ ಜರುಗುತ್ತಿದ್ದ ಎಂ.ಪಿ.ಸಿ.ಸಿ. ಸಭೆಯ ವೇದಿಕೆಯ ಮೇಲೆ ಇಟ್ಟು, 'ಸದಸ್ಯರಿಗೆ ಹಣ ಹಂಚಲಾಗುತ್ತಿದೆ' ಎಂದು ಆಪಾದಿಸಿದ ಕೋಲಾಹಲದ ಪ್ರಕರಣ ಇಂದು ಇಲ್ಲಿ ನಡೆಯಿತು.

ಬ್ರೀಫ್‌ಕೇಸನ್ನು ಎತ್ತಿಕೊಂಡು ಬಂದು ಸಾಹಸ ಮಾಡಿದವರು ರಾಜ್ಯ ಯುವ ಕಾಂಗ್ರೆಸ್ಸಿನ ಉಪಾಧ್ಯಕ್ಷ ಹಾಗೂ ಎಂ.ಪಿ.ಸಿ.ಸಿ ಸದಸ್ಯ ಶ್ರೀ ಎಚ್.ಡಿ.ಗಂಗರಾಜ್ ಅವರು.

ಸಭೆ ಒಳಗೆ ಹಾಗೂ ಹೊರಗೆ ಬಿಸಿ ವಾತಾವರಣ ಹಾಗೂ ಪ್ರತಿಭಟನೆಗಳಿಗೆ ಕಾರಣವಾದ ಘಟನೆ ಬ್ರೀಫ್‌ಕೇಸಿನಲ್ಲಿ ಎಷ್ಟು ಹಣ ಇದೆ ಎಂಬ ಬಗ್ಗೆ ಕೆಲ ಗಂಟೆಗಳ ಕಾಲ ತೀವ್ರತರದ ಊಹಾಪೋಹವನ್ನು ಬೆಳೆಸಿತು.

ಸಭೆ ಮುಂದಕ್ಕೆ ಹೋದ ನಂತರ, ಬ್ರೀಫ್‌ಕೇಸಿನಲ್ಲಿ ಸುಮಾರು 700 ರೂಪಾಯಿ ಮಾತ್ರ ಇತ್ತು ಎಂದು ಚುನಾವಣಾಧಿಕಾರಿ ಶ್ರೀ ಜಗದೀಶ್ ಚಂದ್ರ ದೀಕ್ಷಿತ್ ಅವರು ಸ್ಪಷ್ಟಗೊಳಿಸಿದರು.

• 'ಲಂಚ': ಇಂದಿರಾಗೆ ಒಂಬತ್ತು ಎಂ.ಪಿ.ಗಳ ದೂರು

ಬೆಂಗಳೂರು, ಆ. 25– ಮೈಸೂರು ಪ್ರದೇಶ ಚುನಾವಣಾ ಸಮಿತಿಯ ಆಯ್ಕೆಯ ಸಂಬಂಧದಲ್ಲಿ, ಮಂತ್ರಿಮಂಡಲದ ಬೆಂಬಲಿಗ ಗುಂಪಿನ ಐದು ಮಂದಿಯು ಪ್ರದೇಶ ಕಾಂಗ್ರೆಸ್ ಸದಸ್ಯರಿಗೆ ಲಂಚ ನೀಡುವ ಕೆಲಸ ನಡೆಸಿದರೆಂದು ಆಪಾದಿಸಿ, ರಾಜ್ಯದ ಒಂಬತ್ತು ಮಂದಿ ಸಂಸತ್ ಸದಸ್ಯರು ಹೈಕಮಾಂಡಿಗೆ ಇಂದು ರಾತ್ರಿ ತಂತಿ ಕಳುಹಿಸಿದ್ದಾರೆ.

ಹಣವಿದ್ದ ಚೀಲವನ್ನು ಕಾಂಗ್ರೆಸ್ ಕಾರ್ಯಕರ್ತರು ಕಿತ್ತುಕೊಂಡು ಎಂ.ಪಿ.ಸಿ.ಸಿ ಸಭೆ ನಡೆಯುತ್ತಿದ್ದಾಗ, ಎ.ಐ.ಸಿ.ಸಿ ವೀಕ್ಷಕರು, ಚುನಾವಣಾಧಿಕಾರಿ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಮತ್ತು ಮುಖ್ಯಮಂತ್ರಿಯವರ ಎದುರು ಇಡಲಾಯಿತು ಎಂದು ತಂತಿಯು ವಿವರಿಸಿದೆ.

ಧಾರ್ಮಿಕ ಭಾಷೆಯು ಅನ್ಯಧರ್ಮೀಯರಿಗೆ ಒಲಿಯುವುದಿಲ್ಲವೇ?

ಧರ್ಮ, ದೇವರು, ಭಾಷೆಯ ಮಧ್ಯಸ್ಥಿಕೆ

ವಿಶ್ಲೇಷಣೆ

ಪುರುಷೋತ್ತಮ ಬಿಳಿಮಲೆ

ಭಾಷೆ ಮತ್ತು ಮತ ಧರ್ಮಗಳ ನಡುವಣ ಸೂಕ್ಷ್ಮ ಹಾಗೂ ಗಂಭೀರ ಸಂಬಂಧಗಳ ಕುರಿತು ನಮ್ಮಲ್ಲಿ ಹೆಚ್ಚು ಚರ್ಚೆಗಳು ನಡೆದಿಲ್ಲ. ಹೀಬ್ರೂ, ಅರೇಬಿಕ್ ಮತ್ತು ಸಂಸ್ಕೃತದಲ್ಲಿ ಒಂದಷ್ಟು ಗಂಭೀರ ಚರ್ಚೆಗಳು ನಡೆದಿರುವುದು ಹೌದಾದರೂ ಅವಿನ್ನೂ ಸಾಮಾನ್ಯ ಓದುಗರಿಗೆ ತಲುಪಿಲ್ಲ.

ಇತ್ತೀಚಿನ ದಿನಗಳಲ್ಲಿ ಕೆಲವರು ಧರ್ಮವು ಸಮಾಜವನ್ನು ಮುನ್ನಡೆಸಬೇಕು ಎಂದು ವಾದಿಸುತ್ತಿದ್ದಾರೆ. ಹಾಗೆ ಹೇಳುವವರು ಧರ್ಮವನ್ನು ಮುನ್ನಡೆಸಲು ಬೇಕಾದ ಸಾಮಾಜಿಕ ಭಾಷೆಯೊಂದನ್ನು ತಾವೇ ಸೃಷ್ಟಿಸಿಕೊಂಡು, ತಮಗೆ ಹೇಳಬೇಕಾಗಿರುವುದನ್ನು ದೇವರ ಬಾಯಿಯಿಂದ ಹೇಳಿಸುತ್ತಾರೆ. ಇಸ್ಲಾಂ, ಕ್ರೈಸ್ತ ಮತ್ತು ಜುದಾಯಿಸಂನಂತಹ ಧರ್ಮಗಳು, ಪ್ರಜಾಪ್ರಭುತ್ವಕ್ಕಿಂತ ದೇವಪ್ರಭುತ್ವವೇ ಮೇಲು ಎಂದೂ ವಾದಿಸುವುದುಂಟು. ಇಂಥ ಅಭಿಜಾತ ಭಾಷೆಗಳ ಜೊತೆಗೆ, ಬುಡಕಟ್ಟು ಧರ್ಮಗಳಲ್ಲಿ ಬಳಕೆಯಾಗುವ ಹಾಡು, ಮಂತ್ರ, ಪ್ರಾರ್ಥನೆ, ನುಡಿಗಟ್ಟುಗಳ ಕುರಿತೂ ನಮಗೆ ಅಧ್ಯಯನ ಮಾಡಲು ಸಾಧ್ಯವಾದರೆ ಭಾಷೆ ಮತ್ತು ಧರ್ಮದ ನಡುವಣ ಸಂಬಂಧಗಳ ಕುರಿತಾದ ಚರ್ಚೆಗಳಿಗೆ ಹೊಸ ಆಯಾಮ ಪ್ರಾಪ್ತವಾಗಬಲ್ಲದು.

ಧಾರ್ಮಿಕ ಭಾಷೆಯ ಕುರಿತು ನಮ್ಮಲ್ಲಿ ಏಕಾಭಿಪ್ರಾಯ ಇಲ್ಲ. ಅವುಗಳಲ್ಲಿ ಮುಖ್ಯವಾದವುಗಳೆಂದರೆ- 1. ಧಾರ್ಮಿಕ ಭಾಷೆಯು ಒಂದು ವಿಭಿನ್ನ ಭಾಷೆಯಾಗಿದ್ದು, ಇದನ್ನು ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಎಚ್ಚರದಿಂದ ಬಳಸಲಾಗುತ್ತದೆ. 2. ಧಾರ್ಮಿಕ ವ್ಯಕ್ತಿ, ಧಾರ್ಮಿಕ ಉಪದೇಶ ಅಥವಾ ಧಾರ್ಮಿಕ ಪಠ್ಯಕ್ಕೆ ವಿಶೇಷವಾದ ಪದಗಳು ಅಗತ್ಯವಾಗಿ ಬೇಕಾಗುತ್ತವೆ. ಅವು ಮಾಮೂಲಿ ಅರ್ಥಗಳನ್ನು ಮೀರಿ ಸಾಂಕೇತಿಕವಾಗುತ್ತವೆ. ಆಗ ಅದರ ವ್ಯಾಕರಣವೇ ಬೇರೆಯಾಗುತ್ತದೆ. ಅದನ್ನು ಭಾಷೆಯ ಒಳಗಿನವರಿಗೆ ಕೂಡಾ ಸುಲಭವಾಗಿ ಗ್ರಹಿಸಲಾಗುವುದಿಲ್ಲ. ಎಷ್ಟೋ ಬಾರಿ ಧಾರ್ಮಿಕ ಭಾಷೆ ಅಸ್ಪಷ್ಟವಾಗಿರುವುದು ಅಗತ್ಯ.

3. ಧಾರ್ಮಿಕ ಭಾಷೆಯು ದೇವರ ಬಗ್ಗೆ ಹೇಳುವ ಮಾತುಗಳನ್ನು ಅರಿಯುವ ಕ್ರಮ ಹೇಗೆ ಎಂಬುದು ಖಚಿತವಿಲ್ಲ. ದೇವರು ಅನಂತನಾಗಿದ್ದರೆ ಅದನ್ನು ಅನಂತವಲ್ಲದ ನಾವು ಮತ್ತು ನಮ್ಮಲ್ಲಿರುವ ಸಾಮಾನ್ಯ ಪದಗಳು ಹೇಗೆ ವಿವರಿಸಬಲ್ಲವು? ದೇವರು ನಿರಾಕಾರ, ಅನಂತ ಮತ್ತು ಕಾಲಾತೀತ ಎಂದಾದರೆ ಭಾಷೆಗೂ ಅಂಥ ಗುಣಗಳು ಬೇಕಾಗುತ್ತವೆ. 4. ಧಾರ್ಮಿಕ ಭಾಷೆಯ ಕುರಿತಾದ ಚರ್ಚೆಗಳು, ದೇವರು ಅಸ್ತಿತ್ವದಲ್ಲಿದ್ದರೆ ದೇವರ ಬಗ್ಗೆ ಹೇಗೆ ಮಾತನಾಡಬಹುದು ಎಂಬುದನ್ನು ವಿವರಿಸಲು ಪ್ರಯತ್ನಿಸುತ್ತವೆ.

ಈ ಸಮಸ್ಯೆಗೆ ಈಗ ಇನ್ನೊಂದು ಸಮಸ್ಯೆ ಸೇರಿಕೊಂಡಿದೆ. 2019ರಲ್ಲಿ ಬನಾರಸ್ ಹಿಂದೂ ವಿಶ್ವ-ವಿದ್ಯಾಲಯದಲ್ಲಿ ಫಿರೋಜ್ ಖಾನ್ ಎಂಬುವರನ್ನು ಸಂಸ್ಕೃತ ವಿದ್ಯಾ ಧರ್ಮ ವಿಜ್ಞಾನ ಸಾಹಿತ್ಯ ವಿಭಾಗದಲ್ಲಿ ಸಹ ಪ್ರಾಧ್ಯಾಪಕರನ್ನಾಗಿ ನೇಮಕ ಮಾಡಲಾಯಿತು. ಆದರೆ ಇದನ್ನು ಕೆಲವು ಹಿಂದೂ ಸಂಘಟನೆಗಳು ವಿರೋಧಿಸಿದವು. 'ಒಬ್ಬ ಹಿಂದೂ ಹೇಗೆ ಮದರಸಾದಲ್ಲಿ ಪಾಠ ಮಾಡಲಾರನೋ ಅದೇ ರೀತಿ ಮುಸ್ಲಿಮನೊಬ್ಬ ಗುರುಕುಲದಲ್ಲಿ ಬೋಧಿಸಲಾರ' ಎಂಬ ವಾದದ ಜೊತೆಗೆ, 'ಗುರುಕುಲ ಪರಂಪರೆಯಲ್ಲಿ ಶಿಷ್ಯರು ಗುರುವಿನ ಪಾದ ಮುಟ್ಟಿ ನಮಸ್ಕರಿಸುತ್ತಾರೆ. ಆದರೆ ನಾವು ಮುಸ್ಲಿಂ ಗುರುವಿನ ಪಾದ ಮುಟ್ಟಬಾರದು' ಎಂದು ಈ ಸಂಘಟನೆಗಳು ವಾದಿಸಿದವು. ಕೊನೆಗೆ ಫಿರೋಜ್ ಖಾನ್ ಅವರನ್ನು ಬೇರೆ ವಿಭಾಗಕ್ಕೆ ವರ್ಗಾಯಿಸಿದ ನಂತರ ವಿವಾದ ಕೊನೆಗೊಂಡಿತು. ಈ ಪ್ರಕರಣವು ಧಾರ್ಮಿಕ ಭಾಷೆಯು ಬೇರೆ ಧರ್ಮೀಯರಿಗೆ ಒಲಿಯುವುದಿಲ್ಲ ಎಂಬ ಅಂಶವನ್ನು ನಮ್ಮ ಮುಂದಿಟ್ಟಿತು.

ಮೇಲಿನ ವಾದವನ್ನು ಒಪ್ಪಿಕೊಂಡರೆ, ಇನ್ನೊಂದು ಪ್ರಶ್ನೆ ಎದುರಾಗುತ್ತದೆ. ಅದೆಂದರೆ, ಹಿಂದೂಗಳಲ್ಲದ ಮ್ಯಾಕ್ಸ್ ಮುಲ್ಲರ್, ಮೋನಿಯರ್ ವಿಲಿಯಮ್ಸ್ ಮೊದಲಾದ ವಿದೇಶಿ ವಿದ್ವಾಂಸರು ಸಂಸ್ಕೃತದ ಬಗ್ಗೆ ನಡೆಸಿದ ಅಧ್ಯಯನಗಳು ಹಾಗಾದರೆ ಮೌಲಿಕವೇ? ಸಾಯಣರ ಋಗ್ವೇದ ಸಂಹಿತವನ್ನು ಮುಲ್ಲರ್ ಇಂಗ್ಲಿಷಿಗೆ ತಂದಾಗ ಋಗ್ವೇದದ ಪಾವಿತ್ರ್ಯಕ್ಕೆ ಭಂಗ ಬಂತೇ ಎಂಬಂಥ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕಾಗುತ್ತದೆ. ಜೊತೆಗೆ, ಆಧುನಿಕ ಭಾಷಾಶಾಸ್ತ್ರಜ್ಞರು ಹೇಳುವ-'ಒಂದು ಭಾಷೆಯನ್ನು ಕಲಿಯಲು ನೀವು ತೋರುವ ಪ್ರೀತಿ ಮತ್ತು ಹಾಕುವ ಶ್ರಮವು ಆ ಭಾಷೆಯನ್ನು ಕಲಿಸಲು ನಿಮ್ಮನ್ನು ಅರ್ಹರನ್ನಾಗಿ ಮಾಡುತ್ತದೆ' ಎಂಬ ಮಾತನ್ನು ತಿರಸ್ಕರಿಸುತ್ತದೆ. ಇವೆಲ್ಲದರ ಒಟ್ಟು ಅರ್ಥ ಇಷ್ಟೆ- ಧರ್ಮ ಮತ್ತು ಭಾಷೆಯ ನಡುವಣ ಸಂಬಂಧಗಳು ನಿರಂತರವಾಗಿ ಬದಲಾಗುತ್ತಲೇ ಇರುತ್ತವೆ. ಅವು ಕಾಲ, ದೇಶ, ಸಮುದಾಯ ಮತ್ತು ವ್ಯಕ್ತಿಗಳ ಅಗತ್ಯಗಳಿಗೆ ಅನುಗುಣವಾಗಿ ತಮ್ಮನ್ನು ಮರು ವ್ಯಾಖ್ಯಾನಿಸಿಕೊಂಡು ಬೆಳೆಯುತ್ತವೆ. ಈ ಕಾರಣಗಳಿಂದಲೇ ವೇದಗಳನ್ನು ಆಧರಿಸಿ ಅದ್ವೈತ, ವಿಶಿಷ್ಟಾದ್ವೈತ, ದ್ವೈತ, ಶಕ್ತಿ ವಿಶಿಷ್ಟಾದ್ವೈತ, ದ್ವೈತಾದ್ವೈತ, ಶುದ್ಧಾದ್ವೈತ ಮೊದಲಾದವುಗಳು ಹುಟ್ಟಿಕೊಂಡವು. ಇವು ಮೂಲತಃ ಧಾರ್ಮಿಕ ಭಾಷೆಯನ್ನು ತಮ್ಮ ಕಾಲಕ್ಕೆ ಅನುಗುಣವಾಗಿ ವಿರಚಿಸಿಕೊಂಡು ಮತ್ತೆ ಕಟ್ಟುವ ಬಗೆಯೇ ಆಗಿವೆ.

ಹಿಂದೂ ಧರ್ಮದ ಹಾಗೆಯೇ ಇತರ ಧರ್ಮಗಳು ಕೂಡ ತಮಗೆ ವಿಶಿಷ್ಟವಾದ ಭಾಷೆಗಳನ್ನು ಸೃಷ್ಟಿಸಿಕೊಂಡಿವೆ. ಎಲ್ಲ ಧರ್ಮಗಳೂ ದೇವರನ್ನು ಸರ್ವಶಕ್ತ ಎಂದು ನಂಬುತ್ತವೆ. ಆದರೆ ಆ ದೇವರು ಯಾವ ಭಾಷೆಯಲ್ಲಿ ಮಾತಾಡುತ್ತಾರೆ? ಸಂಸ್ಕೃತ, ಅರೇಬಿಕ್, ಗ್ರೀಕ್, ಕನ್ನಡ, ತುಳು ಎಂದೆಲ್ಲಾ ಹೇಳಬಹುದು.

ಪ್ರಪಂಚದ ಪ್ರತಿಯೊಂದು ಶಬ್ದವೂ ದೇವರ ಧ್ವನಿಯೇ ಆಗಿದೆ ಎಂದು ವ್ಯಾಕರಣಕಾರರು, ಮೌನವೇ ದೇವರ ಭಾಷೆ ಎಂದು ಸೂಫಿಗಳು ಹೇಳಿದ್ದಾರೆ. ಪ್ರಕೃತಿಯ ಪ್ರತಿಯೊಂದು ಪ್ರಕರಣವೂ ದೇವರ ಮಾತು ಎಂದು ಕವಿಗಳು ಹೇಳುತ್ತಾರೆ.

ಈ ಹಂತದಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕು. ಅದೆಂದರೆ, ಧಾರ್ಮಿಕ ಭಾಷೆಯು ಆಚರಣೆಯಲ್ಲಿ ಪ್ರಕಟವಾಗುವ ರೀತಿ. ಉದಾಹರಣೆಗೆ, ಭಕ್ತಿಯ ಅಮೂರ್ತತೆಯು ಹಾಡು, ಮಂತ್ರ, ಕುಣಿತ, ಬಲಿ, ನಟನೆ ಮೊದಲಾದವುಗಳ ಮೂಲಕ ಅಭಿವ್ಯಕ್ತಿಗೊಳ್ಳುತ್ತಾ ಮೂರ್ತವಾಗುತ್ತದೆ. ಸಂಸ್ಕೃತದಲ್ಲಿ ಬಳಕೆಯಾಗುವ 'ಯೋಗ' ಕೂಡ ಮೂಲತಃ ಇದೇ ಅರ್ಥವುಳ್ಳದ್ದು. ಅದಕ್ಕೆ 'ಜೋಡಿಸು' 'ಸೇರಿಸು' 'ಕೂಡಿಸು' ಎಂಬ ಅರ್ಥ ಇದೆ. ಆಚರಣೆಗಳು ಕೂಡ ಜನರನ್ನು ಭಗವಂತನೊಂದಿಗೆ ಜೋಡಿಸುವ ಉದ್ದೇಶವನ್ನು ಹೊಂದಿರುತ್ತವೆ. ಹೀಗೆ ಭಕ್ತಿಯು ಪ್ರದರ್ಶನದ ರೂಪದಲ್ಲಿ ಕಾಣಿಸಿಕೊಳ್ಳುವಾಗ ಅದು ಅದೇ ಹೊತ್ತಿಗೆ ಭಕ್ತರನ್ನು ಒಳಗೊಳ್ಳುತ್ತಾ ಅವರನ್ನೂ ವ್ಯಾಖ್ಯಾನಿಸುತ್ತದೆ. ಜಪಮಾಲೆ ಎಣಿಸುವುದು, ಧಾರ್ಮಿಕ ಮೆರವಣಿಗೆ ನಡೆಸುವುದು, ಧರ್ಮೋಪದೇಶ ಮಾಡುವಂತಹ ಕ್ರಿಯೆಗಳು ಭಕ್ತಿಯ ಆಚರಣಾ ರೂಪಕ್ಕೆ ತನ್ನದೇ ಆದ ಸಾಂಕೇತಿಕತೆ ಮತ್ತು ಭಾಷೆಯನ್ನು ತಂದುಕೊಡುತ್ತವೆ. ಈ ಅರ್ಥದಲ್ಲಿ ಆಚರಣೆಗಳ ಭಾಷೆಯನ್ನು ನಾವು ಇನ್ನಷ್ಟು ಎಚ್ಚರದಿಂದ ಅಭ್ಯಾಸ ಮಾಡಬೇಕಾಗಿದೆ.

ವಿಶ್ವದ ಕೆಲವೆಡೆಗಳಲ್ಲಿ ಧಾರ್ಮಿಕ ಭಾಷೆಯನ್ನು ಸರಳಗೊಳಿಸುವ ಪ್ರಯತ್ನಗಳು ಮತ್ತೆ ಮತ್ತೆ ನಡೆದಿವೆ. ಹಳೆಯ ಒಡಂಬಡಿಕೆಯನ್ನು ಮೂಲತಃ ಹೀಬ್ರೂ ಭಾಷೆಯಲ್ಲಿ ಬರೆಯಲಾಗಿದೆ. ಆದರೆ ಇದು ಸಾಮಾನ್ಯ ಜನರಿಗೆ ಅರ್ಥವಾಗುವುದಿಲ್ಲ. ಇದಕ್ಕಾಗಿ ಧಾರ್ಮಿಕ ನೇತಾರರು ಸರಳವಾದ ಭಾಷೆಯಲ್ಲಿ ಜನರಿಗೆ ಅದನ್ನು ವಿವರಿಸಿ ಹೇಳುವ ಕೆಲಸ ಮಾಡಿದ್ದುಂಟು. ಕನ್ನಡದಲ್ಲಿ ಹರಿದಾಸರು ಮತ್ತು ದಾಸರು ಬಳಸಿದ ಭಾಷೆ ಸರಳವೇ ಹೌದು. ಆದರೆ ಎಲ್ಲ ಕಡೆಯೂ ಹೀಗಾಗಿಲ್ಲ. ಧರ್ಮವೊಂದರ ಮೇಲೆ ಹಿಡಿತ ಸಾಧಿಸಲು ಪವಿತ್ರ ಭಾಷೆಯ ಹಿಡಿತವನ್ನು ಇನ್ನಷ್ಟು ಬಿಗಿಗೊಳಿಸಿದವರೂ ಇದ್ದಾರೆ. ಹೀಗೆ ಭಾಷೆಯನ್ನು ಜಟಿಲಗೊಳಿಸುವ ಮತ್ತು ಸರಳಗೊಳಿಸುವ ಕೆಲಸಗಳು ಇತಿಹಾಸದುದ್ದಕ್ಕೂ ನಡೆದೇ ಇವೆ.

ಪವಿತ್ರ ಭಾಷೆಯೆಂಬ ಬಿರುದು ಹೊತ್ತಿದ್ದ ಹೀಬ್ರೂವನ್ನು ಮಾರ್ಟಿನ್ ಲೂಥರ್ ಅವರು ಜರ್ಮನ್ ಭಾಷೆಗೆ ಅನುವಾದಿಸಿದಾಗ ಬಹಳಷ್ಟು ಗೊಂದಲ ಉಂಟಾಯಿತು. ಆದರೆ ಈ ಕೆಲಸ ಬೈಬಲ್ಲನ್ನು ಇತರ ಯುರೋಪಿಯನ್ ಭಾಷೆಗಳಿಗೆ ಅನುವಾದಿಸಲು ಸಹಾಯಕವಾಗಿ ಬಹುತೇಕ ಜನ ಬೈಬಲ್ಲನ್ನು ಅವರ ತಾಯ್ನುಡಿಯಲ್ಲಿಯೇ ಓದುವಂತಾಯಿತು. ಕ್ರೈಸ್ತ ಮಿಷನರಿಗಳು 1842ರಷ್ಟು ಹಿಂದೆಯೇ ತುಳುವಿನಲ್ಲಿ ಹೊಸ ಒಡಂಬಡಿಕೆಯನ್ನು ಪ್ರಕಟಿಸಿ ಅದನ್ನು ಸತ್ಯವೇದ ಎಂದು ಕರೆದರು. ಇಂಥ ಕೆಲಸಗಳು ಸ್ಥೂಲವಾಗಿ ಧರ್ಮ ಮತ್ತು ಭಾಷೆಗಳ ನಡುವಣ ಸಂಬಂಧವನ್ನು ಸ್ವಲ್ಪ ಸಡಿಲ-ಗೊಳಿಸಿದ್ದುಂಟು. ಆದರೆ ಅದು ಕ್ರೈಸ್ತ ಧರ್ಮವನ್ನು ಎಲ್ಲ ಕಡೆಯೂ ಹರಡುವಲ್ಲಿ ಯಶಸ್ವಿಯಾಯಿತು.

ಏನಿದ್ದರೂ ಭಾಷೆಯ ಮಧ್ಯಸ್ಥಿಕೆ ಇಲ್ಲದಿದ್ದರೆ ಧರ್ಮವೂ ಇಲ್ಲ, ದೇವರೂ ಇಲ್ಲ, ಆಚರಣೆಗಳೂ ಇಲ್ಲ, ಪುರಾಣಗಳೂ ಇಲ್ಲ. ಈ ಸೃಷ್ಟಿಕ್ರಿಯೆಯು ಅಧ್ಯಯನ ಯೋಗ್ಯವಾದ ವಿಚಾರವಾಗಿದೆ.

ಚುರುಮುರಿ

ಮೂನ್ ಮಸೂರಿ!

• ತುರುವೇಕೆರೆ ಪ್ರಸಾದ್

'ರಷ್ಯಾದು ಲೂನಾ- 25 ಡಮಾರ್ ಅಂದ್ರೂ ನಮ್ ಲ್ಯಾಂಡರ್ ಚಂದ್ರನ ಮೇಲೆ ಸೇಫಾಗಿ ಇಳ್ಕಂಡ್‌ಬುಡ್ತು. ಭಾರತ್ ಮಹಾನ್ ಅಂತ ಪ್ರೂವ್ ಆಗೋಯ್ತು' ಅಂದ ಕಲ್ಲೇಶಿ.

'ಅಂಗಾರೆ ಇನ್ನೇನ್ ಬುಡಪ್ಪ, ಎಲ್ಲಾ ನಾ ಮುಂದು ತಾ ಮುಂದು ಅಂತ ಚಂದ್ರನ್ ಮ್ಯಾಲೆ ಓಗಕ್ಕೆ ಟಿಕೆಟ್ ಬುಕ್ ಮಾಡ್ತೋರೆಯ'.

'ಹೌದು, ಚಂದ್ರನ ಮೇಲೇ ನಾವೆಲ್ಲಾ ಇರೋ ಅಂಗಾಗ್ಬುಟ್ರೆ ಎಂಗಿರ್ತದೆ?' ಕೇಳಿದ ಗುದ್ಲಿಂಗ.

'ಮೊದ್ಲು 'ಚಂದಿರನೇತಕೆ ಓಡುವನಮ್ಮ' ಪದ್ಯವು 'ಭೂಮಿಯು ಏತಕೆ ನಡುಗುವುದಮ್ಮ, ಮನುಷ್ಯನಿಗೆ ಹೆದರಿಹುದೇ?' ಅಂತ ಆಗುತ್ತೆ'.

'ಆಮ್ಯಾಕೆ 'ಅಗೋ ನೋಡು ಚಂದ್ರಬಿಂಬ ತಕೋ ಕೈಗೆ ತಾಮ್ರದ ಚೊಂಬ' ಅನ್ನೋದು, 'ಅಗೋ ನೋಡು ಭೂಮಿಬಿಂಬ, ತಕೋ ಕೈಗೆ ಪ್ಲಾಸ್ಟಿಕ್ ಚೊಂಬ' ಅಂತ ಆಗ್ಬಹುದು'.

'ಬಿಸಿಲ್ ಏರಿ ಕುಡೀತಿದ್ದ ವಾಟ್ರು ಹೋಗಿ ಮೂನೇರಿ ವಾಟರ್ ದಂಧೆ ಶುರು ಆಗ್ಬಹುದು'.

'ಆಮೇಲೆ ಭೂಮಿ ಮೇಲೇ ಉಳ್ಕೊಂಡೋರು ಬಿಪಿಎಲ್ಲು, ಮೂನ್‌ಗೆ ಶಿಫ್ಟ್ ಆದೋರೆಲ್ಲಾ ಎಪಿಎಲ್ಲು ಅಂತ ಆಗ್ಬಹುದು'.

'ಮೂನ್ ಮೇಲೆ ಮನಿಮೂನ್ ಓಟ್ಲು, ಅಪಾರ್ಟ್‌ಮೆಂಟು, ರೆಸ್ಟೋರೆಂಟು ಎಲ್ಲ ಮಾಡ್ಬಹುದು. ನಮ್ಮ ಬ್ರಹ್ಮಾಂಡ ಜ್ಯೋತಿಷಿಗಳು ಭೂಮಿಯಲ್ಲಿ ಪ್ರಳಯ ಆಯ್ತದೆ ಅಂತ ಯೋಳಿ ಎಲ್ರನ್ನೂ ಅನಾಮತ್ ಕಾಲಿ ಮಾಡುಸ್ತಾರೆ'.

'ಅಂಗಾಗ್ಬುಟ್ರೆ ಈ ಪಕ್ಷಾಂತರ, ಆಪರೇಶನ್ನು ಮಾಡೋರನ್ನ ರೆಸಾರ್ಟು, ಅಲ್ಲಿ ಇಲ್ಲಿ ಅಂತ ಕರ್ಕೊಂಡ್ ಓಗೋ ಬದ್ಲು, ಯಾರ ಕೈಗೂ ಸಿಗದಂಗೆ ಚಂದ್ರಲೋಕಕ್ಕೇ ಎತ್ತಾಕ್ಕಂಡು ಬರ್ಬಹುದು'.

'ಅಲ್ಲಿ ಬಂಡೆ, ಗುಡ್ಡ ಜಾಸ್ತಿ ಅವಂತೆ'.

'ಅದಕ್ಕೇನಂತೆ... ನಮ್ ಗಣಿ ಧಣಿಗಳಿಲ್ವಾ? ಎಲ್ಲಾ ಉಲ್ಡಿ, ಆಳಕ್ಕೆ ಅಗ್ದು ಏನೇನು ನಿಕ್ಷೇಪ ಐತೆ ಅಂತ ಜಾಲಾಡ್‌ಬುಡ್ತಾರೆ'.

'ಅಯ್ಯೋ ಇದೆಲ್ಲಾ ಇನ್ನೂ ಪ್ರಯೋಗ ಮಾಡಿ ಆಯ್ತುದಾ ಓಯ್ತುದಾ ಅಂತ ಕಂಡ್ ಇಡೀಬೇಕು. ಈಗ್ಲೇ ತಿರುಕನ್ ಕನ್ಸು ಕಾಣ್ತಿದೀರಲ್ಲ'.

'ಪ್ರಯೋಗ ಮಾಡಾದಾದ್ರೆ ಮೊದ್ಲು ಅಲ್ಲಿ ಅಕ್ಕಿ ಬೆಳೆಯಕ್ಕಾಯ್ತುದಾ ಕೇಳ್ಬೇಕು. ಈ ಅನ್ನಭಾಗ್ಯಕ್ಕೆ ಸೆಂಟ್ರಲ್ನೋರತ್ರ ಕೈ ಒಡ್ಡೋ ಬದ್ಲು, ಡೈರೆಕ್ಟ್ ಮೂನಿಂದನೇ ಮೂನ್ ಮಸೂರಿ ತರಿಸ್ಬಹುದು...' ಎಂದ ಪರ್ಮೇಶಿ.

ಎಲ್ಲಾ ಗೊಳ್ಳನೆ ನಕ್ಕರು!

ಸಂಗತ

ಶಿಕ್ಷಣ ನೀತಿ: ವೈಚಾರಿಕತೆ ಬುನಾದಿಯಾಗಲಿ

ಹೊಸ ಶಿಕ್ಷಣ ನೀತಿಯ ತಳಪಾಯವೇ ವೈಚಾರಿಕ ಮನೋಭಾವ ಮತ್ತು ವೈಜ್ಞಾನಿಕ ಚಿಂತನೆ ಆಗಬೇಕಿದೆ...

• ನಾ.ದಿವಾಕರ

'ಮಕ್ಕಳು ವಿಜ್ಞಾನ ಮತ್ತು ವೈಚಾರಿಕ ಚಿಂತನೆಗಳ ಮೂಲಕ ಬೆಳೆಯಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತೀಚೆಗೆ ನಡೆದ ಪ್ರತಿಭಾ ಪುರಸ್ಕಾರ ಸಮಾರಂಭವೊಂದರಲ್ಲಿ ಹೇಳಿದ್ದಾರೆ. ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರವು ರಾಷ್ಟ್ರೀಯ ಶಿಕ್ಷಣ ನೀತಿಗೆ ಬದಲಾಗಿ ರಾಜ್ಯ ಶಿಕ್ಷಣ ನೀತಿಯನ್ನು ರೂಪಿಸಲು ಮುಂದಾಗಿರುವ ಈ ಸಂದರ್ಭದಲ್ಲಿ ಅವರ ಹೇಳಿಕೆಯನ್ನು ಮಹತ್ವದ್ದು ಎಂದು ಪರಿಗಣಿಸಬಹುದು.

ಉದ್ದೇಶಿತ ಹೊಸ ನೀತಿಯ ರಚನೆಗೆ ನೆರವಾಗಲು ಉನ್ನತ ಮಟ್ಟದ ತಜ್ಞರ ಸಮಿತಿಯೊಂದನ್ನು ನೇಮಕ ಮಾಡುವುದಾಗಿಯೂ ಮುಖ್ಯಮಂತ್ರಿ ಹೇಳಿದ್ದಾರೆ. ಶಿಕ್ಷಣ-ಆರೋಗ್ಯ ಮತ್ತು ಸಾಹಿತ್ಯಕ-ಸಾಂಸ್ಕೃತಿಕ ವಲಯದ ಯಾವುದೇ ಆಡಳಿತ ನೀತಿಯನ್ನು ರೂಪಿಸುವ ಮುನ್ನ ಈ ರೀತಿ ತಜ್ಞರ ಸಮಿತಿ ನೇಮಿಸುವುದು ವಿವೇಕಯುತ ಕ್ರಮ. ಆದರೆ ಈ ಸಮಿತಿಯ ಸ್ವರೂಪ ಹೇಗಿರಬೇಕು ಹಾಗೂ ಅದರ ಸಮಾಲೋಚನೆಗಳ ಮೂಲಕ ಹೊರಹೊಮ್ಮುವ ಹೊಸ ಶಿಕ್ಷಣ ನೀತಿ, ಪಠ್ಯಕ್ರಮ, ಕಲಿಕೆಯ ಮಾದರಿ ಹಾಗೂ ಬೋಧನೆಯ ವಿಧಾನ ಹೇಗಿರಬೇಕು ಎಂದು ನಿರ್ಧರಿಸುವ ಮುನ್ನ ಸರ್ಕಾರಕ್ಕೆ ತಾತ್ವಿಕವಾಗಿ ಸ್ಪಷ್ಟತೆ ಇರುವುದು ಅಷ್ಟೇ ಮುಖ್ಯ.

ಸಾಮಾನ್ಯವಾಗಿ ನಮ್ಮ ಆಡಳಿತ ವ್ಯವಸ್ಥೆಯಲ್ಲಿ ಸರ್ಕಾರದಿಂದ ನೇಮಕವಾಗುವ ತಜ್ಞರ ಸಮಿತಿಗಳು ಅಧಿಕಾರ ರಾಜಕಾರಣದ ಹಲವು ದಿಕ್ಕುಗಳಿಂದ ನಿರ್ಬಂಧ, ನಿಬಂಧನೆಗೆ ಒಳಪಟ್ಟಿರುತ್ತವೆ. ಉನ್ನತ ಮಟ್ಟದ ಸಮಿತಿಯನ್ನು ರಚಿಸುವ ಸಂದರ್ಭದಲ್ಲೂ ಆಡಳಿತಾರೂಢ ಪಕ್ಷಗಳ ಸ್ವಜನಪಕ್ಷಪಾತ, ರಾಜಕೀಯ ಹಿತಾಸಕ್ತಿ, ನಾಯಕರ ಸ್ವಹಿತಾಸಕ್ತಿ ಹಾಗೂ ನಿಕಟವರ್ತಿಗಳ ಕೂಟ ಇವೆಲ್ಲವೂ ಮುನ್ನೆಲೆಗೆ ಬರುತ್ತವೆ. ಆದರೆ ಶಿಕ್ಷಣ ಎನ್ನುವುದು ಮೂಲತಃ ಭವಿಷ್ಯದ ಸಮಾಜವನ್ನು ನಿರ್ಮಿಸುವ ಒಂದು ದೀರ್ಘಕಾಲಿಕ ಪ್ರಕ್ರಿಯೆ ಆಗಿರುವುದರಿಂದ, ತಜ್ಞರ ಸಮಿತಿಗಳು ಈ ವೈಪರೀತ್ಯಗಳಿಂದ ಹೊರತಾಗಿರುವುದು ಅತ್ಯವಶ್ಯ.

ರಾಜಕೀಯ ಒಲವು ಅಥವಾ ನಿರ್ದಿಷ್ಟ ಸೈದ್ಧಾಂತಿಕ ಒಲವು ಪ್ರಧಾನವಾಗಿರದೆ, ಲೌಕಿಕ ಜಗತ್ತಿಗೆ ಕಣ್ತೆರೆಯುವ ಭವಿಷ್ಯದ ತಲೆಮಾರಿನ ಮಕ್ಕಳ ಬೌದ್ಧಿಕ ವಿಕಾಸಕ್ಕೆ ಪೂರಕವಾದ ಪಠ್ಯ-ಕ್ರಮಗಳನ್ನೂ ಬೋಧನಾ ವಿಧಾನಗಳನ್ನೂ ಕಲಿಕೆಯ ಮಾದರಿಗಳನ್ನೂ ಸಿದ್ಧಪಡಿಸುವ ವಿಶಾಲ ಮನೋಭಾವದ ಚಿಂತಕರು, ತಜ್ಞರು ಇಂತಹ ಉನ್ನತ ಮಟ್ಟದ ಸಮಿತಿಯನ್ನು ಪ್ರತಿನಿಧಿಸುವುದು ಮುಖ್ಯ.

ಭಾರತವು ಚಂದ್ರಯಾನದ ಸಂಭ್ರಮದಲ್ಲಿ ಮುಳುಗಿದ್ದರೂ ನಮ್ಮ ಸುತ್ತಲಿನ ನೆಲದ ವಾಸ್ತವಗಳನ್ನು ಗಮನಿಸಿದಾಗ, ನಮ್ಮ ಸಮಾಜ ಈ ಹೊತ್ತಿನಲ್ಲೂ ವೈಜ್ಞಾನಿಕ ಚಿಂತನೆ ಮತ್ತು ವೈಚಾರಿಕ ಪ್ರಜ್ಞೆಯಿಂದ ಬಹುದೂರ ಇರುವುದು ಢಾಳಾಗಿ ಗೋಚರಿಸುತ್ತದೆ. ಭಕ್ತಿಗೂ ಮೌಢ್ಯಕ್ಕೂ ಇರುವ ಅಂತರವನ್ನು ಮಕ್ಕಳಿಗೆ ತಿಳಿಸದೇಹೋದರೆ, ಮುಂದಿನ ತಲೆಮಾರಿನ ಮಕ್ಕಳೂ ಧರ್ಮ-ದೇವರು ಮತ್ತು ಮೌಢ್ಯದ ನಡುವಿನ ಅಂತರವನ್ನು ಗ್ರಹಿಸಲಾರದೆ ಹೋಗುವ ಸಾಧ್ಯತೆಗಳಿವೆ.

ಪ್ರಾಥಮಿಕ ಹಂತದಿಂದಲೇ ಮಕ್ಕಳಲ್ಲಿ ವೈಚಾರಿಕತೆಯ ಬೀಜಗಳನ್ನು ಬಿತ್ತುವ ಪ್ರಕ್ರಿಯೆಗೆ ಶಾಲೆಗಳಲ್ಲಿನ ಬೋಧನಾ ವಿಧಾನ ಮತ್ತು ಕಲಿಕಾ ಮಾದರಿಗಳು ಪೂರಕವಾಗಿ ಇರಬೇಕಾಗುತ್ತದೆ. ವಿಜ್ಞಾನ ಜಗತ್ತು ತನ್ನ ಮೇರು ಶಿಖರವನ್ನು ತಲುಪಿರುವ ಹೊತ್ತಿನಲ್ಲಿ, ನಮ್ಮ ಶಾಲೆಯ ಅಂಗಳದಲ್ಲೇ ಯಾವುದೋ ಕಾಲದ ಮೌಢ್ಯ ಮತ್ತು ಅಂಧ ಅನುಸರಣೆಯ ಮಾದರಿಗಳನ್ನು ಅನುಸರಿಸುವ ಮೂಲಕ ಮಕ್ಕಳನ್ನು ವೈಚಾರಿಕತೆ ಮತ್ತು ವೈಜ್ಞಾನಿಕ ಮನೋಭಾವದಿಂದ ವಂಚಿತರನ್ನಾಗಿ ಮಾಡುವ ಅಪಾಯ ನಮ್ಮೆದುರಿನಲ್ಲಿದೆ. ಹಾಗಾಗಿ, ಹೊಸ ಶಿಕ್ಷಣ ನೀತಿಯ ತಳಪಾಯವೇ ವೈಚಾರಿಕ ಮನೋಭಾವ ಮತ್ತು ವೈಜ್ಞಾನಿಕ ಚಿಂತನೆ ಆಗಬೇಕಿದೆ.

ವಿಜ್ಞಾನ ಮತ್ತು ವೈಜ್ಞಾನಿಕ ಜ್ಞಾನದ ನೆಲೆಗಳನ್ನು ಶಾಲಾ ಹಂತದಲ್ಲಿಯೇ ಮಕ್ಕಳಿಗೆ ತಲುಪಿಸುವುದರೊಂದಿಗೆ, ಅವರ ನಿತ್ಯ ಬದುಕಿನ ಅನುಸರಣೆ-ಯಲ್ಲಿ ಅಂಧವಿಶ್ವಾಸ, ಮೂಢನಂಬಿಕೆ ಮತ್ತು ಮೌಢ್ಯಾಚರಣೆಗಳು ಇಲ್ಲದಂತಹ ಬೋಧನಾ ಸಾಮಗ್ರಿಗಳನ್ನು ಅಳವಡಿಸುವುದು ಬಹಳ ಮುಖ್ಯವಾಗುತ್ತದೆ.

ಉದ್ದೇಶಿತ ಸಮಿತಿಯಲ್ಲಿ ವಿಜ್ಞಾನಿಗಳು, ಮನೋವಿಜ್ಞಾನಿಗಳು, ಸಮಾಜವಿಜ್ಞಾನಿಗಳು ಹಾಗೂ ಲಿಂಗಭೇದವನ್ನು ಹೋಗಲಾಡಿಸಲು ನೆರವಾಗುವಂತಹ ಮಹಿಳಾ ಸಮಾಜಶಾಸ್ತ್ರಜ್ಞರು, ಶಿಕ್ಷಣ ತಜ್ಞರು ಇರಬೇಕಾಗುತ್ತದೆ. ಈ ಸಮಿತಿಯ ಮೂಲಧಾತು ವೈಚಾರಿಕ- ವೈಜ್ಞಾನಿಕ ಚಿಂತನೆ ಮತ್ತು ಸಮಾಜಮುಖಿ ಆಲೋಚನೆಯೇ ಆಗಿರಬೇಕಿದೆ.

ಲೈಂಗಿಕ ದೌರ್ಜನ್ಯ, ಜಾತಿಯ ಹೆಸರಿನಲ್ಲಿ ಶೋಷಣೆ ಮತ್ತು ಪಿತೃಪ್ರಾಧಾನ್ಯ ಮನೋಧೋರಣೆಯನ್ನು ಹೋಗಲಾಡಿಸುವ ದಿಸೆಯಲ್ಲಿ ಸ್ತ್ರೀ ಸಂವೇದನೆ ಮತ್ತು ಮನುಜ ಸೂಕ್ಷ್ಮತೆಯನ್ನು ಸೃಜಿಸುವಂತಹ ಪಠ್ಯಕ್ರಮವನ್ನು ವಿವಿಧ ಹಂತಗಳಲ್ಲಿ ರೂಪಿಸುವ ಮೂಲಕ ನಮ್ಮ ಸಂವಿಧಾನ ಕರ್ತೃಗಳ ಸಮ ಸಮಾಜದ ಕನಸನ್ನು ನನಸು ಮಾಡಲು ಸಾಧ್ಯ. ರಾಜ್ಯ ಸರ್ಕಾರವು ಉನ್ನತ ತಜ್ಞರ ಸಮಿತಿಯನ್ನು ನೇಮಕ ಮಾಡುವ ಮುನ್ನ ಈ ದಿಸೆಯಲ್ಲಿ ಯೋಚನೆ ಮಾಡಬೇಕಾದುದು ಅಗತ್ಯ.

ವಾಚಕರ ವಾಣಿ

ಜೆನೆರಿಕ್ ಔಷಧಿ: ಗೊಂದಲ ಬಗೆಹರಿಯಲಿ

ವೈದ್ಯರು ರೋಗಿಗಳಿಗೆ ಬ್ರ್ಯಾಂಡೆಡ್ ಔಷಧಿಗಳ ಬದಲಿಗೆ ಜೆನೆರಿಕ್ ಔಷಧಿಗಳನ್ನೇ ಶಿಫಾರಸು ಮಾಡಬೇಕೆಂಬ ಸೂಚನೆಯನ್ನು ರಾಷ್ಟ್ರೀಯ ವೈದ್ಯಕೀಯ ಆಯೋಗವು ನಿರೀಕ್ಷೆಯಂತೆಯೇ ಹಿಂಪಡೆದಿದೆ. ಭಾರತೀಯ ವೈದ್ಯಕೀಯ ಸಂಘ ಜೆನೆರಿಕ್ ಔಷಧಿಗಳ ಗುಣಮಟ್ಟದ ಬಗ್ಗೆ ಅನುಮಾನ ವ್ಯಕ್ತಪಡಿಸಿದ ಕಾರಣದಿಂದ ಈ ಕ್ರಮ ಕೈಗೊಂಡಿರುವುದರಿಂದ, ಜೆನೆರಿಕ್ ಔಷಧಿಗಳ ಬಗ್ಗೆ ಮಾಹಿತಿ ಕೊರತೆಯಿಂದ ಸಂದಿಗ್ಧದಲ್ಲಿರುವ ಜನಸಾಮಾನ್ಯರನ್ನು ಮತ್ತಷ್ಟು ಗೊಂದಲಕ್ಕೆ ದೂಡಿದಂತಾಗಿದೆ.

ವೈದ್ಯರ ಅನುಮಾನಕ್ಕೆ ಕೆಲವು ಕಾರಣಗಳಿವೆ. ಜೆನೆರಿಕ್ ಔಷಧಿಗಳನ್ನು ಭಾರತದಲ್ಲಿ ಜೈವಿಕ ಲಭ್ಯತೆಯ ಪರೀಕ್ಷೆಗೆ ಒಳಪಡಿಸುವುದು ಕಡ್ಡಾಯವಲ್ಲ. ಜೈವಿಕ ಲಭ್ಯತೆ ಅಂದರೆ ಔಷಧಿ ಸೇವಿಸಿದ ಮೇಲೆ ಅದು ರಕ್ತದಲ್ಲಿ ಕರಗಿ, ಶರೀರಕ್ಕೆ ಲಭಿಸುವ ಪ್ರಮಾಣ. ಅಮೆರಿಕದಲ್ಲಿ 1977ರಲ್ಲಿಯೇ ಜೆನೆರಿಕ್ ಔಷಧಿಗಳಿಗೆ ಈ ಪರೀಕ್ಷೆಯನ್ನು ಕಡ್ಡಾಯ ಮಾಡಲಾಗಿದೆ. ಜೆನೆರಿಕ್ ಔಷಧಿ ಹಾಗೂ ಬ್ರ್ಯಾಂಡೆಡ್ ಔಷಧಿಯ ಜೈವಿಕ ಸಮಾನತೆ ಪರೀಕ್ಷೆಯನ್ನು ಭಾರತದಲ್ಲಿ 2017ರಿಂದ ಕಡ್ಡಾಯಗೊಳಿಸಲಾಗಿದೆ. ಆದರೆ 2017ಕ್ಕಿಂತ ಮುಂಚೆ ಅನುಮೋದನೆ ಪಡೆದು ಮಾರುಕಟ್ಟೆಯಲ್ಲಿರುವ ಜೆನೆರಿಕ್ ಔಷಧಿಗಳಿಗೆ ಈ ಪರೀಕ್ಷೆ ಅನ್ವಯಿಸುವುದಿಲ್ಲ. ಜೆನೆರಿಕ್ ಔಷಧಿಗಳ ಸ್ಥಿರತೆ ಪರೀಕ್ಷೆಯನ್ನು ಭಾರತದಲ್ಲಿ 2018ರಲ್ಲಿ ಜಾರಿಗೆ ತರಲಾಗಿದೆ. ಔಷಧಿಗಳು ದೃಢವಾಗಿ ಇಲ್ಲದ ಪಕ್ಷದಲ್ಲಿ ಅವು ತನ್ನ ಪರಿಣಾಮಕಾರಿತ್ವವನ್ನು ಕಳೆದುಕೊಳ್ಳುವುದು ಮಾತ್ರವಲ್ಲದೆ ಶರೀರಕ್ಕೆ ಹಾನಿಕಾರಕ ಆಗುವ ಸಾಧ್ಯತೆಯೂ ಇದೆ. ಆದರೆ ಈ ಪರೀಕ್ಷೆಯು 2018ರ ಮುಂಚೆಯೇ ಅನುಮೋದನೆ ಆಗಿ ಈಗ ಮಾರುಕಟ್ಟೆಯಲ್ಲಿ ಇರುವ ಜೆನೆರಿಕ್ ಔಷಧಿಗಳಿಗೆ ಅನ್ವಯ ಆಗುವುದಿಲ್ಲ. ಇಂತಹವುಗಳ ಬಗ್ಗೆ ವೈದ್ಯರಿಗೆ ಇರುವ ಆತಂಕಗಳನ್ನು ಪರಿಹರಿಸಲು ಸರ್ಕಾರ ಗಮನಹರಿಸಬೇಕು. ಆಗ ಈ ಔಷಧಿಗಳ ಗುಣಮಟ್ಟದ ಬಗ್ಗೆ ವೈದ್ಯರ ಸಮೂಹದಲ್ಲಿ ವಿಶ್ವಾಸಾರ್ಹತೆ ಹೆಚ್ಚುತ್ತದೆ.

ಡಾ. ಟಿ.ಜಯರಾಂ, ಕೋಲಾರ

ಆ ವೇಗ...!

ಎತ್ತರೆತ್ತರಕ್ಕೆ
ಏರುವಾಗ
ಇರಲಿ ಅವಶ್ಯ ವೇಗ
ಇಳಿಯುವಾಗ
ಬೇಡ ಆವೇಗ!
ಇದುವೇ ಇಸ್ರೊ
ಯಶಸ್ವಿ ಪ್ರಯೋಗ!

ಮ.ಗು.ಬಸವಣ್ಣ
ನಂಜನಗೂಡು

ಚಂದ್ರಯಾನ: ಪಠ್ಯವಾಗಲಿ ಸಾಧನೆಯ ಹಾದಿ

'ಚಂದ್ರಯಾನ- 3' ಯಶಸ್ವಿಯಾಗಿದ್ದು, ವಿಕ್ರಂ ಲ್ಯಾಂಡರ್ ಸುರಕ್ಷಿತವಾಗಿ ಚಂದ್ರನ ಮೇಲೆ ಇಳಿದು ವಿಶ್ವದಲ್ಲೇ ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತಕ್ಕೆ ಒಂದು ಹಿರಿಮೆಯ ಗರಿಯನ್ನು ಮೂಡಿಸಿರುವುದು ಪ್ರತಿಯೊಬ್ಬ ಭಾರತೀಯನೂ ಹೆಮ್ಮೆಪಡಬೇಕಾದ ವಿಷಯ. ಚಂದ್ರಯಾನ -1ರಿಂದ ಚಂದ್ರಯಾನ- 3ರವರೆಗಿನ ವಿಜ್ಞಾನಿಗಳ ಸಾಧನೆಯ ಹಾದಿಯ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸಬೇಕು. ಅದಕ್ಕಾಗಿ ಈ ವಿಷಯವನ್ನು ಪಠ್ಯಪುಸ್ತಕದಲ್ಲಿ ಸೇರಿಸುವುದು ಒಳಿತು. ಆಡಳಿತಾರೂಢರು ಪಠ್ಯಪುಸ್ತಕಗಳ ವಿಚಾರದಲ್ಲಿ ಬೇಡದ ರಾಜಕೀಯ ಮೇಲಾಟ ನಡೆಸಿ ಮಕ್ಕಳಲ್ಲಿ ಗೊಂದಲ ಸೃಷ್ಟಿಸುವುದನ್ನು ಬಿಟ್ಟು, ಇದನ್ನಾದರೂ ಮಾಡಿದರೆ ಒಂದು ಅರ್ಥಪೂರ್ಣ ಕಾರ್ಯವಾದೀತು!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

ನೀರಿಗಿಂತ ಹೆಚ್ಚಾಗಿ ಹರಿಯುತ್ತದೆ ರಾಜಕೀಯ!

'ಕಾವೇರಿ'ಯಲ್ಲಿ ನೀರಿಗಿಂತ ರಾಜಕೀಯವೇ ಹೆಚ್ಚು ಹರಿಯುತ್ತದೆ. ಕರ್ನಾಟಕದ ರಾಜಕಾರಣಿಗಳು ಅಧಿಕಾರದಲ್ಲಿ ಇದ್ದಾಗ ಒಂದು ನಿಲುವು ತೆಗೆದುಕೊಂಡರೆ, ವಿರೋಧ ಪಕ್ಷದಲ್ಲಿ ಇದ್ದಾಗ ಅದಕ್ಕೆ ವ್ಯತಿರಿಕ್ತ ನಿಲುವು ತೆಗೆದುಕೊಳ್ಳುವುದಕ್ಕೆ ಸುದೀರ್ಘ ಇತಿಹಾಸ ಇದೆ. ವಿರೋಧ ಪಕ್ಷದಲ್ಲಿ ಇದ್ದಾಗ ಒಂದು ತೊಟ್ಟು ನೀರನ್ನೂ ತಮಿಳುನಾಡಿಗೆ ಬಿಡಬಾರದು ಎಂದು ಬೊಬ್ಬೆ ಹೊಡೆಯುವವರು, ಆಡಳಿತ ಪಕ್ಷದಲ್ಲಿರುವಾಗ ಈ ಧ್ವನಿಯನ್ನು ತಗ್ಗಿಸುತ್ತಾರೆ.

ನೀರು ಹರಿಯುವುದನ್ನು ನಿಲ್ಲಿಸುವುದು ಅಥವಾ ಬಿಡುವುದು ಕರ್ನಾಟಕದ ಕೈಯಲ್ಲಿ ಇರದೇ ಪ್ರಾಧಿಕಾರದ ಕೈಯಲ್ಲಿ ಇರುತ್ತದೆ ಎನ್ನುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಮಾತಿನಲ್ಲಿ ಅರ್ಥವಿದೆ. ಕಾವೇರಿ ಹೆಸರಿನಲ್ಲಿ ರಾಜಕೀಯ ಮಾಡದೆ ವಾಸ್ತವವನ್ನು ಸಂಬಂಧಪಟ್ಟವರಿಗೆ ಮನದಟ್ಟು ಮಾಡಿಕೊಡುವ ಪ್ರಯತ್ನವನ್ನು ಪಕ್ಷಾತೀತವಾಗಿ ಮಾಡಬೇಕಾಗಿದೆ.

ರಮಾನಂದ ಶರ್ಮಾ, ಬೆಂಗಳೂರು

ಅತಿರೇಕದ ವರ್ತನೆ: ವಿಮರ್ಶೆ ಅಗತ್ಯ

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಕಾಲೇಜೊಂದರಲ್ಲಿ ಬುದ್ಧಿ ಹೇಳಿದ ಉಪನ್ಯಾಸಕರಿಗೆ ಲಾಂಗ್ ತೋರಿಸಿ ಬೆದರಿಸಿದ ಕಾಲೇಜು ವಿದ್ಯಾರ್ಥಿ ಪ್ರಕರಣ ವಿಷಾದಕರ ಸಂಗತಿಯಾಗಿದೆ. ಶಿಕ್ಷಕ ಮತ್ತು ವಿದ್ಯಾರ್ಥಿಯ ನಡುವಿನದು ಒಂದು ಅನನ್ಯ ಸಂಬಂಧ. ಇದು ಗೌರವ, ನಂಬಿಕೆ ಮತ್ತು ಪರಸ್ಪರ ಕಲಿಕೆಯ ಮಿಶ್ರಣವಾಗಿದೆ. ಶಿಕ್ಷಕರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ, ಅವರ ಮನಸ್ಸು ಮತ್ತು ಭವಿಷ್ಯವನ್ನು ರೂಪಿಸುತ್ತಾರೆ. ಇಂತಹ ಪವಿತ್ರ ವೃತ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಿಗೆ ಅವರಿಂದ ವಿದ್ಯೆ ಕಲಿತ ವಿದ್ಯಾರ್ಥಿಯೇ ಲಾಂಗ್ ತೋರಿಸಿ ಹೆದರಿಸುವುದು ನಾಗರಿಕ ಸಮಾಜ ತಲೆ ತಗ್ಗಿಸುವಂತಹ ವಿಚಾರವಾಗಿದೆ.

ಇತ್ತೀಚಿನ ವಿದ್ಯಾರ್ಥಿಗಳಲ್ಲಿ ಆಗುತ್ತಿರುವ ಈ ಬಗೆಯ ಬದಲಾವಣೆಗೆ ಕಾರಣಗಳೇನು? ಈ ದಿಸೆಯಲ್ಲಿ ವಿದ್ಯಾರ್ಥಿಗಳನ್ನು ಪ್ರಚೋದಿಸುತ್ತಿರುವ ಹತ್ತಾರು ಸಂಗತಿಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ನಾವು ಮಾಡಬೇಕಿದೆ. ಇಂತಹ ಅತಿರೇಕದ ವರ್ತನೆ ತೋರುವಲ್ಲಿನ ನಿರ್ಭಯಕ್ಕೆ ಕಾರಣವಾದ ಇತರ ಅಂಶಗಳ ಬಗ್ಗೆಯೂ ವಿಮರ್ಶೆ ನಡೆಸುವುದು ಅವಶ್ಯ. ಅಲ್ಲದೆ ವಿದ್ಯಾರ್ಥಿಗಳು ಈ ರೀತಿಯ ಗಂಭೀರ ಅಪರಾಧಗಳನ್ನು ಮಾಡಿ ತದನಂತರ ತಪ್ಪೊಪ್ಪಿಕೊಳ್ಳುವುದು, ಅವರಿಗೆ ಶಿಕ್ಷೆ ನೀಡದೆ ಬರೀ ಬುದ್ಧಿವಾದ ಹೇಳಿ ಕಳಿಸುವಂಥ ಕ್ರಮಗಳು ಪರಿಹಾರವಾಗಬಲ್ಲವೇ ಎಂಬುದರ ಬಗ್ಗೆಯೂ ಚಿಂತನಮಂಥನ ನಡೆಸಬೇಕಾಗಿದೆ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ನಮ್ಮ ಹೆಗ್ಗಳಿಕೆ

'ಚಂದಿರನೇತಕೆ ಓಡುವನಮ್ಮ
ಮೋಡಕೆ ಬೆದರಿಹನೆ?'
ಎಂದೆನುತ ಬೆಳೆದ ನಮಗೆ...
ಇಂದು
ಚಂದಿರನ ದಕ್ಷಿಣ ಧ್ರುವದಲ್ಲಿಳಿದ
ಮೊದಲ ದೇಶ ನಮ್ಮ 'ಭಾರತ'
ಎಂಬ ಹೆಗ್ಗಳಿಕೆ...!
ಇಸ್ರೊ ವಿಜ್ಞಾನಿಗಳಿಗೆ ನಮೋನಮಃ

ವಿ.ವಿಜಯೇಂದ್ರ ರಾವ್
ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸುವಾಗ ಹೆಚ್ಚು ಎಚ್ಚರ ಇರಬೇಕು. ಮೌಢ್ಯ ಬಿತ್ತುವಂತಹ ವ್ಯಕ್ತಿಗಳನ್ನು ವಿಶ್ವವಿದ್ಯಾಲಯಗಳಿಗೆ ಆಹ್ವಾನಿಸಬಾರದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕುಲಪತಿಗಳ ಸಭೆಯಲ್ಲಿ ಇತ್ತೀಚೆಗೆ ತಾಕೀತು ಮಾಡಿದ್ದಾರೆ. ಆದರೆ, ಇನ್ನೊಂದೆಡೆ ವಿಶ್ವವಿದ್ಯಾಲಯಗಳಲ್ಲಿ ವೈಚಾರಿಕ ಗೋಷ್ಠಿಗಳಿಗೂ ಅಡ್ಡಿಪಡಿಸುತ್ತಿರುವ ಕುರಿತು ದೂರುಗಳು ಕೇಳಿಬರುತ್ತಲೇ ಇವೆ. ಅಂತಹ ಕೆಲವು ಪ್ರಕರಣಗಳ ಹಿನ್ನೋಟ ಇಲ್ಲಿದೆ

‘ವಿಶ್ವವಿದ್ಯಾಲಯಕ್ಕೆ ಪ್ರವೇಶವಿಲ್ಲ!’

ತೀಸ್ತಾಗೆ ಪ್ರವೇಶ ನಿರಾಕರಣೆ

‘ಕೋಮು ಸೌಹಾರ್ದ ಮತ್ತು ನ್ಯಾಯ’ ವಿಷಯದ ಕುರಿತು ಉಪನ್ಯಾಸ ನೀಡಲು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಗೆ (ಐಐಎಸ್‌ಸಿ) ಇದೇ ಆ.16ರಂದು ಬಂದಿದ್ದ ನಾಗರಿಕ ಹಕ್ಕುಗಳ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಅವರಿಗೆ ಪ್ರವೇಶ ನಿರಾಕರಿಸಲಾಯಿತು.

ಅಧ್ಯಾಪಕರು ಮಧ್ಯಪ್ರವೇಶಿಸಿ ಮಾತುಕತೆ ನಡೆಸಿದ ಬಳಿಕ ಪ್ರವೇಶ ನೀಡಲಾಯಿತು. ಆದರೆ, ನಿಗದಿಯಾಗಿದ್ದ ‘ಸೆಂಟರ್ ಫಾರ್ ಕಂಟಿನ್ಯೂಯಿಂಗ್ ಎಜುಕೇಷನ್’ನಲ್ಲಿ (ಸಿಸಿಇ) ಉಪನ್ಯಾಸ ನಡೆಯದೇ ಕ್ಯಾಂಪಸ್‌ನ ಬೇರೆ ಸ್ಥಳದಲ್ಲಿ ನಡೆಸಲಾಯಿತು.

ಒಂದು ವಾರದ ಹಿಂದೆಯೇ ಕುಲಸಚಿವರು ಸೇರಿದಂತೆ ಸಂಸ್ಥೆಯ ಅಧಿಕಾರಿಗಳಿಗೆ ಇ–ಮೇಲ್ ಮೂಲಕ ವಿದ್ಯಾರ್ಥಿಗಳ ಸಂಘಟನೆಯಾದ ‘ಬ್ರೇಕ್ ದ ಸೈಲೆನ್ಸ್’ ಕಾರ್ಯಕ್ರಮ ನಡೆಸಲು ಅನುಮತಿ ಕೋರಿತ್ತು. ಅದಕ್ಕೆ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ.

ಕಾರ್ಯಕ್ರಮಕ್ಕಿಂತ ಮೂರು ತಾಸು ಮೊದಲು ಕುಲಸಚಿವರು ‘ಸಿಸಿಇಯಲ್ಲಿ ಕಾರ್ಯಕ್ರಮ ನಡೆಸಲು ಸಾಧ್ಯವಿಲ್ಲ. ಸಂಸ್ಥೆಯ ನಿರ್ದೇಶಕರು ಕಚೇರಿಯಲ್ಲಿ ಇಲ್ಲದ ಕಾರಣ ಇ-ಮೇಲ್‌ಗೆ ಪ್ರತಿಕ್ರಿಯಿಸಲು ಸಾಧ್ಯವಾಗಿಲ್ಲ ಎಂದು ತಿಳಿಸಿದರು’ ಎಂದು ಸಂಘಟಕ, ವಿದ್ಯಾರ್ಥಿ ಶೈರಿಕ್ ಸೇನ್‌ಗುಪ್ತಾ ಮಾಹಿತಿ ನೀಡಿದ್ದರು.

ಸಿಸಿಇಯಲ್ಲಿ ಕಾರ್ಯಕ್ರಮ ನಡೆಸಲು ಅನುಮತಿ ದೊರೆಯದೇ ಇದ್ದಾಗ ಕೆಫೆಟೇರಿಯಾದಲ್ಲಿ ಅನೌಪಚಾರಿಕವಾಗಿ ನಡೆಸಲು ಸಂಘಟಕರು ನಿರ್ಧರಿಸಿದ್ದರು. ಅಲ್ಲಿಗೆ ತೀಸ್ತಾ ಬರುತ್ತಿದ್ದಾಗ ಐವರು ಭದ್ರತಾ ಸಿಬ್ಬಂದಿ ಗೇಟ್‌ನಲ್ಲೇ ತಡೆದು ನಿಲ್ಲಿಸಿದ್ದರು. ಅಧ್ಯಾಪಕರು ಮಧ್ಯಪ್ರವೇಶಿಸಿ, ತೀಸ್ತಾ ಸೆಟಲ್ವಾಡ್ ನಮ್ಮ ಅತಿಥಿ ಎಂದು ತಿಳಿಸಿದ ಮೇಲೆ ಕ್ಯಾಂಪಸ್ ಪ್ರವೇಶಿಸಲು ಅವಕಾಶ ನೀಡಿದ್ದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಿದ್ದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಗೇಟ್‌ವರೆಗೆ ಬಂದು ವಾಪಸಾಗಿದ್ದರು.

ನೀರು ಹಾಕಿ ಸ್ವಚ್ಛಗೊಳಿಸಿದ ವಿದ್ಯಾರ್ಥಿಗಳು

ಆಗಸ್ಟ್ 8ರಂದು ಭದ್ರಾವತಿಯ ಸರ್ ಎಂ.ವಿಶ್ವೇಶ್ವರಯ್ಯ ಸರ್ಕಾರಿ ಪದವಿ ಕಾಲೇಜಿನಲ್ಲಿ ನಟ ಪ್ರಕಾಶ್‌ರಾಜ್ ಅವರೊಂದಿಗೆ ಆಯೋಜಿಸಿದ್ದ ಸಂವಾದ ಕಾರ್ಯಕ್ರಮವನ್ನು ವಿರೋಧಿಸಿ, ಕಾರ್ಯಕ್ರಮದ ನಂತರ ಕೆಲವು ವಿದ್ಯಾರ್ಥಿಗಳು ಸಭಾಂಗಣವನ್ನು ನೀರು ಹಾಕಿ ಸ್ವಚ್ಛಗೊಳಿಸಿದ್ದರು.

ಗಲಭೆಗೆ ಪ್ರಚೋದನೆ ಆರೋಪ

ತುಮಕೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವಿದ್ಯಾರ್ಥಿಗಳಿಗೆ ಉಪನ್ಯಾಸ ನೀಡಲು ಪತ್ರಕರ್ತ ಅಜಿತ್ ಹನುಮಕ್ಕನವರ್ ಅವರಿಗೆ ಆಹ್ವಾನ ನೀಡಿದ್ದು ವಿವಾದಕ್ಕೆ ಒಳಗಾಗಿತ್ತು.

‘ಜಾತ್ಯತೀತ, ಸಾಮರಸ್ಯ, ಜ್ಞಾನ ದಾಹದ ಕೇಂದ್ರವಾಗಬೇಕಿದ್ದ ವಿಶ್ವವಿದ್ಯಾಲಯದಲ್ಲಿ ಕೋಮುವಾದದ ವಿಷ ಬೀಜ ಬಿತ್ತುವ, ವಿದ್ಯಾರ್ಥಿಗಳನ್ನು ಕೋಮು ಗಲಭೆಗಳಿಗೆ ಪ್ರಚೋದಿಸುವ ಕೆಲಸ ನಡೆಯುತ್ತಿದೆ’ ಎಂದು ಆರೋಪಿಸಿ ಲೇಖಕರು, ಚಿಂತಕರು, ಪ್ರಗತಿಪರರು ಅಸಮಾಧಾನ ವ್ಯಕ್ತಪಡಿಸಿದ್ದರು.

ಅಜಿತ್ ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಬಾರದು. ಅವರು ವಿ.ವಿಗೆ ಬರಬಾರದು ಎಂದು ಪ್ರಗತಿಪರರು ಒತ್ತಡ ಹಾಕಿದ್ದರು. ಆದರೆ, ಯಾವ ವಿರೋಧವನ್ನೂ ಲೆಕ್ಕಿಸದೆ ಅಜಿತ್ ಅವರನ್ನು ಆಹ್ವಾನಿಸಿ, ಉಪನ್ಯಾಸ ನೀಡಲು ಅವಕಾಶ ಮಾಡಿಕೊಡಲಾಗಿತ್ತು. ಕಾರ್ಯಕ್ರಮದ ದಿನ ಕೆಲವು ಲೇಖಕರು ಮತ್ತು ಇತರರು ವಿ.ವಿ ಎದುರು ಪ್ರತಿಭಟನೆ ನಡೆಸಿದ್ದರು.

ಯುಎಪಿಎ ಚರ್ಚೆಗೆ ನಕಾರ

ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆ (ಯುಎಪಿಎ) ಕುರಿತ ಚರ್ಚಾ ಕಾರ್ಯಕ್ರಮವನ್ನು ಐಐಎಸ್‌ಸಿಯ ‘ಸೆಂಟರ್ ಫಾರ್ ಕಂಟಿನ್ಯೂಯಿಂಗ್ ಎಜುಕೇಷನ್’ನಲ್ಲಿ (ಸಿಸಿಇ) ಜೂನ್ 28ರಂದು ವಿದ್ಯಾರ್ಥಿ ಹೋರಾಟಗಾರರಾದ ನತಾಶಾ ನರ್ವಾಲಾ ಮತ್ತು ದೇವಾಂಗಣ ಕಲಿತಾ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮಕ್ಕೆ ಸಿಸಿಇ ಮುಖ್ಯಸ್ಥರು ಅನುಮತಿ ನೀಡಿದ್ದರು. ಆದರೆ, ಜೂನ್ 27ರಂದು ಸಂಘಟಕರಿಗೆ ಇ–ಮೇಲ್ ಕಳುಹಿಸಿದ ಐಐಎಸ್‌ಸಿ ರಿಜಿಸ್ಟ್ರಾರ್ ಕ್ಯಾಪ್ಟನ್ ಶ್ರೀಧರ್ ವಾರಿಯರ್, ‘ಮುಂಚಿತವಾಗಿಯೇ ಆಡಳಿತಾತ್ಮಕ ಅನುಮೋದನೆ ಪಡೆದುಕೊಂಡಿಲ್ಲ’ ಎನ್ನುವ ಕಾರಣ ನೀಡಿ ಅನುಮತಿ ನಿರಾಕರಿಸಿದರು. ‘ಕಾರ್ಯಕ್ರಮದ ಬಗ್ಗೆ ದೂರುಗಳು ಸಹ ಬಂದಿವೆ’ ಎಂದು ಇ–ಮೇಲ್‌ನಲ್ಲಿ ಉಲ್ಲೇಖಿಸಲಾಗಿತ್ತು.

ಅನುಮತಿ ಸಿಗದ ಕಾರಣ ಕ್ಯಾಂಪಸ್‌ನಲ್ಲಿರುವ ಫುಡ್‌ಕೋರ್ಟ್ ಸಮೀಪದಲ್ಲೇ ವಿದ್ಯಾರ್ಥಿಗಳು ಅನೌಪಚಾರಿಕವಾಗಿ ಈ ಕಾರ್ಯಕ್ರಮ ನಡೆಸಿದರು. ಭದ್ರತಾ ಸಿಬ್ಬಂದಿ ಈ ಅನೌಪಚಾರಿಕ ಕಾರ್ಯಕ್ರಮಕ್ಕೂ ಅಡ್ಡಿಪಡಿಸಲು ಯತ್ನಿಸಿದರು ಎಂದ ‘ಇಂಟರ್‌ನ್ಯಾಷನಲ್ ಸೆಂಟರ್ ಫಾರ್ ಥಿಯರಿಟಿಕಲ್ ಸೈನ್ಸಸ್’ನ ಪ್ರೊ. ಸುಬ್ರತ್ ರಾಜು ದೂರಿದ್ದರು.

ವಿರೋಧದ ನಡುವೆಯೂ ಕಾರ್ಯಕ್ರಮ

ಮಂಗಳೂರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ಸ್ನಾತಕೋತ್ತರ ವಿದ್ಯಾರ್ಥಿ ಪರಿಷತ್ ಉದ್ಘಾಟನೆ ಕಾರ್ಯಕ್ರಮಕ್ಕೆ ಆರ್‌ಎಸ್‌ಎಸ್ ಮುಖಂಡ ಡಾ. ಕಲ್ಲಡ್ಕ ಪ್ರಭಾಕರ ಭಟ್ ಅವರನ್ನು ಆಹ್ವಾನಿಸಿದ್ದಕ್ಕೆ ಕೆಲ ವಿದ್ಯಾರ್ಥಿ ಸಂಘಟನೆಗಳು ತೀವ್ರ ವಿರೋಧ ವ್ಯಕ್ತಪಡಿಸಿ, ಪ್ರತಿಭಟನೆ ನಡೆಸಿದ್ದವು.

ನಗರದ ಹಂಪನಕಟ್ಟೆ ಬಳಿಯ ವಿಶ್ವವಿದ್ಯಾಲಯ ಕಾಲೇಜು ಬಳಿ ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ (ಸಿಎಫ್‌ಐ) ಸಂಘಟನೆಯ ಕಾರ್ಯಕರ್ತರು ಪ್ರತಿಭಟನೆ ನಡೆಸಿ, ದ್ವೇಷದ ಮಾತು ಆಡುವವರನ್ನು ಆಹ್ವಾನಿಸುವ ಮೂಲಕ ವಿವಿ ಪಾವಿತ್ರ್ಯಕ್ಕೆ ಧಕ್ಕೆ ತರಲಾಗಿದೆ ಎಂದು ಆರೋಪಿಸಿದ್ದರು.

ವಿರೋಧದ ನಡುವೆಯೂ ವಿಶ್ವವಿದ್ಯಾಲಯದ ಪ್ರಮುಖರ ಸಹಕಾರದಲ್ಲಿ 2022ರ ಮಾರ್ಚ್ 30ರಂದು ಕಾರ್ಯಕ್ರಮ ನಡೆದಿತ್ತು. ಅಂದು ವಿದ್ಯಾರ್ಥಿ ನಾಯಕರು ಹಾಗೂ ಬಹುತೇಕ ವಿದ್ಯಾರ್ಥಿಗಳು ಕೇಸರಿ ಶಾಲು ಧರಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಮಂಗಳೂರು ನಗರದ ವಿಶ್ವವಿದ್ಯಾಲಯ ಕಾಲೇಜಿನ 118ನೇ ವಾರ್ಷಿಕೋತ್ಸವದ ಪೂರ್ವಭಾವಿಯಾಗಿ 2023 ಜೂನ್ 23ರಂದು ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಪ್ರತಿಭಾ ದಿನಾಚರಣೆಗೆ ಪತ್ರಕರ್ತ ಶ್ರೀಕಾಂತ ಶೆಟ್ಟಿ ಕಾರ್ಕಳ ಅವರನ್ನು ಆಹ್ವಾನಿಸಿದ್ದಕ್ಕೆ ಕೆಲವು ವಿದ್ಯಾರ್ಥಿಗಳು ವಿರೋಧ ವ್ಯಕ್ತಪಡಿಸಿದ್ದರು. ಇದಾದ ಎರಡು ದಿನಗಳ ಬಳಿಕ ಕಾರ್ಯಕ್ರಮವನ್ನು ನಡೆಸಲಾಗಿದೆ. ಈ ವೇಳೆ ಯಾವುದೇ ಗದ್ದಲ ನಡೆದಿರಲಿಲ್ಲ.

ರದ್ದಾಗಿದ್ದ ಗೋಷ್ಠಿ

ಮಂಗಳೂರು ವಿಶ್ವವಿದ್ಯಾಲಯವು ವಿವಿಧ ಸಂಘಟನೆಗಳ ಸಹಯೋಗದಲ್ಲಿ 2020 ನವೆಂಬರ್ ಮೊದಲ ವಾರದಲ್ಲಿ ಆಯೋಜಿಸಿದ್ದ ತುಳು ಗೋಷ್ಠಿಗೆ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಪ್ರೊ. ಪುರುಷೋತ್ತಮ ಬಿಳಿಮಲೆ ಅವರನ್ನು ಆಹ್ವಾನಿಸಿದ್ದಕ್ಕೆ ವಿ.ವಿ ಸಿಂಡಿಕೇಟ್‌ನ ಕೆಲವು ಸದಸ್ಯರು ವಿರೋಧ ವ್ಯಕ್ತಪಡಿಸಿದ್ದರಿಂದ ಈ ಕಾರ್ಯಕ್ರಮವನ್ನು ಮುಂದೂಡಲಾಗಿತ್ತು. ನಂತರ ಈ ಕಾರ್ಯಕ್ರಮ ರದ್ದಾಗಿತ್ತು.

‘ನನ್ನ ಭಾಷಣದ ಆಡಿಯೊವನ್ನು 15 ದಿನಗಳ ಹಿಂದೆಯೇ ಕಳುಹಿಸಿದ್ದೇನೆ. ಸಿಂಡಿಕೇಟ್ ಸದಸ್ಯರೊಬ್ಬರ ಕರೆಯಂತೆ ಒಂದು ವಿಭಾಗವು ಕಾರ್ಯಕ್ರಮವೊಂದನ್ನು ರದ್ದು ಮಾಡುವುದು ವಿಶ್ವವಿದ್ಯಾಲಯದ ಘನತೆಗೆ ಧಕ್ಕೆ ತರುತ್ತದೆ. ಇದು ‘ಸಿಂಡಿಕೇಟ್’ ಘನತೆಗೂ ಚ್ಯುತಿ ತರುತ್ತದೆ’ ಎಂದು ಆ ಸಂದರ್ಭದಲ್ಲಿ ಪುರುಷೋತ್ತಮ ಬಿಳಿಮಲೆ ಪ್ರತಿಕ್ರಿಯಿಸಿದ್ದರು.

ಕಮಲಾ ಹಂಪನಾ ಭಾಷಣಕ್ಕೆ ವಿದ್ಯಾರ್ಥಿಗಳಿಂದ ಆಕ್ಷೇಪ

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಇದೇ ತಿಂಗಳ 10ರಂದು ಆಯೋಜಿಸಿದ್ದ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಾಹಿತಿ ಕಮಲಾ ಹಂಪನಾ ಅವರನ್ನು ಒಂದು ಸಂಘಟನೆಯ ವಿದ್ಯಾರ್ಥಿಗಳು ವಿರೋಧಿಸಿದ್ದರು. ವೇದಿಕೆ ಬಳಿ ನುಗ್ಗಿ, ಧಿಕ್ಕಾರ ಕೂಗಿ ಅವರ ಮಾತಿಗೆ ಅಡ್ಡಿಪಡಿಸಲು ಯತ್ನಿಸಿದ್ದರು. ಅವರನ್ನು ಬಲವಂತವಾಗಿ ಹೊರಗೆ ಕಳುಹಿಸಿದ ನಂತರ ಕಮಲಾ ಅವರಿಗೆ ಮಾತನಾಡಲು ಸಂಘಟಕರು ಅವಕಾಶ ನೀಡಿದ್ದರು.

‘ಭಾರತದಲ್ಲಿ ಬೇರೆ ಬೇರೆ ಧರ್ಮದವರು ನೆಲೆಸಿದ್ದಾರೆ. ಆದ್ದರಿಂದ ಇದು ಹಿಂದೂ ದೇಶವಲ್ಲ. ನಾವೆಲ್ಲ ಭಾರತೀಯರೇ ಹೊರತು, ಹಿಂದೂಗಳಲ್ಲ. ದೇಶದಲ್ಲಿ ಇಸ್ಲಾಂ, ಕ್ರೈಸ್ತ, ಸಿಖ್, ಬೌದ್ಧ, ಜೈನ ಸೇರಿ ವಿವಿಧ ಧರ್ಮದವರು ನೆಲೆಸಿದ್ದು, ಇವರಾರೂ ಹಿಂದೂಗಳಲ್ಲ. ದೇವಸ್ಥಾನಗಳಲ್ಲಿರುವ ಶೇ 3ರಷ್ಟು ಮಂದಿ ಮಾತ್ರ ಹಿಂದೂಗಳು. ಅವರು ಹಿಂದೂ ದೇಶ ಎಂದು ಕರೆದುಕೊಂಡರೆ ಏನು ಅರ್ಥ? ಇದನ್ನು ಒಪ್ಪಲು ಸಾಧ್ಯವಿಲ್ಲ. ಹಾಗಾಗಿ, ಪ್ರಮಾಣಪತ್ರಗಳಲ್ಲಿ ಹಿಂದೂ ಧರ್ಮ ಎಂದು ನಮೂದಿಸದೆ, ಭಾರತೀಯರು ಎಂದು ಬರೆಸಬೇಕು’ ಎಂದು ಕಮಲಾ ಹಂಪನಾ ಮಾತನಾಡಿದ್ದರು. ಇದು ಕೆಲ ಸಂಘಟನೆಗಳ ಆಕ್ರೋಶಕ್ಕೆ ಕಾರಣವಾಗಿತ್ತು.

ಕನ್ಹಯ್ಯ ಭಾಷಣಕ್ಕೆ ಅಡ್ಡಿ

ಗುಲಬರ್ಗಾ ವಿಶ್ವವಿದ್ಯಾಲಯದ ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಯ ಆಹ್ವಾನದ ಮೇರೆಗೆ ‘ಡಾ.ಬಿ.ಆರ್. ಅಂಬೇಡ್ಕರ್ ಕಂಡ ಆಧುನಿಕ ಭಾರತದಲ್ಲಿ ಯುವಕರ ಪಾತ್ರ’ ವಿಷಯದ ಕುರಿತು ಭಾಷಣ ಮಾಡಲು 2019ರ ಅಕ್ಟೋಬರ್‌ನಲ್ಲಿ ಬರಬೇಕಿದ್ದ ಜೆಎನ್‌ಯು ವಿದ್ಯಾರ್ಥಿ ಸಂಘದ ಮಾಜಿ ನಾಯಕ ಕನ್ಹಯ್ಯ ಕುಮಾರ್ ಅವರಿಗೆ ಕೊನೆ ಗಳಿಗೆಯಲ್ಲಿ ಅವಕಾಶ ನಿರಾಕರಿಸಿದ್ದು ವಿವಾದಕ್ಕೆ ಕಾರಣವಾಗಿತ್ತು.

ಕನ್ಹಯ್ಯ ಕುಮಾರ್ ಅವರನ್ನು ಕರೆಸುತ್ತಿರುವುದಕ್ಕೆ ಶ್ರೀರಾಮ ಸೇನೆ ಮತ್ತು ಬಿಜೆಪಿಯ ಕೆಲವರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಉತ್ತರ ಕರ್ನಾಟಕ ಭಾಗದ ಸಂಸದರೊಬ್ಬರು ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕರಿಗೆ ಕರೆ ಮಾಡಿ ಕಾರ್ಯಕ್ರಮ ರದ್ದುಪಡಿಸುವಂತೆ ಸೂಚಿಸಿದ್ದರು. ವಿರೋಧ ಹೆಚ್ಚುತ್ತಿದ್ದಂತೆ ಆಗಿನ ಹಂಗಾಮಿ ಕುಲಪತಿ ಪ್ರೊ.ಪರಿಮಳಾ ಅಂಬೇಕರ್, ಸಿಂಡಿಕೇಟ್‌ನ ತುರ್ತು ಸಭೆ ಕರೆದಿದ್ದರು. ವಿಶ್ವವಿದ್ಯಾಲಯದ ಆವರಣದಲ್ಲೇ ಕಾರ್ಯಕ್ರಮ ನಡೆಸಲು ಸಿಂಡಿಕೇಟ್ ಷರತ್ತುಬದ್ಧ ಅನುಮತಿ ನೀಡಿತ್ತು.

ಆದರೆ, ವಿರೋಧ ಹೆಚ್ಚಾಗುತ್ತಿದ್ದಂತೆಯೇ, ನೀಡಿದ್ದ ಅನುಮತಿಯನ್ನು ಕೊನೆಗಳಿಗೆಯಲ್ಲಿ ಹಿಂದಕ್ಕೆ ಪಡೆಯಲಾಯಿತು. ಇದರಿಂದಾಗಿ ಗುಲಬರ್ಗಾ ವಿ.ವಿ. ಬದಲು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮುಖ್ಯಸ್ಥರಾಗಿರುವ ಅಂಬೇಡ್ಕರ್ ಕಾಲೇಜಿನಲ್ಲಿ ಕನ್ಹಯ್ಯ ಕುಮಾರ್ ಅವರು ಭಾಷಣ ಮಾಡಿ ತೆರಳಿದ್ದರು.

ನಟ ಚೇತನ್ ಮುಖ್ಯ ಅತಿಥಿ ಆಗಿದ್ದಕ್ಕೆ ವಿರೋಧ

ಹುಬ್ಬಳ್ಳಿ ನವನಗರದಲ್ಲಿರುವ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ಜೂನ್ 16 ಮತ್ತು 17ರಂದು ಆಯೋಜಿಸಿದ್ದ ಯುವಜನೋತ್ಸವ ಕಾರ್ಯಕ್ರಮಕ್ಕೆ ಚಿತ್ರನಟ ಚೇತನ್ ಅವರನ್ನು ಮುಖ್ಯ ಅತಿಥಿಯನ್ನಾಗಿ ಆಹ್ವಾನಿಸಿತ್ತು. ಇದನ್ನು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಸಂಘಟನೆಯ ಸದಸ್ಯರು ವಿರೋಧಿಸಿದ್ದರು. ಇದಕ್ಕೆ ಮಣಿದ ವಿಶ್ವವಿದ್ಯಾಲಯದ ಆಡಳಿತ ಮಂಡಳಿಯು ಚೇತನ್ ಅವರ ಬದಲಿಗೆ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಪಿ.ಎಲ್. ಪಾಟೀಲ ಅವರನ್ನು ಆಹ್ವಾನಿಸಿತ್ತು.

‘ದೇಶದ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ನಂಬಿಕೆ ಇಲ್ಲದ, ನ್ಯಾಯಾಧೀಶರ ಬಗ್ಗೆ ಟೀಕೆ ಮಾಡಿದ ಹಾಗೂ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಜಾಮೀನಿನ ಮೇಲಿರುವ ಚೇತನ್ ಅವರನ್ನು ಆಹ್ವಾನಿಸಬಾರದು. ಮುಖ್ಯ ಅತಿಥಿಯನ್ನು ಬದಲಿಸದಿದ್ದರೆ ಕಾರ್ಯಕ್ರಮದ ವೇಳೆ ಪ್ರತಿಭಟನೆ ನಡೆಸುತ್ತೇವೆ’ ಎಂದು ಎಬಿವಿಪಿ ಸಂಘಟನೆಯ ಸದಸ್ಯರು ಎಚ್ಚರಿಕೆ ನೀಡಿದ್ದರು.

‘ಸರ್ವಾಧಿಕಾರಿ ಧೋರಣೆ ಸಲ್ಲ’

ಯಾವುದೇ ಶೈಕ್ಷಣಿಕ ಸಂಸ್ಥೆ ಆಗಿರಲಿ, ವಿಷಯ ತಜ್ಞರಾಗಿರುವ ವ್ಯಕ್ತಿಯನ್ನು ಉಪನ್ಯಾಸಕ್ಕೆಂದು ಕರೆದಾಗ, ಯಾವುದೇ ಸಂಘಟನೆಯವರಾದರೂ ಸರಿ ಅದನ್ನು ವಿರೋಧಿಸುವುದು ಸರಿಯಲ್ಲ. ಅಂಥ ತಜ್ಞರ ಚಿಂತನೆಗಳು ನಮ್ಮ ರಾಜಕೀಯ ನಿಲುವುಗಳಿಗೆ ಒಪ್ಪುವುದಿಲ್ಲ ಎನ್ನುವ ಮಾತ್ರಕ್ಕೇ ಬಹುಮುಖ ಚಿಂತನೆಗಳನ್ನು ಒಪ್ಪದೇ ಇರುವುದು, ಇಂಥ ಕಾರ್ಯಕ್ರಮಕ್ಕೆ ರಾಜಕೀಯ ಬಣ್ಣ ಬಳಿಯುವುದು ಸರಿಯಾದ ಕ್ರಮ ಖಂಡಿತಾ ಅಲ್ಲ.

ಯಾವುದೇ ವಿದ್ಯಾರ್ಥಿ ಸಂಘಟನೆಗಳ ಹಿಂದೆ ಒಂದು ಪಕ್ಷ, ಒಂದು ಸಿದ್ಧಾಂತ ಇದ್ದೇ ಇರುತ್ತದೆ. ವಿದ್ಯಾರ್ಥಿಗಳ ಹಿತಾಸಕ್ತಿಗಳಿಗಾಗಿ ಕೆಲಸ ಮಾಡುವ ಸಂಘಟನೆಗಳು ಇವಾಗಿರುವುದಿಲ್ಲ. ತಮ್ಮ ಚಿಂತನೆಗಳಿಗೆ, ಪಕ್ಷಕ್ಕೆ ಪೂರಕವಾಗಿ ಮಾತನಾಡದವರನ್ನು ವಿರೋಧಿಸುವುದಷ್ಟೇ ಇವುಗಳ ಮುಖ್ಯ ಗುರಿಯಾಗಿರುತ್ತದೆ. ನಾವು ಹೇಳಿದ ಹಾಗೆಯೇ ನಡೆಯಬೇಕು ಎನ್ನುವ ಈ ಸರ್ವಾಧಿಕಾರಿ ಧೋರಣೆ ಸರಿಯಲ್ಲ.

ಸಬಿತಾ ಬನ್ನಾಡಿ, ಪ್ರಾಧ್ಯಾಪಕಿ

ಅಪಾಯಕಾರಿ ಬೆಳವಣಿಗೆ

ಹಾರ್ವರ್ಡ್ ವಿಶ್ವವಿದ್ಯಾಲಯ ‘ಬನ್ನಿ ನಿಮ್ಮ ಅಧ್ಯಾಪಕರೊಂದಿಗೆ ವಾಗ್ವಾದ ನಡೆಸಿ, ಅವರು ಮತ್ತು ನಿಮ್ಮ ನಡುವಣ ಬೌದ್ಧಿಕ ಚರ್ಚೆ ಮತ್ತು ಭಿನ್ನಾಭಿಪ್ರಾಯಗಳ ಮೂಲಕವೇ ಹೊಸ ದೃಷ್ಟಿಕೋನವೊಂದು ಹುಟ್ಟಲು ಸಾಧ್ಯ’ ಎಂಬ ಮಾತುಗಳನ್ನು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಆ ಮೂಲಕ ವಿಮರ್ಶಾತ್ಮಕ ಚಿಂತನೆಗೆ ಅವಕಾಶ ಕೊಡುತ್ತಿದೆ.

ಆದರೆ, ನಮ್ಮ ಬಹುತೇಕ ವಿಶ್ವವಿದ್ಯಾಲಯಗಳು ಇದಕ್ಕೆ ವಿರುದ್ಧವಾದ ಮಾದರಿಯನ್ನು ಅನುಸರಿಸುತ್ತಿವೆ ಅನ್ನಿಸುತ್ತಿದೆ. ಕ್ಯಾಂಪಸ್ಸಿನಲ್ಲಿ ಏನು ಚರ್ಚೆಯಾಗಬೇಕು, ಯಾರನ್ನು ಆಹ್ವಾನಿಸಬೇಕು, ಆಹ್ವಾನಿಸಬಾರದು ಎಂಬುದನ್ನು ಅಧ್ಯಾಪಕರು, ವಿದ್ಯಾರ್ಥಿಗಳು ನಿರ್ಧರಿಸುತ್ತಿಲ್ಲ. ಬದಲಾಗಿ ಪಕ್ಷ, ಸಂಘಟನೆಗಳು ನಿರ್ಧರಿಸುತ್ತಿದ್ದಾವೆ. ಇದು ಅಪಾಯಕಾರಿ ಬೆಳವಣಿಗೆ.

ಕಿರಣ ಗಾಜನೂರು, ಸಹಾಯಕ ಪ್ರಾಧ್ಯಾಪಕ

‘ಅಭಿವ್ಯಕ್ತಿ ಸ್ವಾತಂತ್ರ್ಯದ ದಮನ ಬೇಡ’

ಜ್ಞಾನದ ಉತ್ಪಾದನೆ ಮತ್ತು ಉತ್ಪಾದಿತ ಜ್ಞಾನದ ವಿಶ್ಲೇಷಣೆ ವಿಶ್ವವಿದ್ಯಾಲಯಗಳಲ್ಲಿ ನಡೆಯಬೇಕಾಗಿದೆ. ಇದಕ್ಕೆ ಪೂರಕವಾಗಿ ವಿಶ್ವವಿದ್ಯಾಲಯಗಳೂ ಸೇರಿದಂತೆ ಶೈಕ್ಷಣಿಕ ಕೇಂದ್ರಗಳಿಗೆ ಹೊರಗಿನ ವಿದ್ವಾಂಸರು ಸಂಪನ್ಮೂಲ ವ್ಯಕ್ತಿಗಳಾಗಿ ಲಭ್ಯರಾಗುವಂತಾಗ ಬೇಕು. ಆದರೆ, ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಮುಂದಿಟ್ಟುಕೊಂಡು ವಿದ್ವಾಂಸರನ್ನು ವಿ.ವಿಗಳಿಗೆ ಪ್ರವೇಶಿಸದಂತೆ ತಡೆಯುವುದು, ಕಾರ್ಯಕ್ರಮಗಳಿಗೆ ಅನುಮತಿ ನಿರಾಕರಿಸುವುದು ಅಭಿವ್ಯಕ್ತಿ ಸ್ವಾತಂತ್ರ್ಯ ದಮನಿಸುವ ಯತ್ನ. ಕುಲಪತಿಗಳಿಗೆ ಸರ್ಕಾರ ಒತ್ತಡ ಹೇರುವುದು, ಅನುಮತಿ ರದ್ದುಪಡಿಸುವುದು ವಿ.ವಿಗಳ ಸ್ವಾಯತ್ತೆಗೆ ಭಂಗ ತಂದಂತಾಗುತ್ತದೆ. ಹಾಗೆಂದ ಮಾತ್ರಕ್ಕೆ ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ರಾಷ್ಟ್ರದ ಐಕ್ಯತೆಗೆ ಧಕ್ಕೆಯನ್ನು ತಂದಂತಹ ವ್ಯಕ್ತಿಗಳನ್ನು ಹ್ವಾನಿಸುವುದನ್ನು ಸಮರ್ಥಿಸಲಾಗದು.

ರೋಹಿಣಾಕ್ಷ ಶಿರ್ಲಾಲು, ಸಹಾಯಕ ಪ್ರಾಧ್ಯಾಪಕ

‘ಭಿನ್ನಾಭಿಪ್ರಾಯಕ್ಕೆ ವಿಷಯ ಮಂಡನೆಯೇ ಉತ್ತರ’

ವಿಶ್ವವಿದ್ಯಾಲಯ ಸೇರಿದಂತೆ ಎಲ್ಲೇ ಆಗಲಿ ವಿಚಾರ ಮಂಡನೆಗೆ ಮುಕ್ತ ಅವಕಾಶ ಇರಬೇಕು. ಸೈದ್ಧಾಂತಿಕ ಭಿನ್ನಾಭಿಪ್ರಾಯಕ್ಕೆ ವಿಷಯಗಳ ಮಂಡನೆ ಮೂಲಕವೇ ಉತ್ತರ ನೀಡಬೇಕು; ಉತ್ತರ ಪಡೆಯಬೇಕು. ಕಾರ್ಯಕ್ರಮಗಳನ್ನು ಆಯೋಜಿಸುವವರಿಗೆ ನಿರ್ದಿಷ್ಟ ಕಾರ್ಯಸೂಚಿಗಳಿರಬೇಕು. ಆರೋಗ್ಯಕರ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಸೈದ್ಧಾಂತಿಕ ಭಿನ್ನಾಭಿಪ್ರಾಯಗಳನ್ನು ಚರ್ಚೆ ಹೊರತಾಗಿ ನಿಯಂತ್ರಿಸುವುದನ್ನು ಎಂದಿಗೂ ಒಪ್ಪಲು ಸಾಧ್ಯವಿಲ್ಲ.

ತೇಜಸ್ವಿನಿ ಗೌಡ, ವಿಧಾನ ಪರಿಷತ್ ಸದಸ್ಯೆ

ನಾವು ನೋಡಿದ ಸಿನಿಮಾ

ಚಿಮ್ಮಿದ ರಕ್ತದಲ್ಲಿ ಕಾಣದಂತಾಗುವ ಕಣ್ಣೀರು

ಟೋಬಿ (ಕನ್ನಡ)

- **ನಿರ್ದೇಶನ:** ಬಾಸಿಲ್ ಅಲ್ಚಲಕ್ಕಲ್
- **ನಿರ್ಮಾಪಕ:** ರವಿ ರೈ ಕಳಸ
- **ತಾರಾಗಣ:** ರಾಜ್ ಬಿ. ಶೆಟ್ಟಿ, ಚೈತ್ರ ಜೆ. ಆಚಾರ್, ರಾಜ್ ದೀಪಕ್ ಶೆಟ್ಟಿ, ಸಂಯುಕ್ತಾ ಹೊರನಾಡು, ಗೋಪಾಲಕೃಷ್ಣ ದೇಶಪಾಂಡೆ, ಭರತ್ ಜಿ.ಬಿ., ಯೋಗಿ ಬಂಕೇಶ್ವರ್, ಸ್ನಿಗ್ಧ.

ನರಿ ಬುದ್ಧಿಯ ಆನಂದನ ಮನೆ. ಟೀಪಾಯಿಯ ಮೇಲೆ ಟ್ರೇ. ಕಪ್ ಆ್ಯಂಡ್ ಸಾಸರ್‌ನಲ್ಲಿನ ಚಹಾ ಒಂದು ಬದಿ. ಸ್ಟೇನ್‌ಲೆಸ್ ಸ್ಟೀಲ್ ಲೋಟದಲ್ಲಿನ ಚಹಾ ಇನ್ನೊಂದು ಬದಿ. ಟೋಬಿ(ರಾಜ್ ಬಿ.ಶೆಟ್ಟಿ) ಥಟ್ಟನೆ ಸಾಸರ್ ಮೇಲಿಟ್ಟ ಕಪ್ ಎತ್ತಿಕೊಂಡು ಕುಡಿಯತೊಡಗುತ್ತಾನೆ. ಆನಂದನ ಬಿಟ್ಟ ಕಣ್ಣು ಬಿಟ್ಟ ಹಾಗೆ.

‘ನಾನು ಮೈ ಮಾರಿಕೊಂಡು ಬದುಕುವವಳು. ಮದುವೆ ಗಿದುವೆ ಬೇಡ’ ಹೇಳುತ್ತಾಳೆ ಸಾವಿತ್ರಿ. ‘ಏನಾದರೂ ಮಾರಿಕೋ...ನಮಗೇನಾಗಬೇಕು’ ಎಂದು ಟೋಬಿ ಪಕ್ಕದಲ್ಲಿ ನಿಂತ ಪುಟಾಣಿ ಜೆನ್ನಿ(ಸ್ನಿಗ್ಧ) ನಿರುಮ್ಮಳವಾಗಿ ಹೇಳುತ್ತಾಳೆ.

ಕಸದ ರಾಶಿಯಲ್ಲಿನ ಮೂಟೆಗಳಲ್ಲಿ ಶವವೊಂದಕ್ಕಾಗಿ ಹುಡುಕಾಡುವ ಟೋಬಿ, ಅದರ ಪಕ್ಕ ಬಿದ್ದ ಮೂಗಿನುಂಗುರ ಎತ್ತಿಕೊಳ್ಳುತ್ತಾನೆ. ಮೂಗು ಚುಚ್ಚಿಸಿಕೊಂಡು ಕುದುರೆ ಏರಿ ಹೊರಡುತ್ತಾನೆ.

ಚರ್ಚ್ ಪಾದ್ರಿ ಮಹಾ ಕೋಪಿಷ್ಠ ಬಾಲಕನನ್ನು ಬೇಷರತ್ ತಬ್ಬಿಕೊಳ್ಳುತ್ತಾನೆ. ಅದೇ ಮನುಷ್ಯ ಕಾರುಣ್ಯವೆನ್ನುವಂತೆ ಭಾವಿಸುವ ಬಾಲಕ ತೋಳಿನಲ್ಲಿ ತೋಳು ಬಂದಿ ಎನ್ನುವಂತೆ ಆತುಕೊಂಡು, ಪಾದ್ರಿಯ ಬೆನ್ನ ಮೇಲೆ ಕೈಯಾಡಿಸುತ್ತಾನೆ. ಆ ಬಾಲಕನಿಗೆ ‘ಟೋಬಿ’ ಎಂದು ಹೆಸರು ಕೊಡುವುದು ಅದೇ ಪಾದ್ರಿ.

ಇವೆಲ್ಲ ಚದುರಿದ ಚಿತ್ರಗಳು ‘ಟೋಬಿ’ಯಲ್ಲಿ ಒಂದು ಸೂತ್ರಕ್ಕೆ ಒಳಪಟ್ಟಿವೆ. ಬಿಡಿಬಿಡಿಯಾಗಿ ಅವು ತಣ್ಣಗಿನ ಕ್ರೌರ್ಯದ ಕಥನವನ್ನು ಜೋರು ದೃಶ್ಯಭಾಷೆಯಲ್ಲಿ ಹೇಳುತ್ತವೆ. ಲೈಂಗಿಕ ದೌರ್ಜನ್ಯಕ್ಕೆ ಒಳಗಾದ, ಕುರಿಯಂತೆ ಪರಿಸ್ಥಿತಿಯ ಮಿಕವಾಗುತ್ತಲೇ ಹೋಗುವ ಅಮಾಯಕನೊಬ್ಬ ಮಾರಿಯಾಗಿ ಮಾರ್ಪಡುವ ರುದ್ರ ಭಯಾನಕ ಕಥನವಿದು. ಕಥಾಎಳೆ ಟಿ.ಕೆ. ದಯಾನಂದ ಅವರದ್ದು.



ಬಹುತೇಕ ರಕ್ತತರ್ಪಣ, ಅಲ್ಲಲ್ಲಿ ಮಾತಿನ ಉಳಿ ಪೆಟ್ಟು, ಪದರ ಪದರಗಳಲ್ಲಿ ಚಿತ್ರಕಥೆಯನ್ನು ಹೆಣೆದ ಜಾಣ್ಮೆ, ಸ್ಲೋಮೋಷನ್‌ಗಳು, ಕೆಣಕುವ ಮೌನ, ಆಗೀಗ ಎದೆಗೆ ಬಡಿಯುವ ಹಿನ್ನೆಲೆ ಸಂಗೀತ, ಅತಿ ಕೃತಕವೆನ್ನಿಸುವ ಅಂತ್ಯ–ಇವೆಲ್ಲವೂ ‘ಟೋಬಿ’ಯ ಹಿಂಸಾಸೂತ್ರದಲ್ಲಿ ಬಿಗಿಯಾಗಿವೆ.

ಮೊದಲಾರ್ಧದಲ್ಲಿ ಸಾವಧಾನದಿಂದಲೇ ಕಥೆ ಚಕಚಕನೆ ಮುಂದುವರಿಯುವ ತಂತ್ರವಿದೆ. ಎರಡನೇ ಅರ್ಧದಲ್ಲಿ ಊಹೆಗೆ ನಿಲುಕುವ ಮೆಲೋಡ್ರಾಮಾಗಳ ಮೆರವಣಿಗೆ.

‘ಗರುಡ ಗಮನ ವೃಷಭ ವಾಹನ’ ಸಿನಿಮಾದಲ್ಲಿ ರಾಜ್ ಬಿ. ಶೆಟ್ಟಿ ಹಿಂಸಾದರ್ಶನದ ಕೆಲವು ಮಾದರಿಗಳನ್ನು ಬಿಂಬಿಸಿದ್ದರು. ಕೊಲೆ ಮಾಡುವಾಗ ಮಳೆ ಬರಬೇಕು, ಪಾತ್ರದ ಸ್ವರೂಪಕ್ಕೆ ಹೊರತೇ ಆದ ಗೀತಸಾಹಿತ್ಯ ಅಪರೂಪಕ್ಕೊಮ್ಮೆ ಮೂಡಬೇಕು, ತನ್ನನ್ನು ನಾಯಿಯ ಸ್ಥಿತಿಗೆ ತರುತ್ತಿದ್ದಾರೆನ್ನುವುದನ್ನು ಆ ಪ್ರಾಣಿಯನ್ನೇ ತೋರಿಸಿ ಹೇಳಬೇಕು... ಹೀಗೆ. ಇಂತಹ ಹಿಂಸಾಪ್ರತಿಮೆಗಳು ಈ ಚಿತ್ರದಲ್ಲಿಯೂ ಇವೆ. ಕ್ರೌರ್ಯದ ಬಿಂಬಗಳೇ ಗೀಳಾಗಿರುವುದರ ಪರಿಣಾಮವಿದು. ‘ಕಾಂತಾರ’ ಸಿನಿಮಾದಲ್ಲಿ ಅಂತ್ಯವನ್ನು ದೈವಶಕ್ತಿಗೆ ಸಮೀಕರಿಸುವ ಅನುಕೂಲಸಿಂಧು ಧೋರಣೆಯೊಂದು ಇದೆ. ಅದನ್ನೇ ಎತ್ತಿಕೊಂಡು, ಈ ಸಿನಿಮಾದಲ್ಲೂ ದುರ್ಬಲವಾಗಿ ಅಳವಡಿಸಿದ್ದಾರೆ.

ಅಭಿನಯದಲ್ಲಿ ರಾಜ್ ಕ್ರೌರ್ಯದಲ್ಲಿ ಅದ್ದಿ ತೆಗೆದಂತಿದ್ದಾರೆ. ಮಾತೇ ಇಲ್ಲದೆ ನಗುವುದರಲ್ಲಿ, ಮನಸೋಇಚ್ಛೆ ತದುಕುವುದರಲ್ಲಿ ಅವರು ನಿಸ್ಸೀಮರು. ಚೈತ್ರಾ ಜೆ. ಆಚಾರ್ ಅವರಿಗೆ ಛಾಪು ಮೂಡಿಸುವಂತಹ ಮಾತು, ಅಭಿನಯಾವಕಾಶ ಲಭಿಸಿದೆ. ಸಂಯುಕ್ತಾ ಹೊರನಾಡು, ಗೋಪಾಲಕೃಷ್ಣ ದೇಶಪಾಂಡೆ ಅವರದ್ದೂ ಹದವರಿತ ಅಭಿನಯ. ಬಾಲಕಿಯ ಪಾತ್ರದಲ್ಲಿ ಸ್ನಿಗ್ಧ ಅಭಿನಯ ಹೆಚ್ಚು ಸಹಜವಾಗಿದೆ. ಪ್ರವೀಣ್ ಶ್ರಿಯಾನ್ ಛಾಯಾಚಿತ್ರಗ್ರಹಣ, ಮಿದುನ್ ಮುಕುಂದನ್ ಹಿನ್ನೆಲೆ ಸಂಗೀತ ದೃಶ್ಯತೀವ್ರತೆಯನ್ನು ಹೆಚ್ಚು ಮಾಡಿವೆ.

ರಾಜ್ ಶೆಟ್ಟಿ ಚಿತ್ರಕಥಾ ಬರವಣಿಗೆಯಲ್ಲಿ ಕಸುಬುದಾರಿಕೆಯೇನೋ ಇದೆ. ಆದರೆ, ಕಥಾವಸ್ತುವಿನ ಔಚಿತ್ಯದ ಅವಗಣನೆ, ಕೇಂದ್ರ ಪಾತ್ರದ ಮನೋಭೂಮಿಕೆಯನ್ನೇ ಆಗೀಗ ಹದ ತಪ್ಪುವಂತೆ ಮಾಡಿರುವುದು ಸಿನಿಮಾ ಒಟ್ಟಾರೆಯಾಗಿ ಏನನ್ನು ಹೇಳಲು ಹೊರಟಿದೆ ಎನ್ನುವುದನ್ನೇ ಮರೆಮಾಡಿಬಿಡುತ್ತದೆ. ಚೆಲ್ಲಿದ ರಕ್ತ ಮನಕ್ಕೆ ಸಿಡಿದು, ಕಣ್ಣೀರು ಕಾಣಿಸದಾಗುತ್ತದೆ.

ವಿಶಾಖ ಎನ್.

ಪದಬಂಧ 5422

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವಾಗ್ದೇವಿಯ ಇನ್ನೊಂದು ಹೆಸರು (4)
3. ಅಂತರಂಗವನ್ನು ನಿಯಾಮಿಸತಕ್ಕ ಪರಮಾತ್ಮ (4)
4.ಮಿಡಿ ಧರಿಸಿದವಳ ಸ್ಪಂದನ! (3)
5.ವರ ಪಡೆದುಕೊಂಡಿರುವ ಬೇಡ (4)
7.ಬೆಳ್ಳಿ ಇಲ್ಲಿದೆ (3)
9. ಕಾನೂನು ಬಲ್ಲವನು ನೋಡುತ್ತಿರುವ ಕಾಡು (3)
10.ಬಲೆ ಬೀಸುತ್ತಿರುವ ಬಲಹೀನೆ! (3)
11.ಮಗನಿಗೆ ಇದು ತುಂಬಾ ಸಲೀಸು (3)
13.ಅತ್ಯಂತ ಚಲುವಾದುದು ಮರದಲ್ಲಿದೆ (4)
15. ರುಮಾಲನ್ನು ಧರಿಸಿದವನು ತಂದು ಕೊಟ್ಟ ಹೂವು (3)
16. ಮಾತುಕತೆಯಾಡುವಾಗ ಬಂದಿರುವ ಅಮಲು (4)
17. ಕಣದಲ್ಲಿ ಹಾಕಿರುವ ಲಗಾಮು (4)

ಮೇಲಿಂದ ಕೆಳಕ್ಕೆ

1.ವಸತಿಯ ಹತ್ತಿರ ಕಾಣಿಸುತ್ತಿರುವ ಮಂತ್ರಿ (3)
2.ತೀರದ ಹತ್ತಿರ ತೋರಿಸಿದ ಅಜ್ಞಾನ (3)
3. ಅಂತರಂಗದಲ್ಲಿರುವ ವ್ಯತ್ಯಾಸ ಗೊತ್ತಾಯಿತೇ? (3)
6.ಈ ರೀತಿ ಕೋಮಲವಾಗಿರು (5)
8.ಶೀರ್ಷಿಕೆಯನ್ನು ಹೀಗೆ ಕೊಡಿ (5)
12.ಮತ್ತೆ ಮತ್ತೆ ತೋರುತ್ತಿರುವ ಪ್ರೀತಿ (3)
13.ಕರುವಿಗೆ ತೋರಿಸುತ್ತಿರುವ ದಯೆ (3)
14.ಮರದ ಹತ್ತಿರ ಕಾಯುತ್ತಿರುವ ನಲ್ಲ (3)



5421ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಬಳಪ 3.ಬಸದಿ 5.ಲವಲವಿಕೆ 7.ರತಿ 9.ತೀರ 10.ಪಿಕ 12.ನರ 14.ತಲವಿನ್ಯಾಸ 16.ಹರಕೆ 17.ನಯನ

ಮೇಲಿಂದ ಕೆಳಕ್ಕೆ: 1.ಬಡಿವಾರ 2.ಪತ್ತಲ 3.ಬಯಕೆ 4.ದಿನಕರ 6.ಲಕ್ಷ್ಯ 8.ತಿರುಕ 9.ತೀರ್ಮಾನ 10. ಪಿತಾಮಹ 11.ಭವಿ 13.ರಸಾಯನ 14.ತಡಿಕೆ 15.ಸನ್ಮಾನ

ಸುಡೊಕು 5808

5			8		1	9		2
	8						3	
3		1	2		9		5	6
	1	7			8	3		
				2				4
8		3	9				6	
1			7		2	4		3
		8		4			1	
	3		1		5		7	

5807 ಸುಡೊಕು

4	9	6	3	7	8	5	2	1
8	5	3	2	1	9	4	7	6
1	7	2	4	6	5	3	9	8
6	1	9	7	2	3	8	4	5
2	8	7	5	4	6	9	1	3
3	4	5	8	9	1	2	6	7
5	6	4	9	3	7	1	8	2
7	2	8	1	5	4	6	3	9
9	3	1	6	8	2	7	5	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಆಗಸ್ಟ್ 26, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ದಶಮಿ ಗಂ. 24-09 ನಕ್ಷತ್ರ: ಜ್ಯೇಷ್ಠ ಗಂ. 08-38 ಯೋಗ: ಗಂ. 16-26 ಕರಣ: ತೈತಿಲ ಗಂ. 13-11, ಸಿಂಹ ಮಾಸದ 09 ನೇ ದಿನ, ಮಳೆನಕ್ಷತ್ರ: ಮಘಾ 3. ರಾಹುಕಾಲ : ಬೆಳಗ್ಗೆ 09-00 – 10-30 ಸೂರ್ಯೋದಯ : 06-22 ಸೂರ್ಯಾಸ್ತ : 06-42, ಮುಸ್ಲಿಂ ದಿನಾಂಕ : 09 ಸಫರ್ ಅದೃಷ್ಟ ಸಂಖ್ಯೆ : 5, 2

ಮೇಷ: ಸಂದರ್ಶನಕಾರರಿಗೆ ಪ್ರಭಾವಿ ವ್ಯಕ್ತಿಗಳನ್ನು ಸಂದರ್ಶಿಸಲು ಒಂದು ಅವಕಾಶ ಸಿಗುವುದು. ಕೌಟುಂಬಿಕ ಅಭಿವೃದ್ಧಿಯಂಥ ವಿಷಯಗಳಿಂದ ಬಹಳ ಖುಷಿ ಸಿಗುವುದು. ಯಂತ್ರೋಪಕರಣಗಳ ಮಾರಾಟದಿಂದ ಲಾಭ ಇರಲಿದೆ.

ವೃಷಭ: ಉದ್ವೇಗ ಹಾಗೂ ಕೆಲ ವೈಮನಸ್ಯಗಳು ತಂದೆಯ ತಿಳಿವಳಿಕೆ ನುಡಿಯಿಂದ ದೂರಾಗುವುದು. ಕುಟುಂಬಕ್ಕೆ ಸಂಬಂಧಪಟ್ಟ ಮಹತ್ವದ ವಿಷಯಗಳನ್ನು ಗಂಭೀರವಾಗಿ ಚಿಂತಿಸಿ ನಿರ್ಧರಿಸುವುದು ಉತ್ತಮ.

ಮಿಥುನ: ಅಕ್ಕ ಅಥವಾ ತಂಗಿಯ ಆರೋಗ್ಯದ ಬಗ್ಗೆ ಖರ್ಚು ಮಾಡಬೇಕಾದ ಸಂದರ್ಭ ಬರುವುದು. ಅಪರೂಪದ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಂದರ್ಭವು ಒದಗಿ ಬರಲಿದೆ. ರೈತರ ಫಸಲಿಗೆ ಉತ್ತಮ ಬೆಲೆ ಸಿಗಲಿದೆ

ಕರ್ಕಾಟಕ: ಸಾಹಸ ಪ್ರಿಯತೆಯಂತಹ ಮನೋಭಾವವು ಆವರಿಸಲಿದ್ದು ಚಾರಣ ಅಥವಾ ಸವಾಲಿನ ಕೆಲಸಗಳನ್ನು ಮಾಡುವಿರಿ. ಪರಿಸ್ಥಿತಿಗೆ ತಕ್ಕಂತೆ ಬದಲಾಗುವ ಮನೋಭಾವ ಉತ್ಕಟ ಸ್ನೇಹಕ್ಕೆ ಅಡ್ಡಿಮಾಡಲಿದೆ.

ಸಿಂಹ: ನಿಯೋಜಿತ ಕೆಲಸಗಳನ್ನು ಉತ್ಸಾಹದಿಂದ ಮಾಡಿ ಮುಗಿಸುವಿರಿ ಮತ್ತು ಇನ್ನೊಂದು ಹೊಸ ಕೆಲಸ ನಿಮಗಾಗಿ ಕಾದಿರಲಿದೆ. ಮುಂಜಾನೆ ಏಳುವಾಗಲೇ ಇಂದಿನ ದಿನಚರಿ ನೆನೆದ ನೀವು ಉತ್ಸಾಹಿಗಳಾಗಿರುತ್ತೀರಿ.

ಕನ್ಯಾ: ಕಾರ್ಯಸಾಧನೆಗಾಗಿ ರಾಜಕೀಯ ವ್ಯಕ್ತಿಗಳೊಂದಿಗೆ ಒಡನಾಟ ಬೆಳೆಸಿಕೊಳ್ಳಲೇಬೇಕಾದ ಸನ್ನಿವೇಶ ಎದುರಾಗುತ್ತದೆ. ಇತರ ಯೋಚನೆಗಳ ನಡುವೆ ಮಾಡುವ ಕೆಲಸದಲ್ಲಿ ಹೆಚ್ಚಿನ ಗಮನವಿಲ್ಲದಿದ್ದರೆ ದಂಡತೆತ್ತುವಂತಾಗಲಿದೆ.

ತುಲಾ: ಹಣಕಾಸು ನಿರ್ವಹಣೆಯ ವಿಚಾರದಲ್ಲಿ ಕುಶಲಮತಿಯನ್ನು ಹೊಂದಿರುವ ನೀವು ಇಂದು ಸಣ್ಣ-ಪುಟ್ಟ ತಪ್ಪುಗಳನ್ನು ಮಾಡುವ ಲಕ್ಷಣಗಳಿವೆ. ಹೂವು ಮತ್ತು ಹಣ್ಣಿನ ವ್ಯಾಪಾರಿಗಳಿಗೆ ಅಧಿಕ ಲಾಭ ಉಂಟಾಗುವುದು

ವೃಶ್ಚಿಕ: ಬಾಲ್ಯಸ್ನೇಹಿತರೊಂದಿಗೆ ಹೆಚ್ಚಿನ ಸಮಯ ಕಳೆಯುವ ಸಂದರ್ಭ ಒದಗಿಬರುವ ಸಾಧ್ಯತೆ ಇದೆ. ಗುತ್ತಿಗೆ ಆಧಾರಿತ ಉದ್ಯೋಗ ದೊರೆತು ಲಾಭ ಸಿಗಲಿದೆ. ಉನ್ನತ ಶಿಕ್ಷಣದ ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚುವುದು.

ಧನು: ಕೊಡು ಕೊಳ್ಳುವ ವ್ಯವಹಾರಗಳಲ್ಲಿ ಹೆಚ್ಚಿನ ಲಾಭವನ್ನು ಕಂಡು ಕೆಲಸಗಳನ್ನು ವೃದ್ಧಿಸಿಕೊಳ್ಳುವಿರಿ. ಸಂತಾನಅಪೇಕ್ಷಿಗಳಿಗೆ ಶುಭ ಸುದ್ದಿ ಕೇಳುವಂತಾಗಲಿದೆ. ಕಾರ್ಯಸಿದ್ಧಿಗೆ ಗಣೇಶನನ್ನು ಪೂಜಿಸಿ.

ಮಕರ: ಆಟಿಕೆಗಳ ಮಾರಾಟದವರಿಗೆ ಮತ್ತು ಉಡುಗೊರೆ ವಸ್ತುಗಳ ಮಾರಾಟಗಾರರಿಗೆ ಉತ್ತಮ ಮಾರಾಟ ಹಾಗೂ ಲಾಭ. ದಿನಚರಿಯಲ್ಲಿ ಸಂತೋಷ, ಉಲ್ಲಾಸ ಅತಿಯಾಗಿ ಇರುತ್ತದೆ.

ಕುಂಭ: ಇನ್ನೊಬ್ಬರಿಗೆ ಸಹಾಯ ಮಾಡುವ ನಿಮ್ಮ ನಡವಳಿಕೆಯು ಅಭಿವೃದ್ಧಿಗೆ ರಕ್ಷೆಯಾಗಿ ಇರುತ್ತದೆ. ಜೀವನ ಸಂಗಾತಿಯ ಆಯ್ಕೆ ವಿಚಾರದಲ್ಲಿ ಹಿರಿಯರ ಮಾತಿನತ್ತ ಗಮನ ಕೊಡಿ. ಹಳೆಯ ಮಿತ್ರನೊಬ್ಬನ ಭೇಟಿ ಮುದ ತರುವುದು.

ಮೀನ: ಕೃಷಿಗೆ ಸಂಬಂಧಿಸಿದ ಯಂತ್ರಗಳ ಖರೀದಿಯಿಂದ ಅನುಕೂಲಕರ ವಾತಾವರಣ ಅನುಭವಕ್ಕೆ ಬರಲಿದೆ. ದಂತ ವೈದ್ಯರಿಗೆ ಲಾಭದಾಯಕ ದಿನ. ಅನಾರೋಗ್ಯ ಉದ್ಯೋಗದಲ್ಲಿ ಹಿನ್ನಡೆಯಾಗುವಂತೆ ಮಾಡುವುದು.

ಮೇಲೆದ್ದ ಜೆಎಫ್‌ಎಸ್‌ಎಲ್ ಷೇರುಮೌಲ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನಿಂದ ಪ್ರತ್ಯೇಕಗೊಂಡು, ಷೇರುಪೇಟೆಯಲ್ಲಿ ವಹಿವಾಟು ಆರಂಭಿಸಿರುವ ಜಿಯೊ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್‌ನ (ಜೆಎಫ್‌ಎಸ್‌ಎಲ್) ಷೇರುಮೌಲ್ಯವು ಶುಕ್ರವಾರದ ವಹಿವಾಟಿನಲ್ಲಿ ಚೇತರಿಕೆ ಕಂಡಿದೆ.

ಈ ಕಂಪನಿ ಷೇರುಗಳು ಸೋಮವಾರದಿಂದ ಷೇರುಪೇಟೆಯಲ್ಲಿ ವಹಿವಾಟು ಆರಂಭಿಸಿದ್ದವು. ಅಂದಿನಿಂದಲೂ ಮೌಲ್ಯವು ಕುಸಿಯುತ್ತಿತ್ತು. ಶುಕ್ರವಾರದ ವಹಿವಾಟಿನ ಅಂತ್ಯಕ್ಕೆ ರಾಷ್ಟ್ರೀಯ ಷೇರುಪೇಟೆಯಲ್ಲಿ ಇದರ ಷೇರುಮೌಲ್ಯವು ₹221.60ಕ್ಕೆ ತಲುಪಿದೆ. ಈಗ ಜೆಎಫ್‌ಎಸ್ ಮಾರುಕಟ್ಟೆ ಮೌಲ್ಯವು ₹1.34 ಲಕ್ಷ ಕೋಟಿ ಆಗಿದೆ.

‘ಜೆಎಫ್‌ಎಸ್‌ಎಲ್ ಷೇರುಗಳು ಪುಟಿದೇಳುವುದು ಖಚಿತವಾಗಿತ್ತು. ಆದರೆ ಅದು ಯಾವಾಗ ಎಂಬ ಪ್ರಶ್ನೆ ಮಾತ್ರವೇ ಇತ್ತು. ಶುಕ್ರವಾರ ಬೆಲೆ ಏರಿಕೆ ಕಂಡಿದೆ. ಕಂಪನಿಯು ಹಣಕಾಸು ಸೇವೆಗಳ ವಹಿವಾಟನ್ನು ಇನ್ನೂ ಶುರುಮಾಡಿಲ್ಲದ ಕಾರಣ, ಹೂಡಿಕೆದಾರರು ಒಳ್ಳೆಯ ಲಾಭ ಪಡೆದುಕೊಳ್ಳಬಲು ಕಾಯಬೇಕು’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಅವರು ಹೇಳಿದ್ದಾರೆ.

‘ಜೆಎಫ್‌ಎಸ್‌ಎಲ್ ಕಂಪನಿಯು ದೊಡ್ಡ ಉದ್ಯಮ ಸಮೂಹಕ್ಕೆ ಸೇರಿರುವುದು ಹಾಗೂ ಈ ಹಣಕಾಸು ಸೇವಾ ಕಂಪನಿಯು ಮುಂದೆ ಭಾರಿ ಪ್ರಮಾಣದಲ್ಲಿ ಬೆಳವಣಿಗೆ ಕಾಣುವ ಸಾಮರ್ಥ್ಯ ಹೊಂದಿರುವುದು ಧನಾತ್ಮಕ ಅಂಶಗಳು’ ಎಂದು ಅವರು ತಿಳಿಸಿದ್ದಾರೆ.

ರಿಲಯನ್ಸ್ ಇಂಡಸ್ಟ್ರೀಸ್‌ನಿಂದ ಪ್ರತ್ಯೇಕಗೊಂಡು ಷೇರುಪೇಟೆಯಲ್ಲಿ ಸೋಮವಾರ ವಹಿವಾಟು ಆರಂಭಿಸುವಾಗ ಜೆಎಫ್‌ಎಸ್‌ಎಲ್ ಷೇರುಮೌಲ್ಯವು ₹262 ಆಗಿತ್ತು. ಆ ಬೆಲೆಗೆ ಹೋಲಿಸಿದರೆ ಈಗ ಷೇರುಮೌಲ್ಯವು ಶೇ 15.61ರಷ್ಟು ಕಡಿಮೆ ಆಗಿದೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹333-580
ದ್ವಿತಳಿ (ಬಿ.ವಿ)	₹333-701

ವಿನಿಮಯ ದರ

ಡಾಲರ್	82.64
ಪೌಂಡ್	104.09
ಯುರೊ	89.19
ಯೆನ್ (100ಕ್ಕೆ)	56.42

₹4 ಲಕ್ಷ ಕೋಟಿ ಹೂಡಿಕೆ: ಇಂಡಿಯನ್ ಆಯಿಲ್

ನವದೆಹಲಿ (ಪಿಟಿಐ): ಇಂಡಿಯನ್ ಆಯಿಲ್ ಕಂಪನಿಯು ಇಂಧನ ಸಂಸ್ಕರಣೆ ಮತ್ತು ಪೆಟ್ರೋಕೆಮಿಕಲ್ ವಹಿವಾಟು ವಿಸ್ತರಣೆ ಹಾಗೂ ನವೀಕರಿಸಬಲ್ಲ ಇಂಧನ ಯೋಜನೆಗಳಿಗಾಗಿ ಈ ದಶಕದಲ್ಲಿ ₹4 ಲಕ್ಷ ಕೋಟಿ ಹೂಡಿಕೆ ಮಾಡಲು ಮುಂದಾಗಿದೆ ಎಂದು ಕಂಪನಿಯ ಅಧ್ಯಕ್ಷ ಶ್ರೀಕಾಂತ್ ಮಾಧವ್ ವೈದ್ಯ ಶುಕ್ರವಾರ ತಿಳಿಸಿದ್ದಾರೆ.

ಇಂಧನ ಸಂಸ್ಕರಣೆ ಸಾಮರ್ಥ್ಯ ಹೆಚ್ಚಿಸಲು ಮತ್ತು ಕಚ್ಚಾ ತೈಲವನ್ನು ಇಂಧನವನ್ನಾಗಿ ಪರಿವರ್ತಿಸುವ ವಹಿವಾಟಿನ ವಿಸ್ತರಣೆಗಾಗಿ ₹1 ಲಕ್ಷ ಕೋಟಿ ಹೂಡಿಕೆ ಮಾಡಲು ಕಂಪನಿ ಉದ್ದೇಶಿಸಿದೆ. ಇಂಗಾಲ ಉಗುಳುವುದನ್ನು ಶೂನ್ಯ ಮಟ್ಟಕ್ಕೆ ತಗ್ಗಿಸುವ ಯೋಜನೆಗಳಿಗೆ ₹2.4 ಲಕ್ಷ ಕೋಟಿ ಹಾಗೂ ₹60 ಸಾವಿರ ಕೋಟಿಯನ್ನು ಒಡಿಶಾದಲ್ಲಿ ಪೆಟ್ರೋಕೆಮಿಕಲ್ ಘಟಕ ಸ್ಥಾಪಿಸಲು ತೊಡಗಿಸಲು ಕಂಪನಿಯು ಯೋಜನೆ ರೂಪಿಸಿದೆ.

ವೇಗವಾಗಿ ಬೆಳವಣಿಗೆ ಕಾಣುತ್ತಿರುವ ಆರ್ಥಿಕತೆಯ ಇಂಧನದ ಅಗತ್ಯಗಳನ್ನು ಈಡೇರಿಸಲು ಈ ಹೂಡಿಕೆಗಳು ನೆರವಾಗಲಿವೆ. ಅಲ್ಲದೆ, ನವೀಕರಿಸಬಲ್ಲ ಇಂಧನ ಬಳಕೆಯ ಹಾದಿಯಲ್ಲಿ ಸಾಗಲು ಸಹ ಅನುಕೂಲ ಮಾಡಿಕೊಡಲಿವೆ ಎಂದು ಶ್ರೀಕಾಂತ್ ಅವರು ಕಂಪನಿಯ ವಾರ್ಷಿಕ ಸಭೆಯಲ್ಲಿ ತಿಳಿಸಿದ್ದಾರೆ.

ದೇಶದ ಇಂಧನ ಮಾರುಕಟ್ಟೆಯಲ್ಲಿ ಶೇ 40ಕ್ಕೂ ಹೆಚ್ಚಿನ ಪಾಲನ್ನು ಇಂಡಿಯನ್ ಆಯಿಲ್ ಹೊಂದಿದೆ.

ವಿದ್ಯುತ್ ಚಾಲಿತ ವಾಹನಗಳಿಗೆ ಬ್ಯಾಟರಿ ಸ್ವಾಪ್ ಮಾಡಲು ಅನುಕೂಲ ಆಗುವಂತೆ ಇ.ವಿ. ಚಾರ್ಜಿಂಗ್ ಜಾಲ ಮತ್ತು ಮೂಲಸೌಕರ್ಯ ರೂಪಿಸುವುದು ಸಹ ಹೂಡಿಕೆ ಯೋಜನೆಯ ಭಾಗವಾಗಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com or Scan QR code to access booking form

ಸವಿನೆನಪು

ಆರ್. ಸ್ಮಿತಾರೆಡ್ಡಿ (ಚಿನ್ನು) B.E.,
06-05-1981 - 26-8-2007

ಎಷ್ಟೇ ವರುಷಗಳು ಕಳೆದರೂ ನೋವು ನಿರಂತರ... ಜೀವಿಸಲು ನಿನ್ನ ನೆನಪುಗಳೇ ನಮಗೆ ಅಜರಾಮರ

ತಂದೆ, ತಾಯಿ, ಮಗ–ಸ್ವಯಂರೆಡ್ಡಿ ಹಾಗೂ ಕುಟುಂಬದವರು

11 ನೇ ವರ್ಷದ ಪುಣ್ಯಸ್ಮರಣೆ

ಡಾ|| ಹೆಚ್. ಪುಟ್ಟದಾಸ್
ಮಾಜಿ ಶಾಸಕರು

“ನಿಮ್ಮ ಆದರ್ಶ ಜೀವನವೇ ಇಂದಿಗೂ ನಮ್ಮೆಲ್ಲರ ದಾರಿದೀಪ”
– ಕುಟುಂಬ ವರ್ಗ

LOOKING TO BUILD, BUY OR SELL A PROPERTY
Please refer Classifieds on Sunday

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,387
ಇಂದಿನ ಅಂತ್ಯ	19,266
▼	121
ದಿನದ ಕನಿಷ್ಠ	19,229

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹480
12 ಮೊಟ್ಟೆಗೆ	₹66
ಮೈಸೂರು	
100 ಮೊಟ್ಟೆಗೆ	₹482

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1810(1820)
ಸೋಯಾ (ರಿಫೈಂಡ್)	₹930(935)
ಸೂರ್ಯಕಾಂತಿ (ರಿಫೈಂಡ್)	₹945(945)
ಪಾಮೋಲಿನ್	₹850(850)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹141.50
ಆರ್‌ಎಸ್‌ಎಸ್-5	₹134
ಗುಡ್ ಲಾಟ್	₹120

₹1,653 ಕೋಟಿ ಸಂಗ್ರಹಿಸಿದ ಜೆಪ್ಟೊ

ನವದೆಹಲಿ (ಪಿಟಿಐ/ರಾಯಿಟರ್ಸ್): ದಿನಸಿ ವಸ್ತುಗಳನ್ನು ಪೂರೈಸುವ ಆನ್‌ಲೈನ್ ವೇದಿಕೆ ‘ಜೆಪ್ಟೊ’ ₹1,653 ಕೋಟಿ ಬಂಡವಾಳ ಸಂಗ್ರಹ ಮಾಡಿರುವುದಾಗಿ ಶುಕ್ರವಾರ ತಿಳಿಸಿದೆ.

ಒಂದು ವರ್ಷದ ಈಚೆಗೆ ಯೂನಿಕಾರ್ನ್ ಆದ (₹ 7,981 ಕೋಟಿಗಿಂತ ಹೆಚ್ಚಿನ ಮೌಲ್ಯದ ಕಂಪನಿ) ದೇಶದ ಮೊದಲ ನವೋದ್ಯಮ ಆಗಿ ಕಂಪನಿ ಹೊರಹೊಮ್ಮಿದೆ. 2025ರ ವೇಳೆಗೆ ಐಪಿಒ ಮೂಲಕ ಕಂಪನಿಯು ಷೇರುಪೇಟೆ ಪ್ರವೇಶಿಸಲಿದೆ ಎಂದು ಸ್ಥಾಪಕರಾದ ಆದಿತ್ ಪಲಿಚಾ ಮತ್ತು ಕೈವಲ್ಯ ವೊಹ್ರಾ ತಿಳಿಸಿದ್ದಾರೆ.

ಹಾಲಿ ಹೂಡಿಕೆ ಕಂಪನಿಗಳಾದ ನೆಕ್ಸಸ್ ವೆಂಚರ್ ಪಾರ್ಟ್ನರ್ಸ್, ಗ್ಲೇಡ್ ಬ್ರೂಕ್ ಕ್ಯಾಪಿಟಲ್ ಅಲ್ಲದೆ ಹೊಸ ಕಂಪನಿಗಳಾದ ಗುಡ್‌ವಾಟರ್ ಕ್ಯಾಪಿಟಲ್, ಸ್ಟೆಪ್‌ಸ್ಟೋನ್ ಸಮೂಹದಿಂದ ಬಂಡವಾಳ ಸಂಗ್ರಹಿಸಿರುವುದಾಗಿ ಹೇಳಿದೆ.

ಜೂನ್ ತ್ರೈಮಾಸಿಕದಲ್ಲಿ ಉತ್ತಮ ಆರ್ಥಿಕ ಬೆಳವಣಿಗೆ: ನಿರ್ಮಲಾ ವಿಶ್ವಾಸ

‘ಹಣದುಬ್ಬರ ನಿಯಂತ್ರಣಕ್ಕೆ ಆದ್ಯತೆ’

ನವದೆಹಲಿ (ಪಿಟಿಐ): ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ನಿಯಂತ್ರಣಕ್ಕೆ ತರುವುದು ಕೇಂದ್ರ ಸರ್ಕಾರದ ಆದ್ಯತೆಯ ಕೆಲಸವಾಗಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ಜೂನ್ ತ್ರೈಮಾಸಿಕದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ಪ್ರಮಾಣವು ಉತ್ತಮ ಮಟ್ಟದಲ್ಲಿ ಇರುತ್ತದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

ಭಾರತೀಯ ಕೈಗಾರಿಕಾ ಮಹಾಸಂಘ (ಸಿಐಐ) ಆಯೋಜಿಸಿರುವ ಬಿ20 ಶೃಂಗದಲ್ಲಿ ಅವರು ಮಾತನಾಡಿದ್ದಾರೆ. ‘ದೇಶವನ್ನು ಆತ್ಮನಿರ್ಭರ ಆಗಿಸುವುದು ಕೂಡ ಸರ್ಕಾರದ ಆದ್ಯತೆಗಳಲ್ಲಿ ಒಂದು.

ಮುಖ್ಯಾಂಶಗಳು

- ಹಣದುಬ್ಬರ ನಿಯಂತ್ರಣಕ್ಕೆ ರೆಪೊ ಹೆಚ್ಚಳವೊಂದೇ ಪರಿಹಾರವಲ್ಲ: ನಿರ್ಮಲಾ
- ಆತ್ಮನಿರ್ಭರ ಭಾರತ ಆದ್ಯತೆ, ಅಗತ್ಯ ವಸ್ತುಗಳ ಆಮದು ಅಬಾಧಿತ

ಆದರೆ ಅಗತ್ಯ ಉತ್ಪನ್ನಗಳ ಆಮದು ನಿಲ್ಲುವುದಿಲ್ಲ’ ಎಂದು ಹೇಳಿದ್ದಾರೆ.

ಜೂನ್ ತ್ರೈಮಾಸಿಕದ ದೇಶದ ಜಿಡಿಪಿ ಬೆಳವಣಿಗೆ ದರಕ್ಕೆ ಸಂಬಂಧಿಸಿದ ಅಂಕಿ–ಅಂಶಗಳನ್ನು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಆಗಸ್ಟ್ 31ರಂದು ಬಿಡುಗಡೆ ಮಾಡಲಿದೆ. ಜುಲೈ ತಿಂಗಳಲ್ಲಿ ತರಕಾರಿಗಳ ಬೆಲೆ ಏರಿಕೆಯ ಪರಿಣಾಮವಾಗಿ ಚಿಲ್ಲರೆ ಹಣದುಬ್ಬರ ಪ್ರಮಾಣವು 15 ತಿಂಗಳ ಗರಿಷ್ಠ ಮಟ್ಟವನ್ನು ತಲುಪಿದೆ.

ನಿರ್ಮಲಾ

ಆರ್ಥಿಕ ಬೆಳವಣಿಗೆಯನ್ನು ಕಾಯ್ದುಕೊಳ್ಳಲು ಮುಖ್ಯವಾಗಿರುವ ಕ್ರಮ, ಹಣದುಬ್ಬರದ ನಿಯಂತ್ರಣ. ಹಣದುಬ್ಬರವು ಹೆಚ್ಚಿನ ಮಟ್ಟದಲ್ಲಿ ಉಳಿದುಕೊಂಡರೆ ಬೇಡಿಕೆಯ ಮೇಲೆ ಪೆಟ್ಟು ಬೀಳುತ್ತದೆ ಎಂದು ನಿರ್ಮಲಾ ಹೇಳಿದ್ದಾರೆ. ‘ಬಡ್ಡಿ ದರವು ಹೆಚ್ಚಿನ ಮಟ್ಟದಲ್ಲಿ ಉಳಿದುಕೊಂಡರೆ ಆರ್ಥಿಕ ಚೇತರಿಕೆಗೆ ಅಡ್ಡಿ ಉಂಟಾಗುತ್ತದೆ. ಹಣದುಬ್ಬರವನ್ನು ನಿಯಂತ್ರಿಸಲು ರೆಪೊ ದರ ಹೆಚ್ಚಳವೊಂದೇ ಮಾರ್ಗ ಎಂಬ ನಿಲುವು ಸಮಸ್ಯೆಗಳನ್ನೂ ತಂದಿಡುತ್ತದೆ’ ಎಂದು ಅವರು ಹೇಳಿದ್ದಾರೆ.

‘ಹಣದುಬ್ಬರ ನಿಯಂತ್ರಣಕ್ಕೆ ರೆಪೊ ದರ ಏರಿಕೆಯನ್ನು ಮಾತ್ರ ನೆಚ್ಚಿಕೊಂಡು, ಪೂರೈಕೆ ವ್ಯವಸ್ಥೆಯ ಸಮಸ್ಯೆಗಳನ್ನು ಪರಿಹರಿಸದೆ ಇದ್ದರೆ ಪೂರ್ಣ ಪರಿಹಾರ ಸಿಗುವುದಿಲ್ಲ’ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಹಣದುಬ್ಬರ ಏರಿಕೆಯನ್ನು ನಿಯಂತ್ರಿಸುವ ಉದ್ದೇಶದಿಂದ ಆರ್‌ಬಿಐ ಸೇರಿದಂತೆ ಜಗತ್ತಿನ ಹಲವು ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರ ಏರಿಕೆಯ ಮೊರೆ ಹೋಗಿವೆ.

ಶಂಕೆಗೆ ಆಸ್ಪದವಾದ ಪ್ರಿಗೋಷಿನ್ ಸಾವು

ಅಪಘಾತದಲ್ಲಿ ತನ್ನ ಪಾತ್ರ ತಳ್ಳಿಹಾಕಿದ ರಷ್ಯಾ ● ಇದ್ದರೆ ಆಶ್ಚರ್ಯವೇನೂ ಇಲ್ಲ –ಜೋ ಬೈಡನ್

ಮಾಸ್ಕೊ (ಎ.ಪಿ): ರಷ್ಯಾದ ಖಾಸಗಿ ಸೇನಾ ಪಡೆ ‘ವ್ಯಾಗ್ನರ್’ ಗುಂಪಿನ ನಾಯಕ ಯೆವ್ಗೆನಿ ಪ್ರಿಗೋಷಿನ್ ಅವರು ವಿಮಾನ ಅಪಘಾತದಲ್ಲಿ ಮೃತಪಟ್ಟಿರುವ ಘಟನೆ ಹಲವು ಶಂಕೆಗಳಿಗೆ ಆಸ್ಪದವಾಗಿದೆ. ಈ ಕೃತ್ಯದ ತನ್ನ ಪಾತ್ರವಿದೆ ಎಂಬ ವದಂತಿಯನ್ನು ರಷ್ಯಾ ಬಲವಾಗಿ ನಿರಾಕರಿಸಿದೆ. ಆದರೆ, ಬುಧವಾರ ಸಂಭವಿಸಿದ್ದ ವಿಮಾನ ಅಪಘಾತಕ್ಕೆ ಕಾರಣವಾಗಿರುವ ಅಂಶಗಳ ಕುರಿತಂತೆ ತನಿಖೆಯು ಪ್ರಗತಿಯಲ್ಲಿದೆ ಎಂದೂ ರಷ್ಯಾ ಸರ್ಕಾರ ತಿಳಿಸಿದೆ.

ಅಪಘಾತದ ಹಿಂದೆ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಪಾತ್ರವಿದೆ ಎಂಬ ಶಂಕೆಯು ವ್ಯಾಪಕವಾಗಿದೆ. ‘ಅದು ಅಪಘಾತವಲ್ಲ, ಹತ್ಯೆ’ ಎಂದೂ ವ್ಯಾಖ್ಯಾನಿಸಲಾಗುತ್ತಿದೆ. ಆದರೆ, ರಷ್ಯಾದ ಆಡಳಿತ ಇದುವರೆಗೂ ಪ್ರಿಗೋಷಿನ್ ಅವರ ಸಾವನ್ನು ದೃಢಪಡಿಸಿಲ್ಲ. ‘ಪ್ರಿಗೋಷಿನ್ ಮೃತಪಟ್ಟಿರಬಹುದು ಎಂದು ಭಾವಿಸಲಾಗಿದೆ. ಆದರೆ, ಅವರು ವಿಶೇಷ ಭದ್ರತಾ ವ್ಯವಸ್ಥೆ ಹೊಂದಿದ್ದರು ಎಂಬುದನ್ನು ಗಮನಿಸಬೇಕು’ ಎಂದು ಪುಟಿನ್ ಅವರ ವಕ್ತಾರ ಡಿಮಿಟ್ರಿ ಪೆಸ್ಕೊವ್ ಪ್ರತಿಕ್ರಿಯಿಸಿದ್ದಾರೆ.

ಪ್ರಿಗೋಷಿನ್ ನೇತೃತ್ವದ ವ್ಯಾಗ್ನರ್ ಯೋಧರ ಹೋರಾಟವು ಉಕ್ರೇನ್, ಆಫ್ರಿಕಾ ಮತ್ತು ಸಿರಿಯಾದಲ್ಲಿ ತೀವ್ರ ಆತಂಕ ಮೂಡಿಸಿತ್ತು. ರಷ್ಯಾದ ನಾಯಕ ಪುಟಿನ್ ಅವರ 23 ವರ್ಷದ ಆಡಳಿತಕ್ಕೆ ಸವಾಲೊಡ್ಡುವಂತೆ, ಕಳೆದ ಜೂನ್ ತಿಂಗಳಲ್ಲಿ ವ್ಯಾಗ್ನರ್ ಗುಂಪು ಅಲ್ಪಾವಧಿಗೆ ದಂಗೆ ಎದ್ದಿತ್ತು.



ರಷ್ಯಾದ ಟ್ವೆರ್ ವಲಯದ ಕುರ್ಝೆಂಕಿನೊ ಗ್ರಾಮದ ಬಳಿ ವಿಮಾನ ಅಪಘಾತಕ್ಕೀಡಾದ ಸ್ಥಳದಿಂದ ರಕ್ಷಣಾ ಸಿಬ್ಬಂದಿ ಶವವನ್ನು ಒಯ್ಯುತ್ತಿರುವುದು –ಎಪಿ ಚಿತ್ರ

> ಉಕ್ರೇನ್ ವಿರುದ್ಧದ ಹೋರಾಟದಲ್ಲಿ ವ್ಯಾಗ್ನರ್ ಗುಂಪಿನ ಕೊಡುಗೆ ಗಣನೀಯವಾಗಿದೆ. ನಾವು ಅದನ್ನು ನೆನಪಿಡುತ್ತೇವೆ. ಅದನ್ನು ಎಂದಿಗೂ ಮರೆಯುವುದಿಲ್ಲ
> **ವ್ಲಾಡಿಮಿರ್ ಪುಟಿನ್,** ರಷ್ಯಾ ಅಧ್ಯಕ್ಷ

> ವಾಸ್ತವ ಏನೆಂದು ನನಗೆ ತಿಳಿದಿಲ್ಲ. ಆದರೆ, ಇದರ ಹಿಂದೆ ಪುಟಿನ್ ಅವರ ಪಾತ್ರ ಇರಬಹುದು ಎಂಬ ಅನುಮಾನವಿದೆ. ಇದ್ದರೆ ಅದು ನನಗೆ ಆಶ್ಚರ್ಯ ಮೂಡಿಸುವುದಿಲ್ಲ
> **ಜೋ ಬೈಡನ್,** ಅಮೆರಿಕ ಅಧ್ಯಕ್ಷ

ಅಮೆರಿಕದ ಗುಪ್ತದಳದ ಪ್ರಾಥಮಿಕ ಅಂದಾಜಿನ ಪ್ರಕಾರ, ಪ್ರಿಗೋಷಿನ್ ಅವರು ಪ್ರಯಾಣಿಸುತ್ತಿದ್ದ ವಿಮಾನವನ್ನು ಉದ್ದೇಶಪೂರ್ವಕ ಸ್ಫೋಟದಿಂದ ನೆಲಕ್ಕುರುಳಿಸಲಾಗಿದೆ. ‘ಬಹುಶಃ ಪ್ರಿಗೋಷಿನ್ ಅವರನ್ನೇ ಗುರಿಯಾಗಿಸಿ ಇದನ್ನು ನಡೆಸಲಾಗಿದೆ. ಟೀಕಾಕಾರರ ಸದ್ದಡಗಿಸುವ ಧೋರಣೆ ಕುರಿತಂತೆ ಪುಟಿನ್ ಅವರಿಗೆ ದೊಡ್ಡ ಇತಿಹಾಸವೇ ಇದೆ’ ಎಂದು ಗುಪ್ತದಳದ ಅಧಿಕಾರಿಯೊಬ್ಬರು ಹೇಳಿದರು.

‘ಪ್ರಿಗೋಷಿನ್ ದುರಂತ ಅಂತ್ಯ ಕುರಿತು ಸಾಕಷ್ಟು ಊಹಾಪೋಹಗಳು ಹರಿದಾಡುತ್ತಿವೆ. ಆದರೆ, ಈ ಎಲ್ಲವೂ ಸುಳ್ಳು. ಆದರೆ, ವ್ಯಾಗ್ನರ್ ಗುಂಪಿನ ಭವಿಷ್ಯ ಕುರಿತಂತೆ ನಾನು ಈ ಹಂತದಲ್ಲಿ ಏ ಹೇಳುವುದಿಲ್ಲ. ನನಗೆ ಗೊತ್ತಿಲ್ಲ’ ಎಂದು ಪೆಸ್ಕೊವ್ ಪ್ರತಿಕ್ರಿಯಿಸಿದರು.

ಪ್ರಿಗೋಷಿನ್ ಸಾವು ಕುರಿತು ಅಧಿಕೃತ ಮಾಹಿತಿ ಬಂದಿದೆಯೇ ಎಂಬ ಪ್ರಶ್ನೆಗೆ, ‘ಸದ್ಯಕ್ಕೆ ಅಗತ್ಯವಿರುವ ಎಲ್ಲ ಪ್ರಯೋಗಾಲಯ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಸ್ಪಷ್ಟತೆ ದೊರೆತಂತೆ ಅಧಿಕೃತವಾಗಿ ಮಾಹಿತಿ ಬಿಡುಗಡೆ ಮಾಡಲಾಗುತ್ತದೆ’ ಎಂದು ತಿಳಿಸಿದರು.

ಯೆವ್ಗೆನಿ ಪ್ರಿಗೋಷಿನ್

ಈ ಮಧ್ಯೆ, ಬ್ರಿಟನ್‌ನ ರಕ್ಷಣಾ ಸಚಿವಾಲಯವು ಪ್ರಿಗೋಷಿನ್ ಅವರ ಸಾವಿನ ಹಿನ್ನೆಲೆಯಲ್ಲಿ ವ್ಯಾಗ್ನರ್ ಗುಂಪು ಅಸ್ತಿತ್ವ ಕಳೆದುಕೊಳ್ಳಬಹುದು ಎಂದು ಅಭಿಪ್ರಾಯಪಟ್ಟಿದೆ. ‘ಪ್ರಿಗೋಷಿನ್ ಅವರ ಧೈರ್ಯ, ಗುರಿ ಸಾಧಿಸುವ ಛಲಕ್ಕೆ ಸರಿಸಾಟಿಯಾಗುವ ಉತ್ತರಾಧಿಕಾರಿ ಸಿಗುವುದು ಕಷ್ಟ’ ಹೇಳಿಕೆ ನೀಡಿದೆ.

ಉಕ್ರೇನ್ ವಿರುದ್ಧದ ಯುದ್ಧದಲ್ಲಿ ರಷ್ಯಾದ ಪಡೆಯಲ್ಲಿ ವ್ಯಾಗ್ನರ್ ಗುಂಪಿನ ಪಾತ್ರ ಮಹತ್ವದ್ದಾಗಿತ್ತು. ಮುಖ್ಯವಾಗಿ ಬಖ್ಮುಟ್‌ನಲ್ಲಿ ತಿಂಗಳು ಕಾಲ ನಡೆದ ಹೋರಾಟದಲ್ಲಿ ವ್ಯಾಗ್ನರ್ ಗುಂಪು ನಿರ್ಣಾಯಕ ಪಾತ್ರ ವಹಿಸಿತ್ತು.

‘ಅಪಘಾತ: ಪ್ರಿಗೋಷಿನ್ ಸೇರಿ 10 ಸಾವು’

ಮಾಸ್ಕೊ (ಎ.ಪಿ): ಯೆವ್ಗೆನಿ ಪ್ರಿಗೋಷಿನ್ ಪ್ರಯಾಣಿಸುತ್ತಿದ್ದ ಜೆಟ್ ವಿಮಾನ ಕಳೆದ ಬುಧವಾರ, ಮಾಸ್ಕೊ ನಗರದಿಂದ ಗಗನಕ್ಕೆ ಚಿಮ್ಮಿದ್ದ ಕೆಲಹೊತ್ತಿನಲ್ಲಿಯೇ ಅಪಘಾತಕ್ಕೆ ಗುರಿಯಾಗಿತ್ತು. ಪ್ರಿಗೋಷಿನ್ ಅವರಲ್ಲದೆ, ವ್ಯಾಗ್ನರ್ ಗುಂಪಿನ 6 ಸದಸ್ಯರು, ಮೂವರು ಸಿಬ್ಬಂದಿ ವಿಮಾನದಲ್ಲಿದ್ದರು ಎಂದು ರಷ್ಯಾದ ವಿಮಾನಯಾನ ಪ್ರಾಧಿಕಾರ ತಿಳಿಸಿದೆ.

‘ಅಪಘಾತ ಸ್ಥಳದಲ್ಲಿ 10 ಜನರ ಶವ ಪತ್ತೆಯಾಗಿವೆ. ಪ್ರಿಗೋಷಿನ್ ಮೃತಪಟ್ಟಿದ್ದಾರೆ’ ಎಂದು ವ್ಯಾಗ್ನರ್ ಗುಂಪಿನ ಮೂಲವನ್ನು ಉಲ್ಲೇಖಿಸಿ ರಷ್ಯಾದ ಮಾಧ್ಯಮಗಳು ವರದಿ ಮಾಡಿವೆ. ಸಾವಿನ ಬಗ್ಗೆ ಅಧಿಕೃತವಾಗಿ ದೃಢಪಡಿಸಿಲ್ಲ.

ವಿಮಾನ ಸೇಂಟ್ ಪೀಟರ್ಸ್‌ಬರ್ಗ್‌ಗೆ ತೆರಳುತ್ತಿತ್ತು ಎನ್ನಲಾಗಿದೆ. ರಷ್ಯಾ ಮಾಧ್ಯಮಗಳು ಅಪಘಾತದ ಸುದ್ದಿಗೆ ಹೆಚ್ಚು ಪ್ರಚಾರ ನೀಡಿಲ್ಲ.

ಮುಂಬೈ ಧಾರಣೆ

ಶೇಂಗಾ

25–8–2023

ಜಾವಾ 70/80(ಹೊಸ)	12600-12700
ಜಾವಾ 80/90(ಹೊಸ)	12500-12600
ದಪ್ಪ ಮಧ್ಯಪ್ರದೇಶ(ಹೊಸ)	13200-13300
ದಪ್ಪ ಗುಜರಾತ್(ಹೊಸ)	14300-14400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1820(1830)
ಒಂದು ವಾರದ ಡೆಲಿವರಿ	1815(1825)
ಸೋಯಾ ಕಚ್ಚಾ	872(875)
ಪಾಮ್ ವಾರದ ಡೆಲಿವರಿ	848(848)
ಸೂರ್ಯಕಾಂತಿ ಎಣ್ಣೆ ಕಚ್ಚಾ	870(870)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,400 (58,400)
ಬೆಳ್ಳಿ ಕೆ.ಜಿ 73,650 (73,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

‘ಜಿ20 ಶೃಂಗಸಭೆಗೆ ಪುಟಿನ್ ವ್ಯಕ್ತಿಗತ ಹಾಜರಿ ಇಲ್ಲ’

ಮಾಸ್ಕೊ (ಪಿಟಿಐ): ನವದೆಹಲಿಯಲ್ಲಿ ಸೆಪ್ಟೆಂಬರ್ ತಿಂಗಳು ನಡೆಯಲಿರುವ ಜಿ20 ಶೃಂಗಸಭೆಯಲ್ಲಿ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ವ್ಯಕ್ತಿಗತವಾಗಿ ಹಾಜರಾಗುವುದಿಲ್ಲ ಎಂದು ರಷ್ಯಾ ಸರ್ಕಾರ ಶುಕ್ರವಾರ ತಿಳಿಸಿದೆ.

ಉಕ್ರೇನ್‌ನಲ್ಲಿ ನಡೆಯುತ್ತಿರುವ ವಿಶೇಷ ಸೇನಾ ಕಾರ್ಯಾಚರಣೆಯತ್ತ ರಷ್ಯಾ ಪ್ರಸ್ತುತ ಗಮನ ಕೇಂದ್ರೀಕರಿಸಿದೆ. ಅಲ್ಲದೆ, ಬಿಡುವಿಲ್ಲದ ಕಾರ್ಯಕ್ರಮಗಳಿವೆ ಎಂದು ವ್ಯಕ್ತಿಗತ ಗೈರುಹಾಜರಿಗೆ ಕಾರಣ ನೀಡಿದೆ.

ಪುಟಿನ್ ಅವರ ಭಾಗವಹಿಸುವಿಕೆಯು ಯಾವ ಸ್ವರೂಪದಲ್ಲಿ ಇರಬೇಕು ಎಂಬುದನ್ನು ನಂತರ ತೀರ್ಮಾನಿಸಲಾಗುವುದು ಎಂದು ಪುಟಿನ್ ಅವರ ವಕ್ತಾರ ಡಿಮಿಟ್ರಿ ಪೆಸ್ಕೊವ್ ತಿಳಿಸಿದ್ದಾರೆ.

ಜಿ20 ಶೃಂಗಸಭೆಯು ಸೆ. 9 ರಿಂದ 10ರವರೆಗೆ ನವದೆಹಲಿಯಲ್ಲಿ ನಡೆಯಲಿದೆ. ಡಿಸೆಂಬರ್ 1, 2022ರಿಂದ ಜಿ20 ಶೃಂಗದ ಅಧ್ಯಕ್ಷ ಸ್ಥಾನದಲ್ಲಿರುವ ಭಾರತ ಈ ಸಭೆಯ ಆತಿಥ್ಯವನ್ನು ವಹಿಸಿಕೊಂಡಿದೆ.

ಗ್ರೀಕ್ ಅಧ್ಯಕ್ಷೆ, ಪ್ರಧಾನಿ ಜೊತೆಗೆ ಮೋದಿ ವಿಸ್ತೃತ ಚರ್ಚೆ

ಬಾಂಧವ್ಯ, ವಹಿವಾಟು ವೃದ್ಧಿಗೆ ಆದ್ಯತೆ

ಅಥೆನ್ಸ್ (ಪಿಟಿಐ): ಭಾರತ ಮತ್ತು ಗ್ರೀಕ್ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಬಾಂಧವ್ಯವನ್ನು ಇನ್ನಷ್ಟು ಬಲಪಡಿಸಲು ಹಾಗೂ 2030ರ ವೇಳೆಗೆ ವಾಣಿಜ್ಯ ವಹಿವಾಟು ಪ್ರಮಾಣವನ್ನು ದುಪ್ಪಟ್ಟುಗೊಳಿಸಲು ತೀರ್ಮಾನಿಸಲಾಗಿದೆ.

ಪ್ರಧಾನಿ ನರೇಂದ್ರ ಮೋದಿ ಮತ್ತು ಗ್ರೀಕ್ ಪ್ರಧಾನಿ ಕಿರಿಯಾಕೋಸ್ ಮಿಟ್ಸೋಟಾಕಿಸ್ ಅವರ ನಡುವೆ ಶುಕ್ರವಾರ ಇಲ್ಲಿ ನಡೆದ ದ್ವಿಪಕ್ಷೀಯ ಚರ್ಚೆಯಲ್ಲಿ ಈ ಕುರಿತು ತೀರ್ಮಾನಕ್ಕೆ ಬರಲಾಗಿದೆ.

ಬ್ರಿಕ್ಸ್ ಸಭೆಯ ಬಳಿಕ ದಕ್ಷಿಣ ಆಫ್ರಿಕಾದಿಂದ ಇಲ್ಲಿಗೆ ಆಗಮಿಸಿದ ಮೋದಿ ಅವರು ಪ್ರತ್ಯೇಕವಾಗಿ ಗ್ರೀಕ್ ಅಧ್ಯಕ್ಷೆ ಕಟೆರಿನ ಎನ್ ಸಕೆಲ್ಲಾರೊಪೌಲೌ ಮತ್ತು ಪ್ರಧಾನಿ ಅವರನ್ನು ಭೇಟಿಯಾಗಿ ಚರ್ಚಿಸಿದರು. ರಕ್ಷಣಾ ಕ್ಷೇತ್ರ, ಭದ್ರತೆ, ಮೂಲಸೌಕರ್ಯ, ಕೃಷಿ, ಶಿಕ್ಷಣ ಮತ್ತು ಹೊಸ ತಂತ್ರಜ್ಞಾನದ ಅನ್ವೇಷಣೆ ಕ್ಷೇತ್ರದಲ್ಲಿ ಪರಸ್ಪರ ಸಹಕಾರವನ್ನು ಬಲಪಡಿಸಲು ತೀರ್ಮಾನಿಸಲಾಗಿದೆ ಎಂದು ಮೋದಿ ಹೇಳಿದರು.

ಉಕ್ರೇನ್ ಬಿಕ್ಕಟ್ಟು ಬಗೆಹರಿಸಲು ಭಾರತ ಮತ್ತು ಗ್ರೀಕ್ ರಾಷ್ಟ್ರಗಳು ರಾಜತಾಂತ್ರಿಕ ಹಂತದ ಮಾತುಕತೆಗೆ ಬೆಂಬಲ ನೀಡಲಿವೆ ಎಂದು ಮೋದಿ ಹೇಳಿದರು. ಈ ಸಂದರ್ಭದಲ್ಲಿ ಗ್ರೀಕ್ ಪ್ರಧಾನಿ ಅವರು ಜೊತೆಗಿದ್ದು ಸಹಮತ ವ್ಯಕ್ತಪಡಿಸಿದರು.

ಪ್ರಧಾನಿ ನರೇಂದ್ರ ಮೋದಿ ಮತ್ತು ಗ್ರೀಕ್ ಪ್ರಧಾನಿ ಕಿರಿಯಾಕೋಸ್ ಮಿಟ್ಸೋಟಾಕಿಸ್ ಅವರು ಶುಕ್ರವಾರ ಅಥೆನ್ಸ್‌ನಲ್ಲಿ ಚರ್ಚೆ ನಡೆಸಿದರು –ಎಪಿ ಚಿತ್ರ

ಮಾತುಕತೆಗೆ ಸ್ಪಷ್ಟ ರೂಪನೀಡಲು ರಾಷ್ಟ್ರೀಯ ಭದ್ರತಾ ಸಲಹೆಗಾರರ ಹಂತದಲ್ಲಿ ಸಾಂಸ್ಥಿಕ ಚರ್ಚೆ ನಡೆಯಲಿದೆ ಎಂದು ಮೋದಿ ಹೇಳಿದರು. ಗ್ರೀಕ್ ಪ್ರಧಾನಿ ಇದಕ್ಕೆ, ವಿವಿಧ ಸವಾಲುಗಳನ್ನು ಎದುರಿಸಲು ಒಟ್ಟಿಗೆ ಮುನ್ನಡೆಯಲು ಸಿದ್ಧ ಎಂದು ದನಿಗೂಡಿಸಿದರು.

ಭಯೋತ್ಪಾದನೆ ಹತ್ತಿಕ್ಕುವುದು, ಸೈಬರ್ ಭದ್ರತೆ ಕುರಿತು ವಿಸ್ತೃತ ಮಾತುಕತೆ ಬಳಿಕ ಒಪ್ಪಂದಕ್ಕೆ ಬರಲಾಗುವುದು. ಇದರ ಜೊತೆಗೆ ಡಿಜಿಟಲ್ ಪಾವತಿ, ಫಾರ್ಮಾ, ಪ್ರವಾಸೋದ್ಯಮ, ಸಂಸ್ಕೃತಿ, ಶಿಕ್ಷಣ ಕುರಿತು ಚರ್ಚೆ ನಡೆಯಿತು ಎಂದು ಮೂಲಗಳು ತಿಳಿಸಿವೆ.

ಕಳೆದ 40 ವರ್ಷಗಳಲ್ಲಿ ಗ್ರೀಕ್‌ಗೆ ಭೇಟಿ ನೀಡಿದ್ದ ಭಾರತದ ಪ್ರಥಮ ಪ್ರಧಾನಿ ಎಂಬ ಹಿರಿಮೆಗೂ ಅವರು ಮೋದಿ ಪಾತ್ರರಾದರು. ಮೋದಿ ಅವರು ಅಧ್ಯಕ್ಷೆ ಕಟೆರಿನಾ ಎನ್ ಸಕೆಲ್ಲಾರೊಪೌಲೌ ಜೊತೆಗೂ ಚರ್ಚಿಸಿದರು.

ಹಿಂದೆ ಮಾಜಿ ಪ್ರಧಾನಿ ಇಂದಿರಾಗಾಂಧಿ ನೇತೃತ್ವದ ಉನ್ನತ ಮಟ್ಟದ ನಿಯೋಗ ಗ್ರೀಕ್‌ಗೆ ಸೆಪ್ಟೆಂಬರ್ 1983ರಲ್ಲಿ ಭೇಟಿ ನೀಡಿತ್ತು.

‘ಚಂದ್ರಯಾನ–3 ಮನುಕುಲದ ಯಶಸ್ಸು’

ಅಥೆನ್ಸ್ (ಪಿಟಿಐ): ‘ಚಂದ್ರಯಾನ–3ರ ಯಶಸ್ಸು ಕೇವಲ ಭಾರತದ ವಿಜಯವಲ್ಲ, ಇಡೀ ಮನುಕುಲದ ಗೆಲುವು’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ವ್ಯಾಖ್ಯಾನಿಸಿದ್ದಾರೆ.

ಶುಕ್ರವಾರ ಇಲ್ಲಿಗೆ ಆಗಮಿಸಿದ ಪ್ರಧಾನಿ, ಗ್ರೀಕ್ ಅಧ್ಯಕ್ಷೆ ಕಟೆರಿನಾ ಎನ್ ಸಕೆಲ್ಲಾರೊಪೌಲೌ ಅವರ ಜೊತೆಗೆ ಚರ್ಚಿಸಿದರು.

ಗ್ರೀಕ್ ಅಧ್ಯಕ್ಷೆ ಚಂದ್ರಯಾನ ಯಶಸ್ಸಿಗಾಗಿ ಅಭಿನಂದಿಸಿದಾಗ, ಪ್ರತಿಕ್ರಿಯೆಯಾಗಿ ಈ ಮಾತು ಹೇಳಿದರು. ಚಂದ್ರಯಾನ–3 ಯೋಜನೆಯಿಂದ ಸಂಗ್ರಹಿಸುವ ದತ್ತಾಂಶಗಳು ವಿಜ್ಞಾನ ಕ್ಷೇತ್ರದ ಸಮುದಾಯ ಹಾಗೂ ಇಡೀ ಮನುಕುಲಕ್ಕೆ ನೆರವಾಗಲಿದೆ ಎಂದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		**ಶಿವಮೊಗ್ಗ**		ಬಿಳಿಗೋಟು	26296-37130
ಬಂಟ್ವಾಳ		ರಾಶಿ	42039-50512	ಚಾಲಿ	38399-43199
ಕೋಕ	12500-25000	ಬೆಟ್ಟೆ	49199-52599	ಕೆಂಪುಗೋಟು	24699-39123
ಹೊಸತು	27500-45000	ಸರಕು	53200-77700	ರಾಶಿ	48099-52000
ಹಳತು	46000-48500	ಗೊರಬಲು	28000-38229	**ಯಲ್ಲಾಪುರ**	
ಕಾರ್ಕಳ		**ಸಿದ್ದಾಪುರ**		ಬಿಳಿಗೋಟು	26899-38299
ಹೊಸತು	30000-45000	ಬಿಳಿಗೋಟು	32909-35699	ಚಾಲಿ	38599-43169
ಹಳತು	40000-48500	ಚಾಲಿ	37669-42700	ಕೋಕ	21718-33099
ಕುಮಟಾ		ಕೋಕ	30100-34699	ಕೆಂಪುಗೋಟು	26899-36775
ಚಿಪ್ಪು	31509-35019	ಕೆಂಪುಗೋಟು	33369-35189	ರಾಶಿ	48499-56335
ಕೋಕ	20189-33999	ರಾಶಿ	45809-49599	ತಟ್ಟಿಬೆಟ್ಟೆ	39690-48099
ಫ್ಯಾಕ್ಟರಿ	13019-24129	ತಟ್ಟಿಬೆಟ್ಟೆ	39099-48699	ಆಪಿ	67279-67279
ಹಳೆಚಾಲಿ	41099-42269	**ಶಿರಸಿ**			
ಹೊಸಚಾಲಿ	38889-41829	ಬೆಟ್ಟೆ	39099-45808		

ಕಾಸಾಗ್ರ್ಯಾಂಡ್ : ಸೌರವ್ ಗಂಗೂಲಿ ಬ್ರ್ಯಾಂಡ್ ರಾಯಭಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಸಾಗ್ರ್ಯಾಂಡ್ ಕಂಪನಿಯು ಬ್ರ್ಯಾಂಡ್ ರಾಯಭಾರಿಯಾಗಿ ಮಾಜಿ ಕ್ರಿಕೆಟಿಗ ಸೌರವ್ ಗಂಗೂಲಿ ಅವರನ್ನು ನೇಮಿಸಿದೆ. ಮುಂದಿನ 3 ವರ್ಷಗಳಲ್ಲಿ ಮಹಾರಾಷ್ಟ್ರದಲ್ಲಿ ವಿಸ್ತರಣೆ ಯೋಜನೆಗೆ ₹8 ಸಾವಿರ ಕೋಟಿ ಹೂಡಿಕೆ ಮಾಡಲಿದೆ.

ಹೆಚ್ಚಿನ ಮಾರುಕಟ್ಟೆಗಳನ್ನು ತಲುಪುವ ಉದ್ದೇಶದಿಂದ ಗಂಗೂಲಿ ಅವರನ್ನು ಬ್ರ್ಯಾಂಡ್ ರಾಯಭಾರಿಯಾಗಿ ನೇಮಿಸಿಕೊಂಡಿದೆ. ಕಂಪನಿಯು ‘ಜೀವನ ಪರಿವರ್ತನೆ’ ಎಂಬ ಧ್ಯೇಯದೊಂದಿಗೆ ಹೊಸ ಜಾಹೀರಾತು ಅಭಿಯಾನ ಪ್ರಾರಂಭಿಸಲಿದೆ.

ಗಂಗೂಲಿ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+OT. 18,800-78,000/-. 9964435081, 9964435077

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 6366430266, 6366430366

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 20,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು- 76 ತಕ್ಷಣ ಸಂಪರ್ಕಿಸಿ: 9606385001, 9606523307

Domestic Helpers / Housekeeping

URGENTLY REQUIRE Kannada Brahmin Cook for Senior Living Community Interested candidates call 9205851568

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಭವಿಷ್ಯ

Astrology

ಒಂದೇಕರೆಯಲ್ಲಿ ಶಾಶ್ವತ ಪರಿಹಾರ, ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್100% ಗ್ಯಾರಂಟಿ ಪರಿಹಾರ. ಪಂಡಿತ್. ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ,ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರ ಧರ್ಮಸ್ಥಳ:9880788899

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾಸ

Travel

ಏಷ್ಯನ್ ಟ್ರಾವೆಲ್ ಏಜೆನ್ಸಿ ಮಿನರ್ವ ಸರ್ಕಲ್ ಬೆಂಗಳೂರು ವತಿಯಿಂದ ವಿಮಾನ/ A/C ಬಸ್ ರೂಮ್ ಸೌಲಭ್ಯದೊಂದಿಗೆ 29.09.2023 19.10.2023 ಸೋಮನಾಥ್ ದ್ವಾರಕಾ, ಮಹಾಕಾಳೇಶ್ವರ,ಓಂಕಾರೇಶ್ವರ. 23.09.2023 26.10.2023 ಕಾಶಿ,ನೈಮಿಶಾರಣ್ಯ ಕಟ್ಮಂಡು,ಪೋಖ್ರಾ,ಮುಕ್ತಿನಾಥ ಆಂಧ್ರ ಪ್ರವಾಸಗಳಿಗೆ ಸಂಪರ್ಕಿಸಿ. 26574131 7204173686, 9686708171

10/09/2023/10/10/2023 6ದಿನಗಳು ಕಾಶಿ,ಗಯಾ ಬುದ್ಧಗಯಾ ಅಯೋಧ್ಯ ಅಲಹಾಬದ್24000/ಪ್ರತಿ ತಿಂಗಳು ಅಂಡಮಾನ್ ಹವಳದ್ವೀಪ 5/8ದಿನಗಳು ಹಡಗು/ವಿಮಾನದಲ್ಲಿ ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್ 9845560219/ 9739847429

8 ದಿನಗಳ ಕಾಶಿಯಾತ್ರೆ. 12ದಿನಗಳ ಚಾರ್‌ಧಾಮ್‌ಯಾತ್ರೆ. 12 ದಿನಗಳ ನೇಪಾಳ,ಮುಕ್ತಿನಾಥ್. 10 ದಿನಗಳ ಗುಜರಾತ್. ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್ 9980270467 9740228186

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಕೆಲಸ ಹುಡುಕಾಟ
ನಿಮ್ಮ ನೇಮಕಾತಿ ಅಗತ್ಯಗಳಿಗೆ ಪೂರಕ ವೇದಿಕೆ
JOB
ನಿಮ್ಮ ಕಂಪನಿಗೆ ಸೂಕ್ತವಾದ ಅಭ್ಯರ್ಥಿಗಳನ್ನು ಪಡೆಯಿರಿ...ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿರಿ!
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9886213331 |
+91 9900428036 | +91 9731810277 |
+91 9901641752 | 080-45557163/164

ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್: ಜಾವೆಲಿನ್ ಸ್ಪರ್ಧೆಯಲ್ಲಿ ಅಂತಿಮ ಸುತ್ತಿಗೆ ಜೇನಾ, ಕನ್ನಡಿಗ ಮನು

ಒಲಿಂಪಿಕ್ಸ್, ಫೈನಲ್‌ಗೆ ನೀರಜ್ ಅರ್ಹತೆ

ಬುಡಾಪೆಸ್ಟ್‌ನಲ್ಲಿ ನಡೆಯುತ್ತಿರುವ ವಿಶ್ವ ಅಥ್ಲೆಟಿಕ್ ಕೂಟದ ಜಾವೆಲಿನ್ ಥ್ರೊ ಅರ್ಹತಾ ಸುತ್ತಿನಲ್ಲಿ ಥ್ರೊ ಮಾಡಲು ಸಜ್ಜಾಗಿರುವ ನೀರಜ್ ಚೋಪ್ರಾ (ಎಡಚಿತ್ರ). ಕನ್ನಡಿಗ ಡಿ.ಪಿ. ಮನು – ಎಪಿ/ ಪಿಟಿಐ ಚಿತ್ರ

ಬುಡಾಪೆಸ್ಟ್ (ಪಿಟಿಐ): ಮೊದಲ ಯತ್ನದಲ್ಲೆ ಜಾವೆಲಿನ್‌ಅನ್ನು ಅಮೋಘವಾಗಿ 88.77 ಮೀ. ದೂರಕ್ಕೆಸೆದ ನೀರಜ್ ಜೋಪ್ರಾ ನಿರೀಕ್ಷೆಯಂತೆ ಶುಕ್ರವಾರ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ಸ್ ಫೈನಲ್ ತಲುಪಿದರು, ಮಾತ್ರವಲ್ಲ ಮುಂದಿನ ವರ್ಷದ ಪ್ಯಾರಿಸ್ ಒಲಿಂಪಿಕ್ಸ್‌ಗೂ ಅರ್ಹತೆ ಪಡೆದರು. ಭಾರತದ ಇನ್ನಿಬ್ಬರು– ಕನ್ನಡಿಗ ಡಿ.ಪಿ. ಮನು ಮತ್ತು ಕಿಶೋರ್ ಜೇನಾ ಅವರೂ ಫೈನಲ್‌ಗೆ ರಹದಾರಿ ಪಡೆದರು.

ಜಾವೆಲಿನ್ ಫೈನಲ್ ಭಾನುವಾರ ನಡೆಯಲಿದೆ.

ಮನು 81.31 ಮೀ. ದೂರ ಎಸೆದರೆ, ಕಿಶೋರ್ ಜೇನಾ 80.55 ಮೀ. ಸಾಧನೆ ದಾಖಲಿಸಿದರು. ಇದೇ ಮೊದಲ ಬಾರಿ ಭಾರತದ ಮೂವರು ವಿಶ್ವ ಚಾಂಪಿಯನ್‌ಷಿಪ್‌ನ ಒಂದೇ ಸ್ಪರ್ಧೆಯಲ್ಲಿ ಫೈನಲ್ ತಲುಪಿದಂತಾಗಿದೆ. ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು 85.50 ಮೀ. ಮಾನದಂಡ ನಿಗದಿಪಡಿಸಲಾಗಿದೆ. ಜುಲೈ 1 ರಿಂದ ಮುಂದಿನ ಒಲಿಂಪಿಕ್ಸ್ ಅರ್ಹತೆಗೆ ಅಥ್ಲೀಟುಗಳ ಸಾಧನೆ ಪರಿಗಣಿಸಲಾಗುತ್ತಿದೆ.

25 ವರ್ಷದ ಚೋಪ್ರಾ ಅವರ ಅರ್ಹತಾ ಸುತ್ತು ಕೆಲವೇ ನಿಮಿಷಗಳಲ್ಲಿ ಮುಕ್ತಾಯ ಕಂಡಿತು. ಅವರು 'ಎ' ಗುಂಪಿನ ಕ್ವಾಲಿಫಿಕೇಷನ್ ರೌಂಡ್‌ನ ಮೊದಲ ಯತ್ನದಲ್ಲೇ ಉತ್ತಮ ಸಾಧನೆ ತೋರಿ ಅರ್ಹತೆ ಖಚಿತವಾದ ನಂತರ ಕ್ರೀಡಾಂಗಣದಿಂದ ನಿರ್ಗಮಿಸಿದರು. 2022ರ ಚಾಂಪಿಯನ್‌ಷಿಪ್‌ನಲ್ಲಿ (ಅಮೆರಿಕದ ಯುಜೀನ್) ಭಾರತದ ಜಾವೆಲಿನ್ ತಾರೆ ಬೆಳ್ಳಿಯ ಪದಕ ಗೆದ್ದುಕೊಂಡಿದ್ದರು. ಚೋಪ್ರಾ ಅವರ ಶ್ರೇಷ್ಠ ಸಾಧನೆ 89.94 ಮೀ. ಆಗಿದೆ.

83 ಮೀ. ದೂರ ಎಸೆದವರು ಅಥವಾ 'ಎ' ಮತ್ತು 'ಬಿ' ಗುಂಪಿನಿಂದ ಉತ್ತಮ ಸಾಧನೆ ದಾಖಲಿಸಿದ ಒಟ್ಟು 12 ಅಥ್ಲೀಟುಗಳು ಫೈನಲ್‌ಗೆ ಅರ್ಹತೆ ಪಡೆಯುತ್ತಾರೆ.

'ವಾರ್ಮ್ ಅಪ್‌ನಲ್ಲಿ ತೊಡಗಿದಾಗಲೇ ನಾನು ಒಂದೇ ಯತ್ನದಲ್ಲಿ ಅರ್ಹತೆ ಪಡೆಯಬಲ್ಲೆನೆಂಬ ವಿಶ್ವಾಸ ಮೂಡಿತು. ಜಾವೆಲಿನ್ ಕೈಯಿಂದ ಹೊರಟಾಗಲೇ ನನಗೆ ಧೈರ್ಯವಾಗಿತ್ತು. ಫಲಿತಾಂಶದಿಂದ ತೃಪ್ತನಾಗಿದ್ದೇನೆ. ಫೈನಲ್‌ಗೆ ನನ್ನ ಪೂರ್ಣ ಸಾಮರ್ಥ್ಯ ಬಳಸಲು ಅವಕಾಶವಾಗಿದೆ. ಇಲ್ಲಿ ಶೇ 90ರಷ್ಟು ಶಕ್ತಿ ಮಾತ್ರ ವ್ಯಯಿಸಿದ್ದೆ' ಎಂದು ಚೋಪ್ರಾ ಪ್ರತಿಕ್ರಿಯಿಸಿದರು.

'ಫೈನಲ್‌ನಲ್ಲಿ ನನ್ನೆಲ್ಲಾ ಸಾಮರ್ಥ್ಯ ತೊಡಗಿಸಿಕೊಂಡು ವಿಶ್ವ ಚಾಂಪಿಯನ್‌ಷಿಪ್‌ನಲ್ಲೂ ಚಿನ್ನ ಗೆಲ್ಲಬಯಸುವೆ' ಎಂದು ಒಲಿಂಪಿಕ್ ಚಾಂಪಿಯನ್ ಕೂಡ ಆಗಿರುವ ನೀರಜ್ ಹೇಳಿದರು.

ಮಿಂಚಿದ ಮನು:

ಚೋಪ್ರಾ ಅವರ ಗುಂಪಿನಲ್ಲೇ ಇದ್ದ ಕರ್ನಾಟಕದ ಡಿ.ಪಿ. ಮನು ಎರಡನೇ ಯತ್ನದಲ್ಲಿ 81.31 ಮೀ. ಸಾಧನೆಯೊಡನೆ ಗುಂಪಿನಲ್ಲಿ ಮೂರನೇ ಹಾಗೂ ಒಟ್ಟಾರೆ ಆರನೇ ಸ್ಥಾನ ಪಡೆದರು. ಇದು ಅವರಿಗೆ ಮೊದಲ ವಿಶ್ವ ಚಾಂಪಿಯನ್‌ಷಿಪ್. ಅವರು ಜುಲೈನಲ್ಲಿ ಏಷ್ಯನ್ ಕೂಟದಲ್ಲಿ ಬೆಳ್ಳಿಯ ಪದಕ ಗೆದ್ದುಕೊಂಡಿದ್ದರು.

ಹಂಗೆರಿ ವೀಸಾ ತಿರಸ್ಕೃತಗೊಂಡು ಕೊನೆಗಳಿಗೆಯಲ್ಲಿ ಮತ್ತೆ ಪಡೆದ ಕಿಶೋರ್ ಜೇನಾ 80.55 ಮೀ. ಎಸೆತದೊಡನೆ 'ಬಿ' ಗುಂಪಿನಲ್ಲಿ 5ನೇ ಸ್ಥಾನ ಹಾಗೂ ಒಟ್ಟಾರೆ 9ನೇ ಸ್ಥಾನ ಪಡೆದರು. ಅವರಿಗೂ ಇದು ಮೊದಲ ವಿಶ್ವಕೂಟ.

ಅರ್ಹತಾ ಸುತ್ತಿನಲ್ಲಿ ಪ್ರತಿ ಸ್ಪರ್ಧಿಗೆ ಮೂರು ಪ್ರಯತ್ನಕ್ಕೆ ಅವಕಾಶ ಇದೆ.

ಕಾಮನ್ವೆಲ್ತ್ ಕೂಟದ ಹಾಲಿ ಚಾಂಪಿಯನ್, ಪಾಕಿಸ್ತಾನದ ಅರ್ಷದ್ ನದೀಮ್ 86.79 ಮೀ. ಎಸೆದು ಋತುವಿನ ಅತ್ಯುತ್ತಮ ಎಸೆತದೊಡನೆ ಫೈನಲ್‌ಗೆ ಮತ್ತು ಒಲಿಂಪಿಕ್ಸ್‌ಗೆ ಅರ್ಹತೆ ಪಡೆದರು. 'ಬಿ' ಗುಂಪಿನಲ್ಲಿ ಮೊದಲಿಗರಾದ ಅವರು ಒಟ್ಟಾರೆ ಎರಡನೇ ಸ್ಥಾನ ಪಡೆದರು. ಏಷ್ಯನ್ ಕೂಟದಲ್ಲಿ ಚೋಪ್ರಾ ಚಿನ್ನ ಗೆದ್ದಾಗ ನದೀಮ್ ಕಂಚಿನ ಪದಕ ಗಳಿಸಿದ್ದರು.

ಹಾಲಿ ಚಾಂಪಿಯನ್ ನಿರ್ಗಮನ

ಲಯ ಕಂಡುಕೊಳ್ಳಲು ಪರದಾಡುತ್ತಿದ್ದ ಹಾಲಿ ಚಾಂಪಿಯನ್ ಗ್ರೆನೆಡಾದ ಆ್ಯಂಡರ್ಸನ್ ಪೀಟರ್ಸ್ ಹೊರಬಿದ್ದರು. ಅವರು ಉತ್ತಮ ಎಸೆತ 78.49 ಮೀ. ಆಗಿದ್ದು ಒಟ್ಟಾರೆ 16ನೇ (ಎ ಗುಂಪಿನಲ್ಲಿ ಏಳನೇ) ಸ್ಥಾನಕ್ಕೆ ಸರಿದರು.

ಚೋಪ್ರಾ ಈಗಾಗಲೇ ಒಲಿಂಪಿಕ್ಸ್ (ಟೋಕಿಯೊ 2021), ಏಷ್ಯನ್ ಗೇಮ್ಸ್ (2018) ಮತ್ತು ಕಾಮನ್‌ವೆಲ್ತ್ ಕ್ರೀಡೆ (2018)ಗಳಲ್ಲಿ ಚಿನ್ನದ ಪದಕದ ಜೊತೆಗೆ, ಕಳೆದ ವರ್ಷ ಡೈಮಂಡ್ ಲೀಗ್ ಚಾಂಪಿಯನ್ ಕೂಡ ಆಗಿದ್ದಾರೆ. ಅವರಿಗೆ ವಿಶ್ವ ಚಾಂಪಿಯನ್ ಚಿನ್ನ ಮಾತ್ರ ಗೆಲ್ಲಲು ಉಳಿದಿದೆ

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಗೆದ್ದಿದ್ದ ಯಾಕುಬ್ ವಡ್ಲೇಯ್ಚ್ (ಝೆಕ್ ರಿಪಬ್ಲಿಕ್) 83.50 ಮೀ. ಎಸೆತದೊಡನೆ 'ಬಿ' ಗುಂಪಿನಲ್ಲಿ ಎರಡನೇ ಮತ್ತು ಒಟ್ಟಾರೆ ಮೂರನೇ ಸ್ಥಾನ ಪಡೆದರು. ಜರ್ಮನಿಯ ಜೂಲಿಯನ್ ವೇಬರ್ (82.39 ಮೀ.) ಒಟ್ಟಾರೆ ನಾಲ್ಕನೇಯವರಾದರು.

ತಿಯಾನಾ, ಸಾಕ್ಷಿ ಮತ್ತು ಕಿರಣ್‌ದೀಪ್ ಕೌರ್ ಅವರನ್ನು ಒಳಗೊಂಡ ಭಾರತ ಮಹಿಳೆಯರ ತಂಡ

ಪಿಸ್ತೂಲ್ ಶೂಟಿಂಗ್: ಭಾರತ ಮಹಿಳಾ ತಂಡಕ್ಕೆ ಚಿನ್ನದ ಪದಕ

ಬಾಕು (ಅಜರ್‌ಬೈಜಾನ್), (ಪಿಟಿಐ): ತಿಯಾನಾ, ಸಾಕ್ಷಿ ಸೂರ್ಯವಂಶಿ ಮತ್ತು ಕಿರಣ್‌ದೀಪ್ ಕೌರ್ ಅವರನ್ನು ಒಳಗೊಂಡ ಭಾರತ ಮಹಿಳೆಯರ ತಂಡ ಐಎಸ್‌ಎಸ್‌ಎಫ್ ವಿಶ್ವ ಚಾಂಪಿಯನ್‌ಷಿಪ್‌ನ 50 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ಶುಕ್ರವಾರ ಚಿನ್ನದ ಪದಕ ಗೆದ್ದುಕೊಂಡಿತು. ಭಾರತ ತಂಡದ ಸ್ಪರ್ಧಿಗಳು ಒಟ್ಟು ಆರು ಚಿನ್ನ ಮತ್ತು ಎಂಟು ಕಂಚಿನ ಪದಕಗಳೊಡನೆ ಈ ಚಾಂಪಿಯನ್‌ಷಿಪ್ ಮುಗಿಸಿದರು.

ಪದಕ ಪಟ್ಟಿಯಲ್ಲಿ ಚೀನಾ ಅಗ್ರಸ್ಥಾನ ಪಡೆದರೆ, 14 ಪದಕಗಳನ್ನು ಗೆದ್ದ ಭಾರತ ಎರಡನೇ ಸ್ಥಾನ ಪಡೆಯಿತು. ಭಾರತದ ನಾಲ್ವರು ಈ ಕೂಟದಲ್ಲಿ ಉತ್ತಮ ಸಾಧನೆ ತೋರಿ ಒಲಿಂಪಿಕ್ಸ್‌ಗೆ ಕೋಟಾ ಗಿಟ್ಟಿಸಿಕೊಂಡರು.

ಪಿಸ್ತೂಲ್ ಟೀಮ್ ಸ್ಪರ್ಧೆಯಲ್ಲಿ ವಿಜೇತರಾದ ಭಾರತದ ವನಿತೆಯರು 1,573 ಪಾಯಿಂಟ್ಸ್ ಕಲೆಹಾಕಿದರೆ, ಚೀನಾ ತಂಡ 1,567 ಮತ್ತು ಮಂಗೋಲಿಯಾ ತಂಡ 1,566 ಪಾಯಿಂಟ್ಸ್ ಕಲೆಹಾಕಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದವು. ನಂತರ ತಿಯಾನಾ ಮಹಿಳೆಯರ 50 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದುಕೊಂಡರು. ವೈಯಕ್ತಿಕ ಸ್ಪರ್ಧೆಯಲ್ಲಿ ತಿಯಾನಾ 533 ಪಾಯಿಂಟ್ಸ್ ಗಳಿಸಿದರು. ಸಾಕ್ಷಿ (531) ಮತ್ತು ಕಿರಣ್‌ದೀಪ್ (509) ಕ್ರಮವಾಗಿ ಐದು ಮತ್ತು 11ನೇ ಸ್ಥಾನ ಗಳಿಸಿದರು.

ಪುರುಷರ 50 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ಭಾರತ ಎರಡು ಕಂಚಿನ ಪದಕಗಳನ್ನು ಪಡೆಯಿತು. ರವಿಂದರ್ ಸಿಂಗ್ ವೈಯಕ್ತಿಕ ವಿಭಾಗದಲ್ಲಿ (556) ಮೂರನೇ ಸ್ಥಾನ ಪಡೆದರು. ಅವರು ಕಮಲ್‌ಜೀತ್ ಮತ್ತು ವಿಕ್ರಮ್ ಶಿಂದೆ ಜೊತೆಗೂಡಿ ಟೀಮ್ ವಿಭಾಗದಲ್ಲಿ ಕಂಚಿನ ಪದಕ (ಒಟ್ಟು 1,646 ಪಾಯಿಂಟ್ಸ್) ಪಡೆದರು.

ಜಿಪಿಬಿಎಲ್‌ಗೆ ಅನುಮತಿ

ಬೆಂಗಳೂರು (ಪಿಟಿಐ): ಗ್ರ್ಯಾನ್ ಪ್ರಿ ಬ್ಯಾಡ್ಮಿಂಟನ್ ಲೀಗ್ (ಜಿಪಿಬಿಎಲ್) ಟೂರ್ನಿಯಲ್ಲಿ ಆಡಲು ಆಟಗಾರರಿಗೆ ಕರ್ನಾಟಕ ಹೈಕೋರ್ಟ್ ಅನುಮತಿ ನೀಡಿದೆ.

ಭಾರತ ಬ್ಯಾಡ್ಮಿಂಟನ್ ಸಂಸ್ಥೆಗೆ (ಬಿಎಐ) ನೋಂದಾಯಿತ ಆಟಗಾರರು ಜಿಪಿಬಿಎಲ್‌ನಲ್ಲಿ ಪಾಲ್ಗೊಳ್ಳಬಹುದು ಎಂದು ನ್ಯಾಯಮೂರ್ತಿ ಆರ್. ದೇವದಾಸ್ ಅವರಿದ್ದ ಏಕಸದಸ್ಯ ಪೀಠ ಗುರುವಾರ ತೀರ್ಪು ನೀಡಿತ್ತು.

ಇದಕ್ಕೆ ತಡೆಯಾಜ್ಞೆ ನೀಡಬೇಕು ಎಂದು ಬಿಎಐ ಮೇಲ್ಮನವಿ ಸಲ್ಲಿಸಿತ್ತು. ಶುಕ್ರವಾರ ಅರ್ಜಿಯ ವಿಚಾರಣೆ ನಡೆಸಿದ ಎಸ್.ಜಿ.ಪಂಡಿತ್ ಮತ್ತು ಪ್ರದೀಪ್ ಸಿಂಗ್ ಯೆರೂರು ಅವರಿದ್ದ ಹೈಕೋರ್ಟ್‌ನ ವಿಶೇಷ ವಿಭಾಗೀಯ ನ್ಯಾಯಪೀಠ, ಏಕಸದಸ್ಯ ಪೀಠದ ಆದೇಶಕ್ಕೆ ತಡೆನೀಡಲು ನಿರಾಕರಿಸಿದೆ.

ಏಕಸದಸ್ಯ ಪೀಠದ ಆದೇಶವು ಈಗ ವಿಭಾಗೀಯ ಪೀಠದ ಮುಂದಿರುವ ಮೇಲ್ಮನವಿ ಅರ್ಜಿಯ ಅಂತಿಮ ಫಲಿತಾಂಶಕ್ಕೆ ಒಳಪಟ್ಟಿರುತ್ತದೆ ಎಂದು ಹೈಕೋರ್ಟ್ ಹೇಳಿದೆ. ಮುಂದಿನ ವಿಚಾರಣೆ ಸೆ.12ಕ್ಕೆ ನಡೆಯಲಿದೆ.

ವಿಭಾಗೀಯ ಪೀಠದ ಆದೇಶದಿಂದ, ಜಿಪಿಬಿಎಲ್ ಟೂರ್ನಿಯನ್ನು ನಿಗದಿತ ವೇಳಾಪಟ್ಟಿಯಂತೆ ನಡೆಸಲು ಆಯೋಜಕರಿಗೆ ಅವಕಾಶ ಲಭಿಸಿದೆ. ಈ ಟೂರ್ನಿ ಆ.27 ರಿಂದ ಸೆ.8ರ ವರೆಗೆ ನಡೆಯಲಿದ್ದು, ಒಟ್ಟು ಎಂಟು ತಂಡಗಳು ಪಾಲ್ಗೊಳ್ಳಲಿವೆ.

ಮಯಂಕ್ ಅಗರವಾಲ್ ಶತಕ

ಮಹಾರಾಜ ಟ್ರೋಫಿ ಕ್ರಿಕೆಟ್: ಕೊನೆಗೂ ಗೆದ್ದ ಬೆಂಗಳೂರು ಬ್ಲಾಸ್ಟರ್ಸ್ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು ಬ್ಲಾಸ್ಟರ್ಸ್ ತಂಡದ ಮಯಂಕ್ ಅಗರವಾಲ್ ಅವರ ಬ್ಯಾಟಿಂಗ್

ಬೆಂಗಳೂರು: ನಾಯಕ ಮಯಂಕ್ ಅಗರವಾಲ್ (105) ಅವರ ಶತಕದ ನೆರವಿನಿಂದ ಬೆಂಗಳೂರು ಬ್ಲಾಸ್ಟರ್ಸ್ ತಂಡ, ಮಹಾರಾಜ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಮೊದಲ ಗೆಲುವು ಸಾಧಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಬ್ಲಾಸ್ಟರ್ಸ್, 10 ರನ್‌ಗಳಿಂದ ಮೈಸೂರು ವಾರಿಯರ್ಸ್ ತಂಡವನ್ನು ಮಣಿಸಿತು. ಸತತ ಎಂಟು ಪಂದ್ಯಗಳನ್ನು ಸೋತಿದ್ದ ಮಯಂಕ್ ಬಳಗ ಕೊನೆಗೂ ಗೆಲುವಿನ ಸಿಹಿಯುಂಡಿತು.

ಮೊದಲು ಬ್ಯಾಟ್ ಮಾಡಿದ ಬ್ಲಾಸ್ಟರ್ಸ್, ನಿಗದಿತ ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 212 ರನ್ ಗಳಿಸಿತು. ವಾರಿಯರ್ಸ್ ತಂಡ 8 ವಿಕೆಟ್‌ಗಳಿಗೆ 202 ರನ್ ಗಳಿಸಲಷ್ಟೇ ಶಕ್ತವಾಯಿತು.

ಸವಾಲಿನ ಗುರಿ ಬೆನ್ನಟ್ಟಿದ ವಾರಿಯರ್ಸ್ ತಂಡಕ್ಕೆ ಎಸ್.ಯು.ಕಾರ್ತಿಕ್ (70 ರನ್; 30 ಎ., 4X6, 6X6) ಸ್ಫೋಟಕ ಆರಂಭ ನೀಡಿದರು. ಅವರು ಆರ್.ಸಮರ್ಥ್ ಜೊತೆ ಮೊದಲ ವಿಕೆಟ್‌ಗೆ 60 ರನ್ ಹಾಗೂ ನಾಯಕ ಕರುಣ್ ನಾಯರ್ ಜೊತೆ ಎರಡನೇ ವಿಕೆಟ್‌ಗೆ 70 ರನ್ ಸೇರಿಸಿದರು. 12ನೇ ಓವರ್‌ನಲ್ಲಿ ಎರಡನೇ ವಿಕೆಟ್ ರೂಪದಲ್ಲಿ ಕಾರ್ತಿಕ್ ಔಟಾಗುವಾಗ ತಂಡ 130 ರನ್ ಕಲೆಹಾಕಿತ್ತು.

ಆ ಬಳಿಕ ಮೊಹ್ಸಿನ್ ಖಾನ್ (35ಕ್ಕೆ 4) ಮತ್ತು ಸರ್ಫರಾಜ್ ಅಶ್ರಫ್ (23ಕ್ಕೆ 2) ಅವರು ಬಿಗುವಾದ ದಾಳಿ ನಡೆಸಿ ವಾರಿಯರ್ಸ್ ಬ್ಯಾಟರ್‌ಗಳನ್ನು ನಿಯಂತ್ರಿಸಿದರು.

ಮಯಂಕ್ ಮಿಂಚು: ಬೆಂಗಳೂರು ತಂಡ, ಆರಂಭಿಕ ಬ್ಯಾಟರ್ ಇ.ಜೆ. ಜಸ್ವೆರ್ (1) ಅವರನ್ನು ಬೇಗನೇ ಕಳೆದುಕೊಂಡಿತು. ಮಯಂಕ್ ಅವರು ಡಿ.ನಿಶ್ಚಲ್ ಜೊತೆ 2ನೇ ವಿಕೆಟ್‌ಗೆ 97 ರನ್ ಸೇರಿಸಿ ತಂಡಕ್ಕೆ ಆಸರೆಯಾದರು. 57 ಎಸೆತಗಳನ್ನು ಎದುರಿಸಿದ ಮಯಂಕ್ 9 ಬೌಂಡರಿ ಮತ್ತು ಆರು ಸಿಕ್ಸರ್‌ಗಳ ನೆರವಿನಿಂದ ಶತಕ ಪೂರೈಸಿದರು. ಕೊನೆಯಲ್ಲಿ ಸೂರಜ್ ಅಹುಜಾ (ಔಟಾಗದೆ 35; 10 ಎ., 4X1, 6X4) ರಟ್ಟೆಯರಳಿಸಿದ ಕಾರಣ ತಂಡದ ಮೊತ್ತ 200ರ ಗಡಿ ದಾಟಿತು.

ಸಂಕ್ಷಿಪ್ತ ಸ್ಕೋರ್: ಬೆಂಗಳೂರು ಬ್ಲಾಸ್ಟರ್ಸ್ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 212 (ಮಯಂಕ್ ಅಗರವಾಲ್ 105, ಡಿ.ನಿಶ್ಚಲ್ 29, ಶುಭಾಂಗ್ ಹೆಗ್ಡೆ 24, ಸೂರಜ್ ಅಹುಜಾ ಔಟಾಗದೆ 35, ಜೆ.ಸುಚಿತ್ 34ಕ್ಕೆ 2) **ಮೈಸೂರು ವಾರಿಯರ್ಸ್** 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 202 (ಎಸ್.ಯು.ಕಾರ್ತಿಕ್ 70, ಆರ್. ಸಮರ್ಥ್ 35, ಕರುಣ್ ನಾಯರ್ 32, ಮೊಹ್ಸಿನ್ ಖಾನ್ 35ಕ್ಕೆ 4, ಸರ್ಫರಾಜ್ ಅಶ್ರಫ್ 23ಕ್ಕೆ 2) **ಫಲಿತಾಂಶ:** ಬೆಂಗಳೂರು ಬ್ಲಾಸ್ಟರ್ಸ್‌ಗೆ 10 ರನ್ ಗೆಲುವು

ಶಿವಮೊಗ್ಗ ಲಯನ್ಸ್: 20 ಓವರ್‌ಗಳಲ್ಲಿ 130 (ಶ್ರೇಯಸ್ ಗೋಪಾಲ್ 31, ಕ್ರಾಂತಿ ಕುಮಾರ್ 34, ಕೆ.ಸಿ.ಕಾರ್ಯಪ್ಪ 17ಕ್ಕೆ 2, ಮನ್ವಂತ್ ಕುಮಾರ್ 20ಕ್ಕೆ 2) **ಹುಬ್ಬಳ್ಳಿ ಟೈಗರ್ಸ್** 18.4 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 131 (ಕೆ. ಶ್ರೀಜಿತ್ 50, ಪ್ರವೀಣ್ ದುಬೆ 18, ಮನ್ವಂತ್ ಕುಮಾರ್ 27, ಶ್ರೇಯಸ್ ಗೋಪಾಲ್ 30ಕ್ಕೆ 4, ವಿ.ಕೌಶಿಕ್ 15ಕ್ಕೆ 1) **ಫಲಿತಾಂಶ:** ಹುಬ್ಬಳ್ಳಿ ಟೈಗರ್ಸ್‌ಗೆ 3 ವಿಕೆಟ್ ಜಯ

ಇಂದಿನ ಪಂದ್ಯಗಳು

ಹುಬ್ಬಳ್ಳಿ ಟೈಗರ್ಸ್– ಮಂಗಳೂರು ಡ್ರಾಗನ್ಸ್ (ಮಧ್ಯಾಹ್ನ 1)

ಗುಲ್ಬರ್ಗ ಮಿಸ್ಟಿಕ್ಸ್– ಮೈಸೂರು ವಾರಿಯರ್ಸ್ (ಸಂಜೆ 5.30)

ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ಕನ್ನಡ, ಫ್ಯಾನ್‌ಕೋಡ್ ಆ್ಯಪ್

ಹುಬ್ಬಳ್ಳಿ ಟೈಗರ್ಸ್‌ಗೆ ಜಯ

ಶುಕ್ರವಾರ ನಡೆದ ಎರಡನೇ ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್, 3 ವಿಕೆಟ್‌ಗಳಿಂದ ಶಿವಮೊಗ್ಗ ಲಯನ್ಸ್ ತಂಡವನ್ನು ಮಣಿಸಿತು.

ಮೊದಲು ಬ್ಯಾಟ್ ಮಾಡಿದ ಲಯನ್ಸ್ ತಂಡ ಕೆ.ಸಿ.ಕಾರ್ಯಪ್ಪ ಮತ್ತು ಮನ್ವಂತ್ ಕುಮಾರ್ ಅವರ ಶಿಸ್ತಿನ ದಾಳಿಯ ಮುಂದೆ ಪರದಾಟ ನಡೆಸಿ 130 ರನ್‌ಗಳ ಸಾಧಾರಣ ಮೊತ್ತ ಪೇರಿಸಿತು. ಹುಬ್ಬಳ್ಳಿ ತಂಡ ಕೆ.ಶ್ರೀಜಿತ್ (50) ಅವರ ಅರ್ಧಶತಕದ ನೆರವಿನಿಂದ ಗೆಲುವು ಸಾಧಿಸಿತು.

ಈಗಾಗಲೇ ನಾಕೌಟ್ ಹಂತ ಪ್ರವೇಶಿಸಿರುವ ಹುಬ್ಬಳಿ ತಂಡ, 14 ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಂಡಿತು

ಲಾಂಛನದಲ್ಲಿ ಕನ್ನಡ ಬಳಸಲು ಕೆಎಸ್‌ಸಿಎಗೆ ಸೂಚನೆ

ಬೆಂಗಳೂರು: ಲಾಂಛನದಲ್ಲಿ ಕನ್ನಡ ಪದಗಳನ್ನು ಬಳಸುವಂತೆ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ (ಕೆಎಸ್‌ಸಿಎ) ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪತ್ರ ಬರೆದಿದೆ.

ಕ್ರಿಕೆಟ್ ಟೂರ್ನಿ ಗಳಲ್ಲಿ ಕನ್ನಡವನ್ನು ಕಡೆಗಣಿಸಲಾಗುತ್ತಿದೆ ಎಂಬ ಕಾರಣಕ್ಕೆ ಕೆಲ ದಿನಗಳ ಹಿಂದಷ್ಟೇ ಪ್ರಾಧಿಕಾರವು ಕ್ರಿಕೆಟ್ ಸಂಸ್ಥೆಗೆ ನೋಟಿಸ್ ನೀಡಿತ್ತು. ಈ ಬಗ್ಗೆ ಸ್ಪಷ್ಟೀಕರಣ ನೀಡಿರುವ ಸಂಸ್ಥೆ, 'ಮಹಾರಾಜ ಟ್ರೋಫಿ ಕ್ರಿಕೆಟ್ ಪಂದ್ಯಾವಳಿ ಸಮಾರಂಭದಲ್ಲಿ ಅಚಾತುರ್ಯದಿಂದ ಕನ್ನಡ ಬೋರ್ಡ್ ಇರಲಿಲ್ಲ. ಇದರ ಹಿಂದೆ ಬೇರೆ ಯಾವುದೇ ಕೆಟ್ಟ ಉದ್ದೇಶವಿಲ್ಲ. ಇನ್ನು ಮುಂದೆ ಈ ರೀತಿ ಆಗದಂತೆ ಎಚ್ಚರ ವಹಿಸಲಾಗುವುದು' ಎಂದು ತಿಳಿಸಿದೆ.

ಇದಕ್ಕೆ ಪ್ರತಿಯಾಗಿ ಪತ್ರ ಬರೆದಿರುವ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ, 'ತಮ್ಮ ಸಂಸ್ಥೆಯ ಲಾಂಛನ ಸಂಪೂರ್ಣ ಆಂಗ್ಲಮಯವಾಗಿರುವುದು ಗಮನಕ್ಕೆ ಬಂದಿದೆ. ಈ ಲಾಂಛನದಲ್ಲಿ ಕನ್ನಡ ಬಳಸುವಂತೆ ಸಲಹೆ ನೀಡಲಾಗಿದೆ. ತಮ್ಮ ಸಂಸ್ಥೆಯು ಕನ್ನಡವನ್ನು ಬೆಳೆಸುವ ನಿಟ್ಟಿನಲ್ಲಿ ಮತ್ತು ಇನ್ನಾವುದೇ ಭಿನ್ನಾಭಿಪ್ರಾಯಕ್ಕೆ ಆಸ್ಪದ ನೀಡದೆ ಆದಷ್ಟು ಬೇಗ ಲಾಂಛನದಲ್ಲಿ ಕನ್ನಡ ಪದಗಳನ್ನು ಬಳಸಬೇಕು' ಎಂದು ಸೂಚಿಸಿದ್ದಾರೆ.

ಶುಭಮನ್‌ಗೆ ಹೆಚ್ಚು ಅಂಕ

ಶುಭಮನ್ ಗಿಲ್

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಯುವ ಬ್ಯಾಟರ್ ಶುಭಮನ್ ಗಿಲ್ ಅವರು ಯೋ ಯೋ ಫಿಟ್‌ನೆಸ್ ಟೆಸ್ಟ್‌ನಲ್ಲಿ ಅತಿಹೆಚ್ಚು ಅಂಕ ಪಡೆದು ಗಮನ ಸೆಳೆದರು.

ಏಷ್ಯಾ ಕಪ್ ಟೂರ್ನಿಯಲ್ಲಿ ಆಡಲಿರುವ ಭಾರತ ತಂಡದ ಆಟಗಾರರು ಆಲೂರಿನಲ್ಲಿರುವ ಕೆಎಸ್‌ಸಿಎ ಕ್ರಿಕೆಟ್ ಮೈದಾನದಲ್ಲಿ ವಿವಿಧ ರೀತಿಯ ದೈಹಿಕ ಸಾಮರ್ಥ್ಯ ಪರೀಕ್ಷೆಗೆ ಒಳಗಾಗಿದ್ದಾರೆ.

ಶುಕ್ರವಾರ ಯೋ ಯೋ ಟೆಸ್ಟ್ ಎದುರಿಸಿದ ಗಿಲ್ ಅವರು 18.7 ಅಂಕಗಳನ್ನು ಗಳಿಸಿದರು ಎಂದು ಮೂಲಗಳು ಹೇಳಿವೆ. ಗುರುವಾರ ಈ ಪರೀಕ್ಷೆ ಎದುರಿಸಿದ್ದ ಅನುಭವಿ ಬ್ಯಾಟರ್ ವಿರಾಟ್ ಕೊಹ್ಲಿ 17.2 ಅಂಕಗಳನ್ನು ಗಳಿಸಿದ್ದರು.

ಇದುವರೆಗೆ ಯೋ ಯೋ ಟೆಸ್ಟ್ ಎದುರಿಸಿದ ಎಲ್ಲರೂ ಬಿಸಿಸಿಐ ನಿಗದಿ ಮಾಡಿರುವ ಅರ್ಹತಾ ಮಟ್ಟವನ್ನು (16.5 ಅಂಕ) ಮೀರಿನಿಲ್ಲುವಲ್ಲಿ ಯಶಸ್ವಿಯಾಗಿದ್ದಾರೆ.

ಎಲ್ಲ ಮಕ್ಕಳಿಗೂ ಆಟದ ಮೈದಾನ: ಸಚಿವ ನಾಗೇಂದ್ರ

ಪ್ರಜಾವಾಣಿ ವಾರ್ತೆ

ಬಿ. ನಾಗೇಂದ್ರ

ಬೆಂಗಳೂರು: ರಾಜ್ಯದ ಎಲ್ಲ ಮಕ್ಕಳಿಗೂ ಸೂಕ್ತ ಆಟದ ಮೈದಾನ ದೊರಕಿಸಲು ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಇಲಾಖೆ ಸಹಕಾರ ಕೋರಲಾಗಿದೆ ಎಂದು ಕ್ರೀಡಾ ಸಚಿವ ಬಿ.ನಾಗೇಂದ್ರ ಹೇಳಿದರು.

ಕ್ರೀಡಾ ಚಟುವಟಿಕೆಗಳಿಗೆ ಗ್ರಾಮ, ಹೋಬಳಿ, ತಾಲ್ಲೂಕುಮಟ್ಟದಲ್ಲಿ ಸರ್ಕಾರಿ ಭೂಮಿ ಗುರುತಿಸಲು ಮನವಿ ಮಾಡಲಾಗಿದೆ. ಇಲಾಖೆ ಹೋಬಳಿಮಟ್ಟದಲ್ಲಿ ಲಭ್ಯವಿರುವ ಸರ್ಕಾರಿ ಜಮೀನಿನ ಪಟ್ಟಿ ನೀಡಿದೆ. ಮೈದಾನ ನಿಗದಿಪಡಿಸಿದ ನಂತರ ಕ್ರೀಡಾ ಚಟುವಟಿಕೆಗಳಿಗೆ ಬಳಸಲಾಗುವುದು. ಇಲಾಖೆ ಅಧಿಕಾರಿಗಳು ನಿರ್ವಹಣೆ ಮಾಡುವರು. ಈ ಉದ್ದೇಶಕ್ಕೆ ₹ 100 ಕೋಟಿ ಮೀಸಲಿಡಲಾಗಿದೆ ಎಂದರು.

'ಒಂದು ಜಿಲ್ಲೆ, ಒಂದು ಕ್ರೀಡೆ' ಯೋಜನೆ ಅಡಿ ಆಯಾ ಜಿಲ್ಲೆಗಳ ವ್ಯಾಪ್ತಿಯ ಸ್ಥಳೀಯ ಕ್ರೀಡೆಗಳಿಗೆ ಉತ್ತೇಜನ ನೀಡಲು ಯೋಜನೆ ರೂಪಿಸಲಾಗುತ್ತಿದೆ. ಕ್ರೀಡಾ ಇಲಾಖೆಯಲ್ಲಿ ಕೊರತೆ ಇರುವ ಕ್ರೀಡಾ ತರಬೇತುದಾರರ ಭರ್ತಿಗೆ ಶೀಘ್ರ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

29ರಂದು ಕ್ರೀಡಾ ದಿನಾಚರಣೆ: ಧ್ಯಾನ್ ಚಂದ್ ಅವರ ಜನ್ಮದಿನದ ಅಂಗವಾಗಿ ಆ.29ರಂದು ರಾಷ್ಟ್ರೀಯ ಕ್ರೀಡಾ ದಿನ ಆಚರಿಸಲಾಗುವುದು. 'ಎಲ್ಲರನ್ನೂ ಒಳಗೊಳ್ಳುವ ಸದೃಢ ಸಮಾಜ ನಿರ್ಮಾಣ'ದ ಆಶಯದಲ್ಲಿ ಕ್ರೀಡಾ ದಿನ ಆಚರಿಸಲಾಗುತ್ತಿದೆ.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಅಂದು ಬೆಳಿಗ್ಗೆ 8ರಿಂದ ಸಂಜೆ 5ರವರೆಗೆ 30 ಕ್ರೀಡೆಗಳನ್ನು ನಡೆಸಲಾಗುವುದು. ಸುಮಾರು 8 ಸಾವಿರ ವಿದ್ಯಾರ್ಥಿಗಳು ಭಾಗವಹಿಸುವ ನಿರೀಕ್ಷೆ ಇದೆ. ಅಂದು ಎಲ್ಲ ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ ಶಿಕ್ಷಣ ಸಂಸ್ಥೆಗಳ ದೈಹಿಕ ಶಿಕ್ಷಕರನ್ನು ಸನ್ಮಾನಿಸಲಾಗುವುದು. ಈ ಸಂಪ್ರದಾಯವನ್ನು ಪ್ರತಿ ವರ್ಷವೂ ಮುಂದುವರಿಸಲು ನಿರ್ಧರಿಸಲಾಗಿದೆ ಎಂದರು.

ಇಲಾಖೆಯ ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ್ ಪ್ರಸಾದ್, ಆಯುಕ್ತ ಶಶಿಕುಮಾರ್ ಇದ್ದರು.

ಪಿಸಿಬಿ ಆಹ್ವಾನ: ಪಾಕ್‌ಗೆ ತೆರಳಲಿರುವ ಬಿನ್ನಿ, ಶುಕ್ಲಾ

ಲಾಹೋರ್ (ಪಿಟಿಐ): ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ ಮತ್ತು ಉಪಾಧ್ಯಕ್ಷ ರಾಜೀವ್ ಶುಕ್ಲಾ ಅವರು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಆಹ್ವಾನದಂತೆ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಕೆಲವು ಪಂದ್ಯಗಳನ್ನು ವೀಕ್ಷಿಸಲು ಪಾಕಿಸ್ತಾನಕ್ಕೆ ಭೇಟಿ ನೀಡಲಿದ್ದಾರೆ.

ಏಷ್ಯಾ ಕಪ್ ಟೂರ್ನಿಯ ಪಂದ್ಯಗಳನ್ನು ವೀಕ್ಷಿಸಲು ಪಾಕ್‌ಗೆ ಬರುವಂತೆ ಪಿಸಿಬಿ ಇತ್ತೀಚೆಗೆ ಬಿಸಿಸಿಐ ಪದಾಧಿಕಾರಿಗಳಿಗೆ ಆಹ್ವಾನ ನೀಡಿತ್ತು. 'ಬಿನ್ನಿ, ಶುಕ್ಲಾ ಮತ್ತು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರು ಶ್ರೀಲಂಕಾದ ಕ್ಯಾಂಡಿಯಲ್ಲಿ ಸೆ.2 ರಂದು ನಡೆಯಲಿರುವ ಭಾರತ– ಪಾಕಿಸ್ತಾನ ಪಂದ್ಯ ವೀಕ್ಷಿಸಲಿದ್ದಾರೆ. ಸೆ.3 ಕ್ಕೆ ಮೂವರೂ ಭಾರತಕ್ಕೆ ವಾಪಸಾಗುವರು. ಆ ಬಳಿಕ ಬಿಸಿಸಿಐ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ವಾಘಾ ಗಡಿ ಮೂಲಕ ಲಾಹೋರ್‌ಗೆ ಪ್ರಯಾಣಿಸುವರು' ಎಂದು ಮಂಡಳಿಯ ಮೂಲಗಳು ಹೇಳಿವೆ.

ಡುರಾಂಡ್: ಸೆಮಿಗೆ ಈಸ್ಟ್ ಬೆಂಗಾಲ್

ಕೋಲ್ಕತ್ತ (ಪಿಟಿಐ): ಜೋರ್ಡಾನ್ ಎಲ್ಸಿ ಗಳಿಸಿದ ಗೋಲಿನಿಂದ ಮತ್ತು ಎದುರಾಳಿ ತಂಡದ ಅಮಿನೌ ಬೌಬಾ ಅವರ ಉಡುಗೊರೆ ಗೋಲಿನಿಂದ ಈಸ್ಟ್ ಬೆಂಗಾಲ್ ತಂಡದವರು 2–1 ಅಂತರದಿಂದ ಗೋಕುಲಂ ಕೇರಳ ತಂಡವನ್ನು ಶುಕ್ರವಾರ ಸೋಲಿಸಿ ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯ ಸೆಮಿಫೈನಲ್ ತಲುಪಿದರು.

ಈಸ್ಟ್ ಬೆಂಗಾಲ್, ಸೆಮಿಫೈನಲ್‌ನಲ್ಲಿ ನಾರ್ತ್‌ಈಸ್ಟ್ ಯುನೈಟೆಡ್ ತಂಡವನ್ನು ಎದುರಿಸಲಿದೆ.

ಪುಣೆ ರೇಸ್

ಗ್ರೇಟ್ ಗನ್ಸ್ ಗೆಲ್ಲುವ ನಿರೀಕ್ಷೆ

ವೆಸ್ಟ್ರನ್ ಇಂಡಿಯಾ ರೇಸ್ ಹಾರ್ಸ್ ಓನರ್ಸ್ ಅಸೋಸಿಯೇಷನ್ ಟ್ರೋಫಿ ಶನಿವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಗ್ರೇಟ್ ಗನ್ಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸೀ ದಿ ಸನ್ 4, ಗ್ಯಾಂಗ್‌ಸ್ಟರ್ 2

2ನೇ ರೇಸ್: ಆರ್ಟ್ ಕಲೆಕ್ಟರ್ 1, ಆರ್ಮರಿ 6, ಮೂನ್‌ಲೈಟ್ ಕಿಸ್ 7

3ನೇ ರೇಸ್: ಗ್ರೇಟ್ ಗನ್ಸ್ 7, ಫ್ಲೆಮಿಂಗ್ ಲಂಬೋರ್ಗಿನಿ 6, ಅಶ್ವ ಮಗಧೀರ 5

4ನೇ ರೇಸ್: ಗಾಡೆಸ್ ಆಫ್ ಡಾನ್ 8, ಇನ್ ಟು ದಿ ಸ್ಟಾರ್ಮ್ 2, ವಂಡರ್ಲಸ್ಟ್ 4

5ನೇ ರೇಸ್: ಕಮಾಂಡ್‌ಮೆಂಟ್ 6, ಮೊನಾರ್ಕಿ 8, ಜೆಟ್‌ಫೈರ್ 3

6ನೇ ರೇಸ್: ಪೈರಸ್ 1, ಬ್ಯಾಂಕ್ಸಿ 2, ಅಟೈನ್ಡ್ 4

ಉತ್ತಮ ಬೆಟ್: ಸೀ ದಿ ಸನ್

ಜಾಕ್‌ಪಾಟ್ **2,3,4,5,6** ಟ್ರಿಬಲ್ **3,4,5**

ರಾಜೀನಾಮೆ ಕೊಡಲ್ಲ: ಲೂಯಿಸ್

ಬಾರ್ಸಿಲೋನಾ (ಎಎಫ್‌ಪಿ): ಇತ್ತೀಚೆಗೆ ಸ್ಪೇನ್ ತಂಡ ಮಹಿಳಾ ವಿಶ್ವ ಕಪ್ ಫುಟ್‌ಬಾಲ್ ಗೆದ್ದ ಸಂದರ್ಭದಲ್ಲಿ ಆಟಗಾರ್ತಿ ಜೆನ್ನಿ ಹೆರ್ಮೊಸೊ ಅವರ ತುಟಿಗೆ ಮುತ್ತು ಕೊಟ್ಟ ಫುಟ್‌ಬಾಲ್ ಫೆಡರೇಷನ್ ಅಧ್ಯಕ್ಷ ಲೂಯಿಸ್ ರುಬಿಯೇಲ್ಸ್ ವರ್ತನೆ 'ಸಮ್ಮತಾರ್ಹವಲ್ಲ' ಎಂದು ತಂಡದ ಸ್ಟಾರ್ ಆಟಗಾರ್ತಿ ಅಲೆಕ್ಸಿಯಾ ಪುಟೆಲ್ಲಾಸ್ ಹೇಳಿದ್ದಾರೆ.

'ರಾಜೀನಾಮೆ ಕೊಡಲ್ಲ': ಆಟಗಾರ್ತಿ ತುಟಿಗೆ ಚುಂಬಿಸಿ ವಿವಾದ ಮೈಗೆಳೆದುಕೊಂಡ ಲೂಯಿಸ್ ರುಬಿಯೇಲ್ಸ್ ಅವರು ತಾವು ಸ್ಪೇನ್ ಫುಟ್‌ಬಾಲ್ ಮುಖ್ಯಸ್ಥ ಸ್ಥಾನ ತ್ಯಜಿಸುವ ಪ್ರಶ್ನೆಯೇ ಇಲ್ಲ ಎಂದಿದ್ದಾರೆ. ದೇಶದ ಸಚಿವರು, ಕ್ರೀಡಾ ಕ್ಷೇತ್ರದ ಗಣ್ಯರಿಂದ ಟೀಕೆಗೊಳಗಾದ ಕಾರಣ ರುಬಿಯೇಲ್ಸ್ ರಾಜೀನಾಮೆ ನೀಡಬಹುದೆಂಬ ನಿರೀಕ್ಷೆಗಳಿದ್ದವು.

'ನನ್ನ ಚಾರಿತ್ರ್ಯಹನನದ ಪ್ರಯತ್ನ ನಡೆಯುತ್ತಿವೆ. ಅದು ಉದ್ದೇಶಪೂರ್ವಕ ಚುಂಬನ ಅಲ್ಲ. ಆಕೆಯೂ ನನ್ನನ್ನು ಸೆಳೆದಿದ್ದಳು. ಈ ಚುಂಬನವನ್ನು ಲೈಂಗಿಕ ದೌರ್ಜನ್ಯಕ್ಕೆ ಹೋಲಿಸಬಾರದು' ಎಂದಿದ್ದಾರೆ.

ಹಾಕಿ ಫೈವ್ಸ್ ವಿಶ್ವಕಪ್ ಅರ್ಹತಾ ಹಂತ: ಭಾರತ ಮಹಿಳೆಯರ ತಂಡಕ್ಕೆ ಜಯ

ನವದೆಹಲಿ (ಪಿಟಿಐ): ಭಾರತ ತಂಡದವರು ಮಹಿಳೆಯರ ಏಷ್ಯನ್ ಹಾಕಿ ಫೈವ್ಸ್ ವಿಶ್ವಕಪ್ ಅರ್ಹತಾ ಹಂತದ ಮೊದಲ ಪಂದ್ಯದಲ್ಲಿ 7–2 ಗೋಲುಗಳಿಂದ ಮಲೇಷ್ಯಾ ತಂಡವನ್ನು ಮಣಿಸಿದರು.

ಒಮಾನ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ನವಜೋತ್ ಕೌರ್ (3 ಮತ್ತು 28ನೇ ನಿ.), ಅಕ್ಷತಾ (4), ಮರಿಯಾನ ಕುಜೂರ್ (17), ಮೋನಿಕಾ ದೀಪಿ ಟೊಪ್ಪೊ (12 ಮತ್ತು 20) ಹಾಗೂ ಮಹಿಮಾ ಚೌಧರಿ (28) ಅವರು ಭಾರತ ತಂಡದ ಪರ ಗೋಲು ಗಳಿಸಿದರು.

ಮಲೇಷ್ಯಾ ತಂಡಕ್ಕೆ ವಾನ್ ವಾನ್ (7) ಮತ್ತು ಅಜೀಜ್ ಝುಫೀರಾ (11) ಅವರು ಚೆಂಡನ್ನು ಗುರಿ ಸೇರಿಸಿದರು.

'ಹಾಕಿ ಫೈವ್ಸ್' ಮಾದರಿಯಲ್ಲಿ ಪ್ರತಿ ತಂಡದಲ್ಲಿ ತಲಾ ಐದು ಮಂದಿ ಆಟಗಾರ/ ಆಟಗಾರ್ತಿಯರು ಇರುವರು. ತಲಾ 10 ನಿಮಿಷಗಳ ಎರಡು ಅವಧಿಗಳ ಆಟ ನಡೆಯುತ್ತದೆ.

ಏಷ್ಯನ್ ಗೇಮ್ಸ್: 634 ಕ್ರೀಡಾಪಟುಗಳ ಪಟ್ಟಿ ಬಿಡುಗಡೆ

ವಿನೇಶಾ, ಬಜರಂಗ್ ಪೂನಿಯಾ

ನವದೆಹಲಿ (ಪಿಟಿಐ): ಚೀನಾದ ಹ್ಯಾಂಗ್‌ಝೌನಲ್ಲಿ ಸೆ.23ರಿಂದ ನಡೆಯಲಿರುವ ಏಷ್ಯನ್ ಗೇಮ್ಸ್‌ನಲ್ಲಿ ಭಾರತ ತಂಡದ 634 ಕ್ರೀಡಾಪಟುಗಳ ಭಾಗವಹಿಸಲಿದ್ದು, ಈ ಪಟ್ಟಿಯನ್ನು ಕ್ರೀಡಾ ಸಚಿವಾಲಯ ಶುಕ್ರವಾರ ಬಿಡುಗಡೆ ಮಾಡಿದೆ. 2018ರಲ್ಲಿ ಜಕಾರ್ತಾ ಏಷ್ಯನ್ ಗೇಮ್ಸ್‌ನಲ್ಲಿ 572 ಮಂದಿ ಭಾಗವಹಿಸಿದ್ದರು.

ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಒಟ್ಟು 850 ಕ್ರೀಡಾಪಟುಗಳ ಹೆಸರನ್ನು ಸಚಿವಾಲಯಕ್ಕೆ ಶಿಫಾರಸು ಮಾಡಿತ್ತು.

ಅಥ್ಲೆಟಿಕ್ಸ್‌ನಲ್ಲಿ 34 ಪುರುಷರು ಮತ್ತು 31 ಮಹಿಳೆಯರು ಸೇರಿದಂತೆ ಒಟ್ಟು 65 ಅಥ್ಲೀಟುಗಳು ಭಾಗವಹಿಸಲಿದ್ದಾರೆ. ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ತಲಾ 22ರಂತೆ ಒಟ್ಟು 44 ಫುಟ್‌ಬಾಲ್ ಆಟಗಾರರು, ಹಾಗೆಯೇ ತಲಾ 18 ರಂತೆ ಒಟ್ಟು 36 ಹಾಕಿ ಆಟಗಾರರು, ತಲಾ 15 ರಂತೆ ಒಟ್ಟು 30 ಕ್ರಿಕೆಟ್ ಆಟಗಾರರು ಮತ್ತು ಆಟಗಾರ್ತಿಯರು ಪಾಲ್ಗೊಳ್ಳಲಿದ್ದಾರೆ.

ಶೂಟಿಂಗ್ ಸ್ಪರ್ಧೆಗೆ 30 ಮಂದಿಯ ತಂಡವನ್ನು, ಸೇಲಿಂಗ್ ಸ್ಪರ್ಧೆಗೆ 33 ಸ್ಪರ್ಧಿಗಳ ತಂಡವನ್ನು ಅಂತಿಮಗೊಳಿಸಲಾಗಿದೆ. ಚೆಸ್ ತಂಡದಲ್ಲಿ ಚೆಸ್ ವಿಶ್ವಕಪ್ ಟೂರ್ನಿಯ ರನ್ನರ್ ಅಪ್ ಆರ್. ಪ್ರಜ್ಞಾನಂದ, ದ್ರೋಣವಲ್ಲಿ ಹಾರಿಕಾ ಮೊದಲಾದವರು ಇದ್ದಾರೆ.

ವೇಟ್‌ಲಿಫ್ಟಿಂಗ್, ಜಿಮ್ನಾಸ್ಟಿಕ್ಸ್, ಹ್ಯಾಂಡ್‌ಬಾಲ್ ಮತ್ತು ರಗ್ಬಿ ಸ್ಪರ್ಧೆಗಳಿಗೆ ಯಾವುದೇ ಪುರುಷ ಅಥ್ಲೀಟ್‌ಗಳ ಹೆಸರು ಪಟ್ಟಿಯಲ್ಲಿ ಇಲ್ಲ. ಕುರಾಶ್ ಸ್ಪರ್ಧೆಗೆ ಇಬ್ಬರು, ವೇಟ್‌ಲಿಫ್ಟಿಂಗ್‌ಗೆ ಇಬ್ಬರು ಮಹಿಳೆಯರು ಮತ್ತು ಒಬ್ಬ ಜಿಮ್ನಾಸ್ಟ್ ಮಾತ್ರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಬಜರಂಗ್ ಅನಿಶ್ಚಿತ: ಕ್ರೀಡಾ ಸಚಿವಾಲಯವು ಒಲಿಂಪಿಯನ್ ಕುಸ್ತಿಪಟು ಬಜರಂಗ್ ಪೂನಿಯಾ (65 ಕೆಜಿ) ಹೆಸರನ್ನು ಪಟ್ಟಿಯಲ್ಲಿ ಸೇರಿಸಿದೆ. ಅವರಿಗೆ ಟ್ರಯಲ್ಸ್‌ನಿಂದ ವಿನಾಯಿತಿ ನೀಡಿ, ನೇರ ಅರ್ಹತೆಗೆ ಐಒಎ ಅಡ್‌ಹಾಕ್ ಸಮಿತಿ ಶಿಫಾರಸು ಮಾಡಿತ್ತು.

ಈ ಮಧ್ಯೆ ಬಜರಂಗ್, ಜಂತರ್ ಮಂತರ್‌ನಲ್ಲಿ ನಡೆದ ಪ್ರತಿಭಟನೆಗೆ ಬೆಂಬಲ ನೀಡಿದ ಎಲ್ಲಾ ಖಾಪ್ ಪಂಚಾಯತ್‌ಗಳು ಬಯಸಿದರೆ ಏಷ್ಯನ್ ಗೇಮ್ಸ್‌ನಿಂದ ದೂರ ಉಳಿಯುವ ಸುಳಿವು ನೀಡಿದ್ದಾರೆ.

'ಟ್ರಯಲ್ಸ್‌ನಲ್ಲಿ ನಾನು ಅಗ್ರಸ್ಥಾನ ಪಡೆದಿದ್ದು, ನನ್ನ ಹೆಸರನ್ನು ಸೇರಿಸಬೇಕು' ಎಂದು ವಿಶಾಲ್ ಕಾಳಿರಾಮನ್ ಸಚಿವಾಲಯವನ್ನು ಒತ್ತಾಯಿಸಿದ್ದರು.

ಏಷ್ಯನ್ ಗೇಮ್ಸ್ ಟ್ರಯಲ್ಸ್‌ನಿಂದ ವಿನಾಯಿತಿ ಪಡೆದರೂ ಮೊಣಕಾಲಿನ ಗಾಯದಿಂದಾಗಿ ವಿನೇಶಾ ಫೋಗಟ್ ಹಿಂದೆ ಸರಿದಿದ್ದು, ಅಂತಿಮ್ ಪಂಘಲ್ (53 ಕೆ.ಜಿ ವಿಭಾಗ) ಅವರ ಹೆಸರನ್ನು ಸೇರ್ಪಡೆ ಮಾಡಲಾಗಿದೆ.

ಅಮೆರಿಕ ಓಪನ್ ಟೆನಿಸ್: ತಾರತಮ್ಯ ವಿರುದ್ಧ ಧ್ವನಿಯೆತ್ತಿದ್ದ ಬಿಲ್ಲಿ ಜೇನ್ ಕಿಂಗ್

'ಸಮಾನ ಬಹುಮಾನ'ಕ್ಕೆ ಸುವರ್ಣ ಸಂಭ್ರಮ

ಬಿಲ್ಲಿ ಜೇನ್ ಕಿಂಗ್ –ಎಎಫ್‌ಪಿ ಚಿತ್ರ

ನ್ಯೂಯಾರ್ಕ್ (ಎಪಿ): ಸುಮಾರು 51 ವರ್ಷಗಳ ಹಿಂದೆ, 1972 ರಲ್ಲಿ ಬಿಲ್ಲಿ ಜೇನ್ ಕಿಂಗ್ ಅಮೆರಿಕ ಓಪನ್ ಟೆನಿಸ್ ಮಹಿಳಾ ಸಿಂಗಲ್ಸ್ ಪ್ರಶಸ್ತಿ ಗೆದ್ದಾಗ ಅವರ ಪ್ರತಿಕ್ರಿಯೆ ಮಾಮೂಲಿನಂತೆ ಇರಲಿಲ್ಲ. ಮತ್ತೊಮ್ಮೆ ಗೆಲ್ಲುವ ವಿಶ್ವಾಸದೊಡನೆ ಬರುವೆ ಎನ್ನುವ ಬದಲು ಮುಂದಿನ ವರ್ಷ ಆಡುವುದಿಲ್ಲ, ಬೇರೆ ಮಹಿಳೆಯರೂ ಸಹ– ಎಂದು ಎಚ್ಚರಿಕೆಯ ಧಾಟಿಯಲ್ಲಿ ಹೇಳಿದ್ದರು.

ಅವರ ಅಸಮಾಧಾನಕ್ಕೆ ಕಾರಣ ಅವರಿಗೆ ಆಗ ಪ್ರಶಸ್ತಿ ಗೆಲುವಿಗೆ $10,000 ನೀಡಿದ್ದು. ಇದು ಪುರುಷರ ವಿಭಾಗದಲ್ಲಿ ಗೆದ್ದ ಈಲಿ ನಸ್ತಾಸೆ ಅವರಿಗಿಂತ $15,000 ಕಡಿಮೆ. 'ಈ ತಾರತಮ್ಯ ತುಂಬಾ ಅಸಹ್ಯ ಎಂದು ಆಗಲೇ ಹೇಳಿದ್ದೆ' ಎಂದು ಬಿಲ್ಲಿ ಜೇನ್ ಕಿಂಗ್ ಗುರುವಾರ ನೆನಪಿಸಿಕೊಂಡರು.

ಅವರ ಈ ತೀಕ್ಷ್ಣ ಮಾತುಗಳ ಪರಿಣಾಮ, ಅಮೆರಿಕ ಟೆನಿಸ್ ಸಂಸ್ಥೆ (ಯುಎಸ್‌ಟಿಎ) 1973ರಲ್ಲಿಯೇ ಪುರುಷರ ಮತ್ತು ಮಹಿಳಾ ವಿಭಾಗದ ವಿಜೇತರಿಗೆ ಸಮಾನ ಬಹುಮಾನದ ಹಣ ನೀಡುವ ಪರಿಪಾಟ ಆರಂಭಿಸಿತು. ಎರಡೂ ವಿಭಾಗಗಳಲ್ಲಿ ಸಮಾನ ಬಹುಮಾನ ಮೊತ್ತ ನೀಡಿದ ಮೊದಲ ಪ್ರಮುಖ ಕ್ರೀಡಾ ಟೂರ್ನಿ ಇದು. ಈ ಐತಿಹಾಸಿಕ ಘಳಿಗೆಯ 50ನೇ ವರ್ಷದ ಸಂಭ್ರಮವನ್ನು ಈ ಬಾರಿ ಬಿಲ್ಲಿ ಜೇನ್ ಕಿಂಗ್ ಹೆಸರಿನಲ್ಲೇ ಇರುವ ಅರೇನಾದಲ್ಲಿ ಆಚರಿಸಲಾಗುವುದು.

'ಈಗ ಇದು ಸಾಮಾನ್ಯ ಆಗಿರಬಹುದು. ಆದರೆ 1973ರಷ್ಟು ಹಿಂದೆಯೇ ಅಮೆರಿಕ ಟೆನಿಸ್ ಸಂಸ್ಥೆ, ಇಂಥ ನಿರ್ಧಾರದ ವಿಷಯದಲ್ಲಿ ಇತರ ಕ್ರೀಡಾ ಸಂಸ್ಥೆಗಳಿಗಿಂತ ಮುಂದೆ ಹೋಗಿತ್ತು' ಎಂದು ಸ್ಟೇಸಿ ಅಲ್ಲಾಸ್ಟರ್ ಹೇಳಿದರು. ಅವರು 2020ರಲ್ಲಿ ಅಮೆರಿಕ ಓಪನ್ ಟೂರ್ನಿಯ ನಿರ್ದೇಶಕರಾದ ಮೊದಲ ಮಹಿಳೆ.

ಮಹಿಳಾ ಟೆನಿಸಿಗರು ತಾವು ಊಹಿಸಿರುವುದಕ್ಕಿಂತ ಹೆಚ್ಚು ಜನಪ್ರಿಯತೆ ಹೊಂದಿದ್ದಾರೆ ಎಂದು ಯುಎಸ್ ಓಪನ್‌ನಲ್ಲಿ ನಡೆದ ಸಮೀಕ್ಷೆಯೊಂದರ ಬಗ್ಗೆ ಕಿಂಗ್ ಅರಿತುಕೊಂಡಿದ್ದರು. ಆದರೆ ಪುರುಷ, ಮಹಿಳಾ ವಿಭಾಗದ ವಿಜೇತರಿಗೆ ಸಮಾನ ಮೊತ್ತ ಚೆಕ್ ನೀಡುವವರೆಗೆ, ಅದರಿಂದೇನೂ ಪ್ರಯೋಜನವಾಗುವುದಿಲ್ಲ ಎಂದು ಅವರು ಭಾವಿಸಿದ್ದರು. ಈ $15,000 ವ್ಯತ್ಯಾಸ ಸರಿದೂಗಿಸಲು ಅವರ ಪ್ರಾಯೋಜಕರನ್ನು ಕಂಡುಕೊಳ್ಳಲು ತಾವೇ ಮುಂದಾದರು.

'ನಾವು ಹಣ ತಂದುಕೊಟ್ಟರೆ, ಅದನ್ನು ಬಹುಮಾನವಾಗಿ ಕೊಡುವುದಿಲ್ಲ ಎಂದು ಅವರು ಹೇಗೆ ಹೇಳುತ್ತಾರೆ?' ಎಂದು ಮನಸ್ಸಿನಲ್ಲೇ ಪ್ರಶ್ನಿಸಿಕೊಂಡಿದ್ದರು.

ಹೀಗಾಗಿ ಆ ವರ್ಷದ (1973) ಬೇಸಿಗೆಯಲ್ಲೇ ಎರಡೂ ವಿಭಾಗಗಳ ಚಾಂಪಿಯನ್ನರಿಗೆ $25,000 ಬಹುಮಾನ ನೀಡುವ ನಿರ್ಧಾರ ಪ್ರಕಟಿಸಲಾಯಿತು. ಈಗ ಈ ಬಹುಮಾನದ ಮೊತ್ತ ತಲಾ $3 ದಶಲಕ್ಷ (₹24.78 ಕೋಟಿ) ಆಗಿದೆ.

ಮುಂದೆ ಇತರ ಗ್ರ್ಯಾಂಡ್‌ಸ್ಲಾಮ್ ಟೂರ್ನಿಗಳಲ್ಲೂ ಸಮಾನ ಮೊತ್ತ ನೀಡುವ ವ್ಯವಸ್ಥೆ ಶುರುವಾಯಿತು. ಇತರ ಕೆಲವು ಪ್ರತಿಷ್ಠಿತ ಟೂರ್ನಿಗಳಲ್ಲೂ ಸಮಾನ ಬಹುಮಾನ ಮೊತ್ತ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಈ ಮಹಿಳಾ ಟೆನಿಸ್ ಸಂಸ್ಥೆ (ಡಬ್ಲ್ಯುಟಿಎ) ಈ ವರ್ಷದ ಆರಂಭದಲ್ಲಿ ತಿಳಿಸಿದೆ.

ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್: ಸಾತ್ವಿಕ್–ಚಿರಾಗ್‌ಗೆ ನಿರಾಸೆ

ಸೆಮಿಗೆ ಪ್ರಣಯ್; ಪದಕ ಖಚಿತ

ಕೋಪೆನ್‌ಹೇಗನ್ (ಪಿಟಿಐ): ವಿಶ್ವದ ಅಗ್ರಮಾನ್ಯ ಆಟಗಾರ ವಿಕ್ಟರ್ ಅಕ್ಸೆಲ್ಸೆನ್ ಅವರನ್ನು ಮಣಿಸಿ ಸೆಮಿಫೈನಲ್ ಪ್ರವೇಶಿಸಿದ ಎಚ್‌.ಎಸ್.ಪ್ರಣಯ್, ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಪದಕ ಖಚಿತಪಡಿಸಿಕೊಂಡರು. ಆದರೆ ಪದಕದ ಭರವಸೆ ಎನಿಸಿದ್ದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಗೆ ನಿರಾಸೆ ಎದುರಾಯಿತು.

ಸೆಮಿಫೈನಲ್ ಪ್ರವೇಶಿಸಿದ ಎಚ್‌ಎಸ್‌ಪ್ರಣಯ್

ಶುಕ್ರವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮೊದಲ ಗೇಮ್ ಸೋತರೂ ಅಮೋಘ ರೀತಿಯಲ್ಲಿ ಪುಟಿದೆದ್ದು ನಿಂತ ಪ್ರಣಯ್ 13-21, 21-15, 21-16 ರಿಂದ ಗೆದ್ದು ನಾಲ್ಕರಘಟ್ಟಕ್ಕೆ ಲಗ್ಗೆಯಿಟ್ಟರು.

ಕೇರಳದ 31 ವರ್ಷದ ಪ್ರಣಯ್ ಬಿರುಸಿನ ಸ್ಮ್ಯಾಷ್, ಆಕರ್ಷಕ ರಿಟರ್ನ್ ಮತ್ತು ಡ್ರಾಪ್‌ಶಾಟ್‌ಗಳ ಮೂಲಕ ಹಾಲಿ ಚಾಂಪಿಯನ್ ಡೆನ್ಮಾರ್ಕ್‌ನ ಅಕ್ಸೆಲ್ಸೆನ್ ಅವರನ್ನು ನಿಬ್ಬೆರಗಾಗಿಸಿದರು. 68 ನಿಮಿಷಗಳ ಹಣಾಹಣಿಯಲ್ಲಿ ಗೆಲುವು ಒಲಿಸಿಕೊಂಡರು.

ಪ್ರಣಯ್ ಅವರು ಈ ವರ್ಷ ಮಲೇಷ್ಯಾ ಮಾಸ್ಟರ್ಸ್ ಸೂಪರ್ 500 ಟೂರ್ನಿ ಗೆದ್ದುಕೊಂಡಿದ್ದರಲ್ಲದೆ, ಆಸ್ಟ್ರೇಲಿಯಾ ಓಪನ್ ಟೂರ್ನಿಯಲ್ಲಿ 'ರನ್ನರ್ ಅಪ್' ಆಗಿದ್ದರು.

ಇಲ್ಲಿ ಸೆಮಿ ಪ್ರವೇಶಿಸುವ ಮೂಲಕ ಅವರು ವಿಶ್ವ ಚಾಂಪಿಯನ್‌ಷಿಪ್‌ನ ಇತಿಹಾಸದಲ್ಲಿ ಭಾರತಕ್ಕೆ 14ನೇ ಪದಕ ಖಚಿತಪಡಿಸಿಕೊಂಡರು. ಈ ಟೂರ್ನಿಯಲ್ಲಿ ಸೆಮಿಫೈನಲ್‌ನಲ್ಲಿ ಸೋತ ಆಟಗಾರರಿಗೆ ಕಂಚಿನ ಪದಕ ಸಿಗಲಿದೆ.

ಪಿ.ವಿ. ಸಿಂಧು ಅವರು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಸೇರಿದಂತೆ ಐದು ಪದಕ ಜಯಿಸಿದ್ದಾರೆ. ಸೈನಾ ನೆಹ್ವಾಲ್ (ಬೆಳ್ಳಿ ಮತ್ತು ಕಂಚು) ಎರಡು ಪದಕ ಗೆದ್ದಿದ್ದರೆ ಕಿದಂಬಿ ಶ್ರೀಕಾಂತ್ (ಬೆಳ್ಳಿ), ಲಕ್ಷ್ಯ ಸೇನ್ (ಕಂಚು), ಬಿ.ಸಾಯಿ ಪ್ರಣೀತ್ (ಕಂಚು) ಮತ್ತು ಪ್ರಕಾಶ್ ಪಡುಕೋಣೆ (ಕಂಚು) ಅವರು ಸಿಂಗಲ್ಸ್ ವಿಭಾಗದಲ್ಲಿ ಪದಕ ಗೆದ್ದ ಇತರರು.

ಪುರುಷರ ಡಬಲ್ಸ್‌ನಲ್ಲಿ ಕಳೆದ ಬಾರಿಯ ಟೂರ್ನಿಯಲ್ಲಿ ಸಾತ್ವಿಕ್–ಚಿರಾಗ್ ಹಾಗೂ 2011 ರಲ್ಲಿ ಮಹಿಳೆಯರ ಡಬಲ್ಸ್‌ನಲ್ಲಿ ಜ್ವಾಲಾ ಗುಟ್ಟಾ– ಅಶ್ವಿನಿ ಪೊನ್ನಪ್ಪ ಜೋಡಿ ಕಂಚು ಗೆದ್ದುಕೊಂಡಿತ್ತು.

ಸಾತ್ವಿಕ್–ಚಿರಾಗ್‌ಗೆ ನಿರಾಸೆ: ಪುರುಷರ ಡಬಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ಸಾತ್ವಿಕ್–ಚಿರಾಗ್ ಜೋಡಿ 18–21, 19–21 ರಿಂದ ಡೆನ್ಮಾರ್ಕ್‌ನ ಕಿಮ್ ಆಸ್ಟ್ರಪ್–ಆ್ಯಂಡರ್ಸ್ ಸ್ಕಾರುಪ್ ರಸ್ಮುಸೆನ್ ಎದುರು ಪರಾಭವಗೊಂಡಿತು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನದಲ್ಲಿರುವ ಸಾತ್ವಿಕ್– ಚಿರಾಗ್ ಅವರು 2021ರ ಚಾಂಪಿಯನ್‌ಷಿಪ್‌ನಲ್ಲಿ ಕಂಚು ಗೆದ್ದುಕೊಂಡಿದ್ದರು. ಸತತ ಎರಡನೇ ಪದಕ ಗೆಲ್ಲಬೇಕೆಂಬ ಅವರ ಆಸೆ ಈಡೇರಲಿಲ್ಲ. ಡೆನ್ಮಾರ್ಕ್ ಜೋಡಿ 48 ನಿಮಿಷಗಳಲ್ಲಿ ಜಯಿಸಿ ಸೆಮಿಫೈನಲ್‌ಗೆ ಮುನ್ನಡೆಯಿತು.

ಭಾರತದ ಶಕ್ತಿ ಹೆಚ್ಚಿಸಿದ ಪ್ರಜ್ಞಾನಂದ, ಗುಕೇಶ್ ಸಾಧನೆ

ಚೆನ್ನೈ (ಪಿಟಿಐ): ಭಾರತದ ಮೊದಲ ಗ್ರ್ಯಾಂಡ್‌ಮಾಸ್ಟರ್ ವಿಶ್ವನಾಥನ್ ಆನಂದ್ ಅವರು ಹಲವು ಟೂರ್ನಿಗಳಲ್ಲಿ ಯಶಸ್ಸು ಗಳಿಸಿ ದೀರ್ಘಕಾಲ ದೇಶದ ಚೆಸ್ ಲೋಕವನ್ನು ಆಳಿದವರು. ಆದರೆ ಕಳೆದ ಒಂದು ದಶಕದಿಂದ ಪರಿಸ್ಥಿತಿ ನಿಧಾನವಾಗಿ ಬದಲಾಗುತ್ತಿದೆ. ಹದಿಹರೆಯದ ಪ್ರತಿಭಾನ್ವಿತ ಆಟಗಾರರು ಪ್ರವರ್ಧಮಾನಕ್ಕೆ ಬಂದು ಭಾರತವನ್ನು ಈಗ ಚೆಸ್ ಆಟದಲ್ಲಿ ವಿಶ್ವದಲ್ಲೇ ಪ್ರಬಲ ತಂಡವನ್ನಾಗಿ ರೂಪಿಸುತ್ತಿದ್ದಾರೆ.

ಆರ್ ಪ್ರಜ್ಞಾನಂದ

ಡಿ.ಗುಕೇಶ್

ಭರವಸೆ ಮೂಡಿಸಿರುವ ಈಗಿನ ಯುವ ಆಟಗಾರರು ಭಾರತದ ಚೆಸ್ ಸುವರ್ಣ ಪೀಳಿಗೆಯವರು ಎಂದು ಸ್ವತಃ ವಿಶ್ವನಾಥನ್ ಆನಂದ್ ಬಣ್ಣಿಸಿದ್ದಾರೆ. ಆರ್.ಪ್ರಜ್ಞಾನಂದ, ಅರ್ಜುನ್ ಎರಿಗೇಶಿ, ಡಿ.ಗುಕೇಶ್ ಜೊತೆಗೆ ಅನುಭವಿ ವಿದಿತ್ ಎಸ್.ಗುಜರಾತಿ ಅವರು ಬಾಕುವಿನಲ್ಲಿ ನಡೆದ ವಿಶ್ವಕಪ್ ಟೂರ್ನಿಯಲ್ಲಿ ಕ್ವಾರ್ಟರ್‌ಫೈನಲ್ ತಲುಪಿದ್ದು ಭಾರತ ಚೆಸ್ ಆಟದಲ್ಲಿ ಸಾಧಿಸಿರುವ ಗಮನಾರ್ಹ ಪ್ರಗತಿಗೆ ಕನ್ನಡಿಯಾಗಿತ್ತು. ಹಿಂದಿನ ಸೋವಿಯತ್ ಯೂನಿಯನ್, ಅದು ವಿಭಜನೆಗೊಂಡ ನಂತರ ರಷ್ಯಾದ ಆಟಗಾರು ಹಲವು ದಶಕಗಳ ಕಾಲ ವಿಶ್ವ ಚೆಸ್ ಸಾಮ್ರಾಜ್ಯವನ್ನು ಆಳಿದ್ದರು.

ಪ್ರಜ್ಞಾನಂದ ಅವರು ಫೈನಲ್ ತಲುಪುವ ಮೂಲಕ ಭವಿಷ್ಯದ ಚಾಂಪಿಯನ್ ಆಟಗಾರನಾಗುವಂತೆ ಕಂಡಿದ್ದಾರೆ. ವಿಶ್ವಕಪ್ ಟೂರ್ನಿಯಲ್ಲಿ ಹಿಕಾರು ನಕಾಮುರಾ, ಫ್ಯಾಬಿಯಾನೊ ಕರುವಾನ ಮೊದಲಾದ ಘಟಾನುಘಟಿಗಳನ್ನು ಸೋಲಿಸಿದ್ದಾರೆ.

ಹದಿಹರೆಯದ ಮೂವರು– ಪ್ರಜ್ಞಾನಂದ (18), ಗುಕೇಶ್ (17) ಮತ್ತು ಎರಿಗೇಶಿ (19) ಅವರಂತೂ ವಿಶ್ವ ಮಟ್ಟದಲ್ಲಿ ಹೆಸರು ಮಾಡಿದ್ದಾರೆ. ಪ್ರಜ್ಞಾನಂದ ಈಗಾಗಲೇ ಸಾಧನೆಗಳ ಮೂಲಕ ಹೆಸರು ಮಾಡಿದರೆ, ಗುಕೇಶ್ ಕಳೆದ ಒಂದು ವರ್ಷದ ಅವಧಿಯಲ್ಲಿ ಸಾಧಿಸಿದ ಪ್ರಗತಿ ಆಗಾಧ. ಇತ್ತೀಚಿನ ದಿನಗಳಲ್ಲಿ ಅರ್ಜುನ್ ಎರಿಗೇಶಿ ಕೂಡ ದೊಡ್ಡ ಹೆಜ್ಜೆಗಳನ್ನಿಡುತ್ತಿದ್ದಾರೆ.

ಕಳೆದ ವರ್ಷ ಚೆನ್ನೈನಲ್ಲಿ ನಡೆದ ಒಲಿಂಪಿಯಾಡ್‌ನಲ್ಲಿ ಗುಕೇಶ್ ಮೊದಲ ಬೋರ್ಡ್‌ನಲ್ಲಿ ಚಿನ್ನದ ಪದಕ ಗಳಿಸಿದ್ದರು. ನಂತರ ಅವರ ರ‍್ಯಾಂಕಿಂಗ್ ಏರುತ್ತಲೇ ಇದೆ. ಇತ್ತೀಚೆಗಷ್ಟೇ ಅವರು ವಿಶ್ವನಾಥನ್ ಆನಂದ್ ಅವರನ್ನು ಕ್ರಮಾಂಕದಲ್ಲಿ ಹಿಂದೆ ಹಾಕಿ ಭಾರತದ ಅಗ್ರಮಾನ್ಯ ಆಟಗಾರ ಎನಿಸಿದ್ದಾರೆ.

ಪ್ರಜ್ಞಾನಂದ ಮುಂದಿನ ವರ್ಷ ನಡೆಯಲಿರುವ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡುವ ಅರ್ಹತೆ ಗಳಿಸಿದ್ದಾರೆ. ಆ ಮೂಲಕ ವಿಶ್ವ ಚಾಂಪಿಯನ್ ಡಿಂಗ್ ಲಿರೆನ್‌ಗೆ ಸವಾಲು ಎಸೆಯುವ ಆಟಗಾರನ ಸ್ಥಾನಕ್ಕೆ ಪೈಪೋಟಿ ನಡೆಸುವ ಹಾದಿಯಲ್ಲೂ ಸಾಗಿದ್ದಾರೆ.

ಕುಸ್ತಿ ಟ್ರಯಲ್ಸ್‌ನಲ್ಲಿ ಮಿಂಚಿದ ಅಂತಿಮ್ ಪಂಘಲ್

ಪಟಿಯಾಲ (ಪಿಟಿಐ): ಭಾರತದ ಯುವ ಕುಸ್ತಿಪಟು ಅಂತಿಮ್ ಪಂಘಲ್ ಅವರು ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ಗೆ ಭಾರತ ತಂಡದ ಆಯ್ಕೆಗೆ ಇಲ್ಲಿ ನಡೆಯುತ್ತಿರುವ ಟ್ರಯಲ್ಸ್‌ನಲ್ಲಿ ಗಮನ ಸೆಳೆದರು.

ಶುಕ್ರವಾರ ನಡೆದ ಮಹಿಳೆಯರ 53 ಕೆ.ಜಿ. ವಿಭಾಗದ ಟ್ರಯಲ್ಸ್‌ನಲ್ಲಿ ಅವರು ಅಗ್ರಸ್ಥಾನ ಪಡೆದರು. ಇದೇ ವಿಭಾಗದಲ್ಲಿ ಕಣದಲ್ಲಿದ್ದ ಮಂಜು, ಪೂಜಾ ಮತ್ತು ರಜನಿ ಅವರನ್ನು ಮಣಿಸಿದ ಅಂತಿಮ್ ಅವರು ಬೆಲ್‌ಗ್ರೇಡ್‌ನಲ್ಲಿ ಸೆ.16 ರಿಂದ ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆದುಕೊಂಡರು.

ಅಂತಿಮ್ ಅವರು ವಿಶ್ವ ಜೂನಿಯರ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಸತತ ಎರಡು ಚಿನ್ನ ಗೆದ್ದ ಭಾರತದ ಮೊದಲ ಕುಸ್ತಿಪಟು ಎಂಬ ಗೌರವ ತಮ್ಮದಾಗಿಸಿಕೊಂಡಿದ್ದರು. ಜೋರ್ಡನ್‌ನ ಅಮ್ಮಾನ್‌ನಲ್ಲಿ ಈಚೆಗೆ ನಡೆದಿದ್ದ 20 ವರ್ಷದೊಳಗಿನವರ ಚಾಂಪಿಯನ್‌ಷಿಪ್‌ಅನ್ನು ಗೆದ್ದುಕೊಂಡಿದ್ದರು.

ಏಷ್ಯನ್ ಗೇಮ್ಸ್ ಟ್ರಯಲ್ಸ್‌ನಲ್ಲಿ ನಿರಾಸೆ ಅನುಭವಿಸಿದ್ದ ದಿವ್ಯಾ ಕಾಕರನ್ ಮತ್ತು ಸರಿತಾ ಮೋರ್ ಅವರು ಪುಟಿದೆದ್ದು ನಿಂತು, ವಿಶ್ವ ಚಾಂಪಿಯನ್‌ಷಿಪ್‌ಗೆ ಅರ್ಹಗೆ ಗಿಟ್ಟಿಸಿಕೊಂಡರು. ಸರಿತಾ ಅವರು 57 ಕೆ.ಜಿ. ಮತ್ತು ದಿವ್ಯಾ ಅವರು 76 ಕೆ.ಜಿ. ವಿಭಾಗದಲ್ಲಿ ಅಗ್ರಸ್ಥಾನ ಪಡೆದರು.

ಲೈಂಗಿಕ ಸಮಸ್ಯೆಗೆ
ಆಯುರ್ವೇದಿಕ್ ಪರಿಹಾರ
ಸೆಕ್ಸ್ ಸಮಸ್ಯೆಗಳಾದ, ನಪುಂಸಕತೆ, ಸೆಕ್ಸ್ ಪವರ್ ಕಡಿಮೆ, ಕೂಡಲೇ ವೀರ್ಯ ಪತನವಾಗುವುದು, ಹಸ್ತಮೈಥುನದಿಂದಾಗಿ ಲಿಂಗದಲ್ಲಿ ದುರ್ಬಲತೆ, ಸಣ್ಣ ಲಿಂಗ ಮುಂತಾದವುಗಳಿಗೆ ಗ್ಯಾರಂಟಿ ಉಪಚಾರ, ಕೂಡಲೇ ಪರಿಣಾಮ. ಲಕ್ಷಾಂತರ ರೋಗಿಗಳಿಂದ ಭರವಸೆ ಪಡೆದಿದ್ದೇವೆ. ಬೇರೆ ಕಡೆ ಉಪಚಾರ ಮಾಡಿ ಪರಿಣಾಮ ಕಂಡುಬಂದಿಲ್ಲವಾದರೆ ಕೂಡಲೇ ನಮಗೆ ಕಾಲ್ ಮಾಡಿ ಜೀವನದ ಆನಂದ ಪಡೆಯಿರಿ.
02262676816

ಶ್ರೀ ಕ್ಷೇತ್ರ ಧರ್ಮಸ್ಥಳದ ಪ್ರಕಟಣೆ

ಜಾಹೀರಾತು

ಇತ್ತೀಚಿನ ಕೆಲ ಸಮಯದಿಂದ ಕ್ಷೇತ್ರದ ಭಕ್ತರಲ್ಲಿ, ಸಾರ್ವಜನಿಕರಲ್ಲಿ ಒಂದಷ್ಟು ಗೊಂದಲವಿರುವ ನಿಟ್ಟಿನಲ್ಲಿ ಈ ಸ್ಪಷ್ಟನೆ ನೀಡಲಾಗುತ್ತಿದೆ.

ಅಮಾಯಕ ಸೌಜನ್ಯಳ ಹತ್ಯೆಯ ಪ್ರಕರಣದ ತನಿಖೆಗಾಗಿ ಆಗ್ರಹಿಸಲಾಗುತ್ತಿರುವ ಪ್ರತಿಭಟನೆಯಲ್ಲಿ ಶ್ರೀ ಕ್ಷೇತ್ರದ ತೇಜೋವಧೆ ಮಾಡಲಾಗುತ್ತಿದೆ.

ಈ ಘಟನೆಯ ತನಿಖೆ ಯಾವುದೇ ಹಂತದಲ್ಲಿ ನಡೆಯುವುದಾದರೂ ಅದರಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಯಾರದ್ದೂ ಹಸ್ತಕ್ಷೇಪ ಈವರೆಗೂ ಇರಲಿಲ್ಲ, ಇನ್ನು ಮುಂದೆಯೂ ಇರುವುದಿಲ್ಲ.

ತಮಗೆಲ್ಲ ತಿಳಿದಿರುವಂತೆ ದಿನಾಂಕ : 09-10-2012ರಲ್ಲಿ ಕುಮಾರಿ ಸೌಜನ್ಯ ಕಾಣೆಯಾಗಿದ್ದಾಳೆ ಎಂಬ ಸುದ್ದಿ ತಿಳಿದು **ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಅಂದಿನ ಮಾನ್ಯ ಗೃಹಮಂತ್ರಿಯವರನ್ನು ಹಾಗೂ ಮಾನ್ಯ ಉಸ್ತುವಾರಿ ಸಚಿವರನ್ನು ದೂರವಾಣಿ ಮುಖೇನ ಸಂಪರ್ಕಿಸಿ ತನಿಖೆ ನಡೆಸಿ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ವಿನಂತಿಸಿದ್ದರು.**

ಅರ್ಜಿ ಬೆಳ್ತಂಗಡಿ ಪೋಲೀಸ್ ಠಾಣೆಯಲ್ಲಿ ದಾಖಲಾದಂತೆ ಬೆಳ್ತಂಗಡಿ ಪೋಲೀಸರಿಂದ ತನಿಖೆ ಆರಂಭವಾಗುತ್ತದೆ. ದಿನಾಂಕ: 10-10-2012 ರಂದು ಹತ್ಯೆಯಾದ ಸೌಜನ್ಯಳ ಶವವು ಪತ್ತೆಯಾಗುತ್ತದೆ. ದಿನಾಂಕ: 28-11-2012 ರಲ್ಲಿ ಕರ್ನಾಟಕದ ಸಿ.ಐ.ಡಿ ಇಲಾಖೆ ತನಿಖೆಯನ್ನು ಕೈಗೆತ್ತಿಕೊಂಡಿತು.

ಈ ಪ್ರಕರಣದ ತನಿಖೆಯ ತೀವ್ರತೆಯ ಕುರಿತು ಸಮಾಜದಲ್ಲಿ ಅಸಮಾಧಾನ ಕಂಡುಬಂದ ಕಾರಣ ತನಿಖೆಯನ್ನು ದೇಶದ **ಅತ್ಯುನ್ನತ ತನಿಖಾ ಸಂಸ್ಥೆಯಾದ ಸಿ.ಬಿ.ಐಗೆ ವರ್ಗಾಯಿಸುವಂತೆ ಶ್ರೀ ಹೆಗ್ಗಡೆಯವರು ಮಾನ್ಯ ಮುಖ್ಯಮಂತ್ರಿಯವರಿಗೆ ಪತ್ರವನ್ನು ಬರೆದರು.** ಇದಕ್ಕೆ ಸ್ಪಂದಿಸಿದ ಮಾನ್ಯ ಮುಖ್ಯಮಂತ್ರಿಗಳು ಪ್ರಕರಣವನ್ನು ಸಿ.ಬಿ.ಐಗೆ ಹಸ್ತಾಂತರಿಸಿದರು. ಅಂತೆಯೇ ದಿನಾಂಕ 06-11-2013 ರಲ್ಲಿ ಸಿ.ಐ.ಡಿ ಇಲಾಖೆಯಿಂದ ತನಿಖೆ ಸಿ.ಬಿ.ಐ ಇಲಾಖೆ ನಡೆಸುವಂತೆ ವರ್ಗಾಯಿಸಲ್ಪಟ್ಟಿತು.

ಸುಮಾರು ಒಂದು ವರ್ಷದ ನಂತರ ಧೀರಜ್ ಕೆಲ್ಲ, ಮಲ್ಲಿಕ್ ಜೈನ್, ಉದಯ ಜೈನ್ ಎಂಬ ಮೂವರು ಯುವಕರನ್ನು ಆರೋಪಿಗಳ ಸ್ಥಾನದಲ್ಲಿ ಬಿಂಬಿಸಿ ಇವರನ್ನು ಶ್ರೀ ಕ್ಷೇತ್ರದಿಂದ ರಕ್ಷಿಸಲಾಗುತ್ತಿದೆ ಎಂದು ದಿನ ಪತ್ರಿಕೆ, ಸಾಮಾಜಿಕ ಜಾಲತಾಣ ಹಾಗು ಟಿ.ವಿ ಮಾಧ್ಯಮಗಳಲ್ಲಿ ಸುಳ್ಳು ಪ್ರಚಾರ ಮಾಡಲಾಯಿತು.

ಆಗ ಆರೋಪ ಮಾಡುತ್ತಿರುವವರಾಗಲಿ ಅಥವಾ ಇತರ ಯಾರೊಬ್ಬರಾಗಲಿ ಈ ಮೂವರೂ ಸೌಜನ್ಯಳ ಹತ್ಯೆಯಲ್ಲಿ ಭಾಗೀದಾರರಾಗಿದ್ದರು ಎಂದು ಸಿ.ಬಿ.ಐ ತನಿಖಾಧಿಕಾರಿಗಳ ಎದುರು ಬಂದು ಸಾಕ್ಷಿ ನುಡಿಯಲಿಲ್ಲ. ಬದಲಾಗಿ ಇವರು ಆರೋಪಿಗಳೆಂದೂ, ಅವರಿಗೆ ದೊಡ್ಡ ಶಕ್ತಿಗಳ ಬೆಂಬಲ ಇದೆ ಎಂದು ಸಾರ್ವಜನಿಕರಿಗೆ ತಪ್ಪು ಮಾಹಿತಿ ನೀಡಿ ಅಲ್ಲಲ್ಲಿ ಸಭೆ ಮಾಡಿ ಸಾರ್ವಜನಿಕರಲ್ಲಿ ಶ್ರೀ ಕ್ಷೇತ್ರದ ಬಗ್ಗೆ ಗೊಂದಲ ಸೃಷ್ಟಿಸುವುದಷ್ಟೇ ಅವರ ಆರಂಭಿಕ ಉದ್ದೇಶವಾಗಿತ್ತು. ವಿಷಯ ಹೀಗಿದ್ದಾಗ್ಯೂ ಶ್ರೀ ಕ್ಷೇತ್ರದ ಕಡೆಯಿಂದ ಪೂರಕವಾದ ದಾಖಲೆಗಳನ್ನು ಮಾಧ್ಯಮಗಳ ಮುಂದೆ ನೀಡಿದ್ದು ನಂತರದ ದಿನಗಳಲ್ಲಿ ಈ ವಿಚಾರಕ್ಕೆ ಸಂಬಂಧಿಸಿದಂತೆ ಗೊಂದಲ ನಿವಾರಣೆಯಾಗಿತ್ತು.

ಈಗ ಮತ್ತೊಂದು ಸುತ್ತಿನ ಆರೋಪಕ್ಕೆ ಪ್ರಾರಂಭಿಸಿ ಮಾಧ್ಯಮದ ಮುಂದೆ ಗಂಟೆಗಟ್ಟಲೆ ಮಾತನಾಡಲು ಧೈರ್ಯ ತೋರಿಸುವ ಹೋರಾಟಗಾರರು ಅಥವಾ ಅವರ ಬೆಂಬಲಿಗರು ಸಿ.ಬಿ.ಐ ತನಿಖಾ ಸಂದರ್ಭದಲ್ಲಿ ಅವರು ಆರೋಪಿಸುತ್ತಿರುವವರ ಬಗ್ಗೆ ಯಾವುದೇ ಸಾಕ್ಷಿಗಳನ್ನು ನೀಡಲು ಬರಲಿಲ್ಲ.

ಇವರ ಗಾಳಿ ಸುದ್ದಿ / ಆರೋಪಗಳನ್ನು ಸಿ.ಬಿ.ಐ ಯವರೂ ಆಲಿಸಿದ್ದಾರೆ / ಗಮನಿಸಿದ್ದಾರೆ. ಹಾಗಾಗಿ ಅತ್ಯಂತ ಆಳವಾಗಿ ಮತ್ತು ಸುದೀರ್ಘವಾಗಿ ಈ ಮೂವರೂ ಯುವಕರ ತನಿಖೆಯೂ ನಡೆದಿದೆ. ಆದರೆ ಈ ಸತ್ಯವನ್ನು ಮರೆಮಾಚಿ ಇವರನ್ನು ಸಿ.ಬಿ.ಐ ತನಿಖೆಯೇ ಮಾಡಿಲ್ಲ ಅಥವಾ ಸಿ.ಬಿ.ಐ ಸರಿಯಾಗಿ ತನಿಖೆ ನಡೆಸಿಲ್ಲ ಎಂದು ರಾಷ್ಟ್ರದ ಅತ್ಯುನ್ನತ ತನಿಖಾ ಸಂಸ್ಥೆಯೊಂದರ ಮೇಲೆ ಆರೋಪ ಹೊರಿಸುವುದು ಸಹನೀಯವಲ್ಲ.

ಧೀರಜ್ ಕೆಲ್ಲ, ಮಲ್ಲಿಕ್ ಜೈನ್, ಉದಯ ಜೈನ್ ಎಂಬ ಈ ಮೂವರು ಯವಕರನ್ನು ಈ ಕೆಳಗಿನಂತೆ ಸಿ.ಬಿ.ಐ ನ್ಯಾಯಾಲಯದ ಆದೇಶದ ಪ್ರಕಾರ ತನಿಖೆಗೆ ಒಳಪಡಿಸಲಾಗಿದೆ.

2014 ನೇ ಇಸವಿಯ ಜುಲೈ ಹಾಗೂ ಆಗಸ್ಟ್ ತಿಂಗಳಲ್ಲಿ ಸಿ.ಬಿ.ಐ ತನಿಖಾ ಸಂಸ್ಥೆ ಎರಡೆರಡು ಬಾರಿ ಬೆಳ್ತಂಗಡಿ ಪ್ರವಾಸಿ ಮಂದಿರದಲ್ಲಿ, ಚೆನ್ನೈಯಲ್ಲಿ ಹಾಗೂ ಬೆಂಗಳೂರಿನಲ್ಲಿ ತನಿಖೆ ನಡೆಸಿರುತ್ತದೆ. ಅದಕ್ಕಿಂತ ಮುಂಚೆ ಸಿ.ಐ.ಡಿ ಇಲಾಖೆಯವರೂ ಎರಡೆರಡು ಬಾರಿ ತನಿಖೆ ನಡೆಸಿದ್ದರು.

ತನಿಖೆಯ ಪ್ರಮುಖ ಭಾಗವಾಗಿ ಸಿ.ಬಿ.ಐ ಇಲಾಖೆಯು ಬೇರೆ ಬೇರೆ ಕೋನಗಳಿಂದ ಈ ಕೆಳಗಿನಂತೆ ತನಿಖೆ ನಡೆಸಿರುತ್ತದೆ.

1. ಮೊಬೈಲ್ ಲೊಕೇಶನ್ ಟ್ರೇಸ್ ಮಾಡಿರುತ್ತಾರೆ.
2. ರಕ್ತ ಪರೀಕ್ಷೆ ನಡೆಸಿರುತ್ತಾರೆ.
3. ಡಿ.ಎನ್.ಎ. ಪರೀಕ್ಷೆ ಮಾಡಿರುತ್ತಾರೆ.
4. ಸುಳ್ಳು ಪತ್ತೆ ಪರೀಕ್ಷೆ (ಪಾಲಿಗ್ರಾಫ್ ಟೆಸ್ಟ್) ಮಾಡಿರುತ್ತಾರೆ.
5. ಮಂಪರು ಪರೀಕ್ಷೆ ಸಹ ಮಾಡಿರುತ್ತಾರೆ. (ಬ್ರೈನ್‌ಮ್ಯಾಪಿಂಗ್)
6. ಇನ್ನೂ ಅನೇಕ ರೀತಿಯ ವೈಜ್ಞಾನಿಕ ವಿಧಿ-ವಿಧಾನ ಅನುಸರಿಸಿ ತನಿಖೆ ನಡೆಸಿರುತ್ತಾರೆ.

ಬ್ರೈನ್‌ಮ್ಯಾಪಿಂಗ್ (ಮಂಪರು ಪರೀಕ್ಷೆ) ಅಂದರೆ ಸತ್ಯಾಂಶ ಪಡೆಯಲು ಆ ವ್ಯಕ್ತಿಯ ಒಪ್ಪಿಗೆ ಇದ್ದಲ್ಲಿ ಮಾತ್ರ ನ್ಯಾಯಾಲಯ ಮಂಪರು ಪರೀಕ್ಷೆಗೆ ಆದೇಶ ನೀಡುತ್ತದೆ. ಈ ಪರೀಕ್ಷೆಯಲ್ಲಿ ವ್ಯಕ್ತಿಗೆ ಸೋಡಿಯಂ ಅಮಿಟಾಲ್‌ನಂತಹ ಔಷಧಿ ನೀಡಲಾಗುತ್ತದೆ. ಇದು ವ್ಯಕ್ತಿಯ ಮೇಲೆ ಸಮ್ಮೋಹನದಂತಹ ಪರಿಣಾಮ ಬೀರುತ್ತದೆ. ಅರೆಪ್ರಜ್ಞಾವಸ್ಥೆಯಲ್ಲಿರುವ ವ್ಯಕ್ತಿಯನ್ನು ಪ್ರಶ್ನಿಸಿದಾಗ ಆತ ಸತ್ಯವನ್ನೇ ಹೇಳುತ್ತಾನೆ. ಔಷಧ ನೀಡುವಿಕೆಯಲ್ಲಿ ಕಿಂಚಿತ್ತೂ ವ್ಯತ್ಯಾಸವಾದಲ್ಲಿ ವ್ಯಕ್ತಿಯು ಕೋಮಾಗೆ ಜಾರುವ ಅಥವಾ ಮರಣವನ್ನಪ್ಪುವ ಸಾಧ್ಯತೆ ಇದೆ. **ಇಂತಹ ಅಪಾಯಕಾರಿಯಾದ ಪರೀಕ್ಷೆಯನ್ನು ಕೂಡಾ ಸ್ವಇಚ್ಛೆಯಿಂದ ಒಪ್ಪಿಕೊಂಡು ಈ ಮೂವರೂ ಪರೀಕ್ಷೆಗೆ ಒಳಪಟ್ಟಿರುತ್ತಾರೆ.**

ಅಂತೆಯೇ ಬೆಂಗಳೂರಿನಲ್ಲಿ ಇವರ ಪಾಲಿಗ್ರಾಫ್ ಪರೀಕ್ಷೆ ಹಾಗೂ ಬ್ರೈನ್‌ಮ್ಯಾಪಿಂಗ್ ನಡೆಸಿ ಸಿ.ಬಿ.ಐ ಇಲಾಖೆಯು ವರದಿಯನ್ನು **ದಿನಾಂಕ 25-03-2015 ರಂದು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿತು. ಹಾಗು ಈ ಮೂವರಿಗೂ ಸೌಜನ್ಯಳ ಹತ್ಯೆಗೂ ಯಾವುದೇ ಸಂಬಂಧವಿಲ್ಲದ ಕಾರಣ ಮುಂದಕ್ಕೆ ಈ ಪ್ರಕರಣದಲ್ಲಿ ಇವರ ಅವಶ್ಯಕತೆ ಇರುವುದಿಲ್ಲ ಎಂದು ಸಹ ಸಿ.ಬಿ.ಐ ನ್ಯಾಯಾಲಯಕ್ಕೆ ಸಿ.ಬಿ.ಐ. ಇಲಾಖೆ ನಿವೇದಿಸಿದೆ.**

ಆದರೂ ಸೌಜನ್ಯಳ ತಂದೆ ಮಾನ್ಯ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಈ ಮೂವರನ್ನು ಸಹ ಆರೋಪಿಗಳಾಗಿ ಸಮನ್ಸ್ ಮಾಡಬೇಕೆಂದು ಅರ್ಜಿ ಸಲ್ಲಿಸಿದಂತೆ ಮಾನ್ಯ ಸಿ.ಬಿ.ಐ ನ್ಯಾಯಾಲಯವು ದಿನಾಂಕ: 07-02-2017 ರಲ್ಲಿ ಸದ್ರಿ ಅರ್ಜಿಯ ಪ್ರಕಾರ ಈ ಮೂವರಿಗೂ ಇವರ ಅನುಪಸ್ಥಿತಿಯಲ್ಲಿ ಸಮನ್ಸ್ ನೀಡಿ ನ್ಯಾಯಾಲಯಕ್ಕೆ ಹಾಜರಾಗಲು ಆದೇಶ ಮಾಡಿತು. ಆದರೆ ಈಗಾಗಲೇ ಎಲ್ಲಾ ರೀತಿಯ ತನಿಖೆ ಮುಗಿದಿರುವುದರಿಂದ ಈ ರೀತಿ ಸಮನ್ಸ್ ನೀಡಿರುವುದು ಸರಿಯಲ್ಲ ಎಂದು ಸದ್ರಿ ಸಮನ್ಸ್ ಆದೇಶವನ್ನು ರದ್ದುಮಾಡಬೇಕೆಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ CRL.P.No. 1928/2017 ರಂತೆ ಈ ಯುವಕರು ಅರ್ಜಿ ಸಲ್ಲಿಸಿದಾಗ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ಇವರ ಮನವಿಯನ್ನು ಪುರಸ್ಕರಿಸಿತು. ಮತ್ತೊಮ್ಮೆ ಈ ಮೂವರನ್ನೂ ಆರೋಪಿಗಳಾಗಿ ಈ ಕೇಸಿನಲ್ಲಿ ಪರಿಗಣಿಸಬೇಕಾಗಿ ಅರ್ಜಿ ಹಾಕಿದಾಗ ಸ್ವತಃ ಸಿ.ಬಿ.ಐ ನ್ಯಾಯಾಲಯವು **ಈ ಮೂವರನ್ನೂ ಆರೋಪಿಗಳೆಂದು ಬಿಂಬಿಸುವ ಯಾವುದೇ ಸಾಕ್ಷಿ ಅಥವಾ ಆಧಾರ ಅಥವಾ ಅದಾಗಲೇ ಸಾಕ್ಷಿ ನುಡಿದಿದ್ದ ಯಾರ ಸಾಕ್ಷಿದಲ್ಲೂ ಸಹ ಆರೋಪಿಗಳೆಂದು ತೀರ್ಮಾನಕ್ಕೆ ಬರುವ ಯಾವುದೇ ಅಂಶಗಳು ಕಂಡುಬಾರದ ಕಾರಣ ಅವರ ಅರ್ಜಿಯನ್ನು ದಿನಾಂಕ: 04-10-2021 ರಲ್ಲಿ ವಜಾಗೊಳಿಸಿದೆ.**

ಸೌಜನ್ಯಳ ತಂದೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ W.P No. 2208/2018 ರಂತೆ ಈ ಕೇಸನ್ನು ಸಿ.ಬಿ.ಐ ಯವರು ಸರಿಯಾಗಿ ತನಿಖೆ ನಡೆಸಲಿಲ್ಲ ಹಾಗಾಗಿ ಮರು ತನಿಖೆ ನಡೆಸುವಂತೆ ಆದೇಶಿಸಬೇಕೆಂದು ಒಂದು ರಿಟ್ ಪಿಟಿಶನ್ (writ petition) ಸಹ ಸಲ್ಲಿಸಿದ್ದರು. ಸಿ.ಬಿ.ಐ ಯವರು ಸರಿಯಾಗಿ ಮತ್ತು ಆಳವಾಗಿ ತನಿಖೆ ನಡೆಸಿದ್ದರೂ ಅರ್ಜಿದಾರ ಚಂದಪ್ಪ ರವರು ಕೇವಲ ಸಂಶಯ ಅಥವಾ ಅನುಮಾನದಿಂದ ಸಲ್ಲಿಸಿದ ಸದ್ರಿ ರಿಟ್ ಪಿಟಿಶನ್ (writ petition)ಗೆ ಯಾವುದೇ ಮಹತ್ವ ನೀಡುವಂತಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿನಾಂಕ: 27-01-2021 ರಲ್ಲಿ ಸದ್ರಿ ರಿಟ್ ಪಿಟಿಶನ್ ಸಹ ವಜಾ ಮಾಡಿರುತ್ತದೆ. ಹಾಗೂ **ಸದ್ರಿ ಆದೇಶದ ಮೇಲೆ ಯಾವುದೇ ಅಪೀಲು ಸಲ್ಲಿಕೆಯಾಗಿಲ್ಲ. ವಿಷಯ ಹೀಗಿದ್ದಾಗ್ಯೂ, ಸಹ, ಪ್ರಸ್ತುತ ಸೌಜನ್ಯಳ ತಾಯಿ ಶ್ರೀ ಕ್ಷೇತ್ರವನ್ನು ಅವಹೇಳನಕಾರಿಯಾಗಿ ನಿಂದಿಸುತ್ತಿರುವುದು ಅವರ ವಸ್ತುಸ್ಥಿತಿಯನ್ನು ಮರೆಮಾಚುವ ಮತ್ತು ಸುಳ್ಳನ್ನು ಸತ್ಯ ಮಾಡುವ ಪ್ರಯತ್ನ ಎಂದು ವೇದ್ಯವಾಗುತ್ತದೆ.**

ಈ ಮೇಲೆ ತಿಳಿಸಿದ ಎಲ್ಲಾ ವಿಚಾರಗಳು ಅಂದರೆ ಸಿ.ಬಿ.ಐ ಅವರಿಂದ ಆದ ಈ ಮೂವರ ತನಿಖೆ, ಬ್ರೈನ್‌ಮ್ಯಾಪಿಂಗ್, ಪಾಲಿಗ್ರಾಫ್ ಪರೀಕ್ಷೆ, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಎರಡು ಆದೇಶಗಳು ಹಾಗೂ ಸಿ.ಬಿ.ಐ ಕೋರ್ಟು ಈ ಮೂವರ ಪರವಾಗಿ ನೀಡಿದ ಆದೇಶಗಳ ಬಗ್ಗೆ ಪೂರ್ಣ ಮಾಹಿತಿ ಇದ್ದರೂ ಸಹ ಈಗ ಹೋರಾಟ ನಡೆಸುತ್ತಿರುವವರು ಸಾರ್ವಜನಿಕರಿಗೆ ಸುಳ್ಳು ಮಾಹಿತಿ ನೀಡಿ ಗೊಂದಲ ಸೃಷ್ಟಿಸಿದ್ದಾರೆ. ಶ್ರೀ ಹೆಗ್ಗಡೆಯವರ ಕುಟುಂಬದ ಓರ್ವ ಸದಸ್ಯನನ್ನು ಈ ಘಟನೆಯಲ್ಲಿ ಸಿಲುಕಿಸಲು ಪ್ರಯತ್ನ ನಡೆದಿತ್ತು. ಆ ಸಂದರ್ಭದಲ್ಲಿ ಅವರು ಅಮೇರಿಕಾದ ನ್ಯೂಯಾರ್ಕ್‌ನಲ್ಲಿ ಉನ್ನತ ವ್ಯಾಸಂಗ ಮಾಡುತ್ತಿದ್ದರು. ಇದಕ್ಕೆ ಪೂರಕವಾದ ಎಲ್ಲಾ ದಾಖಲೆಗಳನ್ನು ಈಗಾಗಲೆ ಒದಗಿಸಿರುವುದು ಗಮನಾರ್ಹ. ಈ ಎಲ್ಲಾ ವಿಚಾರಗಳನ್ನು ಪರಿಗಣಿಸಿದ ಮಾನ್ಯ ಸಿವಿಲ್ ನ್ಯಾಯಾಲಯ, ಈಗಾಗಲೇ ದಾಖಲಿಸಿದ ಮಾನನಷ್ಟ ದಾವೆ ಹಾಗೂ ಶಾಶ್ವತ ನಿರ್ಬಂಧಕಾಜ್ಞೆ ದಾವೆಯಲ್ಲಿ ಸ್ವಯಂಘೋಷಿತ ಹೋರಾಟಗಾರರ ವಿರುದ್ಧ ಶ್ರೀ ಕ್ಷೇತ್ರದ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರ ಮತ್ತು ಅವರ ಕುಟುಂಬಸ್ಥರನ್ನು ಅವಮಾನಿಸುವುದು ಮತ್ತು ಅವರನ್ನು ಅವಹೇಳನ ಮಾಡಬಾರದಾಗಿ ಆದೇಶ ಮಾಡಿರುವುದು ಎಲ್ಲರಿಗೂ ತಿಳಿದಿರುವ ವಿಚಾರವಾಗಿರುತ್ತದೆ. ಆದರೂ ಹೋರಾಟಗಾರರು ಹಾಗೂ ಸಂತ್ರಸ್ಥೆಯ ಕುಟುಂಬಸ್ಥರು ಪದೇ ಪದೇ ಈ ವಿಷಯವನ್ನು ಪ್ರಸ್ತಾಪಿಸುವುದು ಕಂಡುಬರುತ್ತಿದ್ದು ಇದನ್ನು ಮುಂದುವರಿಸಿದಲ್ಲಿ ಕಾನೂನಾತ್ಮಕವಾಗಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಈ ದೇಶದ ಸಂವಿಧಾನವೂ ದೊಡ್ಡದಲ್ಲ, ಈ ದೇಶದ ಕಾನೂನೂ ದೊಡ್ಡದಲ್ಲ, ಈ ರಾಜ್ಯದ ನ್ಯಾಯಾಂಗದ ವ್ಯವಸ್ಥೆಯೂ ದೊಡ್ಡದಲ್ಲ, ಆದರೆ ತಾವು ಹೇಳುವುದೇ ಸತ್ಯ ಎನ್ನುವ ರೀತಿಯಲ್ಲಿ ಸಾರ್ವಜನಿಕರನ್ನು ವಂಚಿಸುತ್ತಾ ಯಾವುದೋ ರಹಸ್ಯ ಕಾರ್ಯಕ್ಕೆ ತೊಡಗಿರುವ ಅವರ ಎಲ್ಲಾ ಆರೋಪಗಳನ್ನು ಸಾರ್ವಜನಿಕರು ಖಂಡಿಸಬೇಕಾಗಿದೆ.

ಈ ಮೇಲಿನ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ಹೋರಾಟಗಾರರು ಹಾಗೂ ಅವರ ಜೊತೆಗೆ ಸೇರಿಕೊಂಡಿರುವ ಸಂಸ್ಥೆಗಳು ಶ್ರೀ ಕ್ಷೇತ್ರ ಧರ್ಮಸ್ಥಳ ಹಾಗೂ ಶ್ರೀ ಹೆಗ್ಗಡೆಯವರ ಹಾಗೂ ಅವರ ಕುಟುಂಬದವರ ಮೇಲೆ ಮಾಡುವ ಆರೋಪಗಳು ಹಾಗೂ ಕೀಳು ಭಾಷೆಯ ನಿಂದನೆಗಳ ಹಿಂದೆ ಭಾರಿ ದೊಡ್ಡ ಷಡ್ಯಂತ್ರ / ದುರುದ್ದೇಶ ಇದೆ ಎನ್ನುವುದರಲ್ಲಿ ಎರಡು ಮಾತಿಲ್ಲ. ಪ್ರಜ್ಞಾವಂತ ಸಾರ್ವಜನಿಕರೆಲ್ಲರೂ ಈ ಸತ್ಯವನ್ನು ತಿಳಿದುಕೊಳ್ಳಬೇಕಾಗಿ ಅಪೇಕ್ಷೆ.

ವಿಷಯ ಹೀಗಿದ್ದಾಗ್ಯೂ ಸಹ ಶ್ರೀ ಕ್ಷೇತ್ರವು ಯಾವುದೇ ರೀತಿಯ ನ್ಯಾಯಾಂಗ ತನಿಖೆ ಅಥವಾ ರಾಜ್ಯ ಸರಕಾರದ ಯಾವುದೇ ತನಿಖಾ ಸಂಸ್ಥೆಯಿಂದ ತನಿಖೆ ನಡೆಸುವುದಾದಲ್ಲಿ ಕುಮಾರಿ ಸೌಜನ್ಯಳ ಸಾವಿಗೆ ನ್ಯಾಯವೊದಗಿಸುವ ದೃಷ್ಟಿಯಿಂದ ಸ್ವಾಗತಿಸುತ್ತೇವೆ ಮತ್ತು ಅದಕ್ಕೆ ಪೂರಕವಾದ ಸಹಕಾರವನ್ನು ಒದಗಿಸುತ್ತೇವೆ.

ರತ್ನವರ್ಮ ಬುಣ್ಣು
ಕಾನೂನು ಸಲಹೆಗಾರರು, ಶ್ರೀ ಕ್ಷೇತ್ರ ಧರ್ಮಸ್ಥಳ

ಪ್ರಜಾವಾಣಿ ಶನಿವಾರ • ಆಗಸ್ಟ್ 26, 2023

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

WEEKEND CORNER

ಕ್ಲಾಸಿಫೈಡ್ಸ್

REAL ESTATE SELLING

Sites

Bommanahalli

"MICO LAYOUT Bommanahalli Semi-commercial 30x42 BBMP A Katha site for sale Contact: 9845146725/ 9741466369"

Banashankari

BANASHANKARI 6TH Stage- WANTED/ AVAILABLE BDA Sites All Measurements Residential/ Commercial Sites Contact- 8050908920/ 9986866661

BDASITES WANTED Arkavathy,Anjanapura, Banashankari 6th-Stage,Kempegowda Vishweswaraiah Any BDA Layout, Contact: 9845062822, 8660751654

30X40 TWO Corner Site Sale VarahaSandra conversion 'A' Khatha, Hemigepura Ward. Rate-4,500/- negotiable - 9731652042

50X80 BDA Site For_Sale South Facing Banashankari 3rd Stage Ring Road Call:_9900277889 9986377964

'AVAILABLE 'AND Wanted Banashankari 6th Stage, Anjanapura, BDA And BBMP Sites,20X30,30X40,40X60, 50X80,Contact:9900097239

BTM Layout

SALE BDA BTM Stage 2, MICO Layout Independent House 30'×50 best for future development, investment 3.50CR. +918660563308.

ನಿಮ್ಮ ಕನಸಿನ ನಿವೇಶನವನ್ನು ನಿಮ್ಮದಾಗಿಸಿಕೊಳ್ಳಿ..!!

Man ENCLAVE

ಚಿನ್ನಕುರ್ಚಿ
ಸ್ಪಾಟ್ ಬುಕ್ಕಿಂಗ್ ಮಾಡಿದವರಿಗೆ 100 ಗ್ರಾಂ ಬೆಳ್ಳಿಯ ಲಕ್ಷ್ಮಿ ವಿಗ್ರಹ ಉಚಿತ

VP Panchayat Approved

ಪ್ರಾರಂಭಿಕ ಬೆಲೆ ₹ 1499/-
ಕನಕಪುರ ರಸ್ತೆ ಇಂದ ಕೇವಲ 5 kms
ಕುಂಬಳಗೋಡುನಿಂದ ಕೇವಲ 7 kms
ಅಳತೆ 20×30, 20×40, 30×30, 30×40

ಸಂಪರ್ಕಕ್ಕಾಗಿ ಕೇಂದ್ರೀಕೃತವಾಗಿದೆ
ವಿವೇಕಾನಂದ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಇಂದ 5 ನಿಮಿಷ
ಬಿಜಿಎಸ್ ರೆಸಿಡೆನಿಯಲ್ ಶಾಲೆ ಮತ್ತು ಡಿಪಿಎಸ್ ಕೆ ಗೊಲ್ಲಹಳ್ಳಿ ಇಂದ 10 ನಿಮಿಷ
ದಯಾನಂದ ಸಾಗರ್ ಕಾಲೇಜು ಅಫ್ ಇಂಜಿನಿಯರಿಂಗ್ ನಿಂದ 10 ನಿಮಿಷ
ಸಿಲ್ಕ್ ಇನ್ಸಿಟ್ಯೂಟ್ ಮೆಟ್ರೋ ನಿಂದ 15 ನಿಮಿಷ

ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡಿದೆ.

ಬ್ಯಾಂಕ್ ಗಳಿಂದ ಸಾಲ ಲಭ್ಯವಿದೆ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ **63601 92136**

Frazer Town

SALE 2,100 Sq.Ft 4,100 Sq.Ft Prime Commercial Properties On Wheelers Road, Frazer Town Call: 9980525450

General

EAGLETON RESORTS, BIDADI SITE 80X120, ES CORNER CLOSE GOLF GROUND CLEAR DOCUMENTS RS. 2.70Cr: 9845065084

HAL And Around

60X40 BDA site_with 3500sqft house_sale on 80ft road HAL_2nd stage near ISRO_LPSC. Brokers`Excuse. Contact: 9844089333, +16096646084 (6am-8am/ 4pm-6pm)

Ramamurthy Nagar

RESIDENTIAL 30X40 W/F Sites for Sale Vigneshwara Layout, Hoysalanagar Horamavu Near Narayana School: 9448050938/ 9035304455

Kengeri

KENGERI, KARUBELE Road, DC Conversion 30x40 Site for Sale. Fully Developed (Rs. 2,600/- Sqft). 92434-19641.

Kumaraswamy Layout

25X30 EAST Facing BDA Site Sale Kumaraswamy Layout Near Police Station. Clear Titles. Contact:- 9342197377

Kempegowda Layout

KEMPEGOWDA LAYOUT, Commercial Site For Sale, 7th J-Sector 50×80, Road 80', North Facing, Kumar 9945112279

WANTED LAND FOR PETROL BUNK

Wanted Land for Long Lease-Rent Minimum Dimension 80ft x100ft & Above Preferably Bangalore North Airport Road, Bangalore Tumkur Road Hoskote-Kolar Road Rajarajeshwari Nagar-Bannerghatta Road and Kothanur-Kannur-Bagalur Road & Sathanur to Reva College Road and any Major Main Road in Bangalore City.

Contact : 99860 39699

AVAILABLE FOR RENT

Available for Rent 5000 Sq Ft RCC, Building Ground & 1st Floor Suitable for Godown at Kadirenahalli 1.5kms From BSK Metro on Uttarahalli Road, With Borewell & 60 HP Power.

Cellar Floor of 900 Sq ft Suitable for Shops / Doctors Clinics / Medical Store Opp. to Central, Mall & Big Bazaar 9th Blk Jayanagar

Contact: 98455 55505

Kanakapura Road

SALE BCMC, Bank Officer BSK 6th Stage. BDA Panchayat/ Commercial Sites/ House. RMS PROPERTIES: 6360702897

KANAKAPURA ROAD Attached to Narayananagar 1st Block,30x50,North BBMP A' Khata Site 12750/- Negotioble:9845704509

Rajarajeshwari Nagar

'A' KHATA Property for Sale in Rajarajeshwari Nagar 400 mtrs from Sub Registrar office, 40x60, East facing Sites. Call: 9448288522

Vijayanagar

NEAR MC-LAYOUT, Secretariat Layout Sale 31X42 South West Corner Site, Semi-Commercial, Clear Title. 9880886474

Vishweshwariah Layout

40X60 BDA Site Sale Vishveshwaraiah Layout 6th Block 40ft Road KLE Law College Opp Direct Owner Only Genuine Buyers Call: 7892037234

"SITE FOR-SALE 30x40 East Vishveshwaraiah Layout 5th Block, 20x30 West Nagarbhavi 11th Block. Contact: 7892836338"

BDA 30X40 South Facing 1st Block Rate 9500 Srike 100Ft Road Parllel 40Ft Road 1st Block Rate 10500 2nd Block Rate 8000 3ft Margin Land West Facing SMV Layout 6th Block Rate 8500 Contact: Shivu 9844603127

RERA No.PRM/KA/RERA/1250/307/PR/240723/006089

RERA-BMRDA-NPA APPROVED Residential Sites @T.Begur Nelamangala

1.3 km from NH4, B'lore-Tumkur Road

₹1699/- per sft | Bank Loan Available

Call: 8956 412 000

BDA SITE 5 BHK HOUSE FOR SALE

Hosakerehalli
Lift, modular kitchen, commercial space in basement floor, Built-up: 2900 sft (Basement+Gr+3 flrs) South east corner. 620 sqft Site Area

Call: 7406 219 219

WANTED OPEN LAND

Looking for open land for **SHOWROOM SETUP** on main roads only in Bangalore City BBMP Limits for rent / lease for 20 years at Prime Location space required min. 70 feet X 70 feet

9845582152

35X30 CORNER Site Sale Near Visveshwaraiah Layout, Podar International School. Rate-4,500/- negotiable - 8105251219

Agricultural Land

Ramanagar

AGRICULTURAL LANDS Available on Mysore Road in and Around Bidadi, Ramanagar 1-to-50 Acres. Contact- 9900115519

Commercial Building

Malleshwaram

FULLY FURNISHED 16,000Sft. A/C Showroom For Rent/Sale On Prime Busy Commercial Area,8th Cross, Malleshwaram. Call:9663001940.

Commerical

Jayanagar

SALE JAYANAGAR 8th Block, 23x50 Commercial old building, South, near Sangam Circle 25,000/- Sft. Janani Associate- 9980645789

Flat

Malleshwaram

MALLESWARAM, 9TH main road 3BHK with private terrace two carparking spaces. 1674sqft and 1737sqft. Call 6363161053. Semi-furnished.

Rajajinagar

PURVA BLUEBELLE Adjacent to Magadi road Metro station (purple lane) Rajajinagar 3 bedroom Jodi units 5 bedroom + servant room with all luxurious Amenities for Sale Contact: 9844027560.

Sanjaynagar

SALE: SANJAYNAGAR 2BHK Flats Rupees 7900000 -9900000 Lakhs. 3 BHK Flats 17500000 -2500000/- 9353748029

Vijayanagar

THREE BEDROOM FLAT, Area 1470 sft including Balcony, Carparking, Rate:7500/Sft (Negotiable) at Saraswathinagar, Vijayanagar, Bangalore. (Broker excuse)- 9880100828.

House

Banashankari

HOUSE SALE (G+3) 2BHK Per Floor @Banashankari 5th Stage BDA 30x40 Plot Attached, Poornapragna Layout, Rs 3.20 Crores Bheeresh 9900471143, 9844888847 Shivakumar 9845875555

Electronic City

1575 SQFT NF Site at Begur. Fully Compounded with Security Gate. A Khatha. 1.5KM from Hosur Road Metro. Rs. 5400/- Psft: 9008930130

J P Nagar

J.P.NAGAR 3RD Phase Excellent Location Livable 40x60 Duplex-House. North Facing 40x56 Site Also Available Call Suraj Realtors: 9845232711

SALE 20X30 Old House West Facing J.P.Nagar 4th Phase Dollers Calony 1.2cr Negotiable 9886087768, 9739006655

J.P.NAGAR 2ND Phase, 40x60 with old house, West facing near Raghigudda Temple Call Owner- 9945266669.

Kengeri

FOR-SALE HOUSE with Flooring Marble, All TeakWood with Lift, Ground+3 Floor BDA approved plan 30x43.5 Land Gated community Layout Aprameya Vrinda Layout, KENGERI to Uttarahalli Main Road, Near Metro Railway Station Kengeri, BANGALORE-60 Call: 9379593795.

Sanjaynagar

SALE STILT-FLOOR Parking-Plus 3-floors Each_Consisting of_a 3_BHK House With Lift and`Solar Vinayaka Layout Bhoopsandra Call:6361859856

REAL ESTATE BUYING

Sites

Banashankari

WANTED BDA Banashankari 6th Stage Anjanapura J.P.Nagar Kanakapura Road Surrounding. Immediate Settlement. Phone- 9964627255/ 9845511170

JAYANAGAR COMMERCIAL Street
MANTRI SQUARE Mall
GOPALAN ARCADE Mall
Ph: 080 41145340

UPTO 50% OFF

Bangalore: Commercial Street • DVG • Gopalan Arcade • Gopalan Signature Mall Jayanagar Mantri Square Mall • Malleshwaram • Phoenix Market City • Royal Meenakshi Mall • Yelahanka New Town
Belagavi • Bellary • Bidar • Bijapur • Chikmagalur • Gulburga • Hassan • Hubli Mangalore • Mysore • Tumkur • Ahmednagar (Maharasthra)

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout, Any BDA Sites Wanted. Contact: SAPTHAGIRI. 9900268073, 9448068073.

Vishweshwariah Layout

"REQUIRED NAGARABHAVI, Vishveshwaraiah, Kempegowda Layout 20x30, 30x40, 40x60, 50x80 Sites, Contact Genuine sellers only. 9845268611'

BUYING/ SELLING 20x30,30x40,40x60 50x80 BDA sites at Vishveshwaraiah Layout, BSK 6th-stage. Contact:9844533371/ 9341733480

BUILDERS ESSENTIAL

Water Proofing

WE FIX LEAKING ROOF,TANK, SUMP,BATHROOM, SKYLIGHT,HOUSE PAINTING, TILING,CARPENTRY, EPOXY,CIVIL WORKS. Call: 9448572697

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

COMMERCIAL SPACE OF 10,540 SFT AVAILABLE FOR LONG LEASE IN SALARPURIA TOUCHSTONE, KADUBISANAHALLI, OUTER RING ROAD, BANGALORE CONTACT MOBILE NO: 9640040333

Accommodation Wanted

Commercial

WANTED OFFICE Space upto 1000 Sft. for Rent/Lease in and around Malleshwaram, Madhav Nagar, Abshot Layout, Kumara Park and Sanjayanagar Bangalore. Contact: 70221 06263

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats,Converted&,Agriculture Lands Call:7204995189

Business For Sale

RUNNING RESTAURANT for sale in Mysore at a Prime location. Interested buyers may contact 9036866770

JOB OPPORTUNITIES

General

REQUIRED FEMALE OFFICE ASSISTANT with Computer knowledge attractive salary. Tripstart, 4th Block, Jayanagar. 9844076925.

PERSONAL

Change of Name

G KOMBAN, JC681758A, SUB, Vill - Krishnapuram, Tirunelveli, Tamil Nadu changed Son's name PAUL NIXON to PAUL NIXON K, 25/08/2023, Notary K.V. Mani , Bangalore

PUBLIC NOTICE

PUBLIC NOTICE

I, **Veena S. @ Anjali Bhide,** D/o. Suryanarayana, W/o. Aruna Bhide, aged about 54 years, R/o. #439, Skanda, Kempegowda layout, Laggere, Bengaluru-58, have sworn to an affidavit before Ratna.N., Advocate and Notary Public, Government of India, on 23-08-2023 at Bengaluru, stating that the names **VEENA S.** and **ANJALI BHIDE**, are one and the same and referred to myself and no one else.

PUBLIC NOTICE

The General Public are hereby informed that our Client, intends to enter into a Development Agreement to develop the lands described in the Schedule below ("Schedule Properties") with Dr. M. Lakshmaiah S/o. Mr. Munivenkatappa ("Owner"). The Owner has represented to our Client that he is the absolute owner of the Schedule Properties. Any person/s having any right, title, interest or claim in the Schedule Properties or any part thereof, in any manner or objecting to such transaction in favor of our Client may, write to the undersigned with requisite documentary evidence within fifteen (15) days from the issuance of this public notice, failing which, our Client shall proceed with the above-mentioned transaction, without any reference to such claim and the same, if any, shall be deemed as waived. Any other person hereafter dealing directly or indirectly with regard to any of the Schedule Properties or in any other manner shall be doing so at their own cost, risk and consequences and our Client shall not be responsible for any such acts.

SCHEDULE PROPERTIES

All that piece and parcel of the land bearing Survey Nos. 45, measuring 01 (One) Acre 21 (Twenty One) Guntas and 46, measuring 24 (Twenty Four) Guntas, situated at, Devanahalli Village, Kasaba Hobli, Devanahalli which is bounded on its:
East by: Mr.Jinkarora Munivenkatappa's and Mr.Appujappa's property;
West by : Canal (neru kaluve); North by : Doddaballapura Road; South by : Mr.Munivenkatappa urf Mothappa's Property

Sd. /- Vishal Bhat
Partner for Anoma Legal, Advocates, A1 Tower, First Floor, Golden Enclave, Corporate Block, Old Airport Road, Bangalore - 560017 - Tel:+91 80 43756315/ Email: bengaluru@anomalegal.com
Dated:26-08-2023

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

DH DECCAN HERALD
ಪ್ರಜಾವಾಣಿ

Classifieds
More value, more impact

REAL ESTATE

The 1st thing to do when Selling/Buying your Property

#1
PLACE YOUR AD HERE

www.dhclassifieds.com BOOK NOW

Book your ad with us now! For more details contact:
+91 9900428036 | +91 9731810277 | +91 9845114560 | +91 9901641752 | +91 9886213331 | 080-45557163/164

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಡಿಎಸ್-ಮ್ಯಾಕ್ಸ್ ಅಪಾರ್ಟ್‌ಮೆಂಟ್‌ಗಳು
www.dsmaxproperties.com

DS MAX®
ISO 9001:2015 COMPANY

Transform Your Dreams
Into A PERMANENT
ADDRESS

As your trusted builder, I recognize that a home is far more than mere bricks and concrete, but a place that holds emotions and memories that define our existence. My unwavering attention to detail reflects my commitment to creating a living experience that surpasses your expectations. You can be assured of exceptional quality and an unparalleled lifestyle with me.

Welcome to the DS-Max Family
The World of Everlasting Joy.

DR. K V SATISH, Chairman, DS-MAX Group.

1, 2 & 3-BHK APARTMENTS
FOR SALE IN VARIOUS LOCATIONS.

PRM/KA/RERA/1251/308/PR/201201/003733 **ELECTRONIC CITY** HOSA ROAD JUNCTION ₹ 40.00 - 45.00 Lakhs* 9164 045 000	PRM/KA/RERA/1251/308/PR/290122/004660 **SARJAPURA** SARJAPUR - ATTIBELE ROAD ₹ 29.04 - 37.35 Lakhs* 9164 122 000	PRM/KA/RERA/1251/309/PR/220223/005748 **THANISANDRA** 5 MINS. FROM KNSIT ₹ 42.00 - 54.51 Lakhs* 8880 461 461	PRM/KA/RERA/1251/310/PR/150223/005721 **MYSORE ROAD** NR. R R DENTAL COLLEGE ₹ 39.59 - 67.16 Lakhs* 8088 445 445
PRM/KA/RERA/1251/446/PR/210312/004002 **K R PURAM** NEAR GARDEN CITY UNIV. ₹ 46.68 - 65.85 Lakhs* 8880 438 000	**HENNUR ROAD** DODDAGUBBI, NR. DECATHLON ₹ 32.58 - 79.60 Lakhs* 8880 003 003	PRM/KA/RERA/1251/310/PR/190328/002502 **KENGERI** NEAR HOYSALA CIRCLE ₹ 79.04 Lakhs* 8880 759 759	PRM/KA/RERA/1251/309/PR/201106/003686 **TUMKUR ROAD** NEAR HIMALAYA FACTORY ₹ 48.70 - 56.00 Lakhs* 8880 465 465
We Deliver More Than We Promise.	PRM/KA/RERA/1251/446/PR/110722/005059 **BEGUR** 10 MINS. SILK BOARD ₹ 36.72 - 52.29 Lakhs* 8880 472 472	PRM/KA/RERA/1251/308/PR/280222/004739 **CHANDAPURA** 10 MIN. TO NARAYANA HOSP. ₹ 27.45 - 37.20 Lakhs* 8880 013 310	PRM/KA/RERA/1251/309/PR/211209/004576 **YELAHANKA** ISRO LAYOUT PHASE II ₹ 47.25 - 67.50 Lakhs* 8880 758 758

*T & C Apply

Call :
8880 427 000

Interiors | Modification | Facility Management Services | CRM
Rental Assistance | Upgrade Assistance | Resale Assistance

DS-MAX
A HOME to Live
A HOME TO MAKE A LIVING

- Home-Maker Programme
- Refer a Land
- Refer a Home
- Property Investment Opportunity
- Channel Partner
- Career Opportunities
- Refer us to Facility Management Services for Apartments or Commercial Complexes
- Refer us to Home Interiors

Scan the QR Code
to know more: VAS Page
Call : 9164 043 000

Disclaimer: Contents of this advertisement are only for information, and all the data are from Internal Sources. This is not an offer for agreement, and interpretation is not allowed. Reach our sales team for precise communication. And we value your independent inquiries before any definite conclusion. Please note that the prices stated are base prices, and significant increases may occur with changes in Floors (Low-Rise to High-Rise), Dimensions, and other preferences. The apartment elevation, colour, landscaping or any features shown are indicative and for representation purposes only. All investment schemes, offers and discounts are subject to the management's discretion and subject to availability. All directions, locations, landmarks and travel times are from various sources and may not be of geographical accuracy, and the use of reliable resources is at your discretion. Mentioning a commercial product, process or service by trade name, trademark, manufacturer, or otherwise does not imply endorsement or recommendation. Our content is impartial and informative. Visit : www.rera.karnataka.gov.in

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331